2) **ಹುಡ್ಕೋ 1ನೇ ಹಂತ** : ಈ ಹಂತದಲ್ಲಿ 125 ಮನೆಗಳನ್ನು ಕಟ್ಟಿಲಾಗಿದ್ದು 54 ಮನೆಗಳ ಹಂಚಿಕೆ ಮಾಡಲಾಗಿದೆ. ಅವುಗಳೆಂದರೆ ಇಡಬ್ಲ್ಯೂಎಸ್ 01 ಎಲಐಜಿ -2ಎ 11, ಎಲಐಜಿ 2ಬಿ 09, ಎಂಐಜಿ 1.11. ಎಂಐಜಿ-1-16 ಮತ್ತು ಹೆಚಐಜಿ-06.

ಹಾಲಿ ಕರ್ನಾಟಕ ಗೃಹ ಮಂಡಳಿಯಲ್ಲಿ 5 ಅರ್ಜಿಗಳು ಹೆಚಐಜಿ ಮನೆಗಳಿಗೂ, 3 ಅರ್ಜಿಗಳು ಎಂಐಜಿ 1 ಮನೆಗಳಿಗೂ 2 ಅರ್ಜಿಗಳು ಎಂಐಜಿ-2 ಮನೆಗಳಿಗೂ 6 ಅರ್ಜಿಗಳು ಎಲಐಜಿ.-2ಎ ಮನೆಗಳಿಗೂ ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಿ ಅರ್ಹತೆಯ ಆದಾರದ ಮೇಲೆ ಖಾಲಿ ಇರುವ ಮನೆಗಳನ್ನು ಹಂಚಿಕೆ ಮಾಡಲು ಜರೂರು ಕ್ರಮ ಕೈಗೊಳ್ಳಬೇಕಾಗಿದೆ.

3. **ಹುಡ್ಕೋ 2ನೇ ಹಂತ** : ಈ ಹಂತದಲ್ಲಿ 67 ಮನೆಗಳ ನಿರ್ಮಾಣರು ತಳಪಾಯ ಹಂತದಲ್ಲಿದೆ ಮತ್ತು ಈ ಮನೆಗಳನ್ನು ಇನ್ನೂ ಹಂಚಿಕೆ ಮಾಡಿರುವುದಿಲ್ಲ ಹಾಗೂ ಅರ್ಜಿಗಳನ್ನು ಕರೆಯಲು ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118 ರ ಮೇರೆಗೆ ದಿನಾಂಕ 14ನೇ ಸೆಪ್ಟೆಂಬರ್ 1995ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿತೆಂದು ತಿಳಿಸುತ್ತೇನೆ.

1. ಕರ್ನಾಟಕ ನೀರಾವರಿ ಪೂರೋಭಿವೃದ್ಧಿ ಮತ್ತು ವಂತಿಕೆ ಮತ್ತು ನೀರಿನ ದರ ವಿಧಿಸುವ 2ನೇ ತಿದ್ದುಪಡಿ ವಿಧೇಯಕ 1995.

2. ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ ಪಕ್ಷಾಂತರ ನಿಷೇದ 2ನೇ ತಿದ್ದುಪಡಿ ವಿಧೇಯಕ 1995.

3. ಕರ್ನಾಟಕ ಪುರಸಭೆಗಳ ತಿದ್ದುಪಡಿ ವಿಧೇಯಕ 1995.

ವರದಿಗಳನ್ನೊಪ್ಪಿಸುವುದು

ಶ್ರೀ ವೈಜನಾಥ್ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, "ನಾನು ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಮಂಡಿಸುತ್ತೇನೆ"

ಶ್ರೀವಾಸುದೇವನ್‌ರವರಿಗೆ ಸರ್ವೋಚ್ಚ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿರುವ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ತಮ್ಮ ಸಮಕ್ಷಮದಲ್ಲಿಯೇ, ಪ್ರಶ್ನೋತ್ತರ ವೇಳೆ ಆದ ತಕ್ಷಣ, ಬೇರೆ ಯಾವುದೇ ಕಲಾಪ ತೆಗೆದುಕೊಳ್ಳದೇ ನಮ್ಮ ಅಡ್ಜರ್ನಮೆಂಟ್ ಮೋಷನ್ ಮೂವ್ ಮಾಡಿದ್ದೆವು.

ಅಧ್ಯಕ್ಷರು : ಹೌದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ತಾವು ಒಳಗಡೆ ಇದ್ದಾಗ, ಉಪಾಧ್ಯಕ್ಷರು ಅಲ್ಲಿ ಕುಳಿತು ಅಪ್ಪಣೆ ಕೊಟ್ಟಂತಹದ್ದು, ಏನು ಎಂಬುದನ್ನು ಹೇಳುತ್ತೇನೆ. ಉಪ ಮುಖ್ಯಮಂತ್ರಿಗಳು ವಿನಂತಿ ಮಾಡಿಕೊಂಡಾಗ, ಸದನವನ್ನು ಮುಂದೂಡಲಾಯಿತು. ಮುಖ್ಯಮಂತ್ರಿಗಳು ಬರಬೇಕು. ಅವರನ್ನು ಕೇಳಬೇಕು ಎಂಬ ಕಾರಣಕ್ಕಾಗಿ ಸದನವನ್ನು ನಿನ್ನೆ ಮುಂದೂಡಿದ್ದೆ.

ಅಧ್ಯಕ್ಷರು : ಈಗ ಬರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ ಅಧ್ಯಕ್ಷರೆ, ನಿನ್ನೆ ಏಕೆ ಮುಂದೂಡಬೇಕಾಯಿತು? ನಿನ್ನೆ ವ್ಯರ್ಥವಾಗಿ 2 ಗಂಟೆ ಸಮಯ ಹಾಳಾಯಿತು. ಮಾನ್ಯ ವೀರಪ್ಪ ಮೊಯ್ಲಿಯವರು ಮಾತನಾಡುತ್ತಿದ್ದರು.

ಉಪ ಮುಖ್ಯ ಮಂತ್ರಿಗಳು ಮುಂದೂಡಬೇಕೆಂದು ವಿನಂತಿ ಮಾಡಿದರು

ಅಧ್ಯಕ್ಷರು : ದಯಮಾಡಿ ಕೇಳಿ. ಮುಖ್ಯ ಮಂತ್ರಿಗಳು ಬೆಂಗಳೂರಿಗೆ ಬಂದಿದ್ದಾರೆ. ನನಗೆ ಹೇಳಿ ಕಳುಹಿಸಿದ್ದಾರೆ. ಅವರು ಬರುತ್ತಾ ಇದ್ದಾರೆ. ಪ್ರಾಸ್ತಾವಿಕವಾದ ಮನವಿಯನ್ನು ಸಲ್ಲಿಸತಕ್ಕಂತಹವರು ಇನ್ನೂ ಒಂದಿಬ್ಬರು ಇದ್ದಾರೆ. ಅವರು ಬಂದು ಅವರ ಹೇಳಿಕೆಯನ್ನು ಮಾಡುತ್ತಾರೆ. ಏನೂ ತೊಂದರೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಸದನದ ಕಾರ್ಯಕಲಾಪ ನಡೆಯುವುದಕ್ಕೆ ಏನು ತೊಂದರೆಯಾಗಿತ್ತು? ಉಪ ಮುಖ್ಯಮಂತ್ರಿಗಳು ನಿನ್ನೆ ಆ ವಿನಂತಿ ಮಾಡಿದ್ದರಿಂದ 6-00 ಗಂಟೆಯವರೆಗೂ ಕುಳಿತುಕೊಳ್ಳುವಂತಹ ಸದನದ ಸಮಯವನ್ನು ವ್ಯರ್ಥ ಮಾಡುವ ಅಗತ್ಯವೇ ಇರಲಿಲ್ಲ. ಮಾನ್ಯ ಮೊಯ್ಲಿಯವರು ಮಾತನಾಡುವುದಕ್ಕೆ ಸಿದ್ದ ಇದ್ದರು. ಆ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳು ವಿನಂತಿ ಮಾಡಿದಂತೆ ಅಧ್ಯಕ್ಷರು ದಿಢೀರ್ ಎಂದು ಕಾರ್ಯಕಲಾಪವನ್ನು ಮುಂದೂಡಿದರು. ಇವತ್ತು ಪ್ರಶ್ನೋತ್ತರ ವೇಳೆ ಇಲ್ಲದೇ ಆ ಕಾರ್ಯಕ್ರಮ ಮುಂದುವರಿಯಬೇಕಾಗಿತ್ತು.

ಅಧ್ಯಕ್ಷರು : ನಿಮಗೆ ಇದ್ದಂತಹ ಇತರೇ ಕಾರ್ಯಕ್ರಮಗಳ ಪಟ್ಟಿಯನ್ನು ನೋಡಿ ಅಧ್ಯಕ್ಷ ಸ್ಥಾನದಲ್ಲಿದ್ದಂತಹವರು, ನಿಮ್ಮ ಅನುಕೂಲಕ್ಕೆ ಸಭೆಯನ್ನು ಮುಂದೂಡಿದ್ದಾರೆ. ಅದೇನೂ ದೊಡ್ಡ ಸಮಸ್ಯೆ ಅಲ್ಲ. ಈಗ ಮೊಯ್ಲಿಯವರು ಮುಂದುವರಿಸಲಿ.

ಶ್ರೀ ಹೆಚ್. ಶಿವಪ್ಪ : ಸದ್ಯ ಅವರು ಅನಿರ್ದಿಷ್ಟ ಕಾಲ ಎಂದು ಹೇಳಲಿಲ್ಲ.

ಅಧ್ಯಕ್ಷರು : ಈಗ ಬರುತ್ತಿದ್ದಾರೆ. ಅದನ್ನೇ ಏಕೆ ದೊಡ್ಡ ಇಷ್ಯೂ ಮಾಡುತ್ತೀರಿ? ಮೊಯ್ಲಿಯವರೇ ನಿಮ್ಮ ಭಾಷಣ ಇನ-ಕಂಪ್ಲೀಟ್ ಆಗಿತ್ತಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಹೌದು ಇನ್ನಕಂಪ್ಲೀಟ್ ಆಗಿತ್ತು

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಮೊಯಿಲಿಯವರು ಮಾತನಾಡತಕ್ಕ ಕಾಲದಲ್ಲಿ ಕೆಲವು

ಡೇಟ್, ಕೆಲವು ವಿಚಾರಗಳನ್ನು ರೆಫರ್ ಮಾಡುತ್ತಿದ್ದರು. chronological ಏನೇನು ನಡೆಯಿತು ಎಂದು ಹೇಳಿ. ಅದಕ್ಕೆ ನಾನು ಏನು ಹೇಳಿದೆ ಅಂದರೆ, ನಮ್ಮ ಹತ್ತಿರವೂ ಯಾರೋ ಕೊಟ್ಟಿರುತ್ತಾರಲ್ಲಾ ಎಂದು ಈ ಇನಫರ್ಮೇಷನ್ ನಮಗೆ ಕೊಟ್ಟಿದ್ದರ ಮೇಲೆ ನಾವು ಡಿಪೆಂಡ್ ಆಗುವುದು. ಅಧಿಕೃತವಾಗಿ ಏನಾದರೂ ರೆಕಾರ್ಡನ್ನು ಮಂಡಿಸುತ್ತಾರೋ? ಸುಪ್ರೀಂ ಕೋರ್ಟಿನ ಜಡ್ಜಮೆಂಟಗಳು ಇದ್ದಾವೆ. ಕಾರ್ಪೊರೇಷನ್ ರೆಸಲ್ಯೂಷನ್ ಇದೆ.

ಅಧ್ಯಕ್ಷರು : ಬಂದ್ರಲ್ಲಾ;

(ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದರು)

ಶ್ರೀ ಹೆಚ್.ಎನ್. ನಂಜೇಗೌಡ : ಗೌರ್ಮೆಂಟಿನ ತೀರ್ಮಾನಗಳು ಇದ್ದಾವೆ. ಆದ್ದರಿಂದ ಆ ಹಂತದಲ್ಲಿ ನಾವು ಇದರಲ್ಲಿ ಕತ್ತಲೆಯಲ್ಲಿ ಅದೇನೋ ಮಾಡಿದ ಹಾಗೆ ಆಗುತ್ತದೆ. ಅದು ಬೇಡ ಎಂದು ಅದಕ್ಕೆ ಅಬ್ಜಕ್ಷನ್ ತೆಗೆದುಕೊಂಡಾಗ ಉಪ ಮುಖ್ಯಮಂತ್ರಿಗಳು ವಿನಂತಿಸಿಕೊಂಡರು ನಾಳೆ ತೆಗೆದುಕೊಳ್ಳೋಣ ಎಂದು ಈಗ..

MR. SPEAKER : Now there is a suggestion before you. ತಾವು ನಿಯಮ 60ರ ಕೆಳಗೆ ಸೂಚನೆಯನ್ನು ಕೊಟ್ಟಿದ್ದೀರಿ. ಪ್ರಾಸ್ತಾವಿಕವಾದಂತಹ ಮನವಿಯನ್ನು ಅನೇಕ ಮುಖಂಡರುಗಳು ಸಲ್ಲಿಸಿದ್ದೀರಿ. ಇನ್ನೂ ಕೆಲವರು ಮಾತನಾಡತಕ್ಕಂತಹದ್ದು ಹಾಗೆಯೇ ಇತ್ತು. ಈ ಮಧ್ಯದಲ್ಲಿ ಮುಖ್ಯಮಂತ್ರಿಗಳು ಸದನಕ್ಕೆ ಬಂದಿದ್ದಾರೆ, ಅವರು ಹೇಳಿಕೆ ಕೊಡುವುದಕ್ಕೆ ಅವರ ವತಿಯಿಂದ ಅವರು ಸಿದ್ಧವಾಗಿ ಬಂದಿದ್ದಾರೆ. ಉಳಿದವರು ನಿಮ್ಮ ಮನವಿಯನ್ನು ಒಬ್ಬರು ಇಬ್ಬರು ಸಲ್ಲಿಸಿ, ಅದನ್ನು ಅಲ್ಲಿಗೆ ನಿಲ್ಲಿಸಿ ಈ ಎಲ್ಲಾ ವಿಚಾರಗಳನ್ನು ಕವರ್ ಮಾಡಿ ಮುಖ್ಯಮಂತ್ರಿಗಳು ಹೇಳಿಕೆ ಮಾಡಿ ಎಂದು ಹೇಳೋಣ. ಆಮೇಲೆ it would enable the chair to give its ruling.

+ ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಕ್ಷಮಿಸಿ, ಮಧ್ಯದಲ್ಲಿ...

ಅಧ್ಯಕ್ಷರು : ಹೇಳಿ ಏನೂ ತೊಂದರೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಬಹಳ ಗಂಭೀರವಾದಂತಹ ವಿಚಾರ. ನಿಲುವಳಿ ಸೂಚನೆಯ ಬಗ್ಗೆ ಪ್ರಾಸ್ತಾವಿಕವಾಗಿ ಸಾಕಷ್ಟು ಜನ ಹಿರಿಯರು ಮಾತನಾಡಿದ್ದಾರೆ. ಆದ್ದರಿಂದ ಆ ಕಡೆಯವರು ಏನು ಮಾಡಬಹುದು ಅಂದರೆ, ಇದನ್ನೇ ನಿಲುವಳಿ ಸೂಚನೆ ಎಂದು ಕನ್ಸಿಡರ್ ಮಾಡಿಕೊಂಡು, ಫುಲ್‌ಫ್ಲೆಡ್ಜ್ ಡಿಸ್‌ಕಷನ್‌ಗೆ ನಾವು ಮುಂದೆ ಹೋಗುವುದು ಒಳ್ಳೆಯದು ಎಂದು ಹೇಳಿ ನಾವು ಸೂಚನೆ ಮಾಡಿದಾಗ, ಮಾನ್ಯ ಜೆ.ಎಚ್.ಪಟೇಲ್ ರವರು ಹೇಳಿದರು. ಹೌದು. ಇದರ ಬಗ್ಗೆ ವಿಚಾರ ಮಾಡೋಣ ಎಂದು. ಬಾಕಿ ಎಲ್ಲಾ ವಿಚಾರದಲ್ಲಿ ಎಲ್ಲಾ ಹೇಳಿಕೆ ಕೊಡಬಹುದು. ಆದರೆ ಇದು ನಿಲುವಳಿ ಸೂಚನೆ ಪ್ರಶ್ನೆ. ನಿಲುವಳಿ ಸೂಚನೆಯಲ್ಲಿ ತಮ್ಮನ್ನೂ ಮನವೊಲಿಸಿ ಕೊಳ್ಳುವುದಕ್ಕೆ ನಿಲುವಳಿ ಸೂಚನೆಗೆ ಅರ್ಹತೆಯಿದೆಯೆಂದು ಹೇಳಿ ನಾವು ಪ್ರಯತ್ನ ಮಾಡಬೇಕಾಗಿದೆ. ಒಂದು ವೇಳೆ ಆ ಟ್ರಜರಿ ಬೆಂಚಿನವರು ಅಥವಾ ಮಾನ್ಯ ಸಭಾನಾಯಕರು ಇದರ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಬೇಕಾಗಿಲ್ಲ

ನಿಲುವಳಿ ಸೂಚನೆಯನ್ನೇ ಫುಲ್‌ಪ್ಲೆಡ್ಜ್ ಡಿಸ್‌ಕಷನ್‌ಗೆ ತೆಗೆದುಕೊಳ್ಳಿ ಎಂಬುದನ್ನು ಒಪ್ಪಿದರೆ, ನಾವು ಕುಳಿತುಕೊಳ್ಳಬಹುದು. ಇಲ್ಲದಿದ್ದರೆ ಮಧ್ಯದಲ್ಲಿ ಹೇಳಿಕೆ ಕೊಡತಕ್ಕದ್ದು ಅದಕ್ಕೆ ಅನುಕೂಲ ಮಾಡಿಕೊಟ್ಟರೆ, ಅದು ನಿಲುವಳಿ ಸೂಚನೆಗೆ ಅನುಗುಣವಾಗಿರುವುದಿಲ್ಲ. ಬೇರೆ ಇನ್ನಾವುದಾದರೂ ಮ್ಯಾಟರ್ ಇದ್ದರೆ It is okay. ಸಭಾನಾಯಕರು ಇಲ್ಲಿ ಬಂದಿದ್ದಾರೆ, ನಿಲುವಳಿ ಸೂಚನೆ ಅದನ್ನು ಅಡ್ಮಿಟ್ ಮಾಡಿ, ತಾವು ಮುಂದುವರಿಸಿಕೊಂಡು ಹೋದರೆ, ಆಗ ನಿಲುವಳಿ ಸೂಚನೆಯ ಬಗ್ಗೆ ನಾವು ಫುಲಪ್ಲೆಡ್ಜ್ ಡಿಸಕಷನ್ ಪ್ರಾರಂಭ ಮಾಡೋಣ

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಿಕೊಳ್ಳತಕ್ಕ ಅಧಿಕಾರ ನನ್ನಲ್ಲಿರುತ್ತದೆ. ಅದು ಸಭಾನಾಯಕರಲ್ಲಿ ಇರುವುದಿಲ್ಲ. ನಿಲುವಳಿ ಸೂಚನೆ ತಾವು ಕೊಟ್ಟಿದ್ದೀರಿ, ನಾನು ಈ ಸದನ ಸಾಂಪ್ರದಾಯಗಳಿಗೆ ಅನುಗುಣವಾಗಿ ಹೋಗಬೇಕಾಗುತ್ತದೆ. ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸತಕ್ಕದ್ದನ್ನು ತಾವು ಬೇಗ ಮುಗಿಸಿದರೆ ಒಳ್ಳೆಯದು ನಿನ್ನೆ ಸುಮಾರು ನಾಲ್ಕುವರೆ ಐದು ಗಂಟೆಗಳ ಕಾಲ ಇದರ ಮೇಲೆ ಚರ್ಚೆ ಮಾಡಿದ್ದೇವೆ. ಬೇಗ ಮುಗಿಸಿದರೆ, I can ask the Government to make a statement and then give a ruling in order to save the time of the House.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವಂತಹದ್ದು, ಅವರು ದೆಹಲಿಯಲ್ಲಿ ನಾಲ್ಕಾರು ದಿವಸಗಳಿಂದ ಇದ್ದು ಒಂದು ಮರ್ಸಿ ಪಿಟಿಷನ್ ಅನ್ನು ಸುಪ್ರೀಂಕೋರ್ಟ ಮುಂದೆ ಸಲ್ಲಿಸಿದ್ದಾರೆ. ಆ ಮರ್ಸಿ ಪಿಟಿಷನ್ ಏನು ಸಲ್ಲಿಸಿದ್ದಾರೆ ಅದರಲ್ಲಿ ಸರ್ಕಾರದ ಕಡೆಯಿಂದ ತಪ್ಪಾಗಿದೆಯೆಂದು ಅಫಿಡವಿಟ್ ಹಾಕಿದ್ದೀರೋ, ಅಧಿಕಾರಿಯಿಂದ ತಪ್ಪಾಗಿದೆಯೆಂದು ಅಫಿಡವಿಟ್ ಹಾಕಿದ್ದೀರೋ ಅದರ ಒಂದು ಕಾಪಿಯನ್ನು ಟೇಬಲ್ ಮಾಡಿ ಆ ವಿವರವನ್ನು ಕೊಟ್ಟರೆ ಹೆಚ್ಚು ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗಬಹುದು. ಅದು ಪಬ್ಲಿಕ್ ಡಾಕ್ಯುಮೆಂಟ್. ಆ ಕಾಪಿಯನ್ನು ನಮಗೆ ಕೊಟ್ಟರೆ, ನಾವು ಏನು ಮಾಡಿದ್ದೇವೆ ಏಕೆ ನಮ್ಮ ಮರ್ಸಿ ಪಿಟಿಷನ್ ಅನ್ನು ಸುಪ್ರೀಂ ಕೋರ್ಟ ತಳ್ಳಿ ಹಾಕಿತು ಎಂಬುದರ ಬಗ್ಗೆ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸ್ಟೇಟಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ತಾವು ಅಲೌ ಮಾಡಿದ ಮೇಲೆ ಬೇಕಾದರೆ ಅವರು ಕಾಪಿಗಳನ್ನು ಕೊಡಲಿ. ಫುಲಫ್ಲೆಡ್ಜ ಡಿಸಕಷನನಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಬರುತ್ತದೆ. ಈಗ ಇನ್ನು ನಾವು ತಮ್ಮ ಮನ ಒಲಿಸುವುದರಲ್ಲಿಯೇ ಇದ್ದೇವೆ. ಅದನ್ನು ಡಿಸಕಷನಗೆ ತೆಗೆದುಕೊಳ್ಳುವುದಕ್ಕೆ ಯೋಗ್ಯವಿದೆಯೋ ಅಥವಾ ಇಲ್ಲವೋ ಎನ್ನತಕ್ಕ ಹಾದಿಯಲ್ಲಿದ್ದೇವೆ. ಅದರ ಬಗ್ಗೆ ವೀರಪ್ಪಮೊಯಿಲಿಯವರು ಮಾತನಾಡಬೇಕು, ಇನ್ನು ಹಾದಿಯಲ್ಲಿದ್ದೇವೆ. ಅದರ ಬಗ್ಗೆ ವೀರಪ್ಪಮೊಯಿಲಿಯವರು ಮಾತನಾಡಬೇಕು, ಇನ್ನು ಜಯಚಂದ್ರರವರು ಇದ್ದಾರೆ, ಮಾನ್ಯ ಆಳ್ವರವರು ಇದ್ದಾರೆ. ಆ ಪಾರ್ಟಿಯವರೂ ಕೂಡ ಇರಬಹುದು. ನಮ್ಮ ಕಡೆಯಿಂದ ಮುದ್ದಹನುಮೇಗೌಡರು ಮಾತನಾಡುವವರು ಇದ್ದಾರೆ, ಇನ್ನೂ ಅನೇಕ ಜನ ಇದ್ದಾರೆ. ನಮ್ಮ ಪ್ರೇಯರ್ ಕೇಳಿ, ಆಮೇಲೆ ಒಪ್ಪುವುದೋ ಬಿಡುವುದೋ ಅದು ಬೇರೆ.

ನಾವು ತಮ್ಮ ಮನ ಒಲಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಒಲಿಯತಕ್ಕದ್ದು ಎಷ್ಟರಮಟ್ಟಿಗೆ ಸಾಧ್ಯವಿದೆ ಎನ್ನುವುದನ್ನು ನೋಡಿ ಆಮೇಲೆ ಬೇಕಾದರೆ ಅವರು ಹೇಳಿಕೆ ಕೊಡಲಿ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಟೆಕ್ನಿಕಲ್ ಆಗಿ ಸನ್ಮಾನ್ಯ ಮೊಯಿಲಿಯವರು ಹೇಳುವುದು ಸರಿಯಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ನಿಮ್ಮ ಮನ ಒಲಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ನಿಮ್ಮ ಮನ ಒಲಿಸುವುದಕ್ಕೆ ನಾವು ವಿಫಲರಾಗಿಬಿಟ್ಟರೆ, ಅವರ ಸ್ಟೇಟಮೆಂಟ್ ಇಲ್ಲ, ಅದು ಹಾಗೆಯೇ, ಮುಗಿದು ಹೋಗುತ್ತದೆ. ನಾನು ಏನು ಹೇಳುತ್ತೇನೆಂದರೆ, let the Government brief what is what. Then...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು. ಈ ನಿಲುವಳಿ ಸೂಚನೆಯನ್ನು ತಾವು ತೆಗೆದುಕೊಳ್ಳಬೇಕೆಂದು ಹೇಳಿ ನಿಮ್ಮ ಮನವನ್ನು ಒಲಿಸುವುದಕ್ಕೆ ಸರ್ವ ಪ್ರಯತ್ನವನ್ನು ಪಟ್ಟಿದ್ದೇವೆ. ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳುವಾಗ ಅವರು ಏನು ಬೇಕಾದರೂ ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯಅಧ್ಯಕ್ಷರೇ, ತಮಗೆ ಪೂರ್ಣವಾಗಿ ಮನವರಿಕೆಯಾಗಿದೆ. ತಾವೂ ಅಲ್ಲೇ ಮಾಡುತ್ತೀರೆನ್ನುವ ಪೂರ್ಣ ಭರವಸೆ ನನಗೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಏನು ಮಾಡುತ್ತಾರೆಂದು ನಮಗೆ ಇನ್ನೂ ಗೊತ್ತಿಲ್ಲ. ನಿಮ್ಮನ್ನು ಮನವೊಲಿಸುವುದಕ್ಕೆ ನಿನ್ನೆಯಿಂದ ಸತತವಾಗಿ ಪ್ರಯತ್ನಪಟ್ಟಿದ್ದೇವೆ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ನಮಗೆ ಇನ್ನು ಗೊತ್ತಿಲ್ಲ. ಅದು ಸ್ಪಷ್ಟ, ಆದರೆ ಒಂದು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಆಳುವ ಪಕ್ಷದವರು ಅವರ ದೃಷ್ಟಿಯಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೇ ಬಿಡಬೇಕೇ ಎನ್ನುವುದನ್ನು ಅವರು ಹೇಳಲಿ. ಅವರನ್ನು ಅಡ್ಡಿ ಮಾಡಬೇಕೆನ್ನತಕ್ಕ ಉದ್ದೇಶ ನಮಗಂತೂ ಇಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ, ನಿಲುವಳಿ ಸೂಚನೆ ಬಹಳ ಪ್ರಾಮುಖ್ಯವಾದದ್ದು. ಇದನ್ನು ತೆಗೆದುಕೊಳ್ಳಬೇಕೆಂದು, ಚರ್ಚೆಗೆ ಅವಕಾಶ ಕೊಡಬೇಕೆಂದು ಮತ್ತೊಮ್ಮೆ ತಮ್ಮನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇವೆ. ಆದ್ದರಿಂದ ಈಗ ನಿಮ್ಮ ಮನಸ್ಸಿನಲ್ಲಿ ಏನಿದೆಯೆಂದು ನಾನು ಈಗ ಹೇಗೆ ಹೇಳುವುದಕ್ಕೆ ಸಾಧ್ಯ? ಇಲ್ಲಿ ಅನೇಕ ವಿಚಾರಗಳನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಕಷ್ಟವಾಗುತ್ತದೆ. ಏಕೆಂದರೆ ನಿನ್ನೆ ಇದರ ಬಗ್ಗೆ ಇಡೀ ದಿನವೆಲ್ಲ ಸುದೀರ್ಘವಾಗಿ ಚರ್ಚೆ ನಡೆದಿದೆ. ಆದ್ದರಿಂದ ತಮ್ಮ ಭಾವನೆಗಳೇನು ಎಂಬುದು ನಮಗೆ ಇನ್ನು ಗೊತ್ತಿಲ್ಲ. ಸರ್ಕಾರದ ಕಡೆಯಿಂದ ಇದನ್ನು ತೆಗೆದುಕೊಳ್ಳಬೇಕೇ ಬಿಡಬೇಕೇ ಎನ್ನುವ ಬಗ್ಗೆ ಅವರು ಹೇಳಬೇಕು. ನಾವಂತೂ ಇದನ್ನು ತೆಗೆದುಕೊಳ್ಳಬೇಕೆಂದು ನಿರಂತರವಾಗಿ ಹೇಳುತ್ತಿದ್ದೇವೆ. ತಮ್ಮ ಭಾವನೆಯನ್ನು ತಾವು ಹೇಳುವುದಾದರೆ ತುಂಬಾ ಸಂತೋಷ. ತೆಗೆದುಕೊಳ್ಳಬೇಕೇ ಬಿಡಬೇಕೇ ಎನ್ನುವುದನ್ನು ಅವರು ಹೇಳಲಿ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಿನ್ನೆ ತಮ್ಮಿಂದ ನಾನು ಒಂದು ರೂಲಿಂಗ್ ಅನ್ನು

ಮಾಡುತ್ತಿದ್ದೆ. ಇವತ್ತೂ ಎಕ್ಸಪೆಕ್ಟ್ ಮಾಡುತ್ತೇನೆ. ಏನೆಂದರೆ ನಿಲುವಳಿ ಸೂಚನೆ ಮೆಂಬರ್ ಮತ್ತು ಅಧ್ಯಕ್ಷರಿಗೆ ಸಂಬಂಧಪಟ್ಟ ವಿಚಾರವೇ ವಿನಹ ಗೌರ್ನ್ಮೆಂಟಗೆ ಸಂಬಂಧಪಟ್ಟ ವಿಚಾರವಲ್ಲ. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು. ನಾನೊಂದು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೆ. ನಿಲುವಳಿ ಸೂಚನೆ ಸದಸ್ಯರು ಮತ್ತು ಚೇರಗೆ ಸಂಬಂಧಪಟ್ಟ ವಿಚಾರ. ಇದು ಸರ್ಕಾರಕ್ಕೆ ಸಂಬಂಧಪಟ್ಟಂತಹ ವಿಚಾರ ಅಲ್ಲವೇ ಅಲ್ಲ. ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕು. ನಿಲುವಳಿ ಸೂಚನೆಗೆ ಪ್ರಿಲಿಮಿನರಿ ಸಬಮಿಷನ್ ಮಾಡುವ ಸ್ಟೇಜನಲ್ಲಿ, ತಮ್ಮನ್ನು ಮನ ಒಲಿಸತಕ್ಕ ಸ್ಟೇಜನಲ್ಲಿ ಸ್ಟೇಟಮೆಂಟ್ ಮಾಡುವುದಕ್ಕೆ ಬರುವುದೇ ಇಲ್ಲ. ಟೆಕ್ನಿಕಾಲಿಟಿ ಬೇಡ ಸ್ಟೇಟಮೆಂಟ್ ಮಾಡಿ ಅಂದರೆ ಬೇರೆ ಫಾರಂನಲ್ಲಿ ತೆಗೆದುಕೊಳ್ಳಿ. ತಾವು ಈ ನಿಲುವಳಿ ಸೂಚನೆಗೆ ರೂಲಿಂಗ್ ಕೊಟ್ಟು ಬೇರೆ ಫಾರಂನಲ್ಲಿ ಚರ್ಚೆ ಮಾಡಲಿ ಗೌರ್ನಮೆಂಟ್ ಸ್ಟೇಟ್ ಮೆಂಟ್ ಮಾಡಲಿ. ಆದರೆ ಏನು ನಮ್ಮ ನಿಯಮಾವಳಿ ಇದೆ, ಆ ನಿಯಮಾವಳಿ ಪ್ರಕಾರ ಇದು ನಿಮಗೆ ನಮಗೆ ಸಂಬಂಧಪಟ್ಟ ವಿಚಾರವೇ ವಿನಹ ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಈಗ ಸ್ಟೇಟೆಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ರೂಲ್ಸಗೆ ಎಗೆನೆಸ್ಟ ಆಗಿರುತ್ತದೆ. ದಯವಿಟ್ಟು ತಾವು ಅದರ ಬಗ್ಗೆ ರೂಲಿಂಗ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಹಿರಿಯಸದಸ್ಯರಿಗೆ ಸಾಕಷ್ಟು ಅನುಭವವಿದೆ ಅವರು ಮಂತ್ರಿಗಳಾಗಿ ಕೆಲಸ ಮಾಡಿದ್ದರು. ನಾವು ನಿಲುವಳಿ ಸೂಚನೆಯನ್ನು ಮುಂದಿಟ್ಟಿದ್ದೇವೆ, ಐದಾರು ಗಂಟೆ ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ತಮ್ಮ ಮನವೊಲಿಸುವಂತಹ ಪ್ರಯತ್ನ ಮಾಡಿದ್ದೇವೆ. ಈ ಸ್ಟೇಜನಲ್ಲಿ ಅದು ತಮಗೆ ಮನದಟ್ಟು ಆಗದಿದ್ದರೆ, ಉಳಿದಂತಹವರು ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತರುವಂತಹ ಪ್ರಯತ್ನ ಮಾಡುತ್ತಾರೆ. ತಾವು ಅನುಮತಿಯನ್ನು ಕೊಟ್ಟಮೇಲೆ ಅದನ್ನು ಕೊಶ್ಚನ್ ಮಾಡುವಂತಹ ಪ್ರಶ್ನೆ ಇಲ್ಲಿ ಉದ್ಭವಾಗುವುದಿಲ್ಲ. ಮತ್ತೆ ರೂಲಿಂಗ್ ಕೊಡುವ ಅಗತ್ಯವೂ ಇಲ್ಲ. ತಮ್ಮ ಮನಮೊಲಿಸುವಂತಹ ಕೆಲಸವನ್ನೇ ನಾವು ನಿನ್ನೆಯಿಂದ ಮಾಡುತ್ತಿದ್ದೇವೆ. ಬಹುಶಃ ಅದನ್ನು ಮುಂದುವರಿಸುತ್ತೇವೆ.

ಅಧ್ಯಕ್ಷರು : ಮುಂದಿನ ಬೆಂಚಗಳಲ್ಲಿರತಕ್ಕವರು ಹಿರಿಯರು ಇದ್ದೀರಿ. ಅನೇಕ ಜನ ಹೊಸ ಸದಸ್ಯರು ಬಂದಿದ್ದಾರೆ. ಅವರಿಗೂ ಕೂಡ ಲಾಭವಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತೇನೆ. ನಿಲುವಳಿ ಸೂಚನೆಗೆ ಸಹಿ ಹಾಕಿ ತಾವು ನಮ್ಮ ಕಛೇರಿಗೆ ತಲುಪಿಸಿದಾಗ, ಕಛೇರಿಯಲ್ಲೇ ನಾನು ಅದಕ್ಕೆ ಅನುಮತಿಯನ್ನು ಸಲ್ಲಿಸುವುದಕ್ಕೆ ಸಹಿ ಹಾಕಿರತಕ್ಕ ಸದಸ್ಯರುಗಳನ್ನು ಕರೆದು, ನಿಮ್ಮದೇನು ಮನವಿ ಎಂದು ಕೇಳತಕ್ಕದ್ದು ಇದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾರು ಪ್ರಾಸ್ತಾವಿಕವಾಗಿ ಮನವಿಯನ್ನು ಮಾಡಬೇಕೆಂದು ಅಪೇಕ್ಷೆ ಸಲ್ಲಿಸಿದ್ದೀರಿ, ಅದಕ್ಕೆ ಅಧ್ಯಕ್ಷರು ಅನುಮತಿಯನ್ನು ಕೊಟ್ಟು, ನೀವು ಪ್ರಸ್ತಾವಿಕ ಮನವಿಯನ್ನು ಸಲ್ಲಿಸಿಯೆಂದು ಹೇಳಿದ್ದೇನೆ. ಮನವಿಯನ್ನು ಸಲ್ಲಿಸತಕ್ಕ ಹಂತದಲ್ಲಿ ಇದ್ದೀರಿ. ಈ ಸದನದ ಸಂಪ್ರದಾಯ ಮತ್ತು ನಿಯಮಗಳನ್ನು ಅನುಚರಣೆಯಲ್ಲಿ ತಂದುಕೊಂಡಿರತಕ್ಕ ರೀತಿ ಯಾವರೀತಿ ಇದೆಯೆಂದರೆ, ಪ್ರಾಸ್ತಾವಿಕ ಮನವಿಯನ್ನು ಸಲ್ಲಿಸಿದ್ದು ಆದಮೇಲೆ ಸರ್ಕಾರದವರು ಅವರ ವಾದವನ್ನು ಇದೆಯೆಂದರೆ, ಪ್ರಸ್ತಾವಿಕ ಮನವಿಯನ್ನು ಸಲ್ಲಿಸಿದ್ದು ಆದಮೇಲೆ ಸರ್ಕಾರದವರು ಅವರ ವಾದವನ್ನು

ಮಂಡನೆ ಮಾಡಬೇಕು. ವಾದ ಇದ್ದಮೇಲೆ ಪ್ರತಿ ವಾದ ಇರಬೇಕು. ವಾದ ಮತ್ತು ಪ್ರತಿವಾದ ಎರಡನ್ನು ಆಲಿಕೆ ಮಾಡಿದ ನಂತರ, ವಿಷಯದ ಗಾಂಭೀರ್ಯತೆಯನ್ನು ಅನುಸರಿಸಿ ವಾದ ಮತ್ತು ಪ್ರತಿ ವಾದದಲ್ಲಿರತಕ್ಕ ತಿರುಳನ್ನು ನೋಡಿಕೊಂಡು ನಾನು ರೂಲಿಂಗ್ ಕೊಡುತ್ತೇನೆ. ಆದನ್ನು ನಂತರ ನೋಡೋಣ, ನಾನು ಇನ್ನು ಅವರ ತೀರ್ಮಾನವನ್ನೇ ಕೇಳಿಲ್ಲ. ಅವರು ವಾದ ಏನು ಮಾಡುತ್ತಾರೆಂದು ಗೊತ್ತಿಲ್ಲದೆ ನಾನು ರೂಲಿಂಗ್ ಹೇಗೆ ಕೊಡಲಿ? ಆದ್ದರಿಂದ ಈಗ we are still in the stage of making preliminary submissions. We are half way through. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಎಲ್ಲಾ ಪಕ್ಷದ ಪ್ರಮುಖರು ವಾದ ಮಾಡಿದ್ದೀರಿ. ಒಬ್ಬಿಬ್ಬರನ್ನು ಮಾತನಾಡಲಿಕ್ಕೆ ಅವಕಾಶ ಕೊಟ್ಟು ಅಲ್ಲಿಗೆ ಪ್ರಿಲಿಮಿನರಿ ಸಬ್‌ಮಿಷನ್ ಸ್ಟಾಪ್ ಮಾಡಿದರೆ, ಸದನದ ಸಮಯವನ್ನು ನಾವು ಉಳಿಸಿದಂತಾಗುತ್ತದೆ. ಎಲ್ಲಾ ಬಹಳ ದೊಡ್ಡ ಪಟ್ಟಿ ಕೊಡುವುದು ಬೇಡ. ಸಹಕರಿಸಬೇಕೆಂದು ಹೇಳುತ್ತೇನೆ, ಮಾನ್ಯ ವೀರಪ್ಪಮೊಯಿಲಿಯವರು ಪ್ರಾರಂಭ ಮಾಡಲಿ. Once the stage of preliminary submission is over from your side, then I will request the Government to make a statement. That should be appropriate.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯಅಧ್ಯಕ್ಷರೇ, ನಾನು ನಿನ್ನೆ ಹೇಳುತ್ತಿದ್ದೆ, ದಿನಾಂಕ 28-2-95 ರಂದು ಮಾನ್ಯ ವಾಸುದೇವನ್‌ರವರು ಒಂದು ಅಫಿಡವಿಟನ್ನು ಮಾಡಿದರು. ಆ ಅಫಿಡವಿಟ್ ಪ್ರಕಾರ ಯಾವುದು ಡಿವಿಜನ್ ಬೆಂಚ್ ಇದೆ. ಅದರಲ್ಲಿ ಏನು ಪರಿಹಾರ ಕೊಡಬೇಕು ಕಾನ್ಸಿಕ್ವೆನ್ಸಿಯಲ್ ರಿಲೀಫ್ ಅದನ್ನು 28-2-95ರಂದು "no further benefits could accrue to the petitioner under law" ಎಂದು ಹೇಳಿ ಅವರು ಹೇಳಿದರು. ಒಂದು ವಿಚಾರ ನಾನು ನಿನ್ನೆ ಪ್ರಸ್ತಾಪ ಮಾಡುತ್ತಿದ್ದೆ. ಹಿಂದೆ ಕೂಡ ಇದೇ ರೀತಿಯಲ್ಲಿ ಒಂದು ಕಂಟೆಮ್ಟ್ ಪಿಟಿಷನ್ ಬಂದಾಗ, ಆಗಿನ ಮುಖ್ಯಕಾರ್ಯದರ್ಶಿಗಳಾಗಿ ಮಾನ್ಯ ಲಿನರವರು, ಇದ್ದರು, ಇಲ್ಲಿ ಕೇಸು ಬಂತು, ಇಲ್ಲಿಂದ ಸುಪ್ರೀಂಕೋರ್ಟಗೆ ಹೋಯಿತು ಸುಪ್ರೀಂಕೋರ್ಟನಲ್ಲಿ ಜೆ.ಸಿ. ಲಿನರವರು ಸ್ಪಷ್ಟವಾಗಿ ಒಂದು ಪ್ರಮಾಣವಚನವನ್ನು ಕೊಟ್ಟಿದ್ದಾರೆ. ಆ ಪ್ರಮಾಣವಚನದ ಪ್ರಕಾರ ಏನೇನು ಇವತ್ತು ವಾದಗ್ರಸ್ಥವಾದಂತಹಹ ವಿಚಾರಗಳಿವೆ ಅದರ ಬಗ್ಗೆ ಸ್ಪಷ್ಟವಾಗಿ ಆ ಸುಪ್ರೀಂಕೋರ್ಟಗೆ ಕೊಟ್ಟ ಅಫಿಡವಿಟನಲ್ಲಿ ನೀಡಿದ್ದಾರೆ. The affidavit was submitted on 3.10.94.

ಈ ಸ್ಪಷ್ಟವಾದಂಥ ಅಫಿಡವಿಟ್ಟನ್ನು ಕೊಟ್ಟಮೇಲೆ ಸುಪ್ರೀಂಕೋರ್ಟ್‌ನವರು as against Lynn, the contempt petition was dropped. It came back, ಈಗ ಪ್ರಶ್ನೆ ಏನು ಅಂದರೆ, ಅದ್ಯಕ್ಷರೆ, 10.5.95ರಂದು, ಆವತ್ತು ಸುಪ್ರೀಂಕೋರ್ಟನಲ್ಲಿ ನಮ್ಮ ಪರವಾಗಿ ವಾದ ಮಾಡತಕ್ಕಂಥ ವಕೀಲರು, ಅಂಡರಟೇಕಿಂಗ್ ಕೊಟ್ಟುಬಿಟ್ಟರು. No further reliefs we have been maintaining throughout. No further relief he is entitled ಏಕೆಂದರೆ ಪ್ರೊಮೋಷನ್ ಕೊಡಬೇಕಾದರೆ, ಈಗ ನನಗೆ ಬಂದಂಥ ಮಾಹಿತಿ ಪ್ರಕಾರ ಸಾಂಡ್ರಾ ಅವರು ಕೊಟ್ಟಂಥ ಅರ್ಜಿ ಪ್ರಕಾರ ನಾನು ಕಾರ್ಪೊರೇಷನಗೆ ಕಳುಹಿಸಿದ ಮೇಲೆ, ಕಾರ್ಪೊರೇಷನನವರು ಒಂದು ರೆಸಲ್ಯೂಷನ್

ಮಾಡಿದ್ದಾರೆ. ಆ ರೆಸಲ್ಯೂಷನ್ ಸರಿಯಾದಂಥ ರೆಸಲ್ಯೂಷನ್ ಅಲ್ಲಿ. ಡಿವಿಷನ್ ಬೆಂಚ್ ಹೈ ಕೋರ್ಟ್‌ನಲ್ಲಿ ಏನು ವರ್ಡಿಂಗ್ ಕೊಟ್ಟಿದ್ದಾರೆ, ಅದರ ಪ್ರಕಾರವಾಗಿ ಆ ರೆಸಲ್ಯೂಷನ್ ಇಲ್ಲ ಎಂದು ಹೇಳಿ ಅವರು ಹಿಂದೆ ಕಳುಹಿಸಿದ್ದರ ಬಗ್ಗೆ ನಾನು ನಿನ್ನೆ ಮಾತನಾಡಿದ್ದೆ. ಈಗ ಪ್ರಶ್ನೆ ಏನು ಎಂದು ಹೇಳಿದರೆ, ಆಲ್ ಆಫ್ ಅ ಸಡನ್, ನಮ್ಮ ಕೌನ್ಸಲ್ ಅಲ್ಲಿ ಅಂಡರಟೇಕಿಂಗ್ ಕೊಟ್ಟಮೇಲೆ, ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳಿ Throughout we have been maintaining, there is nothing to be implemented. ಏಕೆಂದರೆ ಡಿ.ಪಿ.ಸಿ. ಆಗಿದೆ, ಡಿಪಾರ್ಟಮೆಂಟಲ್ ಪ್ರೊಮೋಷನ್ ಕಮಿಟಿಆಗಿದೆ. ಡಿ.ಪಿ.ಸಿ. ನವರು ನಿರ್ಣಯ ಮಾಡಿದ್ದಾರೆ, ಮ್ಯಾಟರ್ ವಾಸ್ ಕ್ಲೋಸ್ಡ. ಇದು ಅಂಡರಟೇಕಿಂಗ್ ಕೊಟ್ಟಮೇಲೆ that is very specific. ಆವಾಗ what is the intention of the counsel? That means, he will have to be promoted to supernumerary post of chief Engineer ಪೋಸ್ಟಗೆ ಪ್ರೊಮೋಟ್ ಮಾಡಬೇಕು ಎಂದು ಒಂದು ಅಂಡರಟೇಕಿಂಗ್ ಆಗುತ್ತದೆಯೇ ಹೊರತು, ಅನ್ಯಥಾ ಆಗುವುದಿಲ್ಲ. ಒಂದು ವೇಳೆ ಅದು ಅಲ್ಲದೇ ಇದ್ದರೆ Did you file objections on 10/5/1995? My understanding was it is for you to correct because you are in possession of documents that objection which was drafted which should have been filed on 10/5/95 was not filed on that day. It was filed after 2 days.

ಇಲ್ಲಿ ಯಾರದು ಲ್ಯಾಪ್ಸ ಆಗಿದೆ. ತಾವು ದಯಮಾಡಿ ಅಂಡರಟೇಕಿಂಗ್ ಅಥವಾ ಅಬ್ಜಷನ್ಸ ಏನಿದೆ ಅದನ್ನು ನಮ್ಮ ಗಮನಕ್ಕೆ ತರಬೇಕು ಯಾವರೀತಿ ಅಬ್ಜಕ್ಷನ್ಸ ತಂದಿದ್ದೀರಿ? It that is the intention to implement the order, namely, to give the promotion, ಸುಪ್ರೀಂಕೋರ್ಟನಲ್ಲಿ ಅಡ್ವೋಕೇಟ್ undertaking ಕೊಟ್ಟಿದ್ದಾರೆ ಅಥವಾ ತಾವು ಏನು ಅಬ್ಜಕ್ಷನ್, ಆಕ್ಷೇಪಣೆ ತಯಾರು ಮಾಡಿದ್ದೀರಿ, ಅವು ಜೊತೆಯಲ್ಲೇ ಹೋಗುತ್ತವೆ. ಅಥವಾ ತಾವು ಅಂಡರಟೇಕಿಂಗನ್ನು ಕೊಡದೇ ಆ ಅಬ್ಜಕ್ಷನನಲ್ಲಿ ತಾವು ನಿಜವಾಗಿ, ಏನು ಲಿನ್ ಅವರು ವಾದವನ್ನು ಮುಂದಿಟ್ಟಿದ್ದರು No further reliefs will be granted. ಮೊದಲು 23.2.95ನಲ್ಲಿ ಏನು ವಾಸುದೇವನ್ ಅವರು ಅಫಿಡವಿಟ್ ಕೊಟ್ಟಿದ್ದಾರೆ ಆಗ ಸಡನ್ನಾಗಿ ಬದಲಾವಣೆ ಮಾಡಲಿಕ್ಕೆ ಯಾರು ಕಾರಣ? ಏಕೆ ಆಯಿತು? ಇದು ಪ್ರಶ್ನೆ. ಒಂದು ವೇಳೆ ನೀವು ಅಂಡರಟೇಕಿಂಗ್ ಕೊಟ್ಟಮೇಲೆ it is very clear that you shold have promoted that person but instead of promoting that gentleman ಏನು ಮಾಡುತ್ತೀರಿ ಅಂದರೆ, ವಾಸುದೇವನ್ ಅವರು ದೆಹಲಿಗೆ ಹೋಗುತ್ತಾರೆ. He will have a consultation with the counsel. The draft Government order was being prepared. 10-7-95ಗೆ ಏನು ವಾದವನ್ನು ನಾವು ಇಲ್ಲಿಯವರೆಗೆ, 28-2-95ರವರೆಗೆ ಏನು ವಾದವನ್ನು ಮಾಡಿದ್ದೇವೆ. No further reliefs will be granted ಎಂದು ಹೇಳಿ ಏನು ತಾವು ಹೇಳಿದ್ದೀರಿ, ಅದಕ್ಕಿಂತ ಯಾವುದೇ ದೊಡ್ಡ ಬದಲಾವಣೆ ಕೂಡ ನೀವು ಮಾಡಿಲ್ಲ. ಆ 10-7-95

ಆರ್ಡರನಲ್ಲಿ. What you said, you gave 23 days of benefit of a promotion to Sri Dhananjaya as Superintendent Engineer. That is all. There was no mention of pormotion. There was no mention of DPC. No relief has flown out of the Government order dated 10/7/1995. When it is very clear...... ಯಾವುದೇ ರೀತಿಯಾದಂಥ ರಿಲೀಫ್ ಬಂದಿಲ್ಲ, 10-7-95ಕ್ಕೆ ಇವತ್ತು ಸ್ಪಷ್ಟವಾಗಿ ನೀವು ಅಂಡರಟೇಕಿಂಗ್ ಕೊಟ್ಟಮೇಲೆ, ತಾವು ಅಲ್ಲಿಯವರೆಗೆ ಇದ್ದಂಥ ವಾದವನ್ನೇ 10.7.95ರ ವಾದದಲ್ಲಿ ತಾವು ಪುಷ್ಟೀಕರಿಸಿದ್ದರೆ, ಯಾವ ಕೋರ್ಟ್, ಸುಪ್ರೀಮ್ ಕೊರ್ಟಿಗೆ ನಿಮ್ಮ ಮೇಲೆ ಸಿಟ್ಟು ಬರುವುದಿಲ್ಲ, ರೋಷ ಬರುವುದಿಲ್ಲ? ಇದು ಮಾಡಲಿಕ್ಕೆ ಏನು ಕಾರಣ? ತಾವು ದಯಮಾಡಿ ಇವತ್ತು, ಈಗ ತಾವು ಆ ಪೋರ್ಟ್‌ಫೋಲಿಯೋ ಹೊಂದಿದ್ದೀರಿ, ಸಭಾನಾಯಕರು. Have you approved that Government Order? We would like to know because let there be total transparency. Whether the officer has done on his own? Has he consulted the Advocate General? If the same were to be taken and perhaps that was the stand taken earlier. ಆದರೆ ಸುಪ್ರೀಮ್ ಕೋರ್ಟ್‌ನಲ್ಲಿ ಇವತ್ತು ನೀವು ಅಬ್ಜಕ್ಷನ್‌ನ್ನು ದಾಖಲು ಮಾಡದೇ, ಬಹುಶಃ ಅದರ್ ಸೈಡ್, ಡಿವಿಷನ್ ಬೆಂಚಿನ ಜಡ್ಜ್‌ಮೆಂಟ್ 10.7.95ನಲ್ಲಿ If you go through the Government Order, there is no mention about the decision of the Division Bench of the High Court. ಡಿವಿಷನ್ ಬೆಂಚ್ ಯಾವುದು ಸ್ಪಷ್ಟವಾಗಿ ಇವತ್ತು ಏನು ಮಾಡಬೇಕು ಎಂದು ಹೇಳಿದ್ದಾರೆ, ಆ ಡಿವಿಷನ್ ಬೆಂಚ್, ಕರ್ನಾಟಕ ಹೈಕೋರ್ಟಿನ ಡಿವಿಷನ್ ಬೆಂಚ್ ಡಿಸಿಷನ್ ಬಗ್ಗೆ ಯಾವ ಪ್ರಸ್ತಾಪ ಕೂಡ 10.7.95ನಲ್ಲಿ ಇಲ್ಲ. ಒಂದು ವೇಳೆ ನೀವು ತೆಗೆದುಕೊಂಡಂಥ ಸ್ಟ್ಯಾಂಡ್ ಬೋನಫೈಡ್ ಎಂದು ಹೇಳಿ ಸುಪ್ರೀಂ ಕೋರ್ಟ್‌ಗೆ ಹೇಳಬೇಕಾದರೂ ಕೂಡ you should have mentioned about the Division Bench decision or whatever the stand Mr. Lynn, the then Chief Secretary has given an affidavit.

ಈ ವಾದ ಕೂಡ ಅದರಲ್ಲಿ ಇಲ್ಲ. ಆ ಡಿವಿಷನ್, ಕರ್ನಾಟಕ ಹೈಕೋರ್ಟ್ ಡಿವಿಷನ್ ಬೆಂಚ್ ವಾದ ಕೂಡ ಇಲ್ಲದೇ ಒಂದಷ್ಟು ದೊಡ್ಡ, ಒಂದಷ್ಟು ಪುಟಗಳ ವಾದವನ್ನು ತಾವು ಮಾಡಿದರೆ ಯಾವ ಜಸ್ಟಿಫಿಕೇಷನ್ ಅನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಕೊಡಲಿಕ್ಕೆ ಸಾಧ್ಯ ಇದೆ. ಇದರಲ್ಲಿ ಸರ್ಕಾರ ಸಂಪೂರ್ಣ ಎಡವಿ ಇದೆ. I am not going to attribute any motive against anybody.

ಆದರೆ ಇದು ನಿಜವಾಗಿ ಸುಪ್ರೀಮ್ ಕೋರ್ಟ್‌ಗೆ ಹೋಗಿ, ಇವತ್ತು ತಾನೇತಾನಾಗಿ ಈ ಕಂಟೆಂಪ್ಟ್ ಅನ್ನು ನೀವು ತಲೆಯ ಮೇಲೆ ಹಾಕಿಕೊಂಡಂಥ ಒಂದು ಕೆಲಸವನ್ನು ಮಾಡಲಿಕ್ಕೆ, I am going to blame the Supreme Court. The Supreme Court has done its duty. But it should have been avoided. It could have been avoided, many many

writ petitions have been dismissed. Not one. I think, there were dozens of contempt petitions which were pending, disposed off, came up for hearing.

ಆದರೆ, ಸ್ಪಷ್ಟವಾದಂಥ ಒಂದು ವಾದವನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಮಾಡಲಿಕ್ಕೆ ಆಗಲಿಲ್ಲ. ಸುಪ್ರೀಮ್ ಕೋರ್ಟ್‌ನಲ್ಲಿ ಏನಾಯಿತು, ಒಂದು ವಾದ, ಬಹುಶಃ ನಾನೂ ಜಡ್ಜ್ ಆಗಿದ್ದರೂ ಕೂಡ I would have done the same thing. I had no option but to do this. Unfortunately, it has happened today.

ಆದ್ದರಿಂದ ಇವತ್ತು ನಿಮಗೆ ಇನ್ನಷ್ಟು ಕಾಲಾಖವಕಾಶ ಇತ್ತು, 25.8.95ರವರೆಗೆ. 10.7.95ರಿಂದ 25.8.95ರವರೆಗೆ ತಮಗೆ ಕಾಲಾವಕಾಶ ಇತ್ತು. ಇದು ಏನಾಯಿತು, ಸಡನ್ನಾಗಿ ಅವರು ಈ ಒಂದು ಕಂಟೆಂಫ್ಟ್ ಪಿಟಿಷನ್‌ನಲ್ಲಿ ಪನಿಷ್‌ಮೆಂಟನ್ನು ಕೊಡಲಿಲ್ಲ. ಆದರೆ ಕಾಲವಕಾಶ ಇತ್ತು. ತಮ್ಮ ಒಬ್ಬರು ಶಾಸಕರೇ ಹೆಚ್.ಯು.ಡಿ. ಕಾರ್ಯದರ್ಶಿಯವರಿಗೆ 10.7.95ರಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದ ಪ್ರಕಾರ, ನೀವು ಏನು ಪರಿಹಾರವನ್ನು ಕೊಟ್ಟಿದ್ದೀರಿ ಅದು ಪರಿಹಾರ ಅಲ್ಲ, ಅದನ್ನು ರೀಎಕ್ಸಾಮಿನ್ ಮಾಡಿ ಎಂಬ ಎಚ್ಚರಿಕೆಯನ್ನೂ ಕೂಡ ಕೊಟ್ಟರು. ಆ 10.7.95ನ ಆರ್ಡರ್ ಮೇಲೆ ಅವರು ತಮಗೆ ಎಚ್ಚರಿಕೆಯನ್ನೂ ಕೂಡ ನೀಡಿದರು. ಆ ಎಚ್ಚರಿಕ್ಕೆಯನ್ನು ಕೂಡ, ತಾವು ಎಕ್ಸಾಮಿನ್ ಮಾಡಲಿಲ್ಲ. A responsible Legislator has written from your own Party. He has written on 20.7.1995. Very much earlier. ಆದರೆ ಇವತ್ತು ತಾವು ಏನು ಮಾಡಿದ್ದೀರಿ, ಇನ್ನು ಮೂರು ನಾಲ್ಕು ಸನ್ಮಾನ್ಯ ಶಾಸಕರು ಕಾಗದ ಬರೆದಿದ್ದಾರೆ, You have marked it as "Very Important" by putting three crosses. `Please call for the file' ಎಂದು ಅಲ್ಲಿ ಅಭಿಪ್ರಾಯ ಬಂದಿದೆ.

Now what happens is whether the file has come to you or not, we do not know. ಈಗ ಏನಾಗುತ್ತದೆ ಎಂದರೆ ಫೈಲ್ ತಮಗೆ ಬಂದಿದೆಯೋ, ಇಲ್ಲವೋ ಅದು ನಮಗೆ ಗೊತ್ತಿಲ್ಲ. ಆದರೆ ಆ ಪೋರ್ಟಫೋಲಿಯೋ ಮಿನಿಸ್ಟರ್, ಅದೂ ಕೂಡ ಮಾನ್ಯ ಮುಖ್ಯಮಂತ್ರಿಯಾದಂಥ ತಾವು ಒಂದು ಫೈಲನ್ನು ಕಾಲ್ ಫಾರ್ ಮಾಡಿದಾಗ, when we are facing the contempt petition, I do not think. ಕಂಟೆಂಪ್ಟ ಪಿಟಿಷನ್ ಇದೆ ಎಂಬುದನ್ನು ಅದು ಗಂಭೀರವಾದಂಥ ವಿಚಾರ. ಸನ್ಮಾನ್ಯ ಅಧ್ಯಕ್ಷರೇ, ಕಂಟೆಂಪ್ಟ ಪಿಟಿಷನ್ ಬಂದ ಕೂಡಲೇ ಸುಪ್ರೀಂ ಕೋರ್ಟನಿಂದ ನಾವು ಲಾ ಡಿಪಾರ್ಟಮೆಂಟಿಗೆ, ಪೈನಾನ್ಸ ಡಿಪಾರ್ಟಮೆಂಟಿಗೆ ಇದನ್ನು ಕಳುಹಿಸಲಿಕ್ಕೆ ಆಗುವುದಿಲ್ಲ. ಆ ಸಂಬಂಧಪಟ್ಟ ಕಾರ್ಯದರ್ಶಿಯವರು ನೇರವಾಗಿ ಆ ಪೋರ್ಟಫೋಲಿಯೋ ಮಿನಿಸ್ಟರ್ ಹತ್ತಿರ ಬರುತ್ತಾರೆ. ಅದೂ ಕೂಡ, ಇಂಥ ಗಂಭೀರವಾದಂಥ ವಿಚಾರ, ನೇರವಾಗಿ ಮುಖ್ಯಮಂತ್ರಿಗಳ ಹತ್ತಿರ ಬಂದು ಅದಕ್ಕೆ ಬೇಕಾದಂಥ ನಿವೃತ್ತಿ, ಪರಿಹಾರ, without referring to any Department, they will have to do it because you cannot wait and you cannot go through the regular cahannel. It is an extraodinary situation. ಹಾಗಿರುವಾಗ ತಾವು ಇವತ್ತು

ಅದನ್ನು ಪ್ಲೀಸ್ ಕಾಲ್ ಫಾರ್ ಫೈಲ್ ಎಂದು ಹೇಳಿ ಮಾರ್ಕ ಮಾಡತಕ್ಕ ಏನು ರಿಮಾರ್ಕನ್ನು ತಾವು ಮಾಡಿದ್ದೀರಿ. that must have obstructed the Chief Secretary from implementing that order or he might have sent the file or he could not have taken a decision. ಇದು ಪ್ರಶ್ನೆ, ತಾವು ಇವತ್ತು ಈ ಸದನದಲ್ಲಿ ಅಥವಾ ಜನತೆಗೆ ತಾವು ವಿಶೇಷವಾಗಿ ಉತ್ತರವನ್ನು ಕೊಡಬೇಕಾದಂಥ ಒಂದು ಅವಶ್ಯಕತೆ ಖಂಡಿತವಾಗಿಯೂ ಕೂಡ ಇದೆ. ಏಕೆಂದರೆ ಇವತ್ತು ತಾವು ಬರೆದ ಆ ಪತ್ರಗಳಿಗೆ ತಮ್ಮ ಕಾರ್ಯದರ್ಶಿಯವರು ಕೂಡ ಎಂಡೋರ್ಸ ಮಾಡಿದ್ದರು. ಅದು 19.8.95ಕ್ಕೆ. ಅಂದರೆ 19.8.95ಕ್ಕೆ ಅವತ್ತು ಆ ಪತ್ರದಲ್ಲಿ ತಮ್ಮ ಕಾರ್ಯದರ್ಶಿಗಳು To get the file, order to get the file early ತಾವು ಇವತ್ತು ಎಂಡೋರ್ಸಮೆಂಟ್ ಮಾಡಿದ್ದೀರಿ. ಸುಪ್ರೀಂ ಕೋರ್ಟಿನವರು 25.8.95ಕ್ಕೆ ಪನಿಶಮೆಂಟ್ ಕೊಟ್ಟಿದ್ದು 10.7.95ರಲ್ಲಿ ಆ ಆರ್ಡರ್ ಬಗ್ಗೆ ಶ್ರೀ ಧನಂಜಯ ಅವರೂ ಕೂಡ ಕಾರ್ಯದರ್ಶಿಯವರಿಗೆ ಬರೆದಿದ್ದಾರೆ. ನೀವು ಕೊಟ್ಟಂಥ ಪರಿಹಾರ ಅದು ಸರಿಯಾದಂಥ ಪರಿಹಾರ ಅಲ್ಲ ಎಂಬುದನ್ನು ಅವರು ತಮಗೆ ಬರೆದಿದ್ದಾರೆ. ನಿಮ್ಮ ಪಕ್ಷದ ಒಬ್ಬ ಶಾಸಕರು ಪತ್ರ ಕೊಟ್ಟಿದ್ದಕ್ಕೆ Get the file ಎಂದು ಹೇಳಿದರೆ, ಯಾವ ಒಂದು ದುರ್ಘಟನೆ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ನಡೆದಿದೆ. ಈ ದುರ್ಘಟನೆಗೂ ಈ ಒಂದು ಫೈಲು ಬರತಕ್ಕಂಥಾದ್ದು, ಫೈಲು ಕಳುಹಿಸತಕ್ಕಂಥಾದ್ದು ತಾವು ಇದರ ಬಗ್ಗೆ ಚೀಫ್ ಇಂಜಿನಿಯರಗಳ ಒಂದು ಪ್ರಮೋಷನ್ ಎಂದು ಹೇಳಿತಕ್ಕಂಥ ಎಲ್ಲ ವ್ಯವಹಾರಗಳಿಗೆ ಕೂಡ ಖಂಡಿತವಾಗಿಯೂ ಸಂಬಂಧವಿದೆ ಎಂಬುದನ್ನು ನಾವು ಇವತ್ತು ಅರ್ಥಮಾಡಿಕೊಳ್ಳಬೇಕಾದಂಥ ಪರಿಸ್ಥಿತಿ ಬಂದಿದೆ. ಇದಕ್ಕಿಂತ ಇನ್ನೂ ಹೆಚ್ಚು ಈ ವಾದಕ್ಕೆ ಏನು ಸೆಕ್ರೆಟರಿಯೇಟ್ ಕಾರ್ಯದರ್ಶಿಯವರಿಗೆ ಸ್ವತಂತ್ರವಾಗಿ ಬರತಕ್ಕಂಥ ಸಮಸ್ಯೆಯನ್ನು, ತುರ್ತಾದ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಏನೋ ಇವರ ಕೈಕಟ್ಟಿದೆ. ಯಾವುದೇ ಒಂದು ತಾವು ಮಂತ್ರಿಗಳೋ ಅಥವಾ ಮತ್ತೊಬಬ್ಬರು ಮಾಡಿದ್ದೀರೋ This I am not going to just tell. ಆದರೆ ಇವತ್ತು ತಮ್ಮ ಕೈಕಟ್ಟಿದೆ. ಏಕೆಂದರೆ When the file is sent, you are seized of the matter. You cannot take a decision, you cannot reconsider the matter. ಆದ್ದರಿಂದ ಇದಕ್ಕೆ ಇನ್ನೂ ಹೆಚ್ಚುಪುಷ್ಟಿ ಯಾವುದು ಬರುತ್ತದೆ ಎಂದರೆ You have created the post ಆಮೇಲೆ ಯಾವಾಗ ಇದು ಆದಮೇಲೆ ಅದೇ ಸಂಜೆ 25.8.95ಕ್ಕೆ ತಾವೇ ಪ್ರಮೋಷನ್ ಕೊಡಬಹುದು ಎಂದು ಹೇಳಿ ಗವರ್ನಮೆಂಟ್ ಆರ್ಡರನ್ನು ಇಷ್ಯೂ ಮಾಡಿದ್ದೀರಿ. ಇದನ್ನು you could have done it much earlier. ಇದನ್ನು ಮಾಡಿದಮೇಲೆ He has been made Additional Chief Engineer.

ಅಡಿಶನಲ್ ಚೀಫ್ ಇಂಜಿನಿಯರ್ ಮಾಡಿದಮೇಲೆ 31.8.95ಕ್ಕೆ ಒಬ್ಬರು ಪಾರ್ಥಸಾರಥಿ ಎಂಬುವರು ಚೀಫ್ ಇಂಜಿನಿಯರ್ ಕಾರ್ಪೊರೇಷನಸಲ್ಲಿ ರೀಟೈರ್ ಆಗುತ್ತಾರೆ. ಈಗ ಧನಂಜಯ ಅವರಿಗೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಅಸೈನಮೆಂಟ್ ಇಲ್ಲ, ಕೆಲಸವೂ ಇಲ್ಲ. ಏಕೆಂದರೆ

ಪ್ರಮೋಷನ್ ಆಗಿದೆ. ಚೀಫ್ ಇಂಜಿನಿಯರ್ ಕೆಲಸವೂ ಇಲ್ಲ, ಎಕೆಂದರೆ It is Supernumerary post ಒಂದು ರೀತಿಯ ತ್ರಿಶಂಕು. ಆ ಸಂದರ್ಭದಲ್ಲಿ ಪಾರ್ಥಸಾರಥಿಯವರು ಚೀಫ್ ಇಂಜಿನಿಯರ್ ಆಗಿ ರಿಟೈರ್ ಆದಮೇಲಮ ಯಾರನ್ನು ಇನಚಾರ್ಜ ಚೀಫ್ ಇಂಜಿನಿಯರ್ ಆಗಿ ಮಾಡಬೇಕಾಗಿತ್ತು? The man who has been promoted, who is already promoted ಅವರನ್ನು ನೀವು ಇನಚಾರ್ಜ ಚೀಫ್ ಇಂಜಿನಿಯರ್ ಅಥವಾ ಚೀಫ್ ಇಂಜಿನಿಯರ್ ಆಗಿ ಮಾಡುವ ಬದಲು, ಮತ್ತೊಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್ ರಾಮೇಗೌಡರಿಗೆ ತಾವು ಇನಚಾರ್ಜ ಚೀಫ್ ಇಂಜಿನಿಯರ್ ಆಗಿ ಮಾಡತಕ್ಕಂಥ ಎಲ್ಲಾ ಘಟನೆಗಳನ್ನು ನೋಡಿದಾಗ ಇದು this is after the punishment. ಇವತ್ತು ಆ ಒಬ್ಬ ಉನ್ನತ ಅಧಿಕಾರಿ ಜೈಲಿನಲ್ಲಿ ಇದ್ದಾರೆ. ಅವರು ಜೈಲಿಗೆ ಹೋಗತಕ್ಕಂಥ ಆಜ್ಞೆಯನ್ನು ಇವತ್ತು ಕೊಟ್ಟಿದ್ದಾರೆ. ಆ ಹಿನ್ನಲೆಯಲ್ಲಿಯೂ ಕೂಡ ಸರ್ಕಾರಕ್ಕೆ ಬುದ್ಧಿ ಬರಲಿಲ್ಲಅಂದರೆ, ಆ ಮೇಲೂ ಕೂಡ ಮತ್ತೊಂದು ಮೊಂಡುಹಠವನ್ನು ಹೂಡಿ, ಆ ಮುಖ್ಯಇಂಜಿನಿಯರ್ ಹುದ್ದೆಯನ್ನು ಅರ್ಹತೆಯುಳ್ಳಂಥ ಒಬ್ಬ ಮುಖ್ಯ ಇಂಜಿನಿಯರ್ ಅವರಿಗೆ ನೀಡದೆ, ಮತ್ತೊಬ್ಬರಿಗೆ ಇನಚಾರ್ಜ ಮಾಡತಕ್ಕಂಥ ಉದ್ಧೇಶಗಳನ್ನು ಅಥವಾ ಷಡ್ಯಂತರವನ್ನು ನೋಡಿದರೆ, ಖಂಡಿತವಾಗಿಯೂ ಕೂಡ ನೀವು ಹೆಣೆದಂಥ ಬಲೆಯಲ್ಲಿ ನೀವೇ ಸಿಕ್ಕಿ ತೊಳಲಾಡತಕ್ಕಂಥ ಪರಿಸ್ಥಿತಿಯಲ್ಲಿ ತಾವು ಇದ್ದೀರಿ ಎಂಬ ಒಂದು ವಿಚಾರ ಈ ಎಲ್ಲಾ ಘಟನೆಗಳಿಂದ ಸ್ಪಷ್ಟವಾಗಿ ನಮಗೆ ಗೋಚರವಾಗುತ್ತಿದೆ. ಎಕೆಂದರೆ Your Government may have some prejudice against that Chief Engineer because he has been going around the Court. That is a different matters ಆದರೆ ಇವತ್ತು ಈ ಅಜಾಗ್ರತೆ, ಅಚಾತುರ್ಯದ ಫಲವಾಗಿ ಇವತ್ತು ಚೀಫ್ ಇಂಜಿನಿಯರ್, ಒಬ್ಬ ಶ್ರೇಷ್ಠ ಉನ್ನತವಾದಂಥ ಒಬ್ಬ ಅಧಿಕಾರಿ, ಒಳ್ಳೆಯ ರೆರ್ಕಾಡ್ಸ ಇದ್ದಂಥ ಪ್ರಾಮಾಣಿಕ, ದಕ್ಷತೆಯಿಂದ ಇದ್ದಂಥ ಒಬ್ಬ ಅಧಿಕಾರಿ ಜೈಲಿನ ಒಳಗೆ ಹೋಗಿ ಕುಳಿತುಕೊಳ್ಳುವುದಿದ್ದರೆ, ಈ ಎಲ್ಲಾ ಘಟನೆಗಳನ್ನು ನೋಡಿದರೆ, ಇವತ್ತು ತಮ್ಮ ಸರ್ಕಾರ ಅಥವಾ ಸರ್ಕಾರದ ಒಳಗೆ ಇರತಕ್ಕಂಥ ಕೆಲವು ಶಕ್ತಿಗಳು, ಇದರಲ್ಲಿಖಂಡಿತವಾಗಿಯೂ ಕೂಡ ಕೆಲಸ ಮಾಡಿದೆ ಎಂಬುದನ್ನು ನಾವು ಇವತ್ತು ಆಲೋಚನೆ ಮಾಡಬೇಕಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ತಾವು ಮಾತನಾಡುವಾಗ, ಮಾನ್ಯ ನಂಜೇಗೌಡರೂ ಸಹ ಮಾತನಾಡಿದರು. ಇವತ್ತು ನಾವೂ ಸಹ ಗೊಂದಲದಲ್ಲಿ ಇದ್ದೇವೆ. ಹಿಂದೆ ತಾವೇ ಮುಖ್ಯಮಂತ್ರಿಗಳಾಗಿದ್ದರಿಂದ ಕೇಳುತ್ತೇನೆ, ಉತ್ತರ ಗೊತ್ತಿದ್ದರೆ ಹೇಳುವುದು. ತಾವು ನಿನ್ನೆ ತಮ್ಮ ಕಾಲದಲ್ಲಿ ಏನು ಆಯಿತು ಎಂದು ಹೇಳಿದ್ದೀರಿ. ಅದು ನಮಗೆ ಮನದಟ್ಟಾಗಿತ್ತು. ಆದರೆ ಒಂದು ಸಂಶಯ ನಮಗೆ ಬಂದಿರುವುದ ಏನೆಂದರೆ, ಬೆಂಗಳೂರು ನಗರಪಾಲಿಕೆ ತನ್ನ ನಿರ್ಣಯ ಸಂಖ್ಯೆ 5-162 ದಿನಾಂಕ 29.4.94ರಲ್ಲಿ ಶ್ರೀ ಧನಂಜಯ ಅವರಿಗೆ ಬಡ್ತಿ ನೀಡಲು ಒಪ್ಪಿಗೆಯನ್ನು ನೀಡಿದ್ದರು. 25.9.95ರವರೆಗೆ ಆದೇಶವನ್ನು ಜಾರಿಗೊಳಿಸಲಿಲ್ಲ. ತಮಗೆ ಇದು ಬಂದಾಗ, ನೀವು ಮುಖ್ಯಮಂತ್ರಿಗಳಾಗಿದ್ದಾಗ, ಆ ಕಾರ್ಪೊರೇಷನ್ ರೆಸ್ಯುಲೇಷನಗೆ ಎಫೆಕ್ಟ ಕೊಟ್ಟಿದ್ದೀರಿ ಎಂದರೆ ತಮ

ಕಾಲದಲ್ಲಿ ಏನೂ ತಪ್ಪಾಗಿಲ್ಲ ಎಂಬುದು ನಮಗೆ ಮನದಟ್ಟಾಗುತ್ತದೆ. ಇಲ್ಲದಿದ್ದರೆ ಅಕ್ಷಮ್ಯ ಅಪರಾಧ ತಮ್ಮ ಕಾಲದಲ್ಲಿ ಆಯಿತು ಎನ್ನುವ ಭಾವನೆ ನಮಗೆ ಮೂಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನೀವು ಈ ಹಂತದಲ್ಲಿ ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ ತಮ್ಮ ಬಗ್ಗೆ ಮಾತನಾಡುವುದನ್ನು ಬಿಟ್ಟು ಮುಂದಿನ ವಿಷಯಕ್ಕೆ ಹೋಗುವುದಕ್ಕೆ ನಮಗೆ ಅನುಕೂಲವಾಗುತ್ತದೆ. That's all. ನಾನು ಆ ರೆಸಲ್ಯೂಷನ್ ನಂಬರನ್ನು ಹೇಳುತ್ತಿದ್ದೇನೆ. ನಿಮ್ಮ ಕಾಲದಲ್ಲಿ ನೀವು ಅನುಮತಿ ಕೊಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಆವಾಗ I was not the portfolio Minister. ನಮಗೆ ಅದು ಫೈಲ್ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ನಿಮ್ಮ ರೆಸ್ಪಾನ್ಸಿ ಬಿಲಿಟಿ ಇತ್ತು.

Sri. M. Veerappa Moily : I am telling you, still I am responsible ಏಕೆಂದರೆ, I was not the portfolio Minister. ಎಂದು ಅಷ್ಟು ಹೇಳಿದೆ. ಇಲ್ಲಿ ಪ್ರಶ್ನೆ ಏನಾಗಿದೆ ಎಂದರೆ, Throughout it is our stand. No further benefits are accured. ಎಂಬುದೇ ನಮ್ಮ ಸ್ಟ್ಯಾಂಡ್. ಏಕೆಂದರೆ ಕರ್ನಾಟಕ ಡಿವಿಜನ್ ಬೆಂಚ್ ಏನನಿದೆ ಅದರ ಬಗ್ಗೆ ಸೀನಿಯಾರಿಟಿ ಮೇಲೆ ಸ್ಪಷ್ಟವಾದ ಡಿಸಿಶನ್ ಕೊಟ್ಟಿದೆ. ಕೊಟ್ಟಮೇಲೆ ಇವತ್ತು ಅನೇಕ ಕಾಂಟೆಪ್ಟ ಪಿಟಿಶನ್ಸ ಕೂಡ ಹಾಕಲಾಗಿದೆ. ಅಲ್ಲಿ ಕಮೀಷನರ್ ಅವರು ಏನು ಹೇಳುತ್ತಾರೆ ಎಂದರೆ, ಬೆಂಗಳೂರು ನಗರ ಕಾರ್ಪೊರೇಷನ್ ಕಮೀಷನರರವರು, ಆ ರಿಸಲ್ಯೂಷನ್ ಮಾಡುವಾಗ ಸರ್ಕಾರಕ್ಕೆ ಅವರು ಏನು ಹೇಳುತ್ತಾರೆ ಎಂದರೆ ತಮ್ಮ ಈ ನಿರ್ಣಯ ಸರಿ ಇಲ್ಲ. ಆದ್ದರಿಂದ ಈ ನಿರ್ಣಯ ಏನಿದೆ ಇದನ್ನು ರಿಜೆಕ್ಟ ಮಾಡಬಹುದು. ಎಂದು ಅವರು ಸರ್ಕಾರಕ್ಕೆ ರೆಕಮಂಡ್ ಮಾಡಿ ಕಳುಹಿಸುತ್ತಾರೆ. ಸರ್ಕಾರ ಏನು ಮಾಡುತ್ತದೆ ಎಂದರೆ They issue a Show Cause Notice for cancellation of the resolution. ಅದಕ್ಕಾಗಿ ನಾನು ಹೇಳಿದೆ. 3.10.94ರಲ್ಲಿ ಲಿನ್ ಅವರು ಅಫಿಡವಿಟ್ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ No further benefits will accrue ಎಂದು ಹೇಳಿ ಸುಪ್ರೀಂ ಕೋರ್ಟಿನ ಗಮನಕ್ಕೆ ತಂದಿದ್ದಾರೆ. ಸುಪ್ರೀಂ ಕೋರ್ಟಿನ ಗಮನಕ್ಕೆ ತಂದ ಮೇಲೆ ಸುಪ್ರೀಂ ಕೋರ್ಟಿನವರೂ ಕೂಡ as well said this is the specific direction ಎಂದು ಅಂದ ಹೇಳಿ ಪ್ರಮೋಟ್ ಮಾಡುವುದಕ್ಕೆ ಯಾವುದೇ ಹಂತದಲ್ಲಿ ಒಂದು ವಿಚಾರ, ಅದ ಹೈಕೋರ್ಟಿನಿಂದಾಗಲೀ, ಸುಪ್ರೀಂ ಕೋರ್ಟಿನಿಂದಾಗಲೀ, This is the specific direction viz., to promote Sri Dhananjaya.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ವೇಳೆ ಸುಪ್ರೀಂ ಕೋರ್ಟನಿಂದ ನೇರವಾಂಥ, ಹೀಗೆ ಮಾಡಬೇಕು ಎಂದು ಆದೇಶ ಇಲ್ಲದಿದ್ದರೆ ಆವತ್ತು ನಗರಪಾಲಿಕೆಯವರು ನಿರ್ಣಯ ಸಂಖ್ಯೆ 5(162)ರ ಮೂಲಕ ಅವರಿಗೆ ಬಡ್ತಿ ನೀಡಬೇಕು ಎಂದು ತೀರ್ಮಾನ ತೆಗೆದುಕೊಳ್ಳುತ್ತಿರಲಿಲ್ಲ. ನಿನ್ನೆ ತಾವು ಮಾತನಾಡಬೇಕಾದರೆ ಏನು ಹೇಳಿದಿರಿ? ಅದು ಕಾರ್ಪೊರೇಷನ್ನಿಗೆ ಸಂಬಂಧಪಟ್ಟಿದ್ದು, ಕಾರ್ಪೊರೇಷನ್, ನಗರಪಾಲಿಕೆಯನ್ನು ಸರ್ಕಾರ ಸೂಪರಸೀಡ್ ಮಾಡುತ್ತದೆ, ಆ ಅಧಿಕಾರ ಇದೆ.

ಆದರೆ ಒಂದು ಸಾರಿ ಕಾರ್ಪೊರೇಷನ್ ಸುಪ್ರೀಂಕೋರ್ಟಿನ ಆದೇಶವನ್ನು ಮನಗಂಡು ನಿರ್ಣಯ ಮಾಡಿ ಕಳುಹಿಸಿದ ಮೇಲೆ ಆ ನಿರ್ಣಯಕ್ಕೆ ತಮ್ಮ ಸರ್ಕಾರ ಒಪ್ಪಿಗೆಯನ್ನು ಕೊಟ್ಟುಬಿಟ್ಟಿದ್ದರೆ, ಶ್ರೀ ಧನಂಜಯ ಅವರಿಗೆ ಪ್ರಮೋಷನ್ ಆವತ್ತೇ ಸಿಗುತ್ತಿತ್ತು. ಈ ಘಗರಣ ಆಗುತ್ತಿರಲಿಲ್ಲ. ವಾಸುದೇವನ್ ಅವರು ಜೈಲಿಗೆ ಹೋಗುವ ಸಂದರ್ಭ ಬರುತ್ತಿರಲಿಲ್ಲ. ಮಂಜೂರಾತಿ ಕೊಡದೇನೆ ತಮ್ಮ ಕಡೆಯಿಂದ ಅಕ್ಷಮ್ಯ ಅಪರಾಧವಾಗಿದೆ ಎಂಬುದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು : ಇದರಲ್ಲಿ ರಾಜಕೀಯ ಏಕೆ ಮಾಡುತ್ತಿದ್ದೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ರಾಜಕೀಯ ಮಾಡಬೇಕು, ಬಿಡಿ. ಇಲ್ಲಿ. Par 12 of the Affidavit. Mr Lynn filed an affidavit before the highest Court, Supreme Court.

(INTERRUPTION)

ಸ್ವಲ್ಪ ಕೇಳಬೇಕು ನೀವು. Please hear me.

SRI H.N. NANJE GOWDA : Contempt proceedings are based on Supreme Court's judgment of 22/4/94, if I am correct. ಈ ಕಂಟೆಂಪ್ಟ ಪ್ರೊಸಿಡಿಂಗ್ಸ ಯಾವ ತೀರ್ಮಾನದ ಮೇಲೆ ಆಗಿದೆ? ಯಾವ ಜಡ್ಜಮೆಂಟ್ ಮೇಲೆ ಆಯಿತು? ಅದಕ್ಕೆ ನೀವು ಏಕೆ ಒಪ್ಪಿಗೆ ಕೊಡಲಿಲ್ಲ?

ಶ್ರೀ ವಿ. ಸೋಮಣ್ಣ : ಬೆಂಗಳೂರು ಮಹಾನಗರಪಾಲಿಕೆ ನಿರ್ಣಯ ಮಾಡಿ ಕಳುಹಿಸಿಕೊಟ್ಟಿತ್ತು. ಕಳುಹಿಸಿಕೊಟ್ಟಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಅವರಿಗೆ ಆಗ ನಗರಾಭಿವೃದ್ಧಿ ಸಚಿವರಾಗಿದ್ದ ಮಾನ್ಯ ಗೋಪಿನಾಥ ಸಾಂಡ್ರಾರವರು ಒಂದು ಪತ್ರ ಬರೆದರು. ಆ ಪತ್ರದ ಒಕ್ಕಣೆಯ ಅಭಿಪ್ರಾಯ ಕೇಳಿದಾಗ ಅದನ್ನು ಮಾಡುವುದಕ್ಕಾಗುವುದಿಲ್ಲವೆಂದು ಬರೆದರು. ಅದರ ಜವಾಬ್ದಾರಿಯನ್ನು ಯಾರು ಹೊತ್ತುಕೊಳ್ಳಬೇಕು. ದಯಮಾಡಿ ಸನ್ಮಾನ್ಯ ಮೊಯಿಲಿಯವರು ಅರ್ಥಮಾಡಿಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅಕ್ಟೋಬರ್ 1994ರಲ್ಲಿ, ನಿರ್ಣಯ ಆದಮೇಲೆ, ಸುಪ್ರೀಂಕೋರ್ಟಿಗೆ ಹೋಗುವುದಕ್ಕೆ ಕಾರಣಕರ್ತರು ಅವರೋ ನಾವೋ? The matter came up before the Supreme Court.

ಶ್ರೀ ವಿ. ಸೋಮಣ್ಣ : ಸುಪ್ರೀಂ ಕೋರ್ಟಿಗೆ ಹೋಗಬೇಕಾದರೆ, ಯಾವು ಕಾರಣರು? ವಿರೋಧಪಕ್ಷದ ನಾಯಕರು ಏನು ಹೇಳಿದರು, ಅದರಂತೆ ನಡೆದುಕೊಂಡಿದ್ದರೆ, ಆಗುತ್ತಾ ಇರಲಿಲ್ಲ. ಅದನ್ನು ಹೇಳುವುದಕ್ಕೆ ಅವರು ತಯಾರಾಗಿಲ್ಲ.

SRI. M. VEERAPPA MOILY : Sir, in this issue, there have been number of petitions on all these issues. They wer filed by Sri Dhananjaya and one Superintendent Engineer. Sir, I am quoting page-11 of the affidavit of Mr. Lynn which reads thus:

``All the above writ petitions having been referreed to a Division Bench of the High Court were heard and disposed of by the said Division Bench. All the writ petitions were dismissed. The common order passed by the Division Bench of the High Court has been produced alongwith the above Special Leave Application".

This is earlier to the Corporation decision. The Division Bench of the High Court has also specifically considered the effect of the earlier order of the High Court upon which the Supreme Court gave a decision in 1993. That has also been considered by the High Court. It is not in isolation of that. The Division Bench has referred to both the decision of the High Court as well as the decision of the Supreme Court upon which this contempt peptition stands. That has been referred to by the Division Bench and they dismissed the please of Mr. Dhananjaya and others. The High Court has also found that the 1st Respondent was not entitled to any further benefit flowing from the earlier order. ಇದನ್ನು ಹೇಳಿದ ಮೇಲೆ, ಪುನಃ ಅಡಿಷನಲ್ ಚೀಫ್ ಇಂಜಿನಿಯರ್ ಹುದ್ದೆಯನ್ನು ರಿಲೀಫ್ ಇದೆಯೆಂದು ಇದನ್ನು ಕೊಟ್ಟುಬಿಟ್ಟರೆ I could have been hauled up by the High Court for flouting this order. ಇದಕ್ಕೆ ಬಹಳ ಇತಿಹಾಸ ಇದೆ. 1993ರ ಆರ್ಡರ್ ಬಗ್ಗೆ ಹೇಳುವಂಥಾದ್ದು. The Division Bench order was in 1994. They dismissed it. The Division Bench also said that no further benefit will accrue.

SRI H.N. NANJEGOWDA : Let us not mislead. If 1993 order is considered by the Division Bench of the High Court and 1993 order of the Supreme Court and if it is undone, then how can there be contempt proceeedings against the 1993 order? I cannot understand the logic.

SRI M. VEERAPPA MOILY : I also do not understand the logic. It does not stand to a logic. The then Chief Secretary gave an Affidavit telling

that his is the order of the Division Bench before the Supreme Court. If it is false, then the Chief Secretary should have been hauled up by the Supreme Court. This affidavit should have been considered by the Supreme Court.

SRI B. SOMASEKHAR : It seems that you are trying to vindicate yourself. If you can yield for a while...

SRI M. VEERAPPA MOILY : Let me complete my submission and then I will yield.

ಶ್ರೀ ಬಿ. ಸೋಮಶೇಖರ್ : ತಾವು ಏನು ಹೇಳುತ್ತಿದ್ದೀರಿ. ಒಂದು ರಿಟ್ ಪಿಟಿಷನನಲ್ಲಿ ಧನಂಜಯ ಅವರಿಗೆ ಯಾವುದೇ ಬೆನಿಫಿಟ್ ಕೊಡಬೇಕಾಗಿಲ್ಲವೆಂದು ನಿಮ್ಮ ಕಾಲದಲ್ಲಿದ್ದ ಮುಖ್ಯ ಕಾರ್ಯದರ್ಶಿಯವರು ಅಫಿಡವಿಟ್ ಹಾಕಿದ್ದಾರೆ. ಅದರ ಪ್ರಕಾರ, ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. you are trying to vindicate your stand. ಇನ್ನೊಂದು ತಮ್ಮ ಕಾಲದಲ್ಲಿ 10.7.95ರಲ್ಲಿ ಒಂದು ಆರ್ಡರನ್ನು ಇಷ್ಯೂ ಮಾಡಿದ್ದೀರಿ. ಅದರರಲ್ಲಿ, ಪ್ಯಾರಾ ಮೂರರಲ್ಲಿ, ಬೆನಿಫಿಟ್ ಕೊಟ್ಟಿದ್ದೇವೆಂದು ಹೇಳಿದ್ದೀರಿ. ``Whereas Sri T.R. Bhananjaya, Superintendent Engineer Bangalore City Corporation filed an I.A.No.3 Civil Appeal 793-93 praying for a clarification as to whether or not he would be eligible for benefits which would arise from the decision rendered by the Hon'ble High Court of Karnataka and Hon. Supreme Court of India starting from writ petition Nos.20147/79, 20148/79, SLP No. 7317to 7319/84." ಈ ರಿಟ್ ಪಿಟಿಷನ್ ಹೈಕೋರ್ಟಿನಲ್ಲಿದೆ. ಹೈಕೋರ್ಟಿನಲ್ಲಿ ಏನು ತೀರ್ಮಾನವಾಗಿದೆ, ಅದರ ಮೇಲೆ ಸುಪ್ರೀಂಕೋರ್ಟಿಗೆ ಯಾವರೀತಿ ಹಾಕಿದ್ದಾರೆ, ಸುಪ್ರೀಂ ಕೋರ್ಟಿನವರು ಯಾವ ತೀರ್ಮಾನ ಕೊಟ್ಟಿದ್ದಾರೆ, ಇದು ಯಾವಾಗ ಆಗಿದೆ ಎಂಬುದನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಕ್ಲಾರಿಫಿಕೇಷನ್ ಆರ್ಡರ್ ಕೊಟ್ಟಮೇಲೆ, ಡಿ.ಪಿ.ಸಿ. ಪ್ರಕಾರ ಆಕ್ಷನ್ ತೆಗೆದುಕೊಂಡು, ಅದರ ಮೇಲೆ ಪ್ರಮೋಷನ್ ಮಾಡಿದರು. ಸುಪ್ರೀಂ ಕೋರ್ಟಿಗೆ ಈ ವಿಷಯ ಹೋಗಿದೆ. ಎನ್ನುವುದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. That is the relief which was given according to the understanding. The understanding of the Government was corroborated by the understanding of the Division Bench of the High Court. This is what I am telling. This issue has gone to the Supreme Court. That is what I am submitting here. Though in the writ petition, the learned

single judge had granted an interim order, an appeal by the State as well as by the Corporation- the same was stayed and ultimately the writ appeals themselves were disposed of by the Division Bench observing that the appeals have become infructuous as the writ petitions themselves have been dismissed, an interlocutory order passed did not survive for consideration.

Then - Para-10 reads thus:

``During the pendency of the contempt proceedings, the Bangalore City Corporation on 29/4/94 passed a Resolution to create yet another post of Additional Chief Engineer and to appoint the first Respondent to the said post. The Commissioner of Bangalore City Corporation forwarded the said Resolution to the Government with his remarks. He hasw recommended for cancellation of the said Resolution stating that it had been passed in excess of the powers conferred on it and in contravention of the relevant rules. He has also stated that in view of Section 84 of the Karnataka Municipal Corporation Act, 1976 rule 77, the council has neither the power to create a post nor to direct to appoint a particular individual in the said post. The Government of Karnataka has issued notice under Section 98(2) of Karnataka Municipal Corporation Act, 1976 to the Corporation to show¥caused as to why the said Resolution should not be cannelled. The Government would take immediate action and pass appropriate orders after the receipt of the reply in accordance with the sub-clause 3 of Section 98 of the above said Act".

This is a clear affidavit filed before the Supreme Court. The supreme Court could have given a direction. The High Court has clearly construed that no further benefits would flow after the departmental promotion committee considered all these applications. Thereafter suppose that is the intention of the supreme court actually to promote Sri Dhananjaya, at that state, there were two occasions. They could have said promote him his is the intention of the supreme court ಎಂದು ಹೇಳತಕ್ಕಂಥ ಒಂದು ಅವಕಾಶ ಸುಪ್ರೀಂಕೋರ್ಟಿಗೆ

ಇತ್ತು but no such direction was given. The direction whatever it appeared was vague it was not clear and it is not definite. This is how complications have arisen. I do agree that the present Government has also got that kind of a limitation. On one side the High Court Division Bench decision saying that no further benefits would flow and on the other side the supreme court also considered it in the contempt petition, the SLP , Civil Appeal on the contempt petition instituted by the High Court. ನಿಮ್ಮ ಸಮಸ್ಯೆ ಎಲ್ಲಿ ಬಂತು ಎಂದರೆ, ಈ ವಾದ ಇದ್ದರೂ ಕೂಡ ತಾವು ಅಂಡರಟೇಕಿಂಗ್ ಕೊಟ್ಟಮೇಲೆ you have no other option but to promote him and which you don't do it. The problem is that.

SRI KAGODU THIMAPPA : How this Corporation was promoted to pass the Resolution? Was it either on its own or at the instance of some court order? Secondly, an affidavit filed by by Lynn on the contempt peptition, what order has been passed after filing the affidavit.

SRI M. VEERAPPA MOILY : There is a Government Order in pursuance to that 1993 order. The Government has told the Corporation to take appropriate action and the relief be granted according to that judgment.

1.10 ಪಿ.ಎಂ.

ಅಷ್ಟು ಆದ ಮೇಲೆ ಅವರು ಡಿಪಾರ್ಟಮೆಂಟಲ್ ಪ್ರಮೋಷನ್ ಕಮಿಟಿ ಮಾಡುತ್ತಾರೆ. they promote some people and then ultimately they take a resolution to give him the post of Additional Chief Engineer.

MR. SEPAKER : I just went a clarification. It is only an academic interest. I am also getting confused. I want to know basically one thing, An order must have been passed by a court which was necessarily not complied with by the authorities. Then only contempt proceedings come into force. So, in this case, contempt proceedings or action to initiate contempt proceedings arose out of which matter? And were there any order? There is an impression sometimes conveyed by a few members that the original order, that has been annulled ಎನ್ನುವ feeling ಇದೆ, it is only to set the records straight.

SRI M. VEEPAPPA MOILY : Special leave petition was filed by the petitioner and it was not pressed.

MR. SPEAKER : Which means that petition on the strength of which....

SRI M. VEERAPPA MOILY : No no. The division bench decision giving the scope of the Supreme Court order about the further relief, that dismiss the petition. Then Special Leave Petition was filed by the aggrieved party, that is Mr. Dhanaajaya and others. It went to the Supreme Court, that was withdrawn as not pressed, that means the High Court Division bench decision saying that no further relief stands. There is a decision like that.

ಅಧ್ಯಕ್ಷರು : ಅಂದರೆ ಕಂಟೆಪ್ಟ ಪ್ರೊಸಿಡಿಂಗ್ಸ ಇನಷಿಯೇಟ್ ಮಾಡಿದರಲ್ಲಾ ಅದರ ಮೇಲೆಯೇ? I think Somasekhar will help me. Let us listen to him.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯಿಲಿಯವರು ಒಂದು ಭಾಗವನ್ನು ಮಾತ್ರ ಹೇಳುತ್ತಿದ್ದಾರೆ. ಡಿವಿಜನ್ ಬೆಂಚನಲ್ಲಿ ಹೈಕೋರ್ಟ ಆಫ್ ಕರ್ನಾಟಕ ರಿಟಪಿಟಿಷನ್ ನಂಬರ್ 20147 ಮತ್ತು 20148 :89 ಈ ರಿಟಪಿಟಿಷನ್ ಅನ್ನು ತಾವು ನೋಡಿದರೆ, ಈ ರಿಟಪಿಟಿಷನನಲ್ಲಿ ಹೈಕೋರ್ಟನವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಅದು ಏನು ಅಂದರೆ ಧನಂಜಯ ಅವರಿಗೆ ಕಾನಷಿಕ್ವೆನ್ ಷಿಯಲ್ ಬೆನಿಪಿಟ್ಸ ಕೊಡಬೇಕು, ಅದರ ಪ್ರಕಾರ ಕಾರ್ಪೋರೇಷನನವರು ಕ್ರಮ ತೆಗೆದುಕೊಳ್ಳಬೇಕು ಎಂದು ಈ ರಿಟಪಿಟಿಷನನಲ್ಲಿ ಕೊಟ್ಟಿದ್ದಾರೆ. ಇನ್ನು ಮುಂದೆ ಹೋಗಿ ಹೇಳಿದ್ದಾರೆ ಅದರಲ್ಲೂ ಧನಂಜಯ ಅವರು ಕಂಟೆಪ್ಟ ಪಿಟಿಷನ್ ಹಾಕಿದ್ದಾರೆ. ಈ ತೀರ್ಮಾನ ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. He has filed a contempt petition before the High Court. ಆಗ ಹೈಕೋರ್ಟ ಏನು ತೀರ್ಮಾನ ಕೊಟ್ಟಿದೆ ಡಿವಿಜನ್ ಬೆಂಚ್ ಇನ್ನೂ ತೀರ್ಮಾನ ಆಗದೇ ಇದ್ದರೆ, ಸರ್ಕಾರ it should secure the records from the Corporation and implement the directions of the High Court ಎಂದೂ ಕೊಟ್ಟಿದ್ದಾರೆ, ಇದು ಒಂದು . ಆದಾದ ಮೇಲೆ ಮತ್ತೆ ಅವರು ಈ ರಿಟಪಿಟಿಷನ್ ಮೇಲೆ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ.

MR. SPEAKER : What happened to that contempt petition? What is the finding of the High Court?

ಶ್ರೀ ಬಿ. ಸೋಮಶೇಖರ್ : ಅದರ ಬಗ್ಗೆ ಇವರ ಕಾಲದಲ್ಲಿ ಏನೂ ಕ್ರಮ ತೆಗೆದುಕೊಂಡಿಲ್ಲ. ಅದು ಹಾಗೆಯೇ ಇದೆ.

MR SPEAKER : Another was passed by the Hon'ble High Court Division Bench and that order was not necessrily complied, with by the authorities.

SRI B. SOMASEKHAR : It should have been complied with.

MR. SPEAKER : No, no. According to your statement contempt proceedings were initiated even in that case. What is the outcome of that contempt petition?

SRI SOMASEKHAR : In the meanwhile, another gentleman went to the Supreme Court in Writ Petition number...

MR. SPEAKER : No, no. Any gentleman can go to any court. I am only interested in knowing the outcome of that contempt petition which was before the Hon'ble High Court of Karnataka.

ಶ್ರೀ ಬಿ. ಸೋಮಶೇಖರ್ : ಅದು ಹಾಗೆಯೇ ಇತ್ತು. ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಂತರ ಸುಪ್ರೀಂ ಕೋರ್ಟಿಗೆ ಅದೇ ವಿಷಯದ ಮೇಲೆ ಹೋದರು.

SRI. G.V. SRIRAMREDDY : What was the court's opinion on the contempt petition? ಕೋರ್ಟ ಏನು ಮಾಡಿತು ಆ ಕಂಟೆಂಪ್ಟ ಪಿಟಿಷನ್ ಮೇಲೆ ?

ಶ್ರೀಮತಿ ಪ್ರಮೀಳಾನೇಸರ್ಗಿ : ಕಂಟೆಂಪ್ಟ ಪಿಟಿಷನ್ ಡಿಸಪೋಸ್ ಮಾಡಬೇಕಾದರೆ ಡೈರೆಕ್ಷನ್ಸ ಕೊಟ್ಟರು. The Government is directed to get the records from the Corporation and implement it ಅತ ಅದಾದ ಮೇಲೆ ಇದುವರೆಗೂ ಏನೂ ಆಗಿಲ್ಲ. This is the present position. ಪಾರ್ಟಿ ಅಲ್ಲೇ ಕಂಟೆಂಪ್ಟ ಆರ್ಡರ್ ಕೂಡ ವೈಲೇಟ್ ಆಗಿದೆ ಎಂದು ಅಲ್ಲೇ ಇನ್ನೊಂದು ಅಪ್ಲಿಕೇಷನ್ ಹಾಕಬಹುದಾಗಿತ್ತು ಹಾಕಿಲ್ಲ. That order is also violated ಎಂದು ಹಾಕಬಹುದಾಗಿತ್ತು.

ಶ್ರೀ ಬಿ. ಸೋಮಶೇಖರ್ : ಹೈಕೋರ್ಟ ಡಿವಿಜನ್ ಬೆಂಚನಲ್ಲಿ ಏನು ಆರ್ಡರ್ ಮಾಡಿದ್ದಾರೆ ಅಂದರೆ 20147 ಮತ್ತು 20148:89 ಏನು ಅರ್ಡರ್ ಮಾಡಿದ್ದಾರೆ ಅಂದರೆ, ``It is open the Bangalore City Corporation to create supernumerary post for the period in question and give such benefits to the applicant to which he is entitled to." Further, the Government of Karnataka was directed to pass necessary orders in this regard. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡರು ಎನ್ನುವ ಬಗ್ಗೆ ಹೇಳಿಲ್ಲಇವರು. ಇನ್ನೊಂದು ವೆಂಕಟೇಶ್ ವರ್ಸಸ್ ಧನಂಜಯ ಹಾಕಿದಾಗ ಅದು ರಿಜೆಕ್ಟ ಆಗಿದೆ. ಅದರ ಪ್ರಕಾರವೇ ಲಿನ್ ಅವರು ಅಫಿಡವಿಟ್ ಫೈಲ್ ಮಾಡಿದ್ದಾರೆ. ಅದು ಒಂದು ಕಡೆ ಹೋಗಿದೆ. ದಾಸೇಗೌಡ ವರ್ಸಸ್ ಧನಂಜಯ ಇನ್ನೊಂದು ರಿಟಪಿಟಿಷನ್ ಹೋಗಿದೆ. ಅದು ಸುಪ್ರೀಂ ಕೋರ್ಟಿಗೆ ಹೋಗಿದೆ. The undertaking given by the State Government is in respect to the Writ

Petition between Dhananjaya and Dasegowda ಅದರ ಪ್ರಕಾರ, ಏನು ಸುಪ್ರೀಂ ಕೋರ್ಟಿತೀರ್ಮಾನ ಕೊಟ್ಟಿದೆ ಹೈಕೋರ್ಟ ತೀರ್ಮಾನ ಕೊಟ್ಟಿದೆ, ಹೈಕೋರ್ಟ ಏನು ತೀರ್ಮಾನ ಕೊಟ್ಟಿದೆ, ಅದನ್ನೇ ಸುಪ್ರೀಂ ಕೋರ್ಟ ಕನಫರ್ಮ್ಮ ಮಾಡಿದೆ. ಇದು ಸುಪ್ರೀಂ ಕೋರ್ಟ ತೀರ್ಮಾನ ಅಲ್ಲ. ಈ ರಿಟ್ ಪಿಟಿಷನನಲ್ಲಿ ಹೈಕೋರ್ಟ ಡಿವಿಜನ್ ಬೆಂಚನವರು. ತೀರ್ಮಾನ ಕೊಟ್ಟಿದ್ದಾರೆ. ಅದನ್ನು ಸುಪ್ರೀಂ ಕೋರ್ಟನವರು ಕನಫರ್ಮ್ಮ ಮಾಡಿದ್ದಾರೆ. ಇದನ್ನು ಇಂಪ್ಲಿಮೆಂಟ್ ಮಾಡಲೇಬೇಕು ಎಂದು ಅದರಲ್ಲಿ ಅಂಡರಟೇಕಿಂಗ್ ಕೊಟ್ಟಿದ್ದಾರೆ. ತಮ್ಮ ಕಾಲದಲ್ಲಿ ಅದಂಥಾದ್ದನ್ನು ಬಿಟ್ಟುಬಿಟ್ಟಿದ್ದೀರಿ. ಅವಾಗ ಇಂಪ್ಲಿಮೆಂಟ್ ಮಾಡಬೇಕಾದುದ್ದನ್ನು ನಮ್ಮ ಸರ್ಕಾರದಲ್ಲಿ ಆದದ್ದನ್ನು ಮಾತ್ರ ತಾವು ಹೇಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಇಲ್ಲಿ ಪ್ರಶ್ನೆ ಇರುವುದು ಇಲ್ಲಿ ಸ್ಪಷ್ಟವಾಗಿ ಸುಪ್ರೀಂ ಕೋರ್ಟ ಮುಂದೆ ಈ ಕಂಟೆಂಪ್ಟ ಪಿಟಿಶನ್ ಬಂದಾಗ .....

DR. JEEVARAJ ALVA : One submission to the Hon'ble member through your good offices. ಸೋಮಶೇಖರ್ ರವರು ಮಾನ್ಯ ಮೊಯಿಲಿಯವರ ಅರ್ಗ್ಯುಮೆಂಟನ್ನು ಪೂರ್ಣ ಹೈಜಾಕ್ ಮಾಡಿದಂತೆ ಕಾಣುತ್ತದೆ. ನನಗೆ ಅರ್ಥ ಆದ ರೀತಿಯಲ್ಲಿ.

MR. SPEAKER: Hijacking is your right.

DR. JEEVARAJ ALVA : The House has to be enlightened. There is a clear submission from Mr. Veerappa Moily that there have been clear contradiations between two judgments. confused; one is vague ಎಂದು ಹೇಳುತ್ತಾರೆ. ಅವರು ಅಡ್ವೋಕೇಟಗಳು. ಅವರು ಹೆಚ್ಚು ಬೆಳಕು ಚೆಲ್ಲಿದರೆ ನಮ್ಮ ಚರ್ಚೆಗೂ ಹೆಚ್ಚು ಗ್ರಾಸ್ ಆಗುತ್ತದೆ.

ಶ್ರೀ ಶಿವಪ್ಪ : ಹೇಗಾದರೂ ಇಂಟರ್ ಪ್ರಿಟ್ ಮಾಡಬಹುದು.

ಡಾ: ಜೀವರಾಜ ಆಳ್ವ : ಆಗಲ್ಲ. There is judgment of the State High Court, a division Bench. ಮಾನ್ಯ ಮೊಯಿಲಿಯವರು ಹೇಳಿದರೆ ಅಥವಾ ಪ್ರಮೀಳಾರವರು ಹೇಳಬಹುದು. MR. SPEAKER Mr. Moily will throw more light ಆದರೆ ತಾವು ಆ ರೆಫರೆನ್ಸ ಏನು ಮಾಡಿದಿರಿ ಸೋಮಶೇಖರ್ ಹೈಜಾಕ್ ಮಾಡಿದರು ಎಂದು Chair does not agree with it.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹೈಕೋರ್ಟ ಮತ್ತು ಸುಪ್ರೀಂ ಕೋರ್ಟಗಳ ತೀರ್ಮಾನಗಳಲ್ಲಿ ವ್ಯತ್ಯಾಸ ಇಷ್ಟೇ. 1993ರಲ್ಲಿ the supreme court has upheld the decision of the High Court. ಅದರ ಪ್ರಕಾರ they gave a clarification. ದಾಸೇಗೌಡರ ರೀಪ್ಯಾಟ್ರಿಷನನಲ್ಲಿ ಕ್ಲಾರಿಫಿಕೇಷನ ಅನ್ನು ಧನಂಜಯ ಅವರು ಹೇಳಿದಾಗ, ಅವರು ಹೇಳಿದರು you are entitled for certain relief ಆ ರಿಲಿಫ್ ಗೆ ಏನು ರಿಲೀಫ್ ಎಂಬುದನ್ನು

ನಾನು ಅದನ್ನೇ ಹೇಳಿದೆ ಸುಪ್ರೀಂ ಕೋರ್ಟಿನಲ್ಲಿ ಲಿನ್ ಅವರು ಅಫಿಡವಿಟ್ ಹಾಕಿದಾಗ, ಅದರಲ್ಲಿ ಸ್ಪಷ್ಟವಾಗಿ ಕಾಣಿಸಿದ್ದಾರೆ.

Para-9 `` only consequential relief which the first respondent and other applicants are entitlted to for consideration of their case for promotion to the post of Additional Chief Engineer. Since this was the selection post, the case of both first respondent as well as Bhojaraju were considered and ultimately Sri Bhojaraju who was senior to the first respondent was selected to the post on 5.4.1991. Subsequently again, when the post of Additional Chief Engineer became vacant, the cases of eligible candidates including the first respondent and one Sri Venkatesh were considered and Sri Venkatesh who was again senior to the first repsondent was selected on 1.8.1991. Thus, it is respectfully submitted that whatever consequential benefit which flowed to the first respondent has been effected to him by considering his claim for promotion. This Hon'ble Court (that means the Supreme Court) while desposing of the interleocutory application filed by the first respondent, namely, Dhananjaya in Civil Appeal No. 797/93 observed that though this Hon'ble Court directed Dasegowda should be deemed to have retired as Additional Chief Engineer of the Corporation, that order should not preclude the first respondent from getting any benefit which was entitled to in the earlier order passed in Writ Petition... It is open to the authorities to create supernumerary post and get the same sanctioned.

"There was no direction issued that even if the claim of the first Respondent was considered for selection as Additional Chief Engineer at Supernumerary Post must be created and he alone should be appointd to the said Post``. This is the problem and he was considered for promotion. He was considered and in view of seniority and many other things, the D.P.C. did not chooseproper to promote him. There the matter ends. This is the relieif, If he was not considered, yes, the things would have been different. So, there is no specific order from the Supreme Court. "I therefore, respectfully sumbit that the order of the High Court as affirmed by this

Hon'ble Court has been given effect to and the first Respondent is entitled to any further benefit flowing the said order``

ಯಾವುದು, ಸುಪ್ರೀಂ ಕೋರ್ಟಿನಲ್ಲಿ ಈ ವಾದವನ್ನು ಮುಖ್ಯ ಕಾರ್ಯದರ್ಶಿಗಳ ಮುಂದೆ ಇಟ್ಟಿದ್ದೆವೊ There is no order from the Supreme Court till the other day saying that the specific order is to promote him as Additional Chief Engineer. This is the only hitch. ಆದ್ದರಿಂದ, ಅಧ್ಯಕ್ಷರೆ, ಪ್ರಶ್ನೆ ಏನು ಬಂದಿದೆ? the gist of the matter is ಅಂಡರಟೇಕಿಂಗ್ ತಾವು ಕೊಟ್ಟಿದ್ದೀರಿ, ಈ ವಾದವನ್ನು ತಾವು ಮುಂದುವರಿಸಿಕೊಂಡು ಹೋದಿರಿ, that is a different matter. You have not filed the objections. ಆದ್ದರಿಂದ, ಇವತ್ತು ಅಂಡರ್ ಟೇಕಿಂಗ್ ಕೊಟ್ಟ ಮೇಲೆ what does it mean? It means that you have given an undertaking to promote him as Additional Chief Engineer. ಅಡಿಷನಲ್ ಚೀಫ್ ಇಂಜಿನಿಯರ್ ಆಗಿ ಅಂಡರಟೇಕಿಂಗ್ ಕೊಟ್ಟ ಮೇಲೂ ಕೂಡ ಕೊಡದೆ, ದಿನಾಂಕ: 10.7.95 ರ ಆರ್ಡರ್ ಪ್ರಕಾರ ಜಿ.ಓ.ನಲ್ಲಿ ಹಿಂದಿನ ವಾದವನ್ನೇ ಮಂಡಿಸಿದ್ದರಿಂದ ಈ ಪರಿಸ್ಥಿತಿಗೆ ನಾವು ಬಂದಿದ್ದೇವೆ. This is what I am going to submit. ಆದ್ದರಿಂದ ಅಧ್ಯಕ್ಷರೆ, ಇದರ ಬಗ್ಗೆ ದಯಮಾಡಿ ವಿಚಾರಗಳನ್ನು ಸ್ಪಷ್ಟೀಕರಿಸಬೇಕಾಗಿದೆ. ಏಕೆಂದರೆ, this could have been totally avoided ಎಂದು ನನಗನಿಸುತ್ತದೆ. ಈ ಕಂಟೆಮ್ಟ್ ಯಾವಾಗ ಒಂದು ಸೆಂಟೆನ್ಸ ಆಯಿತು. that could have been avoided. ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. We will put other demands later. But not now. ಆದ್ದರಿಂದ ಈ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕಾಗಿದೆ. ಅಂಡರಟೇಕಿಂಗ್ ಕೊಡುವಾಗಲೂ ಕೂಡ decision of 1993 will implement ಎಂದು ಅಂಡರಟೇಕಿಂಗ್ ಕೊಟ್ಟಿದ್ದೀರೆಂದು ತಾವು ವಾದ ಮಾಡಬಹುದು. ಆ ಪ್ರಶ್ನೆ Inview of the run of the events for all these years, 93-94ರವರೆಗೆ ಕೂಡ, ತಮ್ಮ ಸರ್ಕಾರ ಬಂದಾಗಲೂ ಕೂಡ ವಾಸುದೇವನ್ ಅಫಿಡವಿಟ್ ಕೊಡುವಾಗಲೂ ಕೂಡ no further relief ಕೊಡಲಿಕ್ಕೆ ಇಲ್ಲವೆಂದು ಫೆಬ್ರವರಿ 95ರಲ್ಲಿ, ಅಲ್ಲಿಯವರೆಗೂ ಏನು ಒಂದು ವಾದ ಇದೆ, ಆ ವಾದವನ್ನು ಸುಪ್ರೀಂ ಕೋರ್ಟ ಮುಂದೆ ಇಡಬೇಕಾಗಿತ್ತು. ಆ ವಾದವನ್ನು ಮುಂದೆ ಇಟ್ಟಿಲ್ಲ. ನೀವು ಇಂಪ್ಲಿಮೆಂಟ್ ಮಾಡುವಾಗ ಯಾವ ರೀತಿ ತಾವು ಅರ್ಥೈಸಿದ್ದೀರಿ? 10.7.95ರ ಆರ್ಡರನಲ್ಲಿ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ, ಅದರ ಮೇಲೆ ಕಂಟೆಮ್ಟ್ ಮಾಡಿದ್ದಾರೆ. ಆದ್ದರಿಂದ ಆವತ್ತು ಅರ್ಗ್ಯುಮೆಂಟ್ ಮಾಡುವಾಗಲೂ ಕೂಡ naturally before convicting they will say implement the order ಎಂದು ಹೇಳುವಾಗ you could have asked what king of an order ಎಂದು ಹೇಳಿದ್ದರೆ they would have definitely said to promote him as Additional Chief ಇಂಜಿನಿಯರ್ ಎಂದು ಹೇಳುತ್ತಿದ್ದರು. They would have definitely said to promote him ಆದ್ದರಿಂದ ಈ ಎಲ್ಲಾ ವಿದ್ಯಮಾನಗಳನ್ನು ನೋಡಿದಮೇಲೆ, ಅಧಿಕಾರಿಯದ್ದು ತಪ್ಪಾಗಿದ್ದರೆ, ದಯಮಾಡಿ ಅದನ್ನೂ ಹೇಳಿ. ತಮ್ಮ ಸರ್ಕಾರ ಇರಬಹುದು. ನಮ್ಮ ಸರ್ಕಾರ ಇರಬಹುದು Upto

a certain stage we have maintained the same view consistent. There is no difference at all. But from the date of undertaking, I think, either the Government has erred or you may say the Court has erred in understanding things. ಸರ್ಕಾರ ಈ ಆರ್ಡರನ್ನು ಅಂಡರಸ್ಟ್ಯಾಂ ಮಾಡುವುದರಲ್ಲಿ ಈ ರೀತಿಯ ಒಂದು ಕಾಂಪ್ಲಿಕೇಷನ್ ಇದ್ದು ಹೈಕೋರ್ಟ ಡಿವಿಷನಲ್ ಡಿಸಿಷನ್ ಇದ್ದ ಕಾರಣದಿಂದ We were bound by the judgment in the absence of a definite direction to promote him as Additional Chief Engineer.

+ಡಾ: ಜೀವರಾಜ ಆಳ್ವ (ಚಿಕ್ಕಪೇಟೆ) : ಸಭಾಧ್ಯಕ್ಷರೆ, ಕೆಲವು ಕಾರಣಗಳಿಗೋಸ್ಕರ ಈ ನಿಲುವಳಿ ಸೂಚನೆಯನ್ನು ಬೆಂಬಲಿಸುವುದಕ್ಕೆ ನಾನು ಇಷ್ಟಪಡುತ್ತಿಲ್ಲ. ಒಂದು ಐತಿಹಾಸಿಕ ಚರ್ಚೆಗೆ, ಪ್ರಜಾಪ್ರಭುತ್ವ, ನ್ಯಾಯಾಂಗ, ಕಾರ್ಯಾಂಗ ಮತ್ತು ರಾಜ್ಯಾಂಗದ ಈ ಘರ್ಷಣೆಗೆ ಈ ನಿಲುವಳಿ ಸೂಚನೆ. ಇದು ಒಂದು ಪಾರ್ಟಿ. ಏಕೆಂದರೆ ನಾನು ಇದಕ್ಕೆ ಸೈನ್ ಮಡಿಲ್ಲ. ಪಾರ್ಟಿ ಎಂದು ಏಕೆ ಹೇಳುತ್ತೇನೆಂದರೆ, ಇದು ಸರ್ಕಾರದ ವೈಫಲ್ಯತೆಯನ್ನು ತೋರಿಸುತ್ತದೆ ಎನ್ನುವುದಕ್ಕೆ ಮಾತ್ರ ಹೇಳುತ್ತೇನೆಯೇ ಹೊರತು ಇವತ್ತು ಸರ್ಕಾರ ಅಧಿಕಾರದಲ್ಲಿ ಮುಂದುವರಿಯವ ಹಕ್ಕನ್ನು ಕಳೆದುಕೊಂಡಿದೆಯೆಂದು ನಾನು ಹೇಳಲಿಕ್ಕೆ ತಯಾರಾಗಿಲ್ಲ. ತಾವು ಒಂದು ದೊಡ್ಡ ಅಶೋಕ ಸ್ಥಂಬದ ಕೆಳಗೆ ಕುಳಿತಿದ್ದೀರಿ, ಅಶೋಕ ಸ್ಥಂಬ, ರಾಜ್ಯಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ನಾವು ಬ್ರಿಟಿಷರ ಆಳ್ವಿಕೆ ನಂತರ ಪಡೆದುಕೊಂಡಂಥಾದ್ದು. It is a British legacy. ನಂತರ ರಾಜ್ಯಾಂಗದಲ್ಲಿ ಹಲವಾರು ಮಾರ್ಪಾಡುಗಳಾಗಿವೆ. ಆದರೆ ರಾಜ್ಯಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಫೌಂಡೇಷನ್ ಜನ ಶಕ್ತಿ ಮತ್ತು ಲೋಕ ಶಕ್ತಿ. ಅದರ ಮುಖವಾಣಿಯಾಗಿ ತಾವು ಈ ಸ್ಥಾನದಲ್ಲಿ ಕುಳಿತಿದ್ದೀರಿ. ನಾನು ಅತ್ಯಂತ ಭಾವುಕತೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಲೋಕ ಶಕ್ತಿಯ ಪ್ರತಿ ಧ್ವನಿಯಾಗಿ, ಮುಖವಾಣಿಯಾಗಿ ತಾವು ಅಲ್ಲಿ ಕುಳಿತ್ತಿದ್ದೀರಿ. ಇವತ್ತು ಇದರ ಚಿಂತನೆ ವಿಷಯವನ್ನು ಮಾನ್ಯ ನಾಗೇಗೌಡರು ಎತ್ತಿದ್ದರು. ಇದಕ್ಕೆ ಸರ್ಕಾರದಿಂದ ಮತ್ತು ಮುಖ್ಯ ಮಂತ್ರಿಗಳು ಉತ್ತರ ಕೊಡುವುದು, ವಿರೋಧ ಪಕ್ಷಗಳು ಒಂದು Convention- any adjournment Motion brought by the Opposition for that matter, is ruled out, the speaker does not allow discussion. ಯಾವತ್ತಾದರೂ ತೆಗೆದುಕೊಂಡಂಥ ಘಟನೆಗಳು ನನಗೆ ಕಾಣುತ್ತಿಲ್ಲ. ಇಲ್ಲಿ ತಮ್ಮಿಂದ ನಾನು ಅಪೇಕ್ಷೆ ಪಡುವುದು ಏನೆಂದರೆ ಒಂದು ಐತಿಹಾಸಿಕ ನಿರ್ಧಾರವನ್ನು ತಾವು ತೆಗೆದುಕೊಳ್ಳಬೇಕಾಗಿದೆ. Indepth discussion. ನಾನು ಮೊನ್ನೆ ಮಹಾ ಚೈತ್ರ ಪುಸ್ತಕದ ಬಗ್ಗೆ ಹೇಳಿದ್ದೇನೆ. ಇದು ಏನಾಗುತ್ತದೆ ಎಂದರೆ ಟ್ರಾನ್ಸಫರೆನ್ಸಿ ಎಂದು ನಾವು ಹೇಳುತ್ತೇವೆ, ದೊಡ್ಡ ದೊಡ್ಡದಾಗಿ ಪೈ ಫಿಲಾಸಫಿಕಲ್ ಮಾತುಗಳನ್ನು ಹೇಳುತ್ತೇರೆ. ಆ transparent Government, transparent democracy, democratic values, ಮೌಲ್ಯಾಧಾರಿತ ರಾಜಕೀಯವೆಂದು ಹೇಳುತ್ತೇವೆ. ಎಲ್ಲಿಯಾದರೂ ಮಾತನಾಡಲಿಕ್ಕೆ ಹೋದರೆ, ನ್ಯಾಯಾಂಗ, it is our creation . ನ್ಯಾಯಾಂಗದ ಬಗ್ಗೆ ಮಾತನಾಡಿದಾಗ ಮಂತ್ರಿಗಳ ಒಂದು ಸ್ಟ್ಯಾಂಡರ್ಡ್ ರಿಪ್ಲೈ it is sub-judice, it cannot be discussed ಎಂದು ಆಗಿರುತ್ತದೆ. ಇವತ್ತು

ಅದನ್ನು ಹೇಳಿ ಹೇಳಿ We have become captives of our own submission. ಏಕೆ? ನ್ಯಾಯಾಂಗದ ಬಗ್ಗೆ ಮಾತನಾಡಬಾರದು ಎಂದು ನನ್ನ ಒಂದು ಪ್ರಶ್ನೆ ಮಾನ್ಯ ಅಧ್ಯಕ್ಷರೇ, ನ್ಯಾಯಾಂಗದ ಸುಪ್ರೇಮಸಿ. ನ್ಯಾಯಾಂಗಕ್ಕಿಂಥ ಮೇಲೆ ಏನಿದೆ? ದೇವರ ಹತ್ತಿರ ಹೋಗೋಣ? ನ್ಯಾಯಾಂಗ ಎಡವಿದಾಗ I am not questioning the wisdom or the integrity of the Judges, nor the judgment. ಆದರೆ, ಇವತ್ತು ಸ್ವಾತಂತ್ರ್ಯಾ ನಂತರ 1947ರಲ್ಲಿ ಬಿಳಿ ಟೋಪಿಯನ್ನು ಜಡ್ಜ್‌ಗಳು ಹಾಕುತ್ತಿದ್ದರು, ಇವತ್ತು ಅದು ಮಾತ್ರ ಹೋಗಿದೆಯೇ ಹೊರತು The whole judicial culture we have inherited from the British legacy has not passed.

ಆಗಲೀ, ಅವರೂ ಒಂದು ಆತ್ಮಾವಲೋಕನ ಮಾಡಲಿ ತಮ್ಮ ಹತ್ತಿರ ಪ್ರಶ್ನೆ ಮಾಡಿಕೊಳ್ಳುತ್ತಿದ್ದೇನೆ, justice delayed is justice denied. ಆವತ್ತು ಬೊಮ್ಮಾಯಿ ಸರ್ಕಾರವನ್ನು ಡಿಸ್ಮಿಸ್ ಮಾಡಿದಾಗ 11 ತಿಂಗಳಾದ ಮೇಲೆ ಜಡ್ಜಮೆಂಟ್ ಬರುತ್ತದೆ. ಅಷ್ಟು ಹೊತ್ತಿಗೆ ಇನ್ನೂ ಒಂದು ಎಲೆಕ್ಷನ್ ಆಗಿರುತ್ತದೆ. ಜಡ್ಜಮೆಂಟ್ ಕೊಟ್ಟಂಥ ಜನರನ್ನು they should be sued for contempt, contempt of the people's verdict. ಆದು ಆಗುವುದಿಲ್ಲ. ಸೆಷನ್ ಕೋರ್ಟ್‌ನಲ್ಲಿ ಕನವಿಕ್ಷನ್ ಆಗುತ್ತದೆ, ಮರ್ಡರ್ ಆಗುತ್ತದೆ ಹೈಕೋರ್ಟಿನಲ್ಲಿ ಅಕ್ವಿಟ್ಟ್ಲ್ ಆಗುತ್ತದೆ. ಸುಪ್ರೀಂಕೋರ್ಟಿನಲ್ಲಿ ವಿತ್ ಗ್ರೇಸ್ ಅವನಿಗೆ ಕಾನಡೋನ್ ಆಗುತ್ತದೆ. ಇದು ಒಂದು ವ್ಯತಿರಿಕ್ತ ಪ್ರತಿಬಿಂಭ. I accept the supremacy. I ahve the highest regard, highest men of calibre...

MR. SPEAKER : It is to help you. I am also like you, I am not an Advocate. ಪ್ರತಿಯೊಬ್ಬ ಜಡ್ಜ ತಮ್ಮ ಮುಂದೆ ಇರತಕ್ಕಂಥ ಕೇಸಗಳನ್ನು ವಿಚಾರಣೆ ಮಾಡತಕ್ಕಂಥ ಸಂದರ್ಭದಲ್ಲಿ ಮೆರಿಟ್ಸ ಮತ್ತು ಡೀ-ಮೆರಿಟ್ಸ, ಎವಿಡೆನ್ಸ ಏನಿರುತ್ತದೆ ಅದರ ಮೇಲೆ ಜಡ್ಜಮೆಂಟ್ ಕೊಡುತ್ತಾರೆ. So, the view taken by each person, may vary from person to person. The Sessions Judge may view at a particular matter pending before him in a paraticular manner. When an appeal is preferred by the High Court, when new points that have not been noticed by the Sessions judge, are brought to the notice of the Appellate Authority, he may revise the decision. I am only trying to help you.

SRI H. SHIVAPPA : Everybody is entitled to err. Even the judge is entitled to err.

(INTERRUPTIONS)

ಡಾ: ಜೀವರಾಜ ಆಳ್ವ : ಮಹಾಭಾರತದಲ್ಲಿ ಶ್ರೀಕೃಷ್ಣ ಎಲ್ಲಾ ವ್ಯಾಮೋಹಗಳನ್ನು ಬಿಟ್ಟಿರುತ್ತಾನೆ. ಅವನು ಸ್ಥಿತಪ್ರಜ್ಞ, ಅವನಿಗೆ ಸಹೋದರ ಎಂದು ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಹಾಭಾರತದಲ್ಲಿ ಶ್ರೀಕೃಷ್ಣ ಏನು ವ್ಯಾಮೋಹವನ್ನು ಬಿಟ್ಟಿದ್ದ ಎಂದು ಹೇಳಿದರಲ್ಲಾ, ಅದು ಸತ್ಯಕ್ಕೆ ದೂರವಾದದು. ಅವನು ವ್ಯಾಮೋಹದಿಂದಲೇ ಕೃಷ್ಣನಾದುದ್ದು.

ಅಧ್ಯಕ್ಷರು : ಅರ್ಜುನ ರಣರಂಗಕ್ಕೆ ಹೋದ ತಕ್ಷಣ ಹೆದರಿಬಿಡುತ್ತಾನೇ ಏಕೆಂದರೆ ಎಲ್ಲಾ ನನಗೆ ಸಂಬಂಧಿಗಳು, ನನಗೆ ಪಾಠ ಹೇಳಿದವರು ದೊಡ್ಡವರು ಅಣ್ಣತಮ್ಮಂದಿರು ಸೋದರಮಾವ ಎಲ್ಲಾ ಇದ್ದಾರೆ, ಯಾರಿಗೋಸ್ಕರ ಯಾವ ಪುರುಷಾರ್ಥಕ್ಕೆ ನಾನು ಯುದ್ಧ ಮಾಡಬೇಕು ಎಂದು ಕೇಳಿದರೆ, ಆಗ ಕೃಷ್ಣ ಅರ್ಜುನನಿಗೆ ಬೋಧನೆ ಮಾಡುತ್ತಾನೆ, ಸ್ಥಿತ ಪ್ರಜ್ಞಾವಸ್ಥೆಗೆ ನೀನು ಬರಬೇಕು, ಸ್ಥಿತಪ್ರಜ್ಞ ಅಂದರೆ ಯಾರು ಹೇಗಿರಬೇಕು, ಅದರಲ್ಲಿ ಬಂಧುಗಳು ವ್ಯಾಮೋಹ ಏನೂ ಇರಬಾರದು, ಧರ್ಮಸಂಸ್ಥಾಪನೆಗಾಗಿ ನೀನು ಹೋರಾಟ ಮಾಡಬೇಕೆಂದು ಬೋಧನೆ ಮಾಡುತ್ತಾನೆ.

ಶ್ರೀ ಜೀವರಾಜ ಆಳ್ವ : ಅದನ್ನೇ ಹೇಳಿದ್ದು ನಾನು he is a multi-dimensional character. ಆ ಸ್ಥಿತಪ್ರಜ್ಞತೆ ಇದ್ದಂತೆ ವ್ಯಕ್ತಿಗಳನ್ನು ನ್ಯಾಯಾಧೀಶರನ್ನಾಗಿ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಕೃಷ್ಣ ಬೇರೆಯವರಿಗೆ ಉಪದೇಶ ಹೇಳಿದನೇ ಹೊರತು, ತಾನು ಅನುಸರಿಸಲಿಲ್ಲ, ಅಲ್ಲಿ ಬಂದದ್ದು.

ಡಾ: ಜೀವರಾಜ ಆಳ್ವ : ಸ್ಥಿತಪ್ರಜ್ಞತೆ ಇರುವಂಥ ಹಾಗೂ ಜಾತಿ, ಮತ, ಧರ್ಮ, ಬಂಧುಗಳು, ಕೋಪ, ತಾಪ, prejudices ಮತ್ಸರಲ್ಲದೇ ಇರುವಂತಹ ವ್ಯಕ್ತಿಗಳು ಆ ಸ್ಥಾನ ತುಂಬಬೇಕು ಅಂತ. ಏಕೆಂದರೆ judiciary is supreme. ನೀವು ಡಿಸ್ಟ್ರಿಕ್ಟ ಕೋರ್ಟದ್ದು ಹೇಳಿದಿರಿ, ಡಿಸ್ಟ್ರಿಕ್ಟ ಕೋರ್ಟಿನಿಂದ he can differ. ಹೈಯರ್ ಕೋರ್ಟಿಗೆ ಹೋಗುತ್ತೇವೆ ಎಂದು ಹೇಳುತ್ತೇರೆ. ಸುಪ್ರೀಂ ಕೋರ್ಟ್ ಈ ತೀರ್ಮಾನ ಕೊಟ್ಟಮೇಲೆ ಅಧ್ಯಕ್ಷರೇ ನಾನು ತಮ್ಮ ಹತ್ತಿರ ಒಂದು ತೀರ್ಮಾನ ಕೇಳುತ್ತೇನೆ Is it right? ಸ್ವತಂತ್ರರಾವ್ ಎಂಬುವನು ಹೇಳುತ್ತಾನೆ, ಈ ಬಗ್ಗೆ ಮಾಫಿ ಮಾಡಬೇಕೆಂದು ಕೇಳಿದ ಎಂದು ಕೆರಳಿದರು ಕೋರ್ಟ ಹಾಲನಲ್ಲಿ if a learned judge, his Lordship gets provoked, gets angry, I am prepared for any punishment they deem it fit. I would appeal , is it right? Is it a right code of conduct or is it ethical ato be provoked just because someone tries to invernene? When he is provoked, when he is in anger, can a good judgment come out of him? ನಿಮ್ಮ ಹತ್ತಿರ ಕೇಳುತ್ತೇನೆ,

MR. SPEAKER : State of Equilibrium is lost. He is biased ಅಂತ.

ಡಾ: ಜೀವರಾಜ ಆಳ್ವ : ಖಂಡಿತ ಬರುತ್ತದೆ ಅದು.

ಶ್ರೀ ಎಂ. ಪಿ. ಪ್ರಕಾಶ : ಪ್ರಮೋಟ್ ಆಗುವುದು ಬೇರೆ righteous indignation ಬೇರೆ Everybody who act on that, it should have the righteou indignation.

DR. JEEVARAJ ALVA : My submission is, I am very suceeptible, I am vulnerable. When I talk, submit to you, with all hmility I am submit. ಐತಿಹಾಸಿಕವಾಗಿ ನ್ಯಾಯಾಂಗದಲ್ಲಿ ಏನಾಗುತ್ತದೆ ಎಂಬುದು ಚರ್ಚೆಯಾಗಬೇಕು. ಈಗ ಈ ಕೆಲಸ ಹಾಳು ಮಾಡಬೇಕೆಂತಲೇ ಇನ್ನೊಬ್ಬ ವ್ಯಕ್ತಿ ಏಕೆ ಮಾಡಿರಬಾರದು ಎಂಬ ಪ್ರಶ್ನೆ ಕೇಳುತ್ತೇನೆ ನಾನು. ಪ್ರಚೋದನೆ ಆಗಬೇಕಾದರೆ ಕೋರ್ಟಹಾಲನಲ್ಲಿ ಕುಳಿತುಕೊಂಡು ಇದು ಯಾರು ಮಾಡಿದರು ಎಂದು ಒಬ್ಬ ಸ್ಥಿತ ಪ್ರಜ್ಞತೆ ಕಳೆದುಕೊಂಡಂತಹ ವ್ಯಕ್ತಿಯಿಂದ ಈ ಕೆಲಸ ಆಗುವುದಿದ್ದರೆ, what is the yardstick? ತಪ್ಪಾಗಿದೆ ಎಂದು ಹೇಳೋಣ. There is a very grave error committed, an adminstrative lapse is committed. There is a time delay. I don't want to go into the administrative and legal battle. ಪ್ರಮೀಳಾ ಹತ್ತಿರವಾಗಲಿ ಸೋಮಶೇಖರ ಹತ್ತಿರವಾಗಲಿ, ನಾನೊಬ್ಬ ಸಾಮಾನ್ಯ ಮನುಷ್ಯ. ಆದ್ದರಿಂದ ಅಧ್ಯಕ್ಷರೇ, ವಾಸುದೇವನರವರು ತಪ್ಪು ಮಾಡಿದ್ದಾರೆ, ಸರ್ಕಾರದ ವೈಫಲ್ಯತೆ ಆಗಿದೆ ಆದರೆ ಆ ತಪ್ಪಿಗೂ ಶಿಕ್ಷೆಗೂ ಇರುವ ಅಜಗಜಾಂತರ ವ್ಯತ್ಯಾಸ ಸರಿಯೇ? ಇದನ್ನು ಜಡ್ಜ ಆತ್ಮಾವಲೋಕನ ಮಾಡಿಕೊಳ್ಳಲಿ. ಇಲ್ಲಿ ಬಹಳ ಸುಲಭವಾಗಿ politics is a most superior science and a science much more superior than the science of economics. ಯಡಿಯೂರಪ್ಪನವರು ನಾಲೆ ಮುಖ್ಯಮಂತ್ರಿಯಾಗಬೇಕೆಂದು ಮನಸ್ಸಿದೆ, ನಂಜೇಗೌಡರಿಗೂ ಆಗಬೇಕ ಎಂದು ಇದೆ, ಪುನಃ ಮೊಯಿಲಿಯವರಿಗೆ ಬರಬೇಕೆಂದು ಇದೆ ಖರ್ಗೆಯವರಿಗೆ ಇದೆ will all seriousness, with all humility, I am not in office, I am not an interllectual. ನಾನು ವಿಚಾರವಾದಿಯಲ್ಲ, ಆದರೆ ಸಾಮಾನ್ಯವಾಗಿ ಮನುಷ್ಯನಾಗಿ ಇವತ್ತು ನಡೆಯುತ್ತಿರುವ ಚಿಂತನೆಗೆ ಗ್ರಾಸ ಕೊಡಬೇಕು, ನೀವು ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಿ you have to survive as a political fraternity?

ಏನೋ ಇವರೇ ಸರಿ ಮಾಡಿದರು ಅಂತ, ನಂಜೇಗೌಡರೇನಾದರೂ ಈ ಮಾತನಾಡನ್ನು ಆಡಬೇಕೆಂದರೆ that stimulus has been given by my esteemed elder member Sri Nanjegowda. ಏನೋ ತಪ್ಪಾಗಿದೆ, ಸರ್ಕಾರ ತೆಗೆಯಬೇಕು ಸರ್ಕಾರ ರಾಜೀನಾಮೆ ಕೊಡಬೇಕು, ಏಕೆ? It is an administrative error, an administrative lapse. I am not defending. There are two factions of it. One side ಅಜರ್ನಮೆಂಟ್ ಮೋಷನ್ ಮಾಡಿದಾಗ ವೈಫಲ್ಯತೆಯನ್ನು ಹೇಳಿ ವಿರೋಧಪಕ್ಷವಾಗಿ ನಾವು ಹೇಳಬೇಕು. ಆದರೆ as a political fraternity ಎಲ್ಲಿ ಹೋಗುತ್ತಿರಿ ನೀವು? ಇಲ್ಲೆ ನಮ್ಮ ಅಧಿಕಾರಶಾಹಿ, ನ್ಯಾಯಾಂಗ ಇದೆ. ನಾನು ಹೇಳಿದೆ We have one of the best bureaucracy in Karnataka, unquestionable integrity of officers. But it is a legacy we have inherited from the British system. ಅಕೌಂಟಬಿಲಿಟಿ ಇಲ್ಲ, ಮೊನಿಟರಿಂಗ್ ಇಲ್ಲ, ಸರ್ಕಾರದಲ್ಲಿರುವ, ಜನಶಕ್ತಿಯಿಂದ ಮಂತ್ರಿಯಾಗಿ ಬಂದವರೆಲ್ಲಾ ಒಬ್ಬ ಅಧಿಕಾರಿ ನಿಮ್ಮ ಕೆಲಸ ಮಾಡಲಿಕ್ಕಾಗುವುದಿಲ್ಲ, ನಾನು

ಸುಪ್ರೀಂಕೋರ್ಟಗೆ ರೆಫರ್ ಮಾಡಿ ಹೇಳುತ್ತೇನೆ ಅಂದರೆ, ನೀವು ಅಧಿಕಾರ ನಡೆಸುತ್ತೀರಾ ? ಲೀಗಲ್ ಒಪೀನಿಯನ್ ಕೇಳಿಕೊಂಡು, ಇಲ್ಲಿ ಜಿಲ್ಲಾಪರಿಷತ್ತಿಗೆ ಅಧಿಕಾರ ಕೊಟ್ಟಿದ್ದೀರಿ ಅದರ ಪ್ರೆಸಿಡೆಂಟ್ ನಿಮ್ಮ ಮ್ಯಾಜಿಸ್ಟ್ರೇಟ್ ಕೇಳಿ ಅಂದರೆ ವಿಪರ್ಯಾಸ. The basic inherited weakness we have got from the day one. ಮಾತೆತ್ತಿದರೆ ಸಬಜ್ಯುಡಿಸ್, ವಿಧಾನಸಭೆಯಲ್ಲೇನಾದರೂ ಒಂದು ಮುಖ್ಯಪ್ರಶ್ನೆ ಬಂದರೆ ಮಾತನಾಡಬಾರದು. Where is the transparancy you talk of? Where is the democracy you talk of? ಇದು ಬಿಟ್ಟು ಅಧ್ಯಕ್ಷರೇ ಅತ್ಯಂತ ವಿಶ್ವಾಸಪೂರ್ವಕ ಮನವಿ ಮಾಡಿಕೊಳ್ಳುತ್ತೇನೆ. Let Karnataka show the way. I don't call it a confrontation. A reasonable debate. Let there be a national debate. ಇವರು ಮಾಡುವ ತಪ್ಪುಗಳು, ಈ ಕೋರ್ಟಗಳು ಮಾಡಿರುವುದು I am not going to dissect. I am not going totalk of the morality or immorality of the people who would sit in judgment over the acts of omissions and commission of the people of this country. There are instances where we have to bow down our heads in shame. ಕರ್ನಾಟಕದಲ್ಲಾಗಿದೆ ದೇಶದಲ್ಲಾಗಿದೆ, ನನ್ನ ಮಿತ್ರ ಯಡಿಯೂರಪ್ಪನವರು ಸ್ವಲ್ಪ ಆತ್ಮಾವಲೋಕನ ಮಾಡಿಕೊಳ್ಳಲಿ I am not politicising it. ನನ್ನ ಮಿತ್ರ ವಾಟಾಳ್ ನಾಗರಾಜರ ಹತ್ತಿರ ಅತ್ಯಂತ ಸವಿನಯ ಮನವಿ. ಸ್ವಲ್ಪ ನಾಳಿನ ಬಗ್ಗೆ ಆಲೋಚನೆ ಮಾಡಿದ್ದೀರಾ ನೀವು? Democratic system survive ಆಗಬೇಕೆಂದು we are accountable ನಮ್ಮನ್ನು 15 ದಿವಸದಲ್ಲೇ ಜನರು ವಾಪಸ್ ಕಳುಹಿಸುತ್ತಾರೆ, ಒಂದೊಂದು ಎಲೆಕ್ಷನಗೂ you have to monitor yourself. Every movement of yours is acrutinised, dissected. ಅತ್ಯಂತ ವೈಜ್ಞಾನಿಕ political consicousness of the people of this country is so mature, they just throw you out. They just discard you. ಇವರಿಗೇನಿದೆ? ಜ್ಯುಡಿಷಿಯರಿ ಆಗಿ, ಸುಪ್ರೀಂಕೋರ್ಟ ಜಡ್ಜಗಳಾದ ಮೇಲೆ Commissionಗಳಿಗೆ ಚೇರ್ಮಾನಾಗಬೇಕು. They are at the mercy of the Government. ನೀವು ಅತ್ಯಂತ ಪ್ರಬಲವಾಗಿ ನನ್ನ ಹತ್ತಿರ ಪ್ರತಿಪಾದನೆ ಮಾಡಿ ಕೊಳ್ಳುತ್ತಿದ್ದಿರಿ. ಈಗ ಈ ಸ್ಥಾನದಲ್ಲಿರುವಾಗ. ಈಗ ನಾಗೇಗೌಡರೇ, don't bring it down to the level of a common adjournment motion. With seriousness you accept it. Let us have a debate. ಇನ್ನೊಂದು ಸಬ್ಜೆಕ್ಟಗೆ ಹಾಕೋಣ ಎಂದು ದಯವಿಟ್ಟು ಹೋಗಬೇಡಿ Let the statement be issued, the admissibility is being discussed, preliminary submission we have made. The importance, the gravity of the situation. Let this session be a historic one. Let us debate it fro 2-3 days. Let it be a forerunner to the conclusive things that could emerge. ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳತ್ತಿದ್ದೇನೆ, ಇದರಲ್ಲಿ ಸರ್ಕಾರದ ವೈಫಲ್ಯತೆ ಆಗಿದೆ There is a clear error, a lapse. When there is a clear undertaking from the Government of Karnataka that it will obeythe order, I don't go to the contradiction of the

Division Bench or the Supreme Court, but primarily there is a lapse. ಮಾನವೀಯತೆ ಇಲ್ಲದ ನ್ಯಾಯ ಎಂಥಾದ್ದು ಅದ್ಯಕ್ಷರೇ? ಏನದು? ನನಗರ್ಥವಾಗುತ್ತಿಲ್ಲ. ಒಬ್ಬ ವ್ಯಕ್ತಿ ನನ್ನದು ತಪ್ಪಾಯಿತು ಎಂದು ಕ್ಷಮೆ ಕೇಳಿ ಕೈಚಾಚಿ, ಕಾಲುಮುಟ್ಟಿ ಕೇಳುತ್ತಾನೆ ನಾವೇನು ತಪ್ಪು ಮಾಡುತ್ತೇವೆಂದರೆ ಈ ರಾಜ್ಯದ ಮುಖ್ಯಮಂತ್ರಿ ಒಂದು ಕಡೆ ಹೋಗಿ ಕೇಳಿದಾಗ ಅದೂ ತಪ್ಪು ಅನ್ನುತ್ತೇವೆ, ನ್ಯಾಯವೇ ಅದು? ತಪ್ಪಾಗಿದೆ.

1.40 ಪಿ.ಎಂ

Are we going to be academic. It is a an error. To err is human. ಅವರು ಮಾಡಿದ್ದು ತಪ್ಪು ವಾಸುದೇವನ್ ಹೋಗಿ ಕ್ಷಮಾಯಾಚನೆ ಮಾಡಿದ್ದಾರೆ. ಇನ್ನು ಹೋದರೆ Probably I will be used for contempt also. But I am not questioning the wisdom, the supremacy of the High Court. But there is some communication gap between judiciary, between the executive system and the Government in power. But beyond these three, ಈ ನ್ಯಾಯಾಂಗ, ಕಾರ್ಯಾಂಗ, ರಾಜ್ಯಾಂಗಗಳಿಗೆ ನೆಲೆಗಟ್ಟಾಗಿರುವಂತಹ ಜನಶಕ್ತಿ ಎನ್ನುವುದಿದೆ, ಲೋಕಶಕ್ತಿ ಎನ್ನುವುದಿದೆ, ಇವತ್ತು ವಿಧಾನಸಭೆಯಲ್ಲಿ ಚರ್ಚೆಯಾಗಲಿ ಪಾರ್ಲಿಮೆಂಟಿನಲ್ಲೂ ಚರ್ಚೆಯಾಗಿಲಿ. ಅದಕ್ಕೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿಕೊಡಿ. ವಿರೋಧಪಕ್ಷದ ನಾಯಕರಲ್ಲೂ ಅದೇ ಮನವಿ. We may differ on various issues. The approach to the issue. My demand is not the resignation of the Government. It is too trivial a matter. I say again I repeat it, it is administrative lapse, It is a communication gap. ಪ್ರತಿ ಕಂಟೆಂಪ್ಟ ಕೇಸಿಗೂ ಹೀಗೆ ಕೇಳುತ್ತಾಹೋದರೆ, ಏನಾಗುತ್ತದೆ? ಈಗ ತಮಿಳುನಾಡಿನಲ್ಲೂ ಮೂರು ಅಧಿಕಾರಿಗಳಿಗೂ 1500 ರೂ ಫೈನ್ ಆಯಿತು, ಯುಪಿಯಲ್ಲಿ ಕಂಟೆಂಪ್ಟ ಕೇಸಾಯಿತು, ಹರ್‍ಯಾಣದಲ್ಲಿ ಮಿನಿಸ್ಟರ್ ಹೋಗಿ ಅಪಾಲಜಿ ಕೇಳಿದಾಗ, on behalf of the officer, the Minister goes submitted that it is my fault, Here also, the Chief Minister has gone. I am not debating whether right or wrong. He has exhausted every means What is wrong in it.? he is Head of the family, as the poliitcal head he is the boss, he is the hierarchy, In the hierarachy of the democratic system, when some one has been punished on behalf of him, it is right he that went to the President. He has exhausted every means, every corridors of justice. Probably the Communication, I do not want to use the word obstinacy'. It is not ego. ನನಗನ್ನಿಸುತ್ತದೆ, ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಮಾನವೀಯತೆ ಇಲ್ಲದಂಥ ನ್ಯಾಯಕ್ಕೆ ಬೆಲೆ ಇಲ್ಲ justice has no.. they close their eyes ಎಂದು ಹೇಳುತ್ತಾರೆ.

ಕರೆಕ್ಟ್, ಪನಿಷಮೆಂಟಾಗಿದೆ, ಆಮೇಲೂ ವೈಯಕ್ತಿಕವಾಗಿ ಇದನ್ನು ಮುಂದುವರೆಸಿಕೊಂಡು ಹೋಗುವುದು ತಪ್ಪು, ಇದರ ಬಗ್ಗೆ ಕೂಲಂಕಷವಾದ ಒಂದು ಚರ್ಚೆಗೆ ತಾವು ಅವಕಾಶ ಮಾಡಬೇಕು, ತಾವು ಈ ನಿಲುವಳಿ ಸೂಚನೆಗೆ ಆಲೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಅಧ್ಯಕ್ಷರೇ, ನಿಲುವಳಿ ಸೂಚನೆಗೆ ಪೂರಕವಾಗಿ ನಾನು ವಾದವನ್ನು ಮಂಡಿಸಬೇಕಾಗಿದ್ದರೂ ಈಗಾಗಲೇ ವಿಷಯದ ಗಾಂಭೀರ್ಯತೆ ಬಗ್ಗೆ ಹಿರಿಯ ಸದಸ್ಯರು ತಮ್ಮದೇ ಧಾಟಿಯಲ್ಲಿ ವಿಷಯಗಳನ್ನು ಮಂಡನೆ ಮಾಡಿದ್ದಾರೆ. ನ್ಯಾಯಾಲಯದ ಆಜ್ಞೆ ಉಲ್ಲಂಘನೆಯಾಗಿದೆ ಎಂಬುದು ನಿರ್ವಿವಾದ. ಹಾಗೆ ಉಲ್ಲಂಘಿಸಿದ ಅಧಿಕಾರಿಗೆ ಶಿಕ್ಷೆಯಾಗಿದೆ ಎಂಬುದು ಕೂಡ ನಿರ್ವಿವಾದ. ದುರಾದೃಷ್ಟವಶಾತ್ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಶಿಕ್ಷೆಯಾಗಿದೆ ಎಂದರೂ ಇವತ್ತು ಯಾರಿಗೆ ಶಿಕ್ಷೆಯಾಗಿದೆ ಅನ್ನುವುದು ಗೌಣ, ಏಕೆಂದರೆ ನ್ಯಾಯಾಲಯದ ಆಜ್ಞೆ ಉಲ್ಲಂಘನೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಆ ವಿಷಯದ ಮೆರಿಟ್ಸ ಡಿಮೆರಿಟ್ಸ ಬಗ್ಗೆ ನಾನು ಹೋಗುವುದಿಲ್ಲ , ಅಧ್ಯಕ್ಷರೇ, ನಿನ್ನೆ ದಿವಸ ಮೂರು ಗಂಟೆವರೆಗೂ ನಾನು ಸದನದಲ್ಲಿರಲಿಲ್ಲ. ಇವತ್ತೇನಾಗಿದೆ, ನ್ಯಾಯಾಂಗದ ಮೇಲೆ ಅನೇಕ ಹಿರಿಯ ಸದಸ್ಯರು ತಮ್ಮ ವಾದ ಮಾಡಿದ್ದಾರೆ. With all due respect to the hon. members who spoke on the judiciary, ನನ್ನದೇ ಆದ ಒಂದೆರಡು ವಿಷಯಗಳನ್ನು ಎರಡು ವಿಷಯದಲ್ಲಿಹೇಳುವುದಕ್ಕೆ ಇಷ್ಟಪಡುತ್ತೇನೆ. ನ್ಯಾಯಾಲಯ ಆಜ್ಞೆ ಉಲ್ಲಂಘನೆ ಮಾಡಿದ ವಾಸುದೇವನ್ ಅಥವಾ ಇನ್ನೊಬ್ಬರ ಪ್ರಶ್ನೆಯಲ್ಲ ಉಲ್ಲಂಘನೆ ಮಾಡಿದ ವ್ಯಕ್ತಿಗೆ ಏನು ಮಾಡಬೇಕು ಎಂಬುದನ್ನು ನಾವು ತೀರ್ಮಾನಿಸಬೇಕಾದ ವಿಷಯ. ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ, ಅವರ ಚುನಾವಣೆಯನ್ನು ರದ್ದು ಮಾಡಿದ ಅಲಹಾಬಾದ್ ಹೈಕೋರ್ಟಿನ ಬಗ್ಗೆ ಯಾವ ಜನ ಪ್ರಶಂಸೆ ಮಾಡಿದರು, ಇವತ್ತು ನ್ಯಾಯಾಲಯದ ಉಲ್ಲಂಘನೆಯಾಗಿದೆ ಎಂದು ಒಬ್ಬ ಅಧಿಕಾರಿಗೆ ಶಿಕ್ಷೆಯಾಗಿದೆ, ಆ ಅಧಿಕಾರಿ ಬಗ್ಗೆ ನನಗೆಲ್ಲಾ ಅನುಕಂಪವಿದೆ, ಅವರ ಬಗ್ಗೆ ಗೌರವವಿದೆ. ಆದರೆ ಒಬ್ಬ ಅಧಿಕಾರಿಗೆ ಶಿಕ್ಷೆಯಾಗಿರುವ ಬಗ್ಗೆ ನಾವು ನ್ಯಾಯಾಂಗ ನಿಂದನೆಮಾಡುವುದಕ್ಕೆ ಹೊರಟರೆ, ಇವತ್ತು ಯಾವ ಸಂವಿಧಾನದಡಿಯಲ್ಲಿ ನಾವು ನ್ಯಾಯಾಂಗದ ಪಾವಿತ್ರತೆಯನ್ನು ಕಾಪಾಡಬೇಕು ಅದರ ಸಾರ್ವಭೌಮತ್ವ ಕಾಪಾಡಬೇಕು ಅದರ ಸ್ವಾತಂತ್ರ್ಯವನ್ನು ಕಾಪಾಡಬೇಕು ಎಂದು ನಾವು ಸಂವಿಧಾನದಲ್ಲಿ ಕೊಟ್ಟು...

ಡಾ: ಜೀವರಾಜ ಆಳ್ವ : ನಾನು ನ್ಯಾಯಾಂಗದ ನಿಂದನೆ ಮಾಡಲಿಲ್ಲ, ನನ್ನ ಬಾಯಿಂದ ನ್ಯಾಯಾಂಗನಿಂದನೆ ಆಗುವುದಿಲ್ಲ. ಅವೆಲ್ಲಾ ಪ್ರಜಾಪ್ರಭುತ್ವದ ಸ್ಥಂಬಗಳು ಎಂದು ಒಪ್ಪುತ್ತೇನೆ. ಆದರೆ ಅಲ್ಲಿ ಕಮ್ಯುನಿಕೇಷನ್ ಎಂದಿದೆಯಲ್ಲಾ, ಅದನ್ನು ಬೆಳೆಸಿಕೊಳ್ಳೋಣ ಅಲ್ಲೂ ಲೋಪಗಳಿವೆ, ಸರಿಪಡಿಸಲಿಕ್ಕೆ ಲೋಕಶಕ್ತಿಯಿಂದ ಚಿಂತನೆ ಆಗಲಿ ಎಂದು ಹೇಳುವುದು.

MR. SPEAKER : No wilful disobedience..

DR. JEEVARAJ ALVA : No, no wilful disobedience ಜ್ಯುಡಿಷಿಯರಿ ಬಗ್ಗೆ ಅಪಾರಗೌರವ ನನಗೆ.

SRI. H. N. NANJEGOWDA : System is different. The judges are different. promouncemets are different.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಇವತ್ತು ಸಂವಿಧಾನದಲ್ಲಿ ನ್ಯಾಯಾಂಗಕ್ಕೆ ಸಾರ್ವಭೌಮತ್ವವನ್ನು ಕೋಟ್ಟಿದ್ದೇವೆ. ನ್ಯಾಯಾಂಗಕ್ಕೆ ಸ್ವಾತಂತ್ರತೆಯನ್ನು ಕೊಟ್ಟಿದ್ದೇವೆ. ಆ ಜಡ್ಜ ಕೂಡ ಅವರದೇ ಆದ ಇತಿಮಿತಿಯಲ್ಲಿ reasonable restrictions the professional ethics, ಇದೆಲ್ಲವನ್ನೂ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಇವತ್ತು ಒಬ್ಬ ಜಡ್ಜ ತನ್ನ ಆಜ್ಞೆಯಿಂದ ಒಬ್ಬನನ್ನು ಗಲ್ಲಿಗೇರಿಸುವ ಶಕ್ತಿಯಿದೆ. ಆದರೆ ನಿಜವಾಗಲೂ ಅವನು ಮಾಡುವ ಜೀವನವನ್ನು ನೋಡಿದಾಗ ನಾವು ನಿಜವಾಗೂ ವ್ಯಥೆಪಡಬೇಕು.ಇವ್ವತ್ತು ಅಂತಹ ನ್ಯಾಯಾಂಗದ ಸಾರ್ವಭೌಮತ್ವವನ್ನು ಕಾಪಾಡಬೇಕು ನ್ಯಾಯಾಂಗದ ಗೌರವ ಕಾಪಾಡಬೇಕು the integrity and reputation of the judiciary ವನ್ನು ಅದನ್ನು ಅಪಹೆಲ್ಡ್ ಮಾಡಬೇಕೆಂಬ ದೃಷ್ಟಿಯಿಂದ ನ್ಯಾಯಾಧೀಶರು ಕೆಲಸ ಮಾಡುತ್ತಿದ್ದಾರೆ. ಆದರೆ ಇಂದಿರಾಗಾಂಧಿಯವರ ಚುನಾವಣಾ ಕೇಸ್ ಏನು ಅಲಹಾಬಾದ್ ಹೈಕೋರ್ಟ್‌ದು ತೀರ್ಮಾನ ಬಂತೋ ಅದರ ಬಗ್ಗೆ ನಾವೆಲ್ಲರೂ ಪ್ರಶಂಸೆ ಮಾಡಿದ್ದೇವೆ. ಹಾಗೆಯೇ ಒಬ್ಬ ಅಧಿಕಾರಿಗೆ ನ್ಯಾಯಾಂಗದ ಒಂದು ಸುಪ್ರಿಮೆಸಿಯನ್ನು ಎತ್ತಿಹಿಡಿಯುವುದಕ್ಕಾಗಿ ಶಿಕ್ಷೆ ವಿಧಿಸಿದರೆ, ನಾವೆಲ್ಲರೂ ಅಂತಹ ನ್ಯಾಯಾಂಗದ ಬಗ್ಗೆ ಕೇವಲವಾಗಿ ಸದನದಲ್ಲಿ ಮಾತನಾಡಿದರೆ, ಈ ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಪಾಟತಕ್ಕವರು ಯಾರು? ಅದಕ್ಕೆ ಗೌರವ ಕೊಡುವವರು ಯಾರು? ನಾವೇ ಕೇವಲವಾಗಿ ಈ ಸದನದಲ್ಲಿ ಮಾತನಾಡಿದರೆ, ಸಾರ್ವಜನಿಕವಾಗಿ ದಾಂಧಲೆ ಮಾಡುತ್ತಾರೆ. ಮುನ್ಸಿಫ್ ಕೋರ್ಟಿನಲ್ಲಿ ಒಂದು ಆರ್ಡರ್ ಮಾಡುತ್ತಾರೆ, ಅದನ್ನು ತೆಗದುಕೊಂಡು ಪೋಲಿಸ್ ಸ್ಟೇಷನಗೆ ಹೋದರೆ, ಬಿಡಯ್ಯೋ ಇದ್ಯಾವ temporary injunction permanent injunction ಹಾಕಿಸಿಕೊಂಡು ಬಾರಯ್ಯ್ ಅಂತಾರೆ. ಹೀಗೆ ನ್ಯಾಯಾಂಗದ ಬಗ್ಗೆ ಸಾರ್ವಜನಿಕವಾಗಿ ಅಗೌರವದಿಂದ ವರ್ತಿಸುವುದಾದರೆ ಈ ನ್ಯಾಯಾಂಗ ಉಳಿಸಿಕೊಳ್ಳುವುದಕ್ಕಾಗುತ್ತದೆಯೇ? ಅದರ ಪಾವಿತ್ರತೆಯನ್ನು ಕಾಪಾಡಲು ಆಗುವುದೇ?

ಅಧ್ಯಕ್ಷರು : ಈ ತೀರ್ಪನ್ನು ಯಾರೂ ವಿಮರ್ಶೆ ಮಾಡಲಿಲ್ಲ, ನಾನು ಇಲ್ಲಿ ಕುಳಿತು ಕೇಳುತ್ತಿದ್ದೇನೆ. ನ್ಯಾಯಾಂಗ ವ್ಯವಸ್ಥೆಯಲ್ಲಿರಬಹುದಾದ ಕೆಲವು ನ್ಯೂನತೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಷ್ಟೆ, ಯಾರೂ ನ್ಯಾಯಾಲಯಗಳ ಬಗ್ಗೆ ನ್ಯಾಯಾಮೂರ್ತಿಗಳ ಬಗ್ಗೆ ಲಘುವಾಗಿ ಮಾತನಾಡಿಲ್ಲ. ಈ ತೀರ್ಪನ್ನು ಯಾರೂ ಅಲ್ಲಗೆಳೆದಿಲ್ಲ, ಎಕೆಂದರೆ ನೀವು ಹೇಳಿದ್ದೆಲ್ಲಾ ರೆಕಾರ್ಡಿಗೆ ಹೋಗಿ ಫಜೀತಿಯಾಗುವುದು ಬೇಡ.

ಶ್ರೀ ನಾರಾಯಣ : ಅವರ ಧಾಟಿ ನೋಡಿದರೆ ಪರೋಕ್ಷವಾಗಿ ಸುಪ್ರೀಂಕೋರ್ಟಿನ ತೀರ್ಪನ್ನು ಅವರು ಪ್ರಶ್ನಿಸುತ್ತಿದ್ದಾರೆ. ಇದು ಸ್ಪಷ್ಟವಾಗಿದೆ, ಯಾರಿಗೂ ಅರ್ಥವಾಗುವುದಿಲ್ಲ ಎಂದು ಭಾವನೆ ಮಾಡಬಾರದು.

ಅಧ್ಯಕ್ಷರು : ನಾರಾಯಣರವರೇ, ಒಂದು ಮಾತಿನ ಧಾಟಿ ಹಲವಾರು ಜನರಿಗೆ ಹಲವು ರೀತಿಯಲ್ಲಿ ಆಗುತ್ತದೆ. ನಿಮ್ಮ ಅಭಿಪ್ರಾಯ ಸದನದ ಅಭಿಪ್ರಾಯವಾಗುವುದಿಲ್ಲ.

ಶ್ರೀ ಆರ್. ನಾರಾಯಣ : ನಂಜೇಗೌಡರ ಬಗ್ಗೆ, ಜೀವರಾಜಆಳ್ವರ ಬಗ್ಗೆ ವೈಯಕ್ತಿಕವಾಗಿ ನನ್ನದೇನೂ ಇಲ್ಲ. ನಂಜೇಗೌಡರ ಬಗ್ಗೆ ವಿಶೇಷವಾದ ಗೌರವ ಇದೆ, ನಿನ್ನೆ ಅವರ ಭಾಷಣ ಮಾಡಿದ ಮೇಲೆ ಅನುಭವಸ್ಥರು ಇಲ್ಲಿ ಭಾಷಣ ಮಾಡುವಾಗ ನಮಗೆ ಪ್ರಾಮಾಣಿಕ ಅಭಿಪ್ರಾಯ ಏನು ಬರುತ್ತದೆಂದರೆ, ನಿಲುವಳಿ ಸೂಚನೆ ಮೇಲೆ ಅವರು ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡಿದರು ತಮ್ಮದೇ ಆಧಾರದ ಮೇಲೆ ಅವರು ಸಾಬೀತು ಮಾಡಲು ಹೋದರು. ಆದರೆ ಆಳ್ವ ಮತ್ತು ನಂಜೇಗೌಡರು ಏನು ಮಾತನಾಡಿದರು? ಕೋರ್ಟನ್ನು ನಿಂದನೆ ಮಾಡಿ ಸುಪ್ರೀಂಕೋರ್ಟ ನೀಡಿರುವ ಆಜ್ಞೆ ತಪ್ಪು ಎಂದು ಹೇಳಹೊರಟಿದ್ದಾರೆ.

ಡಾ: ಜೀವರಾಜಆಳ್ವ : ಕೋರ್ಟ ನಿಂದನೆ ನಾವು ಮಾಡಿಲ್ಲ, ನ್ಯಾಯಾಂಗದ ಪರವಾಗಿರುವ ಮುದ್ದಹನುಮೇಗೌಡರಿಗೆ ನನ್ನ ಪ್ರಶ್ನೆ ಇಷ್ಟೆ, ಈ ರಾಜ್ಯದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಗಿತ ಮಾಡಿ ಸುಮಾರು ಎರಡು ಲಕ್ಷಜನರನ್ನು ಕಾರಾಗೃಹಕ್ಕೆಟ್ಟಿದ್ದಾಗ ಪ್ರಜಾಪ್ರಭುತ್ವವನ್ನು ರದ್ದುಮಾಡಿದಾಗ ಆ ನ್ಯಾಯಾಂಗ ಎಲ್ಲಿತ್ತು?

(ಗೊಂದಲ)

ಶ್ರೀ ಎಸ್.ಪಿ. ಮುದ್ದುಹನುಮೇಗೌಡ : ನನ್ನ ಒಂದು ಮನವಿ. ನ್ಯಾಯಾಂಗವನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಇವತ್ತು ಕಾರ್ಯಾಂಗ ಅಥವಾ ಶಾಸಕಾಂಗ ಮಾಡತಕ್ಕಂತಹ ತಪ್ಪನ್ನು ಸರಿ ಮಾಡತಕ್ಕಂತಹವರು ಯಾರು? ಆ ತಪ್ಪನ್ನು ಸರಿ ಮಾಡತಕ್ಕಂತಹ ಶಕ್ತಿ ನ್ಯಾಯಾಂಗಕ್ಕೆ ಇದೆ. ಇವತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂತಹ ಕೆಲಸ fundamental rights guarnateed under the Constitution, directive principles ಇವೆಲ್ಲವನ್ನೂ ಕಾಪಾಡತಕ್ಕಂತಹ ಒಂದು ಮಹತ್ತವಾದ ಜವಾಬ್ದಾರಿ ಇವತ್ತು ನ್ಯಾಯಾಂಗಕ್ಕೆ ಇದೆ. ಆ ನ್ಯಾಯಾಂಗದಲ್ಲಿ ಎಲ್ಲವೂ ಸರಿಯಾಗಿದೆ ಎನ್ನತಕ್ಕಂತಹ ಪೂರ್ವವಾದ ವಿಶ್ವಾಸವನ್ನು ವ್ಯಕ್ತಪಡಿಸಿದರೂ ಯಾವುದೇ...

MR. SPEAKER : Mr. Muddahanume Gowda, can the courts legislate?

SRI S.P. MUDDAHANUME GOWDA : They cannot legislate. It is not the contention that they can legislate. The only thing I am worried is......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೋರ್ಟ ಅನ್ನು ಲೆಜಿಸ್ಲೇಟ್ ಮಾಡುವುದಕ್ಕೆ ಬರುವುದಿಲ್ಲವೆನ್ನುವುದು ಎಲ್ಲರ ಅಭಿಪ್ರಾಯವಾಗಿದೆ. ಆದರೆ ಇಲ್ಲ ಏನಾಗಿದೆ ಎಂದರೆ ನಾವು ಯಾವ ವಿಷಯವನ್ನು ಎತ್ತಿದ್ದೇರೆ ಅದು ಡಿವಿಯೇಟ್ ಆಗುವುದು ಬೇಡ.

ಶ್ರೀ ಆರ್. ನಾರಾಯಣ : ಅವರಿಬ್ಬರ ಭಾಷಣದಿಂದ ನನಗೆ ವೈಯಕ್ತಿಕವಾಗಿ ಬಹಳ ಮನ ನೊಂದಿದೆ. ನಿಲುವಳಿ ಸೂಚನೆ ಕಳುಹಿಸಿರತಕ್ಕಂಥಾದ್ದು ಮತ್ತು ಮಾತನಾಡತಕ್ಕಂತಹ ಧಾಟಿ ನೋಡಿದರೆ, ಟ್ವಿಸ್ಟ ಮಾಡಿ, ವಿಷಯ ಬೇರೆ ಕಡೆ ಹೋಗುವ ರೀತಿಯಲ್ಲಿ ಆಗುತ್ತಿದೆ. ಸದನದಲ್ಲಿ

ಎಲ್ಲರೂ ಪ್ರಾಮಾಣಿಕ ಅಭಿಪ್ರಾಯವನ್ನು ಹೊಂದಿದ್ದಾರೆಂದು ನಾನು ಭಾವನೆ ಮಾಡಿದ್ದೇನೆ. ಅವರು ಬಹಳಷ್ಟು ಮನ ನೊಂದು ಹೇಳಿದ್ದಾರೆ. ಮಾನ್ಯ ಆಳ್ವ ಅವರ ಭಾಷಣ ಇರಬಹುದು, ಮಾನ್ಯ ನಂಜೇಗೌಡರ ಭಾಷಣ ಇರಬಹುದು. ತಾವು ಕೂಲಂಕ್ಷವಾಗಿ ಪರಿಶೀಲನೆ ಮಾಡಿ ನೋಡಿ. ನಿಲುವಳಿ ಸೂಚನೆಗೂ ಅವರು ಮಾಡಿರತಕ್ಕಂತಹ ಆರ್ಗ್ಯುಮೆಂಟಿಗೂ ಏನಾದರೂ ಸಂಬಂಧ ಇದೆಯೇ ಎಂಬುದನ್ನು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮದು ಇಷ್ಟೇ ವಿಷಯ ವಿಷಯಾಂತರ ಆಗುವುದು ಬೇಡ. ಇವತ್ತು ನಾವು ಲೋಪದೋಷಗಳ ಮೇಲೆ ಎತ್ತಿದ್ದೇವೆ ಅದರ ಮೇಲೆ ಮಾತನಾಡೋಣ. ಅದನ್ನು ಬಿಟ್ಟು ಈಗ ಈ ಜ್ಯುಡಿಷಿಯರಿಯ ಜಡ್ಜಮೆಂಟಿನಲ್ಲಿ ತಪ್ಪು ಇದೆ ಅನ್ನತಕ್ಕಂತಹ ಅರ್ಥ ಬರಬಾರದು. ಮತ್ತು ಒಬ್ಬ ಅಧಿಕಾರಿಗೆ ಅವನಿಗೆ ನ್ಯಾಯವಾಗಿ ಸಿಗತಕ್ಕಂತಹ ಹಕ್ಕಿಗೆ ಧಕ್ಕೆ ಬರತಕ್ಕಂತಹ ರೀತಿಯಲ್ಲಿ ಮಾತನಾಡಬಾರದು. ನೀವು ಮಾತನಾಡಿ. ಕ್ಯಾಪಿಟೇಷನ್ ಫೀಸ್ ಬಗ್ಗೆ, ಅವರು ಲೆಜಿಸ್ಲೇಷನ್ ಮಾಡಿದ್ದರ ಬಗ್ಗೆ ಮಾತನಾಡಿ. ಬೇರೆ ಸಂದರ್ಭ ಬಂದಾಗ ಮಾತನಾಡಿ. ಕಾನೂನು ಇಲಾಖೆ ಡಿಮ್ಯಾಂಡ್ಸಗಳು, ಡಿಪಿಎಆರ್ ಇಲಾಖಾ ಡಿಮ್ಯಾಂಡ್ಸುಗಳ ಬರುತ್ತವೆ, ಆಗ ಬೇರೆ ಬೇರೆ ಸಂದರ್ಭದಲ್ಲಿ ಮಾತನಾಡಿ. ಆದರೆ ಈಗ ಅವರು ಏನು ಆದೇಶ ಕೊಟ್ಟಿದ್ದಾರೆ ಆ ಆದೇಶದ ಪ್ರಕಾರ ಯಾವ ಪ್ರಮೋಷನಗೆ ಅವನು ಅರ್ಹತೆ ಇದ್ದ ಅಥವಾ ಇಲ್ಲ ಎಂಬ ಬಗ್ಗೆ ಈಗಾಗಲೇ ತಾವು ವಾದ ಮಾಡಿದ್ದೀರಿ. ಆದರೆ ಕೊನೆಗೆ ಇಂಪ್ಲಿಮೆಂಟ್ ಮಾಡಿಲ್ಲವೆನ್ನುವುದಕೋಸ್ಕರ ಏನು ಅವರು ಆದೇಶ ಕೊಟ್ಟು ಈ ಕಂಟೆಪ್ಟ ಅನ್ನು ಅಪ್ ಹೆಲ್ಡ ಮಾಡಿದ್ದಾರೆ ಅದನ್ನು ಕುರಿತು ಮಾತನಾಡಿದರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಡಿವಿಯೇಷನ್ ಮಾಡಿಕೊಂಡು ಇದು ಅನ್ ಇಂಪಾರ್ಟೆಂಟ್ ಆಗುತ್ತದೆ. ಜ್ಯುಡಿಷಿಯರಿ ಮೇಲೆ ಮಾತನಾಡಿದ್ದೇ ಇಂಪಾರ್ಟೆಂಟ ಆಗುತ್ತದೆ.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ : ನ್ಯಾಯಾಲಯದ ಆಜ್ಞೆಗಳನ್ನು ಉಲ್ಲಂಘನೆ ಆಗದ ರೀತಿಯಲ್ಲಿ ನಾವು ಹೇಗೆ ಮಾಡಬೇಕೆಂದು ನಾನು ಮಾನ್ಯ ಸದಸ್ಯರುಗಳನ್ನು ಕೇಳುತ್ತೇನೆ. ನ್ಯಾಯಾಂಗದ ಆಜ್ಞೆ ಉಲ್ಲಂಘನೆಯಾದರೆ ಅದಕ್ಕೆ ಪರಿಹಾರ ಏನು? ನ್ಯಾಯಾಲಯದ ಆಜ್ಞೆ ಉಲ್ಲಂಘನೆಯಾದರೆ ನಾವು ಆಡಳಿತ ನಡೆಸುವುದಕ್ಕಾದರೂ ಹೇಗೆ ಸಾಧ್ಯವಾಗುತ್ತದೆ? ನ್ಯಾಯಾಲಯದ ಆಜ್ಞೆ ಉಲ್ಲಂಘನೆಯಾದರೆ ಅದಕ್ಕೆ ಶಿಕ್ಷೆಯಾಗಲೇಬೇಕು. ಶಿಕ್ಷೆ ಯಾವ ಸ್ವರೂಪದ್ದು ತೀವ್ರ ತರವಾದುದ್ದೆಲ್ಲ ಇಲ್ಲವೇ ಲಘು ಸ್ವರೂಪದ್ದೇ ಎಂಬುದನ್ನು ಆಯಾಯ ಕೇಸುಗಳಿಗೆ ಸಂಬಂಧಪಟ್ಟಂತಹ ವಿಷಯ. ಒಂದು ವಿಷಯವನ್ನು ಮಾನ್ಯ ಜೀವರಾಜಆಳ್ವ ಅವರು ಹೇಳಿದರು. ಸನ್ಮಾನ್ಯ ಸ್ವತಂತ್ರ ರಾವ್ ಅವರು ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡಲಿಕ್ಕೆ ಹೋದಾಗ, ಅದೇ ನ್ಯಾಯಾಧಿಶರು ಅವರ ಮೇಲೆ ತೀವ್ರ ತರವಾದ ಒಂದು ನೋಟ್ ಹಾಕಿದ್ದಾರೆ. ಸ್ಟ್ರಿಕ್ಚರ್ಸ ಪಾಸ್ ಮಾಡಿದ್ದಾರೆ ಎನ್ನುವ ವಿಷಯವನ್ನು ಹೇಳಿದರು. ಅದು ತಪ್ಪೇ, ನ್ಯಾಯಾಧೀಶರು ಸ್ವತಂತ್ರವಾಗಿ ತಮ್ಮ ಕೆಲಸಗಳನ್ನು ನಿರ್ವಹಣೆ ಮಾಡಲಿಕ್ಕೆ ಹೊರಟಾಗ...

ಡಾ: ಜೀವರಾಜ್ ಆಳ್ವ : ನಾನು ಹೇಳಿದ್ದು ಹಾಗಲ್ಲ. ಒಂದು ನಿಮಿಷ ಉತ್ತರ ಹೇಳುತ್ತೇನೆ. ನ್ಯಾಯಾಂಗದ ಮುಖ್ಯ ವ್ಯವಸ್ಥೆ ಇಟ್ಟುಕೊಂಡಂತಹ ವ್ಯಕ್ತಿಗಳು ಸ್ಥಿತಪ್ರಜ್ಞರಾಗಿರಬೇಕು

ಪ್ರಚೋದನೆಯಾಗಬಾರದು. ಮೋಹ ವ್ಯಾಮೋಹ ಮತ್ಸರ ಇರಕೂಡದು. ಆದರೆ ಯಾವುದೋ ಒಬ್ಬ ವ್ಯಕ್ತಿ ಮಾಡಿದ ಎಂದು ಹೇಳಿ ಕೋರ್ಟ ನ್ಯಾಯ... Court hall, there is a lot of sanctity. It is a temple of justice. and he could have sent a confidential note. ಪ್ರಚೋದನಾ ರಭಸದಲ್ಲಿ ಜಡ್ಜಮೆಂಟ್ ಕೊಟ್ಟರೆ, ಹೆಚ್ಚು ಕಡಿಮೆ ಆದೀತೋ ಎಂದು ಅಷ್ಟೆ ಬೇರೇನೂ ಇಲ್ಲ.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ : ನ್ಯಾಯಾಧೀಶರೂ ಕೂಡ ಒಬ್ಬ ಮನುಷ್ಯ ಆ ನ್ಯಾಯಾಧೀಶರಿಗೆ ಆವೇಶ ಬರುವುದೇ ತಪ್ಪು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದರೆ ಆ ಆವೇಶದಲ್ಲಿ ಅವರು ಅನ್ಯಾಯ ಮಾಡಬಾರದು. ಆ ಆವೇಶದಿಂದ ಕಕ್ಷಿದಾರರಿಗೆ ತೊಂದರೆ ಅನ್ಯಾಯ ಆಗಬಾರದು ಎಂಬುದನ್ನು ಅದನ್ನು ನಾನು ಒಪ್ಪುತ್ತೇನೆ. ಆದರೆ ಸ್ವತಂತ್ರರಾವ್ ಅವರು ಯಾವುದೋ ಒಂದು ಕೇಸಿನಲ್ಲಿ ಶಿಫಾರಸ್ಸು ಮಾಡಲಿಕ್ಕೆ ಹೋದಾಗ, ಆ ವ್ಯಕ್ತಿಯ ಬಗ್ಗೆ ನ್ಯಾಯಾಲಯ ನಿಂದನೆ ಅಥವಾ ಸ್ಟ್ರಿಕ್ಚರ್ಸ ಪಾಸ್ ಮಾಡಿದ್ದು ಸರಿಯಲ್ಲವೆನ್ನುವ ವಾದವನ್ನು ಮಾಡಲಿಕ್ಕೆ ತಯಾರಿಲ್ಲ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಅವರು ಹೇಳಲೇ ಇಲ್ಲ. Why are you putting your words into his mouth? ಮಾನ್ಯ ಪುಟ್ಟೇಗೌಡರೇ ತಾವು ಕುಳಿತುಕೊಳ್ಳಿ. ಚನ್ನಿಗಪ್ಪನವರೇ ತಾವೂ ಕುಳಿತುಕೊಳ್ಳಿ.

ಶ್ರೀ ಸಿ. ಚನ್ನಿಗಪ್ಪ : ಈ ದೇಶದಲ್ಲಿ ಜನರೇ ಸುಪ್ರೀಂ, ನ್ಯಾಯಾಲಕ್ಕೆ ಸುಪ್ರೀಂ ಜನಗಳು.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ : ನಿನ್ನೆಯಿಂದ ಈ ನಿಲುವಳಿ ಸೂಚನೆ ನೆಪದಲ್ಲಿ ನ್ಯಾಯಾಂಗದ ಮೇಲೆ ಹಲ್ಲೆ ನಡೆದಿದೆ. ಇವತ್ತು ನ್ಯಾಯಾಂಗದ ಮೇಲೆ ಮಾಡಿರತಕ್ಕಂತಹ ಭಾಷಣ it is not in the good taste of the country. ಈ ನ್ಯಾಯಾಂಗದ ಮೇಲೆ ನಡೆದಿರತಕ್ಕಂತಹ ಹಲ್ಲೆಯಿಂದ ನಾನು ಖಂಡಿತವಾಗಿ ವೈಯಕ್ತಿವಾಗಿ ಮನ ನೊಂದಿದ್ದೇನೆ. ಇದನ್ನು ಪ್ರತಿಭಟಿಸಿ ಸದನದಿಂದ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

(INTERRUPTIONS)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌಸನಲ್ಲಿ ಏನಾಗಿದೆ ಎಂದರೆ ನಿಮಗೆ ಬೇಕಾದದ್ದು ಮಾತನಾಡಿದರೆ ಚಪ್ಪಾಳೆ ಬಾರಿಸುತ್ತೀರಿ. ಇವತ್ತು ಜ್ಯುಡಿಷಿಯರಿ ಮೇಲೆ ಅಟ್ಯಾಕ್ ಮಾಡಿ, ಯಾವ ಸಂದರ್ಭದಲ್ಲಿ ಮಾತನಾಡುತ್ತಿದ್ದೀರಿ. ಬೇರೆ ಸಂದರ್ಭದಲ್ಲಿ ಮಾತನಾಡಬೇಕು. ಅನೇಕ ಸಲ ಕಾನೂನಿಗೆ ರಕ್ಷಣೆ ಕೊಡತಕ್ಕಂತಹ ಕೋರ್ಟಿನ ಬಗ್ಗೆ ಮಾತನಾಡುವಾಗ ತಮಗೆ ಖುಷಿ ಬಂದಾಗ ಸರಿ ಎಂದು ಹೇಳುತ್ತೀರಿ ಅನೇಕ ಸಲ ಅನ್ಯಾಯವಾಗುವಾಗ ಕೂಡ ವಿಚಾರ ಮಾಡಬೇಕಾಗುತ್ತದೆ. ಒಬ್ಬ ಮನುಷ್ಯ 18 ವರ್ಷದಿಂದ ಫೈಟ್ ಮಾಡುತ್ತಿದ್ದಾನೆ ಅವನ ಹಕ್ಕಿನ ಬಗ್ಗೆ ನಿಮಗೆ ಸ್ವಲ್ಪವೂ ಕಳಕಳಿ ಇಲ್ಲ. ನೋವು ಇಲ್ಲ. ಅವನ ಮೆಂಟಲ್ ಟಾರ್ಚರ್ ಬಗ್ಗೆ ಏನಾಗಿದೆ ಅದರ ಬಗ್ಗೆ ಏನೂ ಇಲ್ಲ. ಈಗ ನಾವು

ಅನುಕಂಪ ತೋರಿಸಲಿಲ್ಲವೇ? ಒಬ್ಬ ಮನುಷ್ಯ ಜೈಲಿಗೆ ಹೋಗಿದ್ದಾನೆ. ಒಂದು ತಿಂಗಳ ಸಂದರ್ಭದಲ್ಲಿ ಅವರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಅದು ಸರಿಯಲ್ಲವೆಂದು ಹೇಳಬೇಕಾಗುತ್ತದೆ. ನೀವು ಬೇರೆ ಸಂದರ್ಭದಲ್ಲಿ ಮಾತನಾಡಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ವಿಷಯಗಳನ್ನು ಡೀವಿಯೇಟ್ ಮಾಡತಕ್ಕಂತಹ ಪ್ರಯತ್ನ ಮಾಡಿದರೆ, ಇದು ಸರ್ವತಾ ಯಾರಿಗೂ ಒಳ್ಳೆಯದಲ್ಲ. ಒಬ್ಬ ಮನುಷ್ಯನಿಗೆ ಸಿಗತಕ್ಕಂತಹ ನ್ಯಾಯವನ್ನು ಇದು ಅನ್ಯಾಯವಾಗಿದೆ ಎನ್ನತಕ್ಕಂತಹ ರೀತಿಯಲ್ಲಿ ಧಾಟಿಯಲ್ಲಿ ಅದನ್ನು ತಂದಿದ್ದರೆ, ಸರ್ವಥಾ ಇದರಿಂದ ಪ್ರಯೋಜನವಾಗುವುದಿಲ್ಲ ಜನ ಇದನ್ನು ತೀರ್ಮಾನ ಮಾಡುತ್ತಾರೆ.

MR. SPEAKER : Mr. Nagagowda is on a point of order.

+ಶ್ರೀ ಕೆ.ಎಸ್. ನಾಗೇಗೌಡ : ನನ್ನದು ಕ್ರಿಯಾಲೋಪ ಇದೆ. ಮಾನ್ಯ ಮುದ್ದುಹನುಮೇಗೌಡರು ಡಾ। ಜೀವರಾಜ್ ಆಳ್ವ ಅವರು ಮತ್ತು ಮಾನ್ಯ ನಂಜೇಗೌಡರು ತಮ್ಮ ಜ್ಯುಡಿಷಿಯರಿ ಮೇಲೆ ಬೇಕಾದಷ್ಟು ಕಾಮೆಂಟ್ಸ ಮಾಡಿದ್ದೀರಿ ಎಂದು ಹೇಳುತ್ತಾ ಒಂದು ಕೇಸನ್ನು ರೆಫರ್ ಮಾಡಿದರು. ಮ್ಯಾಜಿಸ್ಟ್ರೇಟ್ ಕೋರ್ಟ ನಲ್ಲಿ ಯಾವುದಾದರೂ ಜಡ್ಜಮೆಂಟ್ ಆದರೆ ಅದನ್ನು ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋದರೆ, ಆ ಜಡ್ಜೆಮೆಂಟ್ ಅನ್ನು ಇಂಪ್ಲಿಮೆಂಟ್ ಮಾಡಿದೇ ಹೋದರೆ ನಮ್ಮ ಜ್ಯೂಡಿಷಿಯಸ್ ಸಿಸ್ಟಂ ಏನಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು ನಾವೆಲ್ಲಾ ಜ್ಯುಡಿಷಿಯಲ್ ಸಿಸ್ಟಂ ಅನ್ನು ಮೇಲೆ ಎತ್ತಿ ಹಿಡಿಯಬೇಕು. We are under judiciary. ಎನ್ನುವ ಪದವನ್ನು ಅವರು ಬಹಳ ಬಳಸಿದರು. ಬಹಳ ನನಗೆ ನೋವಾಗಿದೆ. 1969 ಜನವರಿ 21ರಲ್ಲಿ ಮಾನ್ಯ ಎಸ್. ಶಿವಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಸರಕಾರದ ಮೇಲೆ ಅವಿಶ್ವಾಸ ನಿರ್ಣಯ ತಂದಾಗ, ಯಾವುದೋ ಒಂದು ಕೋರ್ಟ ಸ್ಟೇ ಮೇಲೆ ಈ ಕೆಳಕಂಡಂತೆ ಹೇಳಿದ್ದಾರೆ. ನಾನು ವಿವರಕ್ಕೆ ಹೋಗುವುದಿಲ್ಲ. Who happens to be related to the Judge, who issued stay order, the Chair then brought to the notice of the member that under Art. 211 of the Constitution comments should not be made about the conduct of the judge, the Hon'ble Speaker observed: The Hon. member perhaps wanted to say something about conduct of the judge. The Hon'ble member can say that the Judgment is wrong. This is the ruling of the house.

Then he said,

``Hon'ble Member can say that the judgment is wrong but conduct of the should not come in for comment.

Sir, that means Sri Jeevaraj Alva or Sri Nanjegowda or anybody in this House they are not commenting. He said the Judgementis wrong.I have got evidence to say the supreme court is judgment is wrong. ಮಾನ್ಯ ವೀರಪ್ಪಮೊಯಿಲಿ ಒಂದು ಮಾತನ್ನು ಹೇಳಿದರು, ನಾನು ಲಾಯರಲ್ಲ. In the Interlocutory application ನಲ್ಲಿ

judgment ಏನಿದೆ, He may be promoted or supernumerary post may be created, He may be promoted - I want to ask the Ex-Hon'ble Chief Minister `may' or shall' in the judiciary writing' if necessary' `may' or ``may is not a shall " please tell me ಇಂಟರ್ ಪ್ರೆಟೇಷನ್ ಬೇಡ. ಆಗ ನಿಮಗೆ ಇನ್ನೂ ಒಂದು ಹೇಳಿದೆ. ನಾನು ಇನ್ನೂ ಒಂದು ಪಾಯಿಂಟ್ ಒಪ್ಪುತ್ತೇನೆ. 84 ರಲ್ಲಿ ಈ ವಿಚಾರವೆಲ್ಲಾ ವಿಧಾನಪರಿಷತ್ತಿಗೆ ಬಂದಿತ್ತು. ಹೈಕೋರ್ಟಿನಲ್ಲಿ ಕೇಸ್ ಪೆಂಡಿಂಗ್ ಇತ್ತು. ಸುಪ್ರೀಂ ಕೋರ್ಟಿನಲ್ಲಿ ಕಂಡೊನೇಷನಗೆ ಮಾಡಿದ್ದರು. after 10 years, ಡೀ ಕಂಡೋನೇಷನನ್ನು ಡಿಸಮಿಸ್ ಮಾಡಿದರು. ಹೈಕೋರ್ಟಿನಲ್ಲಿ ಕೇಸ್ ಇನ್ನೂ ಫೈನಲೈಸ್ ಆಗಿರಲಿಲ್ಲ. I donot want to say because still with all these there are good judges, there are still good judgments, ಆದರೆ ಒಂದು ಥಿಂಕ್ ಮಾಡಬೇಕು. ಮಾನ್ಯ ಜೀವರಾಜ ಆಳ್ವಾರವರು ಒಂದು ಪಾಯಿಂಟನ್ನು ಬಹಳ ಚೆನ್ನಾಗಿ ಹೇಳಿದರು. ಅಲಹಾಬಾದ್ ಕೋರ್ಟಿನಲ್ಲಿ ಲಾಯರ್ಸ ಮೇಲೆ ಕಂಟೆಮ್ಪ್ಟ ಕೇಸ್ ಮಾಡಿದಿರು. ಲಾಯರಗಳೆಲ್ಲಾ ಸ್ಟ್ರೈಕ್ ಮಾಡಿದರು. ವಿತಡ್ರಾ ಮಾಡಿ ಕೊಳ್ಳಲಿಲ್ಲವೇನು ? ಲಾಯರ್ಸಗಳು ವಿತಡ್ರಾ ಮಾಡಿಕೊಳ್ಳಲಿಲ್ಲವೇನು ? ಅದೇ ಅವರು ಹೇಳಿದ್ದದು. What type of judgment, what is its strength - that is important. ಅದನ್ನು ನಾವು ಚರ್ಚೆ ಮಾಡುವುದಕ್ಕಾಗುವುದಿಲ್ಲ ಎಂದರೆ ಈ ಸದನದಲ್ಲಿ ಜನತಾ ಪ್ರತಿನಿಧಿಗಳಾಗುವುದಕ್ಕೆ ನಮಗೆ ಅವಮಾನ. ಯಾರು ಪೀಪಲ್ ರೆಪ್ರೆಸೆಂಟೇಟೀವ್ಸ ಎಂದು ಹೇಳುತ್ತೇವೋ ಅವರು we can discuss the judgment- ಕೋರ್ಟ್ ಏನು ಮಾಡಿದರೂ ಒಪ್ಪಿಕೊಳ್ಳುವುದಿಲ್ಲ. ಅದಕ್ಕೆ ಮಾನ್ಯ ನಂಜೇಗೌಡರು, ಹಾಗೂ ಜೀವರಾಜ ಆಳ್ವರವರ ಆರ್ಗುಮೆಂಟ್ ಏನಿದೆ. ನಾನು ಮೆರಿಟ್ ಆಫ್ ದಿ ಕೇಸಗೆ ಹೋಗುವುದಿಲ್ಲ.

(ಗೊಂದಲ)

SRI H.N. NANJEGODWA : Constitution may be amended..

(ಗೊಂದಲ)

SRI MALLIKARJUNA KHARGE : Alright you challenge the Supreme Court. We have dismissed the officer... ಎಂದು ಹೇಳಿ ಮಾಡಿಬಿಡಿ, ಒಳ್ಳೆಯದಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ : ಆದುದರಿಂದ ಕೋರ್ಟ ಎಂದು ಹೇಳಿದರೆ they are not above the people.

(ಗೊಂದಲ)

Mr. SPEAKER : I would have been observing one thing. Sri Kharge normally you would not lose your cool. ಉದ್ವೇಗದಲ್ಲಿ ಕೆಲವು ಮಾತುಗಳನ್ನು ಹೇಳಿದಿರಿ. ಒಬ್ಬ ಮನುಷ್ಯ 18 ವರ್ಷದಿಂದ ಎಷ್ಟು ನೋವು ತಂದಿದ್ದಾನೆ ಮತ್ತು ಎಷ್ಟು ಯಾತನೆಯನ್ನು ಆತನು

ಅನುಭವಿಸಿದ್ದಾನೆ. ಅದರ ಬಗ್ಗೆ ಯಾರಿಗೂ ಕೂಡ ಕಾಳಜಿ ಇಲ್ಲ. ಅದು ಸರಿಯೇ? ಅದು ಮಾಡಿದ್ದೇ ತಪ್ಪು ಎನ್ನುವ ರೀತಿಯಲ್ಲಿ ಹೇಳಿದರು. ಬಹುಶಃ ನಾನು ಡೆಲಿಬರೇಷನ್ ವಾಚ್ ಮಾಡಿದಹಾಗೆ ಈ ಸದನದ ಯಾವೊಬ್ಬ ಸದಸ್ಯರೂ ಆತನಿಗೆ ಆಗಿರುವ ಅನ್ಯಾಯ ಸರಿ, ಆತನಿಗೆ ಅನ್ಯಾಯವಾಗಬೇಕಾಗಿತ್ತು ಎನ್ನುವ ಮಾತನ್ನು ಹೇಳಿಲ್ಲ. ನಿಮಗಿಂತ ಹೆಚ್ಚಲ್ಲದೇ ಹೋದರೆ ನಿಮಗೆ ಇರುವ ಅಷ್ಟೇ ಪ್ರಮಾಣದ ಕಾಳಜಿ ಮತ್ತು ಆಸ್ಥೆ, ಆತನಿಗೆ ನ್ಯಾಯ ಸಿಗಬೇಕಾಗಿತ್ತು ಎನ್ನುವ ವಿಚಾರದಲ್ಲಿ ಇಡೀ ಸದನದ ಅಭಿಪ್ರಾಯವಿದೆ. ನಾನು ಅಧ್ಯಕ್ಷನಾಗಿದ್ದುಕೊಂಡು I become a part of the House. If I don't refute it, it become very serious matter.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಕ್ಷಮಿಸುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ನಾಗೇಗೌಡರು ಏನು ಹೇಳಿದರು, ಜಡ್ಜಮೆಂಟೇ ತಪ್ಪು ಇದೆ ಎನ್ನುವ ಧಾಟಿ ಹೀಗೆ ಪ್ರಾರಂಭವಾದ ಮೇಲೆ ಅದರಲ್ಲಿ ಡಿಸ್ಕಷನ್ ಏತಕ್ಕೆ ಮಾಡಬಾರದು ಎಂದು ಬಂದಮೇಲೆ ನಾವು ಹೇಳಬೇಕಾಗುತ್ತದೆ.

(ಗೊಂದಲ)

SRI K.N . NAGEGOWDA : We can discuss. I never said it is wrong...

(ಗೊಂದಲ)

MR SPEAKER : Each one of you are entitled to draw your inference on a matter, your expressions your opinions spelt out in the House, if they don't augur well to suit the dignity of the House, I think the Chair will use its discretion and will not allow such things to become part of the proceedings.

SRI M. MALLIKARJUNA KHARGE : Sorry, Sir, ತಮಗೆ ಏನಾದರೂ ನೋವಾಗಿದ್ದು ಇದುವರೆಗೆ ಎಂದರೆ you give me any punishment I am ready to take it.

MR. SPEAKER : Please don't get excited. All the I would like to say is we are as much as interested as you are in protecting the cause of those, I don't forbid you from saying anything in upholding the interest, protecting the interest, protecting the safety of the exploited class we would never lag behind. I can definitely understand the anguish when you say those words. I will not take it in the wrong sense. But I appeal to you....

SRI. K.N. NAGEGOWDA : Please allow me to clarify one particular point to Mr. Khargji. Under Article 194(2) of the Constitution, we can

discuss ಜಡ್ಜಮೆಂಟ ಬಗ್ಗೆ ಅಂಡರ ಆರ್ಟಿಕಲ್ 194(2) ಏನು ಇದೆ... We can discuss under the Constitution provision.

(ಗೊಂದಲ)

MR. SPEAKER : All that Hon.Member Mr. Khargge raised was what is the subject matterr underRule 60. The House is trying to deliberate the business on a matter deviating from what is specified under Rule 60. The Chair has taken congnizance of it. I would appeal to all the Hon'ble Members who would further make submissions to be concise, to be brief and make your submissions only strictly regarding what you have mentioned in the notice. Now I call upon Sri Srirama Reddy..

SRI H.N. NANJE GOWDA : Sir, one clarification I what to make on what my young friends Mr. Narayan and Mr. Muddahanumegowda have said because I don't want my thinking to be misinterpreted, ನಿನ್ನೆ ನಾನು ಪ್ರಾರಂಭದಲ್ಲಿ ಹೇಳಿದೆ. ಒಬ್ಬ ದಲಿತ ವರ್ಗದವನು, ಒಬ್ಬ ಉತ್ತಮ ವರ್ಗದವನು ಒಂದೇ ದಿನದಲ್ಲಿ ಕೆಲಸಕ್ಕೆ ಸೇರುತ್ತಾರೆ. ಆ ಉತ್ತಮ ವರ್ಗಕ್ಕೆ ಸೇರಿದವನು ಎರಡು ವರ್ಷ, ಎರಡೂವರೆ ವರ್ಷಕ್ಕೆ ಮುಂಚೆ ಚೀಫ್ ಇಂಜಿನಿಯರ್ ಆಗಿಬಿಡುತ್ತಾನೆ ಇವನಿಗಿಂತ. ಇದಕ್ಕೆ "ಕೈ ಹುಣ್ಣಿಗೆ ಕನ್ನಡಿ ಬೇಡ" ಎನ್ನುವ ಮಾತನ್ನು ನಿನ್ನೆಯೇ ಹೇಳಿದೆ. ಏಕೆಂದರೆ it is not a question of argument at all ಅದು ಯಾವ ಕಾರಣಕ್ಕಾದರೂ ಆಗಲಿ, ಯಾವುದಾದರೂ ಆಗಲೀ ಇವತ್ತು ಇರತಕ್ಕಂಥ ನಮ್ಮ ರಾಜ್ಯಾಂಗದತ್ತವಾಗಿ ನಾವೇನೇನು ಒಪ್ಪಿಕೊಂಡಿರುವ ತತ್ವದ ಆಧಾರದಮೇಲೆ ಅದು ಯಾವು ಕಾರಣ, ನನ್ನ ಮನಸ್ಸಿನಲ್ಲಿ ಏನಿತ್ತು, ಏತಕ್ಕೆ ನಿನ್ನೆ ಹೇಳಲಿಲ್ಲವೆಂದರೆ, ಇವರು ಎಷ್ಟು ಕಾರಣ ಎಂದು ಇವತ್ತು ಅಂದಕೊಂಡಿದ್ದೇವೋ ನಾವು ಅದಕ್ಕಿಂತ ಹತ್ತುಪಟ್ಟು ಹೆಚ್ಚು ಇವರು ಕಾರಣ ಎಂದು ನಿನ್ನೆ ನನಗನ್ನಿಸಿತು. ನನ್ನ ಅಭಿಪ್ರಾಯ ನಾನು ಹೇಳುತ್ತಿರವಂಥದ್ದು.

ಶ್ರೀ ವೀರಪ್ಪಮೊಯಿಲಿ : ತಿಳಿವಳಿಕೆ ಕೊರತೆ ಇರಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : ತಿಳಿವಳಿಕೆ ಕೊರತೆಯಲ್ಲ. ಮಾಹಿತಿ ಕೊರತೆ. ತಿಳಿವಳಿಕೆ ಕೊರತೆ ನನಗೆ ಆಗುವುದಿಲ್ಲ. ಇವತ್ತು ಮೊಯಿಲಿಯವರು ಮಾತನಾಡುತ್ತಾ ಏನು ಹೇಳಿದರು, 93ನೇ ಇಸವಿಯಲ್ಲಿ ಆದದ್ದು ಸುಪ್ರೀಂ ಕೋರ್ಟ ಆರ್ಡರನ್ನು ಉಪಯೋಗಿಸಿ It was in a way reviewed ಎಂದು ಹೇಳಿಲ್ಲ. ಅಂತೂ it was considered by the High Court ಎಂದರು. ಅದಕ್ಕೆ ನಿನ್ನೆಯೂ ನಾನು ಹೇಳಿದೆ. ನಾನು ನಿನ್ನೆ ಎರಡು ವಿಚಾರವನ್ನು ಹೇಳಿದೆ. ಒಂದು ಇದು. I am a person belives in the Doctrine of Ministerial responsibility. ಅದನ್ನು ನಾನು ಪದೇ ಪದೇ ಈ ಸದನದಲ್ಲಿ ಹೇಳಿದ್ದೇನೆ. ನಾನು ಇನ್ನು ದೇವೇಗೌಡರ ಬಗ್ಗೆ ಅಥವಾ ಮುಖ್ಯ ಮಂತ್ರಿಗಳ

ಏನನ್ನೂ ಹೇಳಿಲ್ಲ. ನಾನು ಹೇಳದೇ ಇದ್ದರೆ ನನ್ನ ಅಭಿಪ್ರಾಯ ಸುಮ್ಮನಿರುವುದೇ, ಸರ್ಕಾರಕ್ಕೆ ಸಪೋರ್ಟ ಎಂದು ತಿಳಿದುಕೊಂಡು ಹೋಗಲೇನು ? that is not my intention. There are appropriate time to expess appropriate views. Not that I want this Government do everything and anything and whatever freely. ನೀವು ಐದು ಜನ, ಆರು ಜನ ಹೋಗಿ ದೆಹಲಿಯಲ್ಲಿ ಕುಳಿತುಕೊಂಡರೆ ನಮ್ಮನ್ನು ಕಂಡರೆ ಜನರು ನಗುವುದಿಲ್ಲವೆ? ಈ ಸಭೆ ನಗುವುದಿಲ್ಲವೇ? I should not be unnecessarily misinterpreted. ಆದರೆ ಒಂದು ಮಾತನ್ನು ಹೇಳುತ್ತೇನೆ, 1956ನೇ ಇಸವಿ ಚಿಕ್ಕ ವಯಸ್ಸಿನಲ್ಲೇ ನಾನು ಚತರಪುರಕ್ಕೆ ಹೋಗಿ ಗಾಂಧಿ ಸ್ಟಡಿ ನಮ್ಮದೇ ಕಾಲೇಜಿನಲ್ಲಿ ದಿನಕ್ಕೆ 15 ಕಕ್ಕಸ್ ಕ್ಲೀನ್ ಮಾಡಿ, ಅಲ್ಲಿಂದ ವಿದ್ಯಾಭ್ಯಾಸ ನನಗೆ ಪ್ರಾರಂಭವಾಗಿದ್ದುದು. ದಲಿತರ ಜೊತೆಗಿದ್ದು ಕಕ್ಕಸ್ ಕ್ಲೀನ್ ಮಾಡಿ ಸ್ನಾನ ಮಾಡಿಕೊಂಡು ದೇವರ ಪ್ರಾರ್ಥನೆ ಮಾಡುತ್ತಿದ್ದಂಥ ಜೀವನ ನನ್ನದು. ದಲಿತರಿಗೆ ನನಗಿಂತ ಹತ್ತಿರದವರು ಯಾರಾದರೂ ಇದ್ದಾರೆ ಈ ಸಭೆಯಲ್ಲಿ ಎಂದು ತಿಳಿದುಕೊಂಡರೆ ನಾನು ಒಪ್ಪುವುದಿಲ್ಲ. ಖರ್ಗೆಯವರಿಗಿಂತ ನಾನು ಅವರಿಗೆ ಹತ್ತಿರದಲ್ಲಿರುತ್ತೇನೆ. ಅವರನ್ನು ಬಾರೀ ಆತ್ಮೀಯವಾಗಿ ಮೆಚ್ಚಿಕೊಂಡು ನನ್ನ ಮನೆ ಇವತ್ತಿಗೂ ಕೂಡ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಲೇ ಇಲ್ಲ. ನಾನು ಹೇಳಿದ್ದು ಬೇರೆ. ನೀವು ಡೀವಿಯೇಟ್ ಮಾಡಬೇಡಿ ಎಂದು ಹೇಳಿದ್ದುದು ಅಷ್ಟೇ. ನಾನು ಬೇರೇನೂ ಹೇಳಲಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಡಿವಿಯೇಟ್ ಏನು ಮಾಡಿದ್ದೇನೆ?

SRI M. MALLIKARJUNA KHARGE : Just becaue I come from Scheduled Caste, if you say Kharge. Is not your duty to support?.

ಶ್ರೀ ಹೆಚ್. ಎನ್. ನಂಜೇಗೌಡ : ನಾನು ಹೇಳಿದ್ದುದು ನೀವು ಎಂದಲ್ಲ. ಸದಸ್ಯರು ಮಾತನಾಡಿದರಲ್ಲಾ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಏನೆಂದರೆ ಈ ಷೆಡ್ಯೂಲ್ಡ ಕಾಸ್ಟ ಬಗ್ಗೆ ಲಘುವಾಗಿ ಮಾತನಾಡತಕ್ಕಂಥದ್ದು ಬಹಳವಾಗಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಯಾರು ಲಘುವಾಗಿ ಮಾತನಾಡುವವರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಷೆಡ್ಯೂಲ್ಡ್ ಕಾಸ್ಟೆ, ಖರ್ಗೆ, ನಿಮ್ಮ ಸಬ್ಜೆಕ್ಟ್ ಅಲ್ಲ? ನೀವು ಅವರಿಂದ ವೋಟು ತೆಗೆದುಕೊಂಡಿಲ್ಲವೇ? ಅವರು ವೋಟು ಕೊಡುವುದಿಲ್ಲವೆ? 224 ಜನ ನೀವೆಲ್ಲರೂ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಹೇಳಿದೆ ಎಂದರೆ ನಾನು ನಿಮ್ಮ ಸದಸ್ಯರು ಎಂದು ಹೇಳಿದ್ದುದು. ನೀವು ಲೀಡರ್ ಅಲ್ಲವೇ? ಖರ್ಗೆಯವರ ಪಾರ್ಟಿಯವರು ಹೇಳುತ್ತಾರೆ ಎಂದು ಇನ್ನಾರಿಗೆ ಹೇಳಲಿ? ಈಗ ನಾನು ಯಾರಿಗೆ ಹೇಳಲಿ. I am a man of ricchest indignation.

For me a person trying to influence the Supreme Court Judge has committed more offence, it is a criminal offence. ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸಗಿಂತ ಕ್ರಿಮಿನಲ್ ಅಫೆನ್ಸ it is more punishable and the court suggests entry into the confidential report, wheras it conficts a person who has committed a administrative lapse. Are we to pocket all these things? I am sorry.. ಏಕೆಂದರೆ I am not an agent of Government. ನನಗೆ ಯಾವ ಸರ್ಕಾರದಿಂದಲೂ ಏನೂ ಆಗಬೇಕಾಗಿಲ್ಲ. ನಾನು ಜೀವನದಲ್ಲಿ ಏನೇ ಬೇಕಾದರೂ ಅದು ಬೇಡ ಎಂದು ಬಯಸಿದವನು. I am not anybody's servant.

MR SPEAKER : Don't get excited. These things interpretation or presentations are not properly understood. I appeal to all the Members to come back to the business.. ಶ್ರೀರಾಮರೆಡ್ಡಿಯವರು, it is my appeal once again, ರೂಲ್ಸ 60 ಕೆಳಗೆ ನೋಟೀಸ್ ಕೊಟ್ಟಿರತಕ್ಕ ವಿಷಯ ಏನು ಇದೆ, ಅದಕ್ಕೆ ಸೀಮಿತವಾಗಿ ಮಾತನಾಡಿ. ಎಲ್ಲೋ ಒಂದು ಕಡೆಗೆ ಅಲ್ಲಿ ಇಲ್ಲಿ ಅಕಾಡೆಮಿಕ್ ಇಂಟರೆಸ್ಟಗೆ ಕೆಲವು ಮ್ಯಾಟರ್ಸ ಅನ್ನು ರೆಫರ್ ಮಾಡುತ್ತಾರೆ. not altogether leaving aside the matter under rule 60.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಅಧ್ಯಕ್ಷರೆ, ಬೇರೆಯವರಿಗೆ ಏನೇನು ಬೇಕೋ ಅದೆಲ್ಲಾ ಮಾತನಾಡು ಅವಕಾಶ ಕೊಟ್ಟುಬಿಟ್ಟು ನನಗೆ ಮಾತ್ರ ನೀವು ಇಷ್ಟಕ್ಕೆ ರಿಸ್ಟ್ರಿಕ್ಟ ಮಾಡಿ ಎಂದು ಹೇಳಿದರೆ ನಾನು ಇದನ್ನು ಖಂಡಿತ ಒಪ್ಪುವುದಿಲ್ಲ.

ಶ್ರೀ ಹೆಚ್. ಶಿವಪ್ಪ : ನೀವು ಬೆರೆಯವರು ಮಾತನಾಡಿರುವ ಧಾಟಿಯಲ್ಲಿಯೇ ಮಾತನಾಡುತ್ತಿದ್ದೀರಿ. it amounts to contempt.

MR. SPEAKER : It is not a wilful disobedience...

ಶ್ರೀ ಕೆ.ಎನ್. ನಾಗೇಗೌಡ : ಅವರು ಹೇಳಿದ್ದಕ್ಕೆ ನಾನು ಹೇಳಬೇಕು. ಶ್ರೀ ಮುದ್ದುಹನುಮೇಗೌಡರು ಮತ್ತು ನಾರಾಯಣ ಅವರ ಅರ್ಗುಮೆಂಟ್ ಕೇಳಿ ಮನಸ್ಸಿಗೆ ತುಂಬಾ ನೊಂದಿದ್ದು ಮಾನ್ಯ ಜೀವರಾಜ್ ಆಳ್ವ ಅವರ ಕೊನೆಯ ಸೆಂಟನ್ಸಗೆ ಅವರ ಲಾಸ್ಟ ಸೆಂಟೆನ್ಸಗೆ ಅವರ ಲಾಸ್ಟ ರಿಕ್ವೆಸ್ಟ ತುಂಬಾ ಚೆನ್ನಾಗಿತ್ತು ಎಂದು ಹೇಳಿ. ಅದನ್ನು ಎಸ್ಟಾಬ್ಲಿಷ್ ಮಾಡುವುದಕ್ಕೆ ಯಾವುದಾದರೂ ಒಬ್ಬ ಮನುಷ್ಯ ಆಯಿತಪ್ಪ ತಪ್ಪಾಗಿದೆ, ಎಂದು ಹೇಳಿದಾಗ, ಅಷ್ಟಕ್ಕೇ ಅದನ್ನು ಮುಗಿಸಿ ಅವನು ಜೈಲಿಗೆ ಹೋಗುವುದನ್ನು ತಪ್ಪಿಸಬಹುದಾಗಿತ್ತು ಎನ್ನತಕ್ಕಂತದ್ದನ್ನು ಅವರ ಟೋಟಲ್ ಇಂಟೆನಷನ್ ಇತ್ತು ಎಂದು ಕಾಣುತ್ತದೆ. ಅದಕ್ಕೆ ನಾನು ಒಂದೇ ಒಂದು ಸ್ಮಾಲ್ ಇನ್ಸಿಡೆಂಟ್ ಹೇಳುತ್ತೇನೆ. ಸುಪ್ರೀಂ ಕೋರ್ಟಿ ಜಡ್ಜಮೆಂಟ್ ನನ್ನ ಕೈಗೆ ಸಿಕ್ಕಿತು. ತಮ್ಮ ಗಮನಕ್ಕೆ ತರತಕ್ಕದ್ದು 1994ನಲ್ಲಿ ಜಯಪುರ್ ಡೆವಲಪಮೆಂಟ್ ಅಥಾರಿಟಿಯಲ್ಲಿ ಒಂದು ಜಡ್ಜಮೆಂಟ್ ಆಗುತ್ತದೆ. against the concerned Land Acquisition Officer...

ಅಲ್ಲಿ ಆತನನ್ನು ಕಂಟೆಪ್ಟ್ ಆಫ್ ಕೋರ್ಟ್ ಪ್ರಕಾರ ಜೈಲಿಗೆ ಕಳುಹಿಸಬೇಕು ಎಂದು ಹೇಳುತ್ತಾರೆ. ಆದರೆ ಅವರು ಅಪೀಲ್ ಮಾಡಿದ ಮೇಲೆ ನಮ್ಮ ಸುಪ್ರೀಂ ಕೋರ್ಟ್ ಜಸ್ಟೀಸ್ ಅಹಮದಿ, ಅವರ ಮುಂದೆ ಬರುತ್ತದೆ. ಅದು ಯಾವಾಗ ಎಂದರೆ ಏಪ್ರಿಲ್ 25, 1995. ಅಲ್ಲಿ ಜಡ್ಜಮೆಟ್ ಮಾಡುತ್ತಾರೆ, ಆ ಸುಪ್ರೀಂ ಕೋರ್ಟ್ ಜಸ್ಟೀಸ್ ಅಹಮದಿ ಅವರು ಹೇಳುತ್ತಾರೆ. ``High Court should not have accepted his apology. the jail from the court". This is another Supreme Coourt judgment of April 25, 1995. ಅಪಾಲಜಿ ಕೇಳಿಕೊಂಡಿದ್ದರೆ ಅಷ್ಟಕ್ಕೇ ಆಕ್ಸೆಪ್ಟ್ ಮಾಡಿಕೊಳ್ಳಬಹುದಿತ್ತು.

SRI MUDDAHANUME GOWDA : Sir, it is again questioning the judgment....

ಶ್ರೀ ಎಂ. ವೀರಪ್ಪ ಮೊಯಿಲಿ : ನ್ಯಾಯಾಲಯ ನಿಂದನೆ ಇದೆ. ನ್ಯಾಯಾಲಯದ ನಿಂದನೆಗೆ ಈ ಸದನದ ವೇದಿಕೆ ಆಗಿದೆಯೇ?

ಶ್ರೀ ಕೆ.ಎನ್. ನಾಗೇಗೌಡ : ನಿಂದನೆ ಅಲ್ಲ.

(ಗೊಂದಲ)

MR. SPEAKER : It is not reasonable.

SRI. M. VEERAPPA MOILY : I am very sorry. I don't think this has been disdussed ever or any time in the House.

MR. SPEAKER : We are not discussing the judgment. The House is not a party for discussing the judgment or conduct of the judges..

SRI M. VEERAPPA MOILY : We are abetting that. I am sorry.

ಶ್ರೀ ಆರ್. ನಾರಾಯಣ್ : ಪರೋಕ್ಷವಾಗಿ ಈ ಒಂದು ನ್ಯಾಯಾಲಯದ ತೀರ್ಪಿಗೆ ವಿರುದ್ಧ ಮಾತನಾಡುತ್ತಿದ್ದಾರೆ.

(ಗೊಂದಲ)

MR. SPEAKER : Kindly co-operate. Now Sirama Reddy.

ಶ್ರೀ ಆರ್. ನಾರಾಯಣ್ : ಇವರು ಏನು ಹೇಳುವುದಕ್ಕೆ ಹೊರಟಿದ್ದಾರೆ ಅಂದರೆ ಅಲ್ಲಿ ಕ್ಷಮೆ ಕೊಟ್ಟಿದ್ದಾರೆ, ಇವರೂ ಕೊಡಬಹುದಾಗಿತ್ತು.

ಅಧ್ಯಕ್ಷರು : ನಾರಾಯಣ,ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್. ಶಿವಪ್ಪ : ಲಂಚ್ ಬ್ರೇಕ್ ಇದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ನನ್ನ ರಿಕ್ವೆಸ್ಟ್ ಏನು ಎಂದರೆ ಇವತ್ತು ಶುಕ್ರವಾರ 10 ಗಂಟೆಗೆ ಸಭೆ ಸೇರಬೇಕಾಗಿತ್ತು, ಯಾವುದೋ ಕಾರಣಕ್ಕೆ 11 ಗಂಟೆಗೆ ಸೇರಿದ್ದೇವೆ. ಯಾರು ಊಟ ಮಾಡುತ್ತಾರೋ ಅವರು ಹೋಗಿ ಬರುತ್ತಾರೆ. ದಯಮಾಡಿ ತಾವು ಮುಂದುವರಿಸಬೇಕು. ಚರ್ಚೆ ಮುಂದುವರಿದರೆ ಒಳ್ಳೆಯದಾಗುತ್ತದೆ. ನಾವು ಯಾವುದೋ ಒಂದು ಸಮಯಕ್ಕೆ ಮುಗಿಸಲು ಅನುಕೂಲ ಆಗುತ್ತದೆ. ದಯಮಾಡಿ, ನಿನ್ನೆ ಸಹ ಅಧ್ಯಕ್ಷರಲ್ಲಿ ನಾನು ವಿನಂತಿ ಮಾಡಿದ್ದೇನೆ.

ಶ್ರೀ ಹೆಚ್. ಶಿವಪ್ಪ : ನಾವು ಎಲ್ಲರೂ ಮಾತನಾಡಬೇಕು, ಇದರಲ್ಲಿ ಭಾಗವಹಹಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರ್ಧ ಗಂಟೆ ಅಜರ್ನ ಮಾಡಿ. ರಾತ್ರಿ 12 ಗಂಟೆ ಒಂದು ಗಂಟೆಯವರೆ ಹೌಸ ನಡೆದಿದ್ದೂ ನೋಡಿದ್ದೇವೆ. ಅದಕ್ಕೆ ಏನೂ ದೊಡ್ಡದು ಆಗುವುದಿಲ್ಲ ಒಂದು ಅರ್ಧ ಗಂಟೆ ಅಜರ್ನ ಶ್ರೀ ಹೆಚ್. ಶಿವಪ್ಪ : ಅಜರ್ನೆ ಮಾಡಬಹುದು. ಊಟವನ್ನು ಬಿಟ್ಟು ನಾವು ಚರ್ಚೆ ಮಾಡುವಂತಹದ್ದೇನೂ ಇಲ್ಲ. ನಾವು ಅವರು ಮಾತನಾಡುವುದನ್ನು ಕೇಳಬೇಕಾಗುತ್ತದೆ. ಅದ್ದರಿಂದ ಯಾರೋ ಹೋಗಲಿ ಯಾರೋ ಬರಲಿ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಸರಿಪಡಿಸಿಕೊಂಡು ಅಜರ್ನೆ ಮಾಡಿದರೆ ಅರ್ಧಗಂಟೆ ಊಟ ಮಾಡಿಕೊಂಡು ಬಂದು we can effectively participate in the discussion .

MR. SPEAKER : I just want to know the mind of the Government. I would like to take the opinion of the House also.

ಶ್ರೀ ಹೆಚ್. ಶಿವಪ್ಪ : ನಾವು ಶುಚರ್ ಪೇಷಂಟ್ಸ ಇದ್ದೇವೆ. ಬಹಳ ಜನ ಇಲ್ಲಿದ್ದಾರೆ..

ಅಧ್ಯಕ್ಷರು : ಶಿವಪ್ಪನವರು ಹೇಳಿದ ಒಂದು ಪಾಯಿಂಟ್ ಮೆಂಬರ್ಸ ಹೇಳುವುದಕ್ಕೆ ನಾವು ಕೇಳಬೇಕು. ನಾವು ಊಟಕ್ಕೆ ಹೋಗಿ ಅವರು ಹೇಳಿದ ಹಾಗೆ ಆ ನಂತರ ಚರ್ಚೆ ಮುಂದುವರಿಸಬಹುದು. ಸಭೆಯನ್ನು ಅರ್ಧಗಂಟೆ ಕಾಲ ಮುಂದೂಡಲಾಗಿದೆ.

(ಸಭೆಯು 2.06ಕ್ಕೆ ಮುಕ್ತಾಯವಾಗಿ ಮತ್ತೆ 2.45ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ 3.20ಕ್ಕೆ ಸಮಾವೇಶಗೊಂಡಿತು)

(ಶ್ರೀ ರಮೇಶಕುಮಾರರವರು ಅಧ್ಯಕ್ಷ ಪೀಠದಲ್ಲಿದ್ದರು)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತಿದ್ದೇನೆ. ಅದಕ್ಕೆ ಕಾರಣ ಇಷ್ಟೆ. ಇವತ್ತು ಒಂದು ಗಂಭೀರವಾದಂತಹ ಪರಿಸ್ಥಿತಿ ಉಂಟಾಗಿದೆ. ಈ ರೀತಿಯ ಗಂಭೀರವಾದಂತಹ ಪರಿಸ್ಥಿತಿ ಏಕೆ

ಉಂಟಾಯಿತು ? ಯಾವ ಕಾರಣಕ್ಕೋಸ್ಕರ ಉಂಟಾಯಿತು ? ಯಾರಿಂದಾಗಿ ಈ ಪರಿಸ್ಥಿತಿ ಉಂಟಾಯಿತು ಎಂಬ ಬಗ್ಗೆ ಈ ಸದನದಲ್ಲಿ ಚರ್ಚೆಬೇಕಾಗಿದೆ. ಏಕೆಂದರೆ ಇವತ್ತಿನ ಈ ಘಟನೆ ಏನಿದೆ, ಇದು ಹಲವಾರು ಗಂಭೀರವಾದಂತಹ ಪ್ರಶ್ನೆಗಳನ್ನು ಎತ್ತಿದೆ. ಆ ಗಂಭೀರವಾದಂತಹ ಪ್ರಶ್ನೆಗಳಲ್ಲಿ ಮುಖ್ಯವಾದಂತಹ ಕೆಲವು ಅಂಶಗಳಿಗೂ ಕೂಡ ನಾವಿಂದು ಸ್ಪಷ್ಟನೆಯನ್ನು ಪಡೆಯಬೇಕಾಗಿದೆ. ಇವತ್ತು ಒಬ್ಬ ಪ್ರಾಮಾಣಿಕವಾದಂತಹ ಅಧಿಕಾರಿ ಜೈಲಿಗೆ ಹೋಗಿದ್ದಾರೆ. ಅವರ ಬಗ್ಗೆ ನಮಗೆಲ್ಲರಿಗೂ ಕೂಡ ಅನುಕಂಪ ಇದೆ. ಸುಮಾರು 10 ರಿಂದ $10^1/_2$ ಗಂಟೆಗಳ ಕಾಲ ನಾವು ಇದೇ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಬಹುಶಃ ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲಿಯೇ ಇಂತಹ ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗಿದ್ದಕ್ಕೆ, ಇಷ್ಟು ದೀರ್ಘವಾಗಿ ಚರ್ಚೆ ನಡೆಸುತ್ತಿರುವುದು ಇದೇ ಮೊದಲ ಬಾರಿಗೆ ಎನಿಸುತ್ತದೆ. ಮತ್ತು ಈ ರೀತಿ ಪ್ರಾಮಾಣಿಕ ಅಧಿಕಾರಿಯೊಬ್ಬರು ಜೈಲಿಗೆ ಹೋಗಿದ್ದೂ ಇದೇ ಪ್ರಥಮ ಬಾರಿಗೆ ಇಬರಬೇಕೆಂದು ಎನಿಸುತ್ತದೆ. ಇದೊಂದು ಪ್ರಾಮುಖ್ಯವಾದಂತಹ ಮತ್ತು ಗಂಭೀರವಾದಂತಹ ಘಟನೆ. ಆ ಪ್ರಾಮಾಣಿಕವಾದಂತಹ ಅಧಿಕಾರಿಯನ್ನು ಜೈಲಿಗೆ ಕಳುಹಿಸದ್ದು ತಪ್ಪೋ ಸರಿಯೋ ಎಂದು ಬಹುಶಃ ಈಗ ಚರ್ಚೆ ಮಾಡುವುದರಲ್ಲಿ ಏನೂ ಅರ್ಥ ಇಲ್ಲ. ಅವರು ಜೈಲಿಗೆ ಹೋಗಿದ್ದಾರೆ. ನಾವೆಲ್ಲರೂ ಸೇರಿ ಇವತ್ತು ಎಷ್ಟೇ ಚರ್ಚೆ ಮಾಡಿದರೂ ಆ ಅಧಿಕಾರಿಗೆ ಆಗಿರತಕ್ಕ ಶಿಕ್ಷೆಯನ್ನು ತಪ್ಪಿಸಲಿಕ್ಕೆ ಖಂಡಿತ ಸಾಧ್ಯವಿಲ್, ತಪ್ಪಿಸಲಿಕ್ಕೆ ಆಗಲಿಲ್ಲ. ಆದರೆ ಇಲ್ಲಿ ಚರ್ಚೆಯಾಗತಕ್ಕ ವಿಷಯ ಏನೆಂದರೆ, ಅವರು ಯೋರೋ ಮಾಡಿದ ತಪ್ಪಿಗೋಸ್ಕರ ಜೈಲಿಗೆ ಹೋಗಬೇಕಾಗಿಬಂತು. ಆ ವಿಷಯದ ಸಂಪೂರ್ಣವಾಗಿ ತಿಳಿಯಲಿಕ್ಕೆ ಈ ಸದನಕ್ಕೆ ಹಕ್ಕಿದೆ ಮತ್ತು ಅದು ಈ ಸದನದ ಒಂದು ಪ್ರಶ್ನೆಯಾಗಿದೆ. ಆ ವಿಷಯವನ್ನು ಸಂಪೂರ್ಣವಾಗಿ ಸದನದ ಗಮನಕ್ಕೆ ತರಬೇಕಾಗುತ್ತದೆ. ಈ ಪ್ರಕರಣವು 1972ನೇ ಇಸವಿಯಿಂದ ಪ್ರಾರಂಭವಾಗುತ್ತದೆ. 1972-1995ರವರೆಗೆ ಅಂದರೆ 22 ವರ್ಷಗಳ ಕಾಲ ನಡೆದಿರತಕ್ಕ ಘಟನೆ ಇದು. 22 ವರ್ಷಗಳಿಂದ ಯಾರದು ಏನೇನು ಪಾತ್ರ ಇದರಲ್ಲಿದೆ, ಎಲ್ಲಿ ಯಾರ್‍ಯಾರು ಎಡವಿದ್ದಾರೆ? ಯಾರ್‍ಯಾರು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ ಎನ್ನತಕ್ಕದ್ದು ಸಂಪೂರ್ಣವಾಗಿ ಈ ಸದನಕ್ಕೆ ಗೊತ್ತಾಗಬೇಕಾಗುತ್ತದೆ. ಏಕೆ ಗೊತ್ತಾಗಬೇಕಾಗಿದೆ ಎಂದರೆ ನನ್ನ ಅಭಿಪ್ರಾಯದಲ್ಲಿ ಈ ದೇಶದಲ್ಲಿ ಒಂದು ವ್ಯವಸ್ಥೆಯನ್ನು ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ಆ ವ್ಯವಸ್ಥೆ ಎಂದರೆ ಪ್ರಜಾಪ್ರಭುತ್ವ ವ್ಯವಸ್ಥೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾವೇ ಸೃಷ್ಟಿ ಮಾಡಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಂದಿರತಕ್ಕದ್ದು ಜನ ಶಕ್ತಿ. It is people's power which has created this democracy ಅದರಲ್ಲಿ ಕೆಲವು ನಿಯಮಗಳನ್ನು that is what we are calling Rule of law ಆ ರೂಲ್ ಆಫ್ ಲಾ ಗಿಂತ ಯಾರೂ ದೊಡ್ಡವರಲ್ಲ ಎನ್ನತಕ್ಕ ಒಂದು ಪ್ರಶ್ನೆಯನ್ನು ನಾವೇ ಒಪ್ಪಿಕೊಂಡಿರುತ್ತೇವೆ. ಅದನ್ನು ಯಾರೂ ನಮ್ಮ ಮೇಲೆ ಹೇರಿಲ್ಲ. ಇದರಿಂದ ಇವತ್ತು ಕೆಲವು ಪಾಠಗಳನ್ನು ಅಧಿಕಾರಿಗಳು ಕಲಿಯಬೇಕಾಗಿದೆ. ಅಧಿಕಾರಿಗಳೂ ಕೂಡ ಪಾಠ ಕಲಿಯಬೇಕಾಗಿದೆ. ಸರ್ಕಾರ ನಡೆಸತಕ್ಕವರೂ ಕೂಡ ಪಾಠ ಕಲಿಯಬೇಕಾಗಿದೆ. ಅಧಿಕಾರಿಗಳು ಏನು ಇವತ್ತು ಪಾಠ ಕಲಿಯಬೇಕಾಗಿದೆ ಎಂದರೆ, ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಈ ದೇಶದಲ್ಲಿ ಈ ನೆಲದ ಕಾನೂನಿಗೆ ವಿರುದ್ಧವಾಗಿ ಯಾವ ಕೆಲಸವನ್ನೂ ಮಾಡಬಾರದು, ಮಾಡಿದರೆ ಏನಾಗುತ್ತದೆ ಎಂಬ

ಪಾಠವನ್ನು ಅವರು ಕಲಿಯಬೇಕಾಗಿದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ ಅಧಿಕಾರಕ್ಕೆ ಬಂದಂತಹ ಪಕ್ಷದ ಮತ್ತು ಸರ್ಕಾರಗಳ ಅಭಿಪ್ರಾಯದಂತೆ ಹೆಚ್ಚಿನ ಸಂದರ್ಭದಲ್ಲಿ ಅಧಿಕಾರಿಗಳು ನಡೆಯತಕ್ಕದ್ದನ್ನು ನಾವು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಣುತ್ತಿದ್ದೇವೆ. ಇದರಿಂದಾಗಿ ಅಧಿಕಾರೇತರ ಜನರು ಬಹಳಷ್ಟು ಸಂಕಷ್ಟಗಳನ್ನೂ ಕೂಡ ಎದುರಿಸುತ್ತಿದ್ದಾರೆ. ಅಧಿಕಾರಿಗಳು ಪ್ರಾಮಾಣಿಕವಾಗಿ ಕಾನೂನು ಜಾರಿ ಮಾಡದೇ ಇರುವುದರಿಂದ, ರೂಲ್ ಆಫ್ ಲಾ ಗೆ ನ್ಯಾಯಬದ್ಧವಾಗಿ ಅವರು ನಡೆಯದೇ ಇರುವುದರಿಂದ, ಸಾಮಾನ್ಯ ಜನರು ಹೆಚ್ಚಿನ ಸಂದರ್ಭದಲ್ಲಿ ಇವತ್ತು ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಅನುಭವಿಸಿದ್ದಾರೆ, ಕಷ್ಟಪಡುತ್ತಿದ್ದಾರೆ. ಬಹುಶಃ ಅಧಿಕಾರದಲ್ಲಿರತಕ್ಕ ಜನಕ್ಕೆ ಈ ಕಷ್ಟಗಳು ಗೊತ್ತಾಗುವುದಿಲ್ಲ. ಇವತ್ತು ಒಬ್ಬ ಪ್ರಾಮ್ಮಾಣಿಕ ಅಧಿಕಾರಿ ಜೈಲಿಗೆ ಹೋಗಿದ್ದಾರೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಅವರು ಜೈಲಿಗೆ ಹೋಗಬಾರದಿತ್ತು. ಆದರೆ ಸಾವಿರಾರು ಜನರು, ಬಡವರು ಬೇರೆ ಬೇರೆ ಕಾರಣಗಳಿಗೋಸ್ಕರ ಜೈಲಿಗೆ ಹೋಗಿದ್ದಾರೆ. ಇವತ್ತು ಜೈಲಿನಲ್ಲಿರುವವರೆಲ್ಲಾ ತಪ್ಪಿತಸ್ಥರು ಎಂದು ಹೇಳಲಿಕ್ಕೆ ನಾನು ತಯಾರಿಲ್ಲ. ಅಥವಾ ಜೈಲಿನ ಆಚೆ ಇರತಕ್ಕವರೆಲ್ಲಾ ಮಹಾ ದೊಡ್ಡ ಮನುಷ್ಯರು, ಸತ್ಯ ಹರಿಶ್ಚಂದ್ರರು ಎಂದು ನಾನುಹೇಳಲಿಕ್ಕೆ ತಯಾರಿಲ್ಲ. ಆದರೆ ಹಲವಾರು ಸಂದರ್ಭಗಳಲ್ಲಿ ಸಾಮಾನ್ಯ ಜನರು, ಜನರ ಸಮಸ್ಯೆಗಳಿಗೆ ಹೋರಾಟ ಮಾಡಿದಂತಹವರು, ದೇಶಕ್ಕೋಸ್ಕರ ಹೋರಾಟ ಮಾಡಿದಂತಹವರು, ಸಮಾಜದ ಸಮಸ್ಯೆಯನ್ನು ಪರಿಹಾರ ಮಾಡುವುದುಕ್ಕೋಸ್ಕರ ಹೋರಾಟ ಮಾಡಿದಂತಹವರು ಜೈಲಿಗೆ ಹೋದಾಗ ಎಲ್ಲೂ ಬಹುಶಃ ಇಷ್ಟು ಗಂಭೀರವಾಗಿ ಚರ್ಚೆ ಆದದ್ದನ್ನು ನಾನು ಕಾಣಲಿಲ್ಲ. ಒಂದೇ ಒಂದು ಸಂದರ್ಭವನ್ನು ಬಿಟ್ಟು. ಅದು ಯಾವುದೆಂದರೆ 1975ರಲ್ಲಿ ತುರ್ತ ಪರಿಸ್ಥಿತಿಯ ಸಂದರ್ಭದಲ್ಲಿ ಇಡೀ ದೇಶವೇ ಜೈಲಾಗಿ ಮಾರ್ಪಾಡು ಮಾಡಿದಂತಹ ಸಂದರ್ಭದಲ್ಲಿ ಬಿಟ್ಟರೆ, ಬಹುಶಃ ಎಂದೂ ಸಾಮಾನ್ಯ ಜನರು ಜೈಲಿಗೆ ಹೋದಾಗ ಚರ್ಚೆ ಆದುದನ್ನು ನಾನಂತೂ ಕಾಣಲಿಲ್ಲ. ಹಾಗಾಗಿ ಇವತ್ತು ಈ ಸದನದಲ್ಲಿ ಇವೆಲ್ಲಾ ಚರ್ಚೆಯಾಗಬೇಕಾಗಿದೆ ನಿಜ. ಚರ್ಚೆ ಯಾವುದಾಗಬೇಕು, ಹೇಗೇ ಆಗಬೇಕು ಎಂಬುದು ಬಹಳ ಮುಖ್ಯವಾದಂತಹ ವಿಷಯ. ನನ್ನ ಅಭಿಪ್ರಾಯದಲ್ಲಿ ಈ ಸದನದಲ್ಲಿ ಚರ್ಚೆಯಾಗಬೇಕಾಗಿರತಕ್ಕ ವಿಷಯ ವಾಸುದೇವನ್ ಜೈಲಿಗೆ ಹೋಗಬೇಕಾದಂತಹ ಕಾರಣಗಳು, ಘಟನೆಗಳು, ಅದಕ್ಕೆ ಕಾರಣಕರ್ತರು ಯಾರು ಎನ್ನತಕ್ಕದ್ದು ಇಲ್ಲಿ ಚರ್ಚೆಯಾಗಬೇಕು. ಅವಕ್ಕೆ ಇವತ್ತು ಇಲ್ಲಿ ಉತ್ತರ ಸಿಗಬೇಕಾಗಿದೆ. ಆ ವಿಚಾರಗಳು ಇವತ್ತು ಇಲ್ಲಿ ಚರ್ಚೆಯಾಗಬೇಕೇ ಹೊರತು, ಯಾರೋ ಒಬ್ಬರು ರಾಜೀನಾಮೆ ಕೊಡುವುದರಿಂದ, ಈ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳತಕ್ಕದ್ದರಲ್ಲಿ ಅರ್ಥ ಇಲ್ಲ. ಹಾಗಾಗುವುದಿದ್ದರೆ, ನಾವು ಕಳೆದ ಮೂರು ದಿವಸಗಳಿಂದ ಇಷ್ಟು ದೀರ್ಘವಾಗಿ ಅಂದರೆ ೧೦ಗಂಟೆಗಳ ಕಾಲ ಇಲ್ಲಿ ಚರ್ಚೆ ಮಾಡಬೇಕಾಗಿರಲಿಲ್ಲ. ಮೊಟ್ಟ ಮೊದಲನೆಯದಾಗಿ ವಾಸುದೇವನ್ ಅವರನ್ನು ಜೈಲಿಗೆ ಕರೆದುಕೊಂಡು ಹೋದ ವಿಷಯವನ್ನು ನಾನೇ ಈ ಸದನಕ್ಕೆ ತಿಳಿಸಿದ್ದು. ಅವರು ಪೋಲೀಸ್ ಕಮೀಷನರ್ ಮುಂದೆ ಹೋಗಿ ಶರಣಾಗಿ 10-30 ಗಂಟೆಯಲ್ಲಿ ಅವರನ್ನು ಜೈಲಿಗೆ ಕರೆದುಕೊಂಡು ಹೋದಂತಹ ವಿಷಯವನ್ನು ಮೊದಲು ಈ ಸದನದಲ್ಲಿ ಪ್ರಸ್ತಾಪ ಮಾಡಿದನತಹವನು ನಾನೇ. ನಾನು ಈ ವಿಷಯ ಪ್ರಸ್ತಾಪ ಮಾಡಿದಾಗ ಆಗ ಸರ್ಕಾರದ ಮುಂದೆ ಈ ವಿಚಾರವಾಗಿ ಯಾವುದೇ ರೀತಿಯಾದಂತಹ ವರದಿ ಇರಲಿಲ್ಲ, ಆಗಿನಿಂದ,

ಮೂರು ದಿವಸಗಳಿಂದ 10-12 ಗಂಟೆಗಳ ಕಾಲ ಆ ವಿಷಯದ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಈ ಚರ್ಚೆ ನಡೆದಿರತಕ್ಕ ಮುಖ್ಯ ಉದ್ದೇಶವೇನೆಂದರೆ, ಈ ಘಟನೆಗಳಿಗೆ ನಿಲುವಳಿ ಸೂಚನೆಯನ್ನು ತಾವು ಒಪ್ಪಬೇಕೆಂದು ನಾನು ಹೇಳುತ್ತಿದ್ದೇನೆ. ಇದರಲ್ಲಿ ಹಿಂದಿನ ಸರ್ಕಾರವೋ, ಈಗಿನ ಸರ್ಕಾರವೋ ಸ್ಪಷ್ಟವಾಗಿ ತಪ್ಪು ಮಾಡಿದ್ದಾರೆ. ಮಾಡಿರತಕ್ಕ ತಪ್ಪಿನಿಂದ ಇವತ್ತು ವಾಸುದೇವನರಂತಹ ಒಬ್ಬ ಪ್ರಾಮಾಣಿಕ ಅಧಿಕಾರಿ ಜೈಲಿಗೆ ಹೋಗುವಂತಹ ಪರಿಸ್ಥಿತಿ ಬಂದಿದೆ. ಆದುದರಿಂದ ಈ ವಿಷಯ ಚರ್ಚೆಯಾಗಬೇಕಾಗಿದೆ. ಇನ್ನು ಇಲ್ಲಿ ಇನ್ನೊಂದು ಪ್ರಮುಖವಾದಂತಹ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ. ನಾನು ಈ ಬಗ್ಗೆ ಹೆಚ್ಚಾಗಿ ಹೇಳಲಿಕ್ಕೆ ಹೋಗುವುದಿಲ್ಲ. ನ್ಯಾಯಾಂಗದ ಬಗ್ಗೆ ಸದನದಲ್ಲಿ ಪ್ರಸ್ತಾಪವಾಗಿದೆ. ನನಗೆ ಬಹಳ ಸಂತೋಷವಾಗುತ್ತಿದೆ. ಏಕೆಂದರೆ ಇದು ಚರ್ಚೆಯಾಗಬೇಕು.

ನಾನು ಮಾರ್ಕ್ಸವಾದಿ ಕಮ್ಯೂನಿಸ್ಟ ಪಕ್ಷಕ್ಕೆ ಸೇರಿದ ಒಬ್ಬ ಶಾಸಕ. ನಮ್ಮ ಮುಖಂಡರಾದ ಶ್ರೀ ಇ.ಎಂ.ಎಸ್. ಸಂಬೂದರಿಪಾಡ್ 1957ರಲ್ಲಿ ಒಂದು ಮಾತು ಹೇಳಿದರು. ಅವರು ಈ ದೇಶದ ನ್ಯಾಯಾಂಗ, ಒಂದು ವರ್ಗದ ಹಿತದೃಷ್ಟಿಯಿಂದ ಕಾಪಾಡತಕ್ಕ ನ್ಯಾಯಾಂಗ ವ್ಯವಸ್ಥೆ ಎಂದು ಹಳಿದಾಗ, ಅವರ ಮೇಲೆ ಸುಪ್ರೀಂ ಕೋರ್ಟನಲ್ಲಿ ನ್ಯಾಯಾಗಂ ನಿಂದನೆ ಮೊಕದ್ದಮೆಯನ್ನು ಹಾಕಲಾಯಿತು. ಆಗ ದೇಶದಲ್ಲಿದ್ದಂತಹ ಎಲ್ಲಾ ಕಾನೂನು ಪಂಡಿತರು, ರಾಜಕಾರಣಿಗಳೆಲ್ಲಾ ಆ ಬಗ್ಗೆ ಟೀಕೆ ಮಾಡಿದರು. ಕಮ್ಯೂನಿಸಟ್ಸ್‌ಗೆ ನ್ಯಾಯಾಂಗದಲ್ಲಿ ನಂಬಿಕೆ ಇಲ್ಲವೆಂದು ಅವರು ಟೀಕೆ ಮಾಡಿದರು. ನಾವು 1957ರಲ್ಲೇ ನ್ಯಾಯಾಂಗದಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದನ್ನು ಇವತ್ತು ಎಲ್ಲರೂ ಮಾತನಾಡುತ್ತಿದ್ದಾರೆ. ಈ ಬಗ್ಗೆ ನನಗೆ ಬಹಳ ಸಂತೋಷವಾಗುತ್ತಿದೆ. ಅದರ ಬಗ್ಗೆ ನಾನು ಒಂದೆರಡು ವಿಷಯವನ್ನಷ್ಟೇ ನಿಮ್ಮ ಮುಂದೆ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಒಂದು ಸಮಾಜದಲ್ಲಿ, ಈ ಇಡೀ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರತಕ್ಕ ಸಮಾಜದಲ್ಲಿ ನ್ಯಾಯಾಂಗ, ಕಾರ್ಯಾಂಗ, ಮತ್ತು ಶಾಸಕಾಂಗ ಇವೆಲ್ಲವೂ ಕೂಡ ಆಳುವ ವರ್ಗಗಳ ಹಿತರಕ್ಷಣೆಯನ್ನು ಮಾಡತಕ್ಕ ಅಂಗಗಳು ಎನ್ನತಕ್ಕದ್ದು ಸ್ಪಷ್ಟವಾಗಿ ಎಲ್ಲರೂ ತಿಳಿಯಬೇಕಾಗಿದೆ. ಅದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಚರಿತ್ರೆ ತೋರಿಸಿರತಕ್ಕ ಸತ್ಯ ಅದು. ಅದಕ್ಕೆ ಯುರೋಪಿನ ಫಿಲೋಸಫರ್ ಒಬ್ಬರು ಏನು ಹೇಳುತ್ತಾರೆ ಎಂದರೆ, Any Class Society, either judiciary or legislature or executive, will act according to the class interest of that class in that particular society. Our judiciary is the legacy of British Imperialism. But why we don't change it even after 48 years, because the class which were ruling then before Independence, is the same class ruling today in this country. That is why they are not intended to change the basic concept of judiciary in this country. Today the situation again has come, the same Philosopher says, whenever that bourgeous class feels that this judiciary and lelgislature cannot suit for their class interest definitely they will desert. That class itself will desert. ಆ ವರ್ಗವೇ ಅದನ್ನು ನಿರಾಕರಿಸುತ್ತದೆ. ಯಾವ ವರ್ಗ

ತನ್ನ ಹಿತಾಸಕ್ತಿಗಳಿಗೋಸ್ಕರ ಈ ದೇಶದಲ್ಲಿ ನ್ಯಾಯಾಂಗವನ್ನು, ಕಾರ್ಯಾಂಗವನ್ನು ಮತ್ತು ಶಾಸಕಾಂಗವನ್ನು ರಚನೆ ಮಾಡಿತ್ತೋ, ಆ ವರ್ಗದ ಹಿತಾಸಕ್ತಿಗಳಿಗನುಗುಣವಾಗಿ ಆ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ನಡೆಯದೇ ಇದ್ದಂತಹ ಸಂದರ್ಭದಲ್ಲಿ ಆ ವರ್ಗವೇ ಈ ಎಲ್ಲಾ ಸಮಸ್ಯೆಗಳನ್ನು ಕೂಡ ನಿರಾಕರಣೆ ಮಾಡುತ್ತದೆ.

MR. SPEAKER : This theory you are Advocating......

SRI G.V. SRIRAMA REDDY : Everybody is advocating

MR. SPEAKER : Legislature in India is the creation of the total will of all classes of people in this country. It is not created by just one class. The legislature has emerged on the Indian political horizon.

SRI G.V. SRIRAMA REDDY : My answer is, in the history of the Indian electorate, no time the polling crossed 70% of voters and the whole electoral system itself, it is the creation of the same democracy.

MR. SPEAKER : This amounts to denigrating the system, the system of which you are a party , of which you are a creation of which you have acquired the entitlement to be here.

SRI. G.V. SRIRAMA REDDY : Yes, I have no hesitation to say that I am totally denigrating the system itself. I have no hesitation at all. My point is, today judiciary has become totally mechnical. ಸನ್ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ. 1982ನೇ ಇಸವಿಯಲ್ಲಿ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟಿನಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಯ ಕೊಲೆಯಾಗಿತ್ತು. ಅದರ ಬಗ್ಗೆ ತೀರ್ಪನ್ನು ಕೊಡಬೇಕಾದರೆ ನ್ಯಾಯಾಧೀಶಕರು ಏನು ಬರೆಯುತ್ತಾರೆಂದರೆ,

``It is not the duty of the judge to find out who has committed the offence. It is only duty of the judge to examine whether the complaint made against the accused is right or wrong".

Today also the Supreme Court or any Court, they are all custodians of the legislations. Who is responsible for this legislation? We are only responsible. We have made the legislation. We brought Constitution. They are the custodians. But we have totally become mechanical in interpretation

of the Constitution we are totally mechanical in interpreting the judicial law, rule of law. There is no humanity. I am surprised that the mercy petition has been filed before the merciless judiciary. This is the it only. There is no humanity at all.

ಅಧ್ಯಕ್ಷರು : ಇಲ್ಲಿ ಮಾನ್ಯ ಕಾನೂನು ಮಂತ್ರಿಗಳು ಮಾತನಾಡುತ್ತಾ ಕೋಲಾರದವರೆಲ್ಲಾ ಹೀಗೆ ಮಾತನಾಡುವುದೆಂದು ಹೇಳುತ್ತಿದ್ದಾರೆ. ಆ ರೀತಿ ಮಾತನಾಡುವುದು ಕೋಲಾರದವರಲ್ಲ, ಕಮ್ಯುನಿಸ್ಟನವರು ಆ ರೀತಿ ಮಾತನಾಡುತ್ತಾರೆಂದು ಅವರಿಗೆ ನಾನು ಹೇಳಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೊಡಗಿನವರು ಇನ್ನು ಜಾಸ್ತಿ ಮಾತನಾಡುತ್ತಾರೆ.

An Hon. Members : Because they have been touched by the human feelings.

SRI G.V. SRIRAMA REDDY : We are all human beings without humanity. ಆದುದರಿಂದ, ಈ ನ್ಯಾಯಾಂಗದ ಪ್ರಸ್ತುತತೆ ಮತ್ತು ಅಪ್ರಸ್ತುತೆತೆ ಹಾಗೂ ಅದರ ಒಂದು ಯಾಂತ್ರೀಕೃತ ಮನೋಭಾವವೇನಿದೆ, ಅದರ ಬಗ್ಗೆ ಚರ್ಚೆಯಾಗಬೇಕೆನ್ನುವುದರಲ್ಲಿ ನಾನೂ ಕೂಡ ಪ್ರಪ್ರಥಮ ಮನುಷ್ಯ. ಅದನ್ನು ಚರ್ಚೆಗಷ್ಟೇ ಸೀಮಿತಗೊಳಿಸುವುದಾದರೆ ನಾನು ಒಪ್ಪುವುದಿಲ್ಲ. ಅದರ ಬದಲಾವಣೆಗೆ ನಾವೇನಾದರೂ ಪ್ರಯತ್ನಿಸುವುದಾದರೆ, ಈಗ ಇರತಕ್ಕಂಥ ಆ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುವುದಿದ್ದರೆ ನಾನೂ ಕೂಡ ಒಬ್ಬನಾಗಿದ್ದೇನೆ. ಕೇವಲ ಬರೀ ಅಕಾಡೆಮಿಕ್ ಇಂಟ್ರೆಸ್ಟಗೋಸ್ಕರ ಚರ್ಚೆ ಮಾಡಿ ಮತ್ತೆ ಆ ಚರ್ಚೆಯನ್ನು ಯಾರೋ ಒಬ್ಬರ ಹಿತಾಸಕ್ತಿಗೋಸ್ಕರ ಚರ್ಚಿಸುವಂತಾದ್ದು ಮತ್ತೆ ಇನ್ನೊಂದು ರೀತಿಯ ತಪ್ಪಾದಂತಾಗುತ್ತದೆ. ಏಕೆಂದರೆ, ಇದರ ಬಗ್ಗೆ ಕೆಲವರ ಅಭಿಪ್ರಾಯಗಳು ಬರುತ್ತಿವೆ. ಆ ಅಭಿಪ್ರಾಯಗಳು ಏನೆಂದರೆ, ಯಾವುದೇ ತೀರ್ಪು ತಮಗೆ ಅನುಕೂಲವಾಗಿ ಬಂದಾಗ ನ್ಯಾಯಾಂಗ ವ್ಯವಸ್ಥೆಯೇ ಉತ್ತಮವಾಗಿದೆಯೆನ್ನುತ್ತಾರೆ. ಒಂದು ವೇಳೆ ತಮಗೆ ಅನಾನುಕೂಲವಾಗಿ ತೀರ್ಪು ಬಂದಾಗ, ನ್ಯಾಯಾಂಗ ವ್ಯವಸ್ಥೆ ಕೆಟ್ಟಿದ್ದು ಎನ್ನುತ್ತಾರೆ. ಈ ರೀತಿಯ ಅಕಾಡೆಮಿಕ್ ಚರ್ಚೆ ಸರಿಯಲ್ಲ. ಈ ಇಡೀ ನ್ಯಾಯಾಂಗ ವ್ಯವಸ್ಥೆಯೇನಿದೆ, ಇದು ಹೋಗದೆ ನ್ಯಾಯಾಂಗದಲ್ಲಿರತಕ್ಕಂಥ ಬರೀ ಲೋಪ-ದೋಷಗಳಷ್ಟೇ ಹೋಗುತ್ತದೆಂದು ಯಾರಾದರೂ ಹೇಳಿದರೆ ಅದು ಖಂಡಿತಾ ಸಾಧ್ಯವಿಲ್ಲ. ನಿನ್ನೆ ಒಂದು ವಾದ ಬಂತು. ಬಡವರ ಬಗ್ಗೆ ಸುಪ್ರೀಂ ಕೋರ್ಟ ಅಥವಾ ಯಾವುದೇ ಕೋರ್ಟ ಆಗಲಿ ಯಾವತ್ತಾದರೂ ತೀರ್ಪು ಬಂದಿದೆಯೇ? ಕಾರ್ಮಿಕರ ಪರವಾಗಿ ತೀರ್ಪು ಬಂದಿದೆಯೇ? ನಿರುದ್ಯೋಗಿಗಳ ಪರವಾಗಿ ತೀರ್ಪು ಬಂದಿದೆಯೇ? ಖಂಡಿತಾ ಬಂದಿಲ್ಲ, ಇದು ವಾಸ್ತವ. ಅವರು ಬರೆಯಲಿಲ್ಲ, ನಿಜ. ಆದರೆ, ೪೮ ವರ್ಷಗಳಿಂದ ಶಾಸಕಾಂಗ, ಪಾರ್ಲಿಮೆಂಟ್ ಮತ್ತು ಯಾವುದೇ ಒಂದು ವಿಧಾನಸಭೆ ಸಹ ಉದ್ಯೋಗ ಒಂದು ಮೂಲಭೂತ ಹಕ್ಕು ಎಂದು ಎಲ್ಲಿಯೂ ಶಾಸನ ಮಾಡಲಿಲ್ಲ. ಯಾವ ಶಾಸಕಾಂಗವೂ ಮಾಡಿಲಿಲ್ಲ. ಬಡವರಿಗೆ ಅನ್ನು ಕೊಡುವುದನ್ನು ಕಾನೂನುಬದ್ಧವಾಗಿ ಯಾವ ಸರ್ಕಾರವೂ ಮಾಡಿಲ್ಲ. We cannot expect judiciary to do it.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನ್ಯಾಯಾಲಯದ ಹಾಗೂ ನ್ಯಾಯಾಧೀಶರ ತೀರ್ಪಿನ ಬಗ್ಗೆ ಮಾತನಾಡಬೇಕಾದರೆ ಬಹಳ ಎಚ್ಚರ ವಹಿಸುವುದು ಅಗತ್ಯವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಲಕ್ಷದಲ್ಲಿ ಒಬ್ಬ ತಾಯಿ ಕೆಟ್ಟವಳಿರಬಹುದು. ಆದರೆ, ತಾಯ್ತನವನ್ನೇ ಪ್ರಶ್ನಿಸುವುದಕ್ಕಾಗುವುದಿಲ್ಲ. ಆ ಹಿನ್ನೆಲೆಯಲ್ಲಿ ನಮಗೆ ಮಾತನಾಡಲು ಅವಕಾಶವಿದೆ. ಒಬ್ಬ ನ್ಯಾಯಾಧೀಶರ ಒಂದು ಕೊಲೆ ಮೊಕದ್ದಮೆ ಬಗ್ಗೆ ತೀರ್ಪು ಕೊಡಬೇಕಾಗುತ್ತದೆ. ಎಷ್ಟರಮಟ್ಟಿಗೆ ನಾವು ಸಾಕ್ಷ್ಯಾಧಾರಗಳನ್ನು ಒದಗಿಸಿಕೊಡುತ್ತೇವೆಯೋ ಅದರ ಆಧಾರದ ಮೇಲೆ ತೀರ್ಪು ನಿಂತಿರುತ್ತದೆ. ಕೆಳಗಿನ ಕೋರ್ಟು, ಮೇಲಿನ ಕೋರ್ಟು ಹಾಗೂ ಸುಪ್ರೀಂ ಕೋರ್ಟಿಗೂ ವ್ಯತ್ಯಾಸವಿರುತ್ತದೆಂದು ತಾವು ಬೆಳಿಗ್ಗೆ ಹೇಳಿದ್ದೀರಿ. ಆದರೆ, ಇವೊತ್ತಿನ ಚರ್ಚೆಯ ಲಹರಿ ಬೇರೆ ಕಡೆಗೆ ಹೋಗುತ್ತಿದೆ. ಅದನ್ನು ಸ್ವಲ್ಪ ಸರಿಪಡಿಸಿಕೊಳ್ಳಬೇಕು. ನೀವು ಮಾತನಾಡುತ್ತಿರುವುದು ಸರಿಯಾಗಿದೆ. ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗಗಳು ಯಾವ ರೀತಿಯಲ್ಲಿ ಬರುತ್ತಿದೆ ಎನ್ನುವುದನ್ನು ಬಿಚ್ಚು ಮನಸ್ಸಿನಿಂದ ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳುವ ಕಾಲ ಸನ್ನಿಹಿತರವಾಗುತ್ತಿದೆ. ಅದರ ಬಗ್ಗೆ ಎರಡು ಮಾತಿಲ್ಲ. ಇಲ್ಲದಿದ್ದರೆ, ಬಹುಶಃ ಮುಂದೆ ಬರುವ ದಿವಸಗಳಲ್ಲಿ ಅದರ ಬಗ್ಗೆ ಯಾರಿಗೂ ಕೂಡ ಭಯವಿಲ್ಲದಿರುವ ವಾತಾವರಣ ಸೃಷ್ಟಿಯಾಗಬಹುದು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಿತ್ರರು ಪ್ರಾರಂಭದಲ್ಲಿ ಮಾತನಾಡುತ್ತಾ ಹೇಳಿದರು. ಏನೆಂದರೆ, ನಾನು ಸೇರಿಸತಕ್ಕಂಥ ಪಕ್ಷ, ಮತ್ತು ನಮ್ಮ ಪಕ್ಷದ ಆ ಒಂದು ನೀತಿ, ಚಿಂತನೆ ಎಂದು. ಬಹುಶಃ ಅವರು ಹೇಳುತ್ತಿರುವಂತಾದ್ದು ಅವರ ಪಕ್ಷದ ಫಿಲಾಸಫಿ ಯಾವುದಿದೆ, ಅದಕ್ಕನುಗುಣವಾಗಿಯೇ ಅವರು ಮಾತನಾಡುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ, ಮಾನ್ಯ ಸಭಾಧ್ಯಕ್ಷರು ಹೇಳಿದಂತೆ ಒಂದು ವಿಚಾರವನ್ನು ತಾವು ಮರೆಯಬಾರದು. ಇವೊತ್ತು ಸದನದಲ್ಲಿ ಮಾತನಾಡತಕ್ಕಂಥ ಒಂದು ಅವಕಾಶವನ್ನು ತಾವು ಏನು ಪಡೆದುಕೊಂಡಿದ್ದೀರಿ, ಈ ಒಂದು ಅವಕಾಶ ಇದು ನಮ್ಮ ವ್ಯವಸ್ಥೆಗೆ ಆಧಾರವಾಗಿ ಬಂದಿರುವಂತಾದ್ದಾಗಿದೆ. ಆ ವ್ಯವಸ್ಥೆಯ ಆಧಾರ ಇಲ್ಲದೇ ಹೋಗಿದ್ದರೆ ತಾವು ಈ ಸದನಕ್ಕೆ ಬರುವಂಥ ಅವಕಾಶ ದೊರೆಯುತ್ತಿರಲಿಲ್ಲ ಮತ್ತು ಇಲ್ಲಿ ಮಾತನಾಡಲೂ ಕೂಡ ಅವಕಾಶ ಸಿಗುತ್ತಿರಲಿಲ್ಲ. ಆದುದರಿಂದ, ತಮ್ಮ ಪಕ್ಷದ ನೀತಿಯನ್ನು ತಾವು ಹೇಳುತ್ತಿರುವ ಕಾಲಕ್ಕೆ ಈ ಸಂದರ್ಭದಲ್ಲಿ ಈ ವ್ಯವಸ್ಥೆಯಿಂದ ತಾವು ಬಂದಿರತಕ್ಕಂಥಾದ್ದು, ಹಾಗೂ ಅದರ ಮುಖಾಂತರವೇ ಮಾತನಾಡುತ್ತಿರತಕ್ಕಂಥಾದ್ದು, ಬಹುಶಃ ಆ ವ್ಯವಸ್ಥೆಗೆ ಇರತಕ್ಕಂತಹ ಬದಲಿ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದಕ್ಕೆ ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನೂ ಕೂಡ ಅದನ್ನು ಒಪ್ಪುತ್ತೇನೆ. ನಾನು ಅದಕ್ಕೋಸ್ಕರವೇ ಹೇಳಿದ್ದುದು. when we accept a system, we have to go according to it. By accepting that system, living in the system and getting all facilities out of the system and again criticising it, is it not contradictory? I am not telling that. A discussion is coming out here, at least a portion of the House if not the whole House. I am definitely in agreement with you in what you are

telling. I may be following a philosphy and you may be following certain philosophy. All philosophies have evaluated on certain reasons. ನಾನು ಅದೇ ಅಂಶವನ್ನು ನಿಮಗೆ ಒಪ್ಪಿಸುವುದಕ್ಕೆ ಹೇಳುತ್ತಾ ಇರತಕ್ಕಂತಹದ್ದು. Rightly or wrongly, we have accepted the system and we are working in the system. As long as we are working, accept that system and go according to the rules. What right we have got to criticize it. We have no right. ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ವಾಸುದೇವನ್ ಜೈಲಿಗೆ ಹೋಗಬೇಕು, ಹೋಗಿದ್ದಾರೆ. ಮತ್ತೆ ಏತಕ್ಕೆ ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು?

SRI M.C. NANAIAH : There you are wrong. System is not wrong. We have accepted the system. I think that system is in accordance with certain principles and rules. But persons who are occupying the system, if they try to distort the system, then it is not the fault of the system as such, but it is the fault of the persons who are trying to distort the system. As such your philosophy of changing away the system, does not look sound.

SRI G.V. SRIRAMA REDDY : I am very sorry. Because we are all products of the system, The Hon'ble Minister cannot say that. We are all products of the system. Whether we agree it or not the whole system has influenced us, one way or the other. A judge cannot made out of an ivory tower. He has not fallen from heaven. He is also a product of the system. He is also a human being. He is also influenced by so many things. How can we accept that an individual alone can......

MR. SPEAKER : We will come back to track.

SRI G.V. SRIRAM REDDY : Yes. ಈ ನ್ಯಾಯಾಂಗ ಇಲಾಖೆಯಲ್ಲಿರತಕ್ಕಂಥ ಎಲ್ಲಾ ಬಲಹೀನತೆಗಳನ್ನು ಚರ್ಚೆ ಮಾಡುವುದು ತಪ್ಪು ಎಂದು ನಾನು ಖಂಡಿತವಾಗಿ ಹೇಳುವುದಿಲ್ಲ. ಆದರೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ, ಇದಕ್ಕೆ ಬದಲಿ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ, ನಾವು ಇದನ್ನು ಬಿಟ್ಟು ಹೋಗಬೇಕು ಎನ್ನತಕ್ಕಂಥದ್ದು ಸರಿಯಲ್ಲ. ಆದ್ದರಿಂದ ನಾನು ಹೇಳತಕ್ಕಂಥ ಕಡೆ ಅಂಶ ಇಷ್ಟೇ, ಇವೊತ್ತು ಯಾವ ಪರಿಸ್ಥಿತಿ ಉಂಟಾಗಿದೆಯೋ ಆ ಪರಿಸ್ಥಿತಿಗೆ ಕಾರಣಕರ್ತರನ್ನು ಮತ್ತು ಕಾರಣಗಳನ್ನು ಅದು ಸ್ಪಷ್ಟವಾಗಿ ತಿಳಿಯುತಕ್ಕಂಥ ಹಕ್ಕು ಈ ಸದನಕ್ಕೆ ಇದೆ. ಆ ಘಟನೆಗೆ ಕಾರಣಕರ್ತರಾಗಿರತಕ್ಕಂಥವರ ಬಗ್ಗೆ ಚರ್ಚೆ ಆಗತಕ್ಕಂಥ, ಟೀಕೆ ಆಗತಕ್ಕಂಥ ಅವಶ್ಯಕತೆ ಇದೆ ಅದರಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ ಎಲ್ಲಾ ಸರ್ಕಾರಗಳು ಹಿಂದಿನ ಸರ್ಕಾರವಿರಲಿ ಈಗಿನ ಸರ್ಕಾರವಿರಲಿ ಸಂಪೂರ್ಣವಾಗಿ ಎಡವಿದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಅದರ ಬಗ್ಗೆ ಚರ್ಚೆ ಆಗಬೇಕು ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಶ್ರೀಮತಿ ಪ್ರಮೀಳಾ ನೇಸರ್ಗಿ, ಲಾಸ್ಟ ಸ್ಪೀಕರ್

ಶ್ರೀ ಟಿ.ಬಿ. ಜಯಚಂದ್ರ : ಸನ್ಮಾನ್ಯ ಅಧ್ಯಕ್ಷರೇ ಐದು ನಿಮಿಷ..

ಅಧ್ಯಕ್ಷರು : ಎಂಡಲೆಸ್ ಆಗುತ್ತದೆ. Mr. Ramaswamy has also raised his hands. Your leaders have taken sufficient time. ತಾವು ಸಹಿ ಮಾಡಿಲ್ಲ ಆದ್ದರಿಂದ ತಾವು ಮಾತನಾಡುವ ಹಕ್ಕಿಲ್ಲ ಎಂದು ನಾನು ಹೇಳುತ್ತಿಲ್ಲ. ನಿಲುವಳಿ ಸೂಚನೆಗೋಸ್ಕರ ತಮ್ಮ ಮನಸ್ಸನ್ನು ಒಲಿಸುವುದಕ್ಕೋಸ್ಕರ ಬಹಳಷ್ಟು ಜನ ಮಾತನಾಡಿದ್ದಾರೆ. ನಮ್ಮ ಭಾವನೆ ಏನೆಂದರೆ ಅವರೆಲ್ಲಾ ನಿಮ್ಮ ಮನಸ್ಸನ್ನು ಒಲಿಸುವುದಕ್ಕೆ ಆಗಲಿಲ್ಲ. ನಾವು ಮಾತನಾಡಿದರೆ ಒಲಿಸುತ್ತೇವೆಂದು ನನಗನಿಸುತ್ತದೆ. ದಯಮಾಡಿ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಲಂಚಗೆ ಹೋದಾಗ ಅಲ್ಲಿ ಟ್ರೈ ಮಾಡಿದರೆ ಏನಾದರೂ ಆಗುತ್ತಿತ್ತೋ ಏನೋ?

ಶ್ರೀ ಎ.ಟಿ. ರಾಮಸ್ವಾಮಿ : ಸೂಚನೆಗೆ ತಾವು ಅಂಗಿಕಾರ ನೀಡಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಆಮೇಲೆ ನಾವು ಮಾತನಾಡುತ್ತೇವೆ.

ಅಧ್ಯಕ್ಷರು : ನೋಡೋಣ ರಾಮಸ್ವಾಮಿಯವರೇ, ಇನ್ನು ಬಹಳ ದಿವಸ ಹೋಗಬೇಕು ಅದೆಲ್ಲಾ ಮಾಡುವುದಕ್ಕೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೇ ನನಗನಿಸುತ್ತದೆ ಇವೊತ್ತು ಬಹಳ ಗಂಭೀರವಾದಂಥ, ಮುಖ್ಯವಾದಂಥ ಪ್ರಾಮುಖ್ಯವಾದಂಥ ವಿಷಯವನ್ನು ನಿಲುವಳಿ ಮುಖಾಂತರ ತಮಗೆ ಕಳುಹಿಸಿಕೊಟ್ಟಿದ್ದೇವೆ. ಅದನ್ನು ಸಂಪೂರ್ಣವಾಗಿ ನಾನು ಬೆಂಬಲಿಸುತ್ತೇನೆ. ಆದರೆ ಮಾತನಾಡತಕ್ಕಂಥ ಸಂದರ್ಭದಲ್ಲಿ " ignorance of law is no excuse" ಎನ್ನತಕ್ಕಂಥ ಮಾತನ್ನು ಕಾನೂನು ಸಚಿವರು ಹಾಗೂ ಬೇರೆಯವರು ಹೇಳಿದ್ದಾರೆ. ಆದರೆ ಕಾನೂನನ್ನು ತಿಳಿಯದೇ ಇರತಕ್ಕಂಥವರು ಅಥವಾ ತಿಳಿದು ತಿಳಿಯದೋ ಈ ಸದನವನ್ನು ಮಿತಿ ಮೀರಿ, ವಿಷಯಕ್ಕೆ ವಿಷಯಾಂತರ ಮಾಡಿಕೊಂಡು ಸಂದರ್ಭೋಚಿತವಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಪಾರ್ಲಿಮೆಂಟಿನ ಚೌಕಟ್ಟಿನಲ್ಲಿ ಯಾವ ವಿಷಯ ಮಾತನಾಡಬೇಕೋ ನ್ಯಾಯಾಂಗದ ವಿಷಯ ಯಾವುದಾದರೂ ಅಮೆಂಡಮೆಂಟ್ ಏನಾದರೂ ಆಗಬೇಕಾದರೆ ಇವೊತ್ತು ರಾಜ್ಯಾಂಗ ಅಮೆಂಡಮೆಂಟ್ ಮಾಡಬೇಕು, ಸಿಸ್ಟಮ್ ಬದಲಿಸಬೇಕು ಎಂದು ಹೇಳುತ್ತಿದ್ದಾರೆ. ಆ ವಿಷಯ ನಮಗೆ ಸೀಮಿತವಾಗತಕ್ಕಂಥದ್ದಲ್ಲ, ನಮ್ಮ ಈ ಒಂದು ಚರ್ಚೆನಲ್ಲಿ, ಚೌಕಟ್ಟಿನಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ವಿಷಯವನ್ನು ವಿಷಯಾಂತರ ಮಾಡಿ ಮಾತನಾಡಿದ್ದಾರೆ. ಅದಕ್ಕೋಸ್ಕರ ಸಭಾಧ್ಯಕ್ಷರು ಅಂತಹ ವಿಷಯಗಳೇನಾದರೂ ಬಂದಿದ್ದರೆ, ತಾವು ತರಿಸಿಕೊಂಡು ನ್ಯಾಯಾಂಗಕ್ಕೆ ಧಕ್ಕೆ ಬರತಕ್ಕಂಥ ವಿಷಯ ಏನಾದರೂ ಬಂದಿದ್ದರೆ, ಅದನ್ನು ಪರಾಂಭರಿಸಬೇಕು ಅದನ್ನು ತೆಗೆಸಬೇಕು ಎಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ

ಏನೂ ಕೂಡ ತೀರ್ಮಾನವೇ ತಂದಿಲ್ಲವೆಂದು ಹೇಳಿದರು. ನಾನು ಒಂದು ವಿಷಯವನ್ನು ಕೇಳುವುದಕ್ಕೆ ಇಷ್ಟು ಪಡುತ್ತಿದ್ದೇನೆ. ಒಂದು ವೇಳೆ ಸುಪ್ರೀಂ ಕೋರ್ಟನಲ್ಲಿ ಇವೊತ್ತು ಡೈಲಿ ವೇಜಸ್ ಎಂಪ್ಲಾಯಿಸಗೆ 240 ದಿವಸ ಕೆಲಸ ಮಾಡಿದವರಿಗೆ ಕೆಲಸ ಕೊಡಬೇಕೆಂದು ತೀರ್ಮಾನ ಕೊಡದೇ ಇದ್ದಿದ್ದರೆ, ನಮ್ಮಲ್ಲಿರತಕ್ಕಂಥ ಒಂದು ಲಕ್ಷಕ್ಕಿಂತ ಮಿಗಿಲಾದ ಕಾರ್ಮಿಕರು ಎಲ್ಲಿ ಹೋಗುತ್ತಿದ್ದರು ಎನ್ನುವಂಥ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಏರಹೋಸ್ಟೆಸ್ ಕೇಸನಲ್ಲಿ ಮಹಿಳೆಯರೂ ಕೂಡ ಮಹನೀಯರ ಹಾಗೆ equality before law ಎಂದು ತೀರ್ಪು ಕೊಡದೇ ಇದ್ದಿದ್ದರೆ, ಮಹಿಳೆಯರು ಎಲ್ಲಿಗೆ ಹೋಗಬೇಕು ಎನ್ನತಕ್ಕಂಥದ್ದನ್ನು ತಾವು ಇವೊತ್ತು ನೋಡಬೇಕಾಗಿದೆ. ಇವೊತ್ತಿನ ದಿವಸ ಗುಡಿಸಲು ನಿವಾಸಿಗಳು ಬೊಂಬಾಯಿನಲ್ಲಿ ರೋಡಿನಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡಿರತಕ್ಕಂಥ ಸಂದರ್ಭದಲ್ಲಿ ಬೊಂಬಾಯಿ ಸರ್ಕಾರ ಅವರೆನ್ನೆಲ್ಲಾ ಎತ್ತಿ ಹಾಕತಕ್ಕಂಥ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನವನ್ನು ಕೊಟ್ಟು ಗುಡಿಸಲು ನಿವಾಸಿಗಳಿಗೆ ಉಳಿಯತಕ್ಕಂಥ ಹಕ್ಕನ್ನು right to live ಎಂದು ಹೇಳಿ ಆರ್ಟಿಕಲ್ 21 ಇಂಟರ್ ಪ್ರಿಟ್ ಮಾಡದೇಹೋಗಿದ್ದರೆ ಇವೊತ್ತು ಗುಡಿಸಲು ನಿವಾಸಿಗಳು ಕರ್ನಾಟಕದಲ್ಲೇ ಅಲ್ಲ ಇಡೀ ಭಾರತದೇಶದಲ್ಲಿಯೇ ರಕ್ಷಣೆ ಸಿಗುತ್ತಿರಲಿಲ್ಲ. ಅಂತಹ ಘನವಆದ ತೀರ್ಪು ಇವೊತ್ತಿದಿವಸ ಸುಪ್ರೀಂ ಕೋರ್ಟ ಕೊಟ್ಟಿದೆ. ಸುಪ್ರೀಂ ಕೋರ್ಟಿದಂತಹ ನ್ಯಾಯಾಂಗ ಇವೊತ್ತು ಇಲ್ಲದೇ ಹೋದರೆ ಇವೊತ್ತು ದೇಶ ಇರುವುದಕ್ಕೆ ಆಗುತ್ತಿರಲಿಲ್ಲ. Rule of law ಎನ್ನತಕ್ಕಂಥದ್ದು ಎಲ್ಲರಿಗಿಂತ ಮಿಗಿಲಾದುದು. ಈ ಸದನ ಅದಕ್ಕೆ ಹೊರತಾದುದಲ್ಲ. ಅಥವಾ ಈ ಸದನದ ಸದಸ್ಯರು ಹಿಡಿಯಬೇಕಾದರೆ ಒಂದು separation of powers ಏನು ಇದೆ ರಾಜ್ಯಾಂಗ, ಕಾರ್ಯಾಂಗ ಶಾಸಕಾಂಗ ಅವು, ಅವುಗಳ ಚೌಕಟ್ಟಿನಲ್ಲಿ ಕೆಲಸ ಮಾಡಿದಾಗ ಮಾತ್ರ ಸಾದ್ಯ. ಅದನ್ನು ಇನ್ನೊಬ್ಬರು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥದ್ದನ್ನು ನಾವು ಅರಿತುಕೊಂಡು ಆ ಜವಾಬ್ದಾರಿಯನ್ನು ನಾವು ಅರಿತುಕೊಂಡು ಈ ವಿಷಯದನಿರೂಪಣೆಯನ್ನು ನಾವು ಹೇಗೆ ಮಾಡಬೇಕು ಯಾವ ರೀತಿ ಇದನ್ನು ಸಮರ್ಥನೆ ಮಾಡಬೇಕು ಯಾವ ಕಾರಣಕೋಸ್ಕರ ಈ ವಿಷಯವನ್ನು ನಾವು ತೀರ್ಮಾನವನ್ನು ಮಾಡಬೇಕು ಎನ್ನುವುದನ್ನು ನಾವು ತೀರ್ಮಾನ ಮಾಡಬೇಕಾಗಿದೆ. ಇವೊತ್ತಿನದಿವಸ ಹೈಕೋರ್ಟ ಇಲ್ಲದಿದ್ದರೆ, ಸುಪ್ರೀಂಕೋರ್ಟ ಇಲ್ಲದಿದ್ದರೆ ಎಮರ್ಜೆನ್ಸಿ ಪೀರಿಯಡನಲ್ಲಿ ಸತ್ತು ಹೋದಂಥ ಸಂದರ್ಭದಲ್ಲಿ ಪೆರೋಲ್ ಎನ್ನತಕ್ಕಂಥದ್ದು ಇಲ್ಲದೇ ಹೋಗಿದ್ದರೆ ಸಹಸ್ರಾರು ಜನ ಜೈಲಿನಲ್ಲಿ ಇರಬೇಕಾದಂಥ ಪರಿಸ್ಥಿತಿ ಒದಗಿ ಬರುತ್ತಿತ್ತು. ನಮ್ಮ ಜೀವನ ಕೂಡ ರಕ್ಷಣೆ ಮಾಡಿಕೊಳ್ಳದೇ ಇರಬೇಕಾದಂಥ ಪರಿಸ್ಥಿತಿ ಇವೊತ್ತು ಒದಗಿ ಬರುತ್ತಿತ್ತು. ಆ ಕಾರಣ ಈಗ ನಾವು ಮತ್ತೇ ಸತ್ಯಯುಗಕ್ಕೆ ಹೋಗಬೇಕಾಗಿದೆ. ಸನ್ಮಾನ್ಯ ಸದಸ್ಯರೇ ಆವಾಗ ಸತ್ಯಯುಗ ಎಂದು ಒಂದು ಕಾಲ ಇತ್ತು. ಪೋಲೀಸರು ಇರಲಿಲ್ಲ. ಆ ಕಾಲದಲ್ಲಿ ಪೋಲೀಸನವರು ಬೇಕಾದಂಥ ಸಂದರ್ಭಕೂಡ ಇರಲಿಲ್ಲ ಏಕೆಂದರೆ ಕಾನೂನು, ಶಾಂತಿ, ಸುವ್ಯವಸ್ಥೆ ತನ್ನಷ್ಟಕ್ಕೆ ತಾನೇ ಮನೆ ಮಾತಾಡಿಕೊಂಡಿತ್ತು. ಕಾಲ ಕಾಲಾನಂತರ ಆ ಪರಿಸ್ಥಿತಿ ಬದಲಾಗಿ ಕಾನೂನುಗಳು ಹೆಚ್ಚಾಗಿ ಆ ಕಾನೂನುಗಳನ್ನು ತರಬೇಕಾದಂಥ ಪ್ರಮೇಯ ಬಂದಾಗ, ಆ ಒಂದು ನ್ಯಾಯಾಂಗ ಬರಬೇಕಾದಂಥ ಪರಿಸ್ಥಿತಿ ಬಂತು. ಅದನ್ನು ನಾವು ಇವೊತ್ತು ಯೋಚನೆ ಮಾಡಬೇಕಾಗಿದೆ. 1950ನೇ ಇಸವಿಗಿಂತ ಮುಂಚೆ ಡಾಥ ಅಂಬೇಡ್ಕರರವರು ಈ

ರಾಜ್ಯಾಂಗವನ್ನು ತರತಕ್ಕಂಥ ಸಂದರ್ಭದಲ್ಲಿ ಇವೆಲ್ಲವ್ನು ಪರಿಸ್ಥಿತಿಯನ್ನು ಮನಗಂಡು ಪವಿತ್ರವಾದಂಥ ರಾಜ್ಯಾಂಗ ಗ್ರಂಥವನ್ನು ನಮಗೆ ತಂದುಕೊಟ್ಟಿದ್ದಾರೆ. ಆ ಗ್ರಂಥದ ಪ್ರಕಾರ, ಆ ಕಾನ್ಸಿಟಿಟ್ಯೂಷನ್ ಪ್ರಕಾರ ನಾವು ಇವೊತ್ತಿದಿವಸ ಕೆಲಸ ಮಾಡಬೇಕಾಗಿದೆ. ಅದು ಶಾಸಕಾಂಗವಾಗಲಿ, ರಾಜ್ಯಾಂಗವಾಗಲಿ ಅಥವಾ ನ್ಯಾಯಾಂಗವಾಗಲಿ ಅದಕ್ಕೆ ಹೊರತಾಗಿ ಯಾರೂ ಕಡೂ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಭಾಧ್ಯಕ್ಷರೇಟ್ವೊತ್ತು ನಾವು ಎಲ್ಲರೂ ಕೂಡ ಶಾಸಕರಾಗಿ ಬಂದಾಗ, ಈ ಒಂದು ರಾಜ್ಯಾಂಗದ ಪ್ರಕಾರ ನಾವು ಇವೊತ್ತು ಪ್ರಮಾಣವಚನ ತೆಗೆದುಕೊಂಡಿದ್ದೇವೆ. ಮುಖ್ಯಮಂತ್ರಿಗಳೂ ತೆಗೆದುಕೊಂಡಿದ್ದಾರೆ. ಏನು ತೆಗೆದುಕೊಂಡಿದ್ದಾರೆ with out fear or favour ಕಾನೂನಿಗೆ ಅನುಗುಣವಾಗಿ ರಾಜ್ಯಾಂಗದತ್ತವಾಗಿ ಕೊಟ್ಟಿರತಕ್ಕಂಥ ಕಾನೂನು ಪ್ರಕಾರವಾಗಿ ಅದಕ್ಕೆ ಸಮನಾಗಿ ನಾವು ನಡೆಸಿಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಪ್ರಮಾಣವನ್ನು ಬೋಧಿಸಿದ ನಂತರ ಇಲ್ಲಿ ಸರ್ಕಾರ ಬಂದಿದೆ ಎನ್ನತಕ್ಕಂಥದ್ದನ್ನು ಯಾರೂ ಕೂಡ ಮರೆಯಬಾರದು. ಅಂದಮೇಲೆ ಮಾನ್ಯ ಸಭಾಧ್ಯಕ್ಷರೇ ನಾನು ಇವೊತ್ತಿನದಿವಸ ಕೇಳುತ್ತಿದ್ದೇನೆ, ಆರ್ಟಿಕಲ್ 19 ಮೂಲಭೂತ ಹಕ್ಕು ಏನು ನಮಗೆ ಕಾನೂನಿನಲ್ಲಿ ಕೊಟ್ಟಿದ್ದಾರೆ. ದಯವಿಟ್ಟು ತಾವು ಮತ್ತೊಮ್ಮೆ ಪರಾಂಬರಿಸಬೇಕು. ಈ ಆರ್ಟಿಕಲ್ 19 ನಲ್ಲಿ 19(2) ರಲ್ಲಿ ಏನು ಹೇಳಿದೆ ಎಂದರೆ ಎಲ್ಲಾ ಮಾತನಾಡತಕ್ಕಂಥ ಹಕ್ಕನ್ನು ಕೊಟ್ಟು, ರಾಜ್ಯಾಂಗದಲ್ಲಿ ಮತ್ತೊಂದು ಹಕ್ಕನ್ನು ಆರ್ಟಿಕಲ್ 19(2) ಕಲಂನಲ್ಲಿ ಕೊಟ್ಟಂಥ ಸಂದರ್ಭದಲ್ಲಿ ಏನು ಹೇಳಿದರು ಎಂದರೆ :

``Nothing in sub-clause (a) of clause (1) shall affect the operation of any existing law, or prevent the State from making any law, in so far as such law imposes reasonable restrictions on the exercise of the right conferred by the said sub-clause in the interests of the sovereignty and integrity of India, the security of the State, friendly relations with foreign States, public order, decency or moraligy, or in relation to contempt of court". ಇವೊತ್ತು ಯೋಚನೆ ಮಾಡಬೇಕಾದ ವಿಷಯ. ಆರ್ಟಿಕಲ್ 19(2) ರಲ್ಲಿ ಕಂಟಫ್ಟ ಆಫ್ ಹೌಸ್ ಎನ್ನತಕ್ಕಂಥ ಶಬ್ಧವನ್ನು ಉಪಯೋಗ ಮಾಡಲಿಲ್ಲ. ಕಂಟೆಪ್ಟ ಆಫ್ ಹೌಸಗೆ ಕಾನೂನು ಮಾಡತಕ್ಕಂಥ ಶಕ್ತಿ ಇದೆ ಎನ್ನತಕ್ಕಂಥ ಕಾನೂನನ್ನು ಆರ್ಟಿಕಲ್ 19(2)ರಲ್ಲಿ ಕೊಟ್ಟಿಲ್ಲ. ಆದರೆ ಕಂಟೆಪ್ಟ ಕೋರ್ಟ್ ಮಾತ್ರ ರಾಜ್ಯಾಂಗದತ್ತವಾಗಿ ಕೊಟ್ಟಿದ್ದಾರೆ. ಆರ್ಟಿಕಲ್ 19(2)ರ ಪ್ರಕಾರವಾಗಿ ಇವೊತ್ತು ಕಾನೂನು ತಂದಿದ್ದಾರೆ. ಕಂಟೆಪ್ಟ ಆಫ್ ಕೋರ್ಟ ಎನ್ನತಕ್ಕಂಥ ಕಾನೂನು ಇವೊತ್ತು ಜಾರಿಯಲ್ಲಿದೆ ಎನ್ನತಕ್ಕಂಥ ವಿಷಯವನ್ನು ತಾವು ಎಲ್ಲರೂ ಕೂಡ ತಿಳಿದುಕೊಳ್ಳಬೇಕು. ಅಂದರೆ ಯಾರಾದರೂ ಅದಕ್ಕೆ ವಿರುದ್ಧವಾಗಿ ಮಾತನಾಡಿದರೆ, ಅಥವಾ ಆ ಜಡ್ಜೆಮೆಂಟಗೆ ವಿರುದ್ಧವಾಗಿ ಮಾತನಾಡಿದರೆ, ಆ ಕಂಟೆಪ್ಟ ಆಫ್ ಕೋರ್ಟ ಎನ್ನತಕ್ಕಂಥ ಕಾನೂನು ಏನು ಆರ್ಟಿಕಲ್ 19(2) ಪ್ರಕಾರ ತಂದಿದ್ದಾರೆ, ಅದಕ್ಕೆ ವಿರುದ್ಧವಾದಂಥ ಮಾತಾಗುತ್ತದೆ ಆದುದರಿಂದ ಇವೊತ್ತು ಸಭಾಧ್ಯಕ್ಷರು ಹಾಗೂ ಇಲ್ಲಿದ್ದವರೆಲ್ಲಾ ಗಮನಿಸಬೇಕಾದ ಅಂಶ ಆರ್ಟಿಕಲ್ 19(2)ಕಂಟೆಪ್ಟ ಆಫ್ ಕೋರ್ಟ ಎನ್ನತಕ್ಕಂಥದ್ದು ಒಂದೇ ಮಾತನ್ನು ನಾನು ಇವೊತ್ತು ಉಚ್ಚಾರ ಮಾಡುತ್ತಿಲ್ಲ. ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನ ದಿವಸ ಒಂದು ವಿಚಾರವನ್ನು ಮಾನ್ಯ ಸೋಮಶೇಖರರವರು ಹಾಗೂ ಮೋಯಿಲಿಯವರು ಹೇಳಿದ್ದಾರೆ. ಆದರೆ

ಎಲ್ಲರ ಗಮನಕ್ಕೆ ಬರಬೇಕಾದಂಥ ಒಂದೇ ಒಂದು ವಿಷಯವೇನೆಂದರೆ ಶ್ರೀಮಾನ್ ಧನಂಜಯರವರು ಇಬ್ಬರು ಮೂರು ಜನ 1972ನೇ ಇಸವಿಯಿಂದ ಒಂದೇ ದಿವಸ ಕೆಲಸಕ್ಕೆ ಸೇರಿದ್ದು, ಇವೊತ್ತಿನವರೆಗೂ ಕೂಡ ಅವರ ಜೊತೆಯಲ್ಲಿದ್ದವರು ಎಕ್ಸಿಕ್ಯೂಟಿವ್ ಇಂಜಿನಿಯರಾಗಿ ಆಗಿ ಇಂಡಿಪೆಂಡೆಂಟ್ ಚಾರ್ಜ ಆಗಿ ಎಕ್ಸಿಕ್ಯೂಟಿವೇ ಇಂಜಿನಿಯರರಾಗಿ ಅವರಗಿಂತ ಕೆಳಗೆ ಬಂದಿರತಕ್ಕಂಥ ರಾಮೇಗೌಡರರಿಗೆ ಪಾರ್ಥಸಾರಥಿಯವರು ಜಾಗದಲ್ಲಿ ಕೊಟ್ಟಿದ್ದಾರೆ. ಆದರೆ ಧನಂಜಯರವರಿಗೆ ಸೂಪರನ್ಯೂಮರಿ ಪೋಸ್ಟದು ಹೇಳಿ ಅವರಿಗೆ ಇಂಡಿಪೆಂಡೆಂಟ್ ಆಗಿ ಕೊಟ್ಟಿಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗಿದೆ. ಸುಪ್ರೀಂ ಕೋರ್ಟ ಆರ್ಡರ್ ಏನಾಯಿತು? ಅವರು ಕೋರ್ಟಿಗೆ ಯಾವ ಸಂದರ್ಭದಲ್ಲಿ ಹೋದರು. ಚೀಫ್ ಇಂಜಿನಿಯರಾಗಿ ಕೊಡಿ ಎಂದು ಅವರು ಹೋಗಲಿಲ್ಲ ಶ್ರೀಮಾನ್ ದಾಸೇಗೌಡರವರನ್ನು ಕಾರ್ಪೋರೇಷನ್ ಅಧಿಕಾರಿ ಅಲ್ಲದೇ ಇರುವವರನ್ನು ಕಾರ್ಪೋರೇಷನನಲ್ಲಿ ತೆಗೆದುಕೊಂಡು ಹೋಗಿ, ಹಾಕಿದಂಥ ಸಂದರ್ಭದಲ್ಲಿ ಡೆಪ್ಯೂಟೇಷನ್ ಹಾಕಿದ್ದು ತಪ್ಪ ಎಂದವು ಹೇಳಿ ಶ್ರೀಮಾನ್ ಧನಂಜಯರವರು ಕೋರ್ಟಿಗೆ ಹೋದರು. ಅದೇ ಪ್ರಕಾರವಾಗಿ ಕೋರ್ಟಿನಲ್ಲಿ ಹೋಗಿ ಏನು ಕೇಳಿದರು ದಾಸೇಗೌಡರವರಿಗೆ ಅಧಿಕಾರ ಇಲ್ಲದೇ ಇದ್ದರೂ ಕೂಡ ಕಾರ್ಪೋರೇಷನನಲ್ಲಿ ಚೀಫ್ ಇಂಜಿನಿಯರರಾಗಿ ಕೊಟ್ಟಿದ್ದೀರಿ, ಅದು ಅಕ್ಷಮ್ಯ ಅಪರಾಧ, ಕೊಡಬಾರದಿತ್ತು ನಾವೆಲ್ಲಾ ಇರುವಾಗ ತರಬಾರದಾಗಿತ್ತು ಆದುದರಿಂದ ಅವರ ಬದಲು ಅವರ ಅರ್ಡರನ್ನು ರದ್ದುಪಡಿಸಿ, ಅವರನ್ನು ವಾಪಸ್ಸು ಕಳುಹಿಸಿ ಕಾನ್ಸಿಕ್ವೆನಷಿಯಲ್ ಬೆನಿಫಿಟ್ಸ ಕೊಡಿ ದಾಸೇಗೌಡರವನ್ನು ನೀವು ಯಾವತ್ತಿನ ದಿವಸ ಡೆಪ್ಯೂಟೇಷನಮೇಲೆ ಕಳುಹಿಸಿದ್ದೀರೋ, ಅವೊತ್ತಿನ ತಾರೀಖಿನಿಂದ ಕಾನ್ಸಿಕ್ವೆನ್ ಷಿಯಲ್ ರಿಲೀಫ್ ಕೊಡಿ ಎಂದು ಕೇಳಿದರು, ಅದನ್ನು ಕೋರ್ಟ ಪುರಸ್ಕರಿಸಿತು. ಪುರಸ್ಕರಿಸಿತು ಅಷ್ಟೇ ಅಲ್ಲ, ದಾಸೇಗೌಡರು ಯಾವತ್ತು ಇಂಜಿನಿಯರ್ ಆಗಿದ್ದರೋ ಆ ತಾರೀಖಿನಿಂದ ಇವೊತ್ತು ಧನಂಜಯರವರಿಗೆ ಬೇಕಾದಂಥ ಕಾನ್ಸಿಕ್ವೆನಷಿಯಲ್ ಬೆನಿಫಿಟ್ ಕೊಡಬೇಕಾಗಿತ್ತು. ಮಾನ್ಯ ಸಭಾಧ್ಯಕ್ಷರೇ ಅದನ್ನು ನಾನು ಇವೊತ್ತಿನವರೆಗೆ ಕೊಟ್ಟಿಲ್ಲ. ದಾಸೇಗೌಡರವರು ಕಾರ್ಪೋರೇಷನನಲ್ಲಿ ಅಧಿಕಾರಿಯಾಗಿ ಯಾವತ್ತು ಹೋದರೋ ಆವತ್ತಿನಿಂದ ಕೊಡಿ ಎಂದು ಸುಪ್ರೀಂ ಕೋರ್ಟ ಹೇಳಿದರೂ ಸಹ ಕಂಟೆಪ್ಟ ಆಫ್ ಕೋರ್ಟ ಆಗಿ ಜೈಲು ಅನುಭವಿಸುವಂತಾದರೂ ಕೂಡ, ಇವೊತ್ತಿನವರೆಗೂ ಅದನ್ನು ಚಾಲನೆಗೆ ತಂದಿಲ್ಲ. ಇದಕ್ಕೆ ಕಾರಣಕರ್ತರು ಯಾರು ಎಂದು ಇವೊತ್ತಿನ ದಿವಸ ಕೇಳಬೇಕಾಗಿದೆ. ಅವರು ಕೇವಲ ಒಬ್ಬ ಷೆಡ್ಯೂಲಕಾಸ್ಟ ಆಗಿ ಹೋರಾಟ ಮಾಡಿ 22 ವರ್ಷಗಳ ಕಾಲ ಹೋರಾಟ ಮಾಡಿದಕ್ಕೋಸ್ಕರ ಪ್ರತಿಫಲ ದೊರೆತಿದೆಯಾ ಎನ್ನತಕ್ಕಂಥ ವಿಷಯವನ್ನು ಇವೊತ್ತು ನೋಡಬೇಕಾಗಿದೆ. ಸುಪ್ರೀಂ ಕೋರ್ಟನಲ್ಲಿ ಬಂದ ನಂತರ ಮತ್ತೆ ಎರಡು ವಿಷಯಗಳು ಬಂತು. ಭೋಜರಾಜರವರು ಪ್ರಮೋಷನ್ ಆದಾಗ, ಮತ್ತು ವೆಂಕಟೇಶರವರು ಪ್ರಮೋಷನ್ ಆದಾಗ, ಮತ್ತೆ ಅವರು ಅರ್ಜಿ ಹಾಕಬೇಕಾಯಿತು. ಯಾಕೆ, ಸುಪ್ರೀಂ ಕೋರ್ಟಿನಲ್ಲಿ ಈಗಾಗಲೇ ತೀರ್ಮಾನ ಮಾಡಿದ್ದಾರೆ ಆ ಕಾರಣ ಅವರ ಬದಲು ನನಗೆ ಕೊಡಬೇಕೆಂದು ಕೇಳಿದರು. ಕೊಡಲಿಲ್ಲ ಜಡ್ಜಮೆಂಟ ವಿರುದ್ಧವಾಯಿತು.

3.50 ಪಿ.ಎಂ

ಮತ್ತೆ ಸುಪ್ರೀಂ ಕೋರ್ಟಿಗೆ ಹೋದರು ಎಂದು ಹೇಳಿದ್ದೀರಿ.Consequential benefits ಕೊಡಿ ಎಂದು ಹೇಳಿದ್ದೀರಿ. ಇಷ್ಟು ವರ್ಷಗಳಾಗಿದೆ ನನಗೆ ಕೊಟ್ಟಿಲ್ಲ. ಈ ರೀತಿಯಾಗಿ ಹೈಕೋರ್ಟಿಗೆ

ಹೋದರೆ ಅಲ್ಲೂ ಕೂಡ ನ್ಯಾಯ ಸಿಗುತ್ತಿಲ್ಲ, ಆದ್ದರಿಂದ ನ್ಯಾಯ ದೊರಕಿಸಿಕೊಡಿ ಎಂದು ಕೇಳಿದರು. ಆಗ ಕ್ಲಾರಿಫಿಕೇಷನಗಾಗಿ ಇಂಟಿರಿಯಮ್ ಅಪ್ಲಿಕೇಷನ್ ಹಾಕಿದಾಗ, ಸುಪ್ರೀಂ ಕೋರ್ಟ ಕ್ಲಾರಿಫಿಕೇಶನ್ ಕೊಟ್ಟರು, ಸೂಪರ್-ನ್ಯೂಮರರಿ ಪೋಸ್ಟನ್ನು ಕ್ರಿಯೇಟ್ ಮಾಡಿಕೊಡಿ ಎಂದು ಹೇಳಿದರು. ಆದರೆ ಇವೊತ್ತು ಹೇಳುತ್ತಿದ್ದಾರೆ. ಹಿಂದಿನ ಸರ್ಕಾರದವರು ನಾವು ಜವಾಬ್ದಾರರಲ್ಲ, ನಾವು ಎಲ್ಲವನ್ನೂ ಸರಿಯಾಗಿ ಮಾಡಿಬಿಟ್ಟಿದ್ದೇವೆ, ಇದರ ಬಗ್ಗೆ ನಮಗೇನೂ ಸಂಬಂಧವಿಲ್ಲ, ಆದರೆ ಈಗಿನ ಸರ್ಕಾರ ಆ ಕೆಲಸವನ್ನು ಮಾಡಬೇಕಾಗಿತ್ತು ಎನ್ನುತ್ತಾರೆ. ಆದೆ ಮಾನ್ಯ ಸಭಾಧ್ಯಕ್ಷರೇ, ನಾನು ಕೇಳುತ್ತಿದ್ದೇನೆ, 1993 ನೇ ಇಸವಿಯಲ್ಲಿ ಕಾರ್ಪೊರೇಷನ್‌ನವರಿಗೆ ಇದನ್ನು ಮಾಡುವುದಕ್ಕೆ ಅಧಿಕಾರವಿಲ್ಲವೆಂದು ಶ್ರೀಮಾನ್ ವೀರಪ್ಪಮೊಯ್ಲಿಯವರು ಹೇಳಿದರು. ಕಾರ್ಪೊರೇಷನರವರಿಗೆ ರೆಸಲ್ಯೂಷನನ್ನು ಮಾಡುವುದಕ್ಕೆ ಅಧಿಕಾರವಿಲ್ಲ ಅದಕ್ಕೋಸ್ಕರ ನಮ್ಮ ಕಮಿಷನರ್‌ರವರಿಗೆ ಶೋಕಾಸ್ ನೋಟಿಸನ್ನು ಕೊಟ್ಟರು, ಇದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ನಾನು ಕೇಳುತ್ತಿದ್ದೇನೆ, ರಾಜ್ಯ ಸರ್ಕಾರವೂ ಕೂಡ ಕಾರ್ಪೊರೇಷನ್ ಜೊತೆ ಪಾರ್ಟಿಯಾಗಿರಲಿಲ್ಲವೇ? ಕಾರ್ಪೊರೇಷನರವರಿಗೆ ಅಧಿಕಾರವಿರಲಿಲ್ಲ ನಿಜ, ಆದರೆ ನೀವೇನು ಮಾಡುತ್ತಿದ್ದಿರಿ? ನೀವು ಏತಕ್ಕೆ ಸುಪ್ರೀಂ ಕೋರ್ಟ ಆರ್ಡರನ್ನು ಒಬೆ ಮಾಡಲಿಲ್ಲ. ಈ ಸೂಪರ್ ನ್ಯೂಮರರಿ ಪೋಸ್ಟನ್ನು ಕ್ರಿಯೇಟ್ ಮಾಡುವ ಬಗ್ಗೆ.

ಅಧ್ಯಕ್ಷರು : ಐ.ಎ. ಅಲೊ ಮಾಡಿದ್ದುದು ಯಾವ ದಿನಾಂನಕದಲ್ಲಿ? ಇಂಟಿರಿಮ್ ಅಪ್ಲಿಕೇಷನನ್ನು ಅಲೋ ಮಾಡಿದ್ದು ಯಾವ ದಿನಾಂಕದಂದು?

ಶ್ರೀಮತಿ ಪ್ರಮೀಳಾ ನೇಸರ್ಗಿ : 1993ರಲ್ಲಿ ಇದಕ್ಕೆ ಕ್ಲಾರಿಫಿಕೇಷನನ್ನು ಕೊಟ್ಟರು. ಇವೊತ್ತು ಕೇಳುತ್ತೇನೆ ಮಾನ್ಯ ಸಭಾಧ್ಯಕ್ಷರೇ, ರಾಜ್ಯ ಸರ್ಕಾರ ಒಂದು ಪಾರ್ಟಿ. ಅವರು ಪಾರ್ಟಿಯಲ್ಲದಿದ್ದರೆ ನುಣುಚಿಕೊಳ್ಳಬಹುದು, ನಮಗೆ ಗೊತ್ತಿಲ್ಲ ಎಂದು ಹೇಳಿ ತಪ್ಪಿಸಿಕೊಳ್ಳಬಹುದು. ರಾಜ್ಯ ಸರ್ಕಾರವೂ ಇದರಲ್ಲಿ ಪಾರ್ಟಿಯಾಗಿದೆ, ಅವರು ಹೇಳಿದ್ದಾರೆ ಕಾರ್ಪೊರೇಷನಗೆ ರೆಸಲ್ಯೂಷನ್ ಮಾಡುವುದಕ್ಕೆ ಅಧಿಕಾರವಿರಲಿಲ್ಲ ಎಂದು. ಒಂದು ವೇಳೆ ನೀವೇ ಸೂಪರ್ ನ್ಯುಮರಿ ಪೋಸ್ಟನ್ನು ಕ್ರಿಯೇಟ್ ಮಾಡುವುದಕ್ಕೆ ಇದನ್ನು ಒಪ್ಪಿಕೊಳ್ಳುತ್ತೀರಿ, ಕಾರ್ಪೊರೇಷನರವರಿಗೆ ಅಧಿಕಾರವಿರಲಿಲ್ಲ, ಅಂದರೆ ಅಧಿಕಾರ ಯಾರಿಗಿದೆ? ಸರ್ಕಾರಕ್ಕಿದೆ. ಆದರೆ ನೀವು ಮಾಡಿದಿರಾ? ಸರ್ಕಾರ ಇದನ್ನು ಮಾಡಲಿಲ್ಲ, ಕಣ್ಣು ಮುಚ್ಚಿಕೊಂಡು ಇತ್ತು. ಅವೊತ್ತೇ ಸುಪ್ರೀಂ ಕೋರ್ಟ ಆರ್ಡರನ್ನು ಒಬೆ ಮಾಡಿ ಸೂಪರ್ ನ್ಯುಮರಿ ಪೋಸ್ಟ ಕ್ರಿಯೇಟ್ ಮಾಡಿ ಧನಂಜಯರವರನ್ನು ಪ್ರಮೋಟ್ ಮಾಡಬೇಕಾಗಿದಂಥದ್ದನ್ನು ಆಗಿನ ಸರ್ಕಾರದ ಆದ್ಯಕರ್ತವ್ಯವಾಗಿತ್ತು. ಆದರೆ ಪೇಪರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಕಮಿಷನರರಿಂದ ಮತ್ತೊಂದು ಅಫಿಡೆವಿಟನ್ನು

ಶ್ರೀ ಎನ್. ರಾಜಣ್ಣ : ಎಂದು ಕ್ಲಾರಿಫಿಕೇಷನ್ ಸಾರ್, ಕಾರ್ಪೊರೇಷನನಲ್ಲಿ, whether it is in State Government Engineering Dept., Revenue Dept. or Health Department, for most of the officialsಗಳಿಗೆ ಕಾರಿಗೆ ಅದಕ್ಕೆ ಡ್ರೈವರ್ ಇದ್ದಾರೆ, ಅವರು ಏನೆಂದರೆ ಕೋರ್ಟಗೆ ತಿರುಗುವುದು, ಸುಪ್ರೀಂಕೋರ್ಟಿಗೆ ಹೋಗುವುದು, ಇದೇ ಕೆಲಸ. ಕಾರ್ಪೊರೇಷನನಲ್ಲಿ ಕೆಲಸ ಆಗುವುದು ಬಹಳ ಕಡಿಮೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾಡಬೇಕಾದ್ದನ್ನು ಇವರು ಮಾಡಲಿಲ್ಲ, ಇವರು ಲಿನ್ ಮುಖಾಂತರ ಅಫಿಡೆವಿಟನ್ನು ಹಾಕಿದರು, ಅದರಲ್ಲಿ ಏನು ಪ್ರಮಾಣ ಪತ್ರ ಹಾಕಿದರು ಎಂದರೆ, ಈ ಕಾರಣಗಳಿಂದ ನಾವೆ ಒಭೆ ಮಾಡುವುದಕ್ಕಾಗುವುದಿಲ್ಲ. ಬರೀ ಇಷ್ಟನೇ ಹೇಳಲಿಲ್ಲ, ಮುಂದುವರೆಯುತ್ತಾ He is not even eligible for Chief Engineer's post. ಎಂದು ಹೇಳಿದರು. ಮಾನ್ಯ ಸಭಾಧ್ಯಕ್ಷರೇ, ನಾನು ಇವೊತ್ತು ನಿಮ್ಮನ್ನು ಕೇಳುತ್ತಿದ್ದೇನೆ. ಆರ್ಟಿಕಲ್ 141 ಎನ್ನುವುದು ರಾಜ್ಯಾಂಗದಲ್ಲಿ ಇದೆಯೋ ಇಲ್ಲವೋ? Supreme Court does not only decide the cases between the parties, but it declare the law. ಎನೆಂದು ಡಿಕ್ಲೇರ್ ಮಾಡಿದರು ಗೊತ್ತೇ? ಧನಂಜಯರವರು ಸೂಪರ್ ನ್ಯುಮರಿ ಪೋಸ್ಟನಲ್ಲಿ ಇಂಜಿನಿಯರ್ ಆಗಿ ದಾಸೇಗೌಡರು ಇದ್ದಂಥ ಜಾಗದಲ್ಲಿ ಇರುವುದಕ್ಕೆ ಅರ್ಹರಾಗಿದ್ದಾರೆ. ಈ ಪೋಸ್ಟನ್ನು ಕ್ರಿಯೇಟ್ ಮಾಡಿ ಎಂದು ಕೊಟ್ಟರು. ಈ ತೀರ್ಮಾನವನ್ನು ನೀವು ಒಬೆ ಮಾಡಿದ್ದೀರೋ? 1993ನೇ ಇಸವಿಯಿಂದ ಇದನ್ನು ಏಕೆ ಒಬೆ ಮಾಡಲಿಲ್ಲ? ಇದಕ್ಕೆ ಯಾರು ಹೊಣೆಗಾರರು? ಇದರ ಬಗ್ಗೆ ಜವಾಬ್ದಾರಿಯುತವಾದಂಥ ಸರ್ಕಾರವಿದ್ದೂ ಲಿನ್ ಮುಖಾಂತರ ಆಗ ಅಫಿಡೆವಿಟ್ ಹಾಕಿದರು. ಮಾನ್ಯ ಸಭಾಧ್ಯಕ್ಷರೇ, ನಾನು ಕೇಳುತ್ತಿದ್ದೇನೆ. ಆಗದ್ದಂಥ ಸೆಕ್ರಟರಿಯವರೂ ಕೂಡ ಕಂಟೆಂಪ್ಟ ಆಫ್ ದಿ ಕೋರ್ಟ ಮಾಡಿದ್ದಾರೆ. ಸುಪ್ರೀಂ ಕೋರ್ಟ ಆರ್ಡರ್ ವಿರುದ್ಧವಾಗಿ ಏನಾದರೂ ಅವರು ಹಾಕಬೇಕಾದರೆ ಪ್ರತಿಯೊಬ್ಬರಿಗೂ ಗೊತ್ತಿರತಕ್ಕಂಥ ವಿಷಯವೇನಂದರೆ, the court cannot go behind the decree. Contempt of the court proceedings means, executing proceedings - it only implements the order made by the court. It cannot go behind the decree when the order is passed. ಆದ್ದರಿಂದ ನಾನು ಕೇಳುತ್ತಿದ್ದೇನೆ, ತಾವೇನಾದರೂ ಕೂಡ ಆರ್ಡರ್ ಮಾಡಿದ್ದುದು ತಪ್ಪು ಎಂದು ಹೇಳಿ ರೆವ್ಯೂ ಪಿಟಿಷನ್ ಹಾಕಿದ್ದೀರಾ? 1993ನೇ ಇಸವಿಯಲ್ಲಿ ಸುಪ್ರೀಂ ಕೋರ್ಟನವರು ದಾಸೇಗೌಡರು ಹೋದ ಸ್ಥಳಕ್ಕೆ ಸೂಪರ್ ನ್ಯುಮರಿ ಪೋಸ್ಟನ್ನು ಕ್ರಿಯೇಟ್ ಮಾಡಬೇಕು ಎಂದು ಕೇಳಿದಿರಲ್ಲಾ, ಆಗ ತಾವೇನಾದರೂ ರೆವ್ಯೂ ಪಿಟಿಷನ್ ಹಾಕಿದ್ದೀರಾ? ಹಿಂದೆ ಇದ್ದ ಸರ್ಕಾರವೇನೋ ಹಾಕಲಿಲ್ಲ, ನೀವಾದರೂ ಅಧಿಕಾರಕ್ಕೆ ಬಂದ ಮೇಲೆ ಆ ಆರ್ಡರ್ ತಪ್ಪು ಎಂದು ಹೇಳಿ ರೆವ್ಯೂ ಪಿಟಿಷನ್ ಹಾಕಿದ್ದೀರಾ? ಎಕ್ಸಕ್ಯೂಟ್ ಮಾಡಬಾರದಾದರೆ ರೆವ್ಯೂ ಪಿಟಿಷನ್ ಹಾಕಿ ತೀರ್ಮಾನ ತಪ್ಪು ಎಂದು ಹೇಳಿ youare not eligible ಎಂದು ಹೇಳಬೇಕಾಗಿತ್ತು. ಆದರೆ ರೆವ್ಯೂ ಪಿಟಷನ್ ಹಾಕಲಿಲ್ಲ, ಸುಮ್ಮನೆ ಇದ್ದಿರಿ, implement the order, ಆರ್ಡಸನ್ನು ಎಕ್ಸಿಕ್ಯುಟ್ ಮಾಡಿ ಎಂದು ಹೇಳಿದರೆ ಪ್ರಮಾಣಪತ್ರವನ್ನು ಹಾಕಿದಿರಿ, ಇದನ್ನು ಮಾಡುವುದಕ್ಕೆ ಬರುವುದಿಲ್ಲ he is not eligible ಎಂದು ಹೇಳಿದಿರಿ. ಆಮೇಲೆ ನೀವು ಮಾಡಿರುವುದು ತಪ್ಪು, ನೀವು ಪೋಸ್ಟನ್ನು ಕ್ರಿಯೇಟ್ ಮಾಡಲೇಬೇಕು ಎಂದು ಹೇಳಿದಾಗ, ಮತ್ತೊಂದು ಅಫಿಡವಿಟನ್ನು ವಾಸುದೇವನ್ ಮುಖಾಂತರ ಫೆಬ್ರವರಿಯಲ್ಲಿ ಹಾಕಿಸಿದಿರಿ. ನಾನು ಇವೊತ್ತು ಕೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ, Is it not interference in the course of justice and implementation of the order? Is it not wilful disobedience of the order? wilful diisobedience ಆದಾಗ ಏನು ಮಾಡಬೇಕು ಎಂಬುದನ್ನೂ ಕೂಡ ಕಾನೂನು ತೀರ್ಮಾನ

ಮಾಡಿದೆ. ಈ ವಿಲ್‌ಫುಲ್ disobedience ಆದಾಗ ಏನು ಮಾಡಬೇಕು ಎಂಬುದನ್ನು ಕಾನೂನು ತೀರ್ಮಾ ಮಾಡಿದೆ. ಆ ವಿಲಫುಲ್ ಡಿಸ್-ಅಪಿಯರೆನ್ಸ ಆಗಿರತಕ್ಕಂಥ ಸದರ್ಭದಲ್ಲಿ ಏನು ಮಾಡಬೇಕು ಎನ್ನುವ ಪ್ರಶ್ನೆ ಸುಪ್ರೀಂ ಕೋರ್ಟ ಮುಂದೆ ಬಂದಾಗ, ಸುಪ್ರೀಂ ಕೋರ್ಟ ನ್ಯಾಯಾಧೀಶರು ಡಿಕ್ರಿಯನ್ನು ನೋಡುವುದಕ್ಕೆ ಬರುವುದಿಲ್ಲ. ಯಾವ ಕಾರಣಕೋಸ್ಕರ ಜಡ್ಜಮೆಂಟ್ ಬಂತು ಎಂದು ಯಾವ ಜಡ್ಜಗೂ ಅಧಿಕಾರವಿಲ್ಲ. No court can behind the decree. ಆದುದರಿಂದ ಕೇಳಬೇಕಾದುದ್ದು ಒಂದೇ ಪ್ರಶ್ನೆ, ನೀವು ಇಂಪ್ಲಿಮೆಂಟ್ ಮಾಡಿದ್ದೀರೋ ಇಲ್ಲವೋ? ಆದರೆ ಇವೊತ್ತಿನ ದಿವಸ ಬಹಳ ಜನ ಸದಸ್ಯರು ಹೇಳಿದರು, ಅಪಾಲಜಿಯನ್ನು ಅವರು ಮಾಡಿದರು, ಆದುದರಿಂದ ಅವರಿಗೆ ಕ್ಷಮೆಯನ್ನು ಕೊಟ್ಟುಬಿಡಬೇಕಾಗಿತ್ತು ಎನ್ನತಕ್ಕಂಥ ಉದ್ದೇಶದಲ್ಲಿ ಸದಸ್ಯರುಗಳು ಮಾತನಾಡಿದರು, ಮಾನ್ಯ ಸಭಾಧ್ಯಕ್ಷರೇ, ಸುಪ್ರೀಂ ಕೋರ್ಟನಲ್ಲಿ ಕ್ಷಮೆ ಯಾಚನೆಯನ್ನು ಮಾಡಬೇಕಾದರೂ ಕೂಡ ಒಂದು ವಿಧಿ ವಿಧಾನ ಇದೆ. Unconditional tender of apology ಆದಾಗಲೂ ಕೂಡ ಇದು ಬೋನಾಫೈಡೇ ಅಲ್ಲವೇ ಎನ್ನತಕ್ಕಂಥದ್ದನ್ನು ನೋಡುತ್ತಾರೆ. ಸಕಾರಣವಾಗಿದೆಯೋ ಇಲ್ಲವೋ ಎಂಬುದನ್ನು ನೋಡುತ್ತಾರೆ. ಆ ರೀತಿ ಇದ್ದಾಗ ಮಾತ್ರ ಕ್ಷಮೆಯನ್ನು ಕೊಡುತ್ತಾರೆಯೇ ಹೊರತು, ಮಿಕ್ಕ ಯಾವ ಸಮಯದಲ್ಲೂ ಸಹ ಕ್ಷಮೆಯಿನ್ನು ನೀಡುವುದಿಲ್ಲ. 1951ನೇ ಇಸವಿಯಲ್ಲಿ ಸುಪ್ರೀಂ ಕೋರ್ಟನಲ್ಲಿ ಕನಟೆಮ್ಪ್ಟ ಆಫ್ ದಿ ಕೋರ್ಟ ಆದಾಗಿನಿಂದಲೂ ಸಹ ಈವತ್ತಿನವರೆಗೂ ಇರುವ ಕಾನೂನು. ತಾವು ಅಪಾಲಜಿ ಕೊಟ್ಟರಿ. ಅದ್ನು ಕೊಡುವುದಕ್ಕಿಂತ ಮೊದಲು ಕಂಡೀಷನ್ ಅಪಾಲಜಿಯನ್ನು ಕೊಡಲು ಸಾಧ್ಯವಿಲ್ಲ. ಈ ಕಾರಣಗಳಿಂದ ಕೊಡಲು ಆಗಲಿಲ್ಲವೆಂದು ಹೇಳಲು ಬರುವುದಿಲ್ಲ. ಆದರೆ ತಾವು ತಪ್ಪಾಗಿದೆ ಇನ್ನು ಮುಂದೆ ಕೊಡುತ್ತೇವೆಂದು ಹೇಳಿ ಕೊಟ್ಟಿದ್ದರೆ ಯಾವುದೇ ನ್ಯಾಯಾಧೀಶರೂ ಸಹ ಕ್ಷಮೆಯನ್ನು ನೀಡುತ್ತಿದ್ದರು. ಆದರೆ ತಾವು ಆ ರೀತಿಯಾದ ಅನಕಂಡಿಷನಲ್ ಅಪಾಲಜಿಯನ್ನು ಕೊಡದಿರುವ ಸಂದರ್ಭದಲ್ಲಿ ಅನಿವಾರ್ಯವಾಗಿ ಕಾನೂನಿನ ಪ್ರಕಾರ because the Supreme Court has to act according to law, within the frame work of law. ಆ ಚೌಕಟ್ಟಿನಲ್ಲಿ ನಡೆಯಬೇಕು, ಆ ಚೌಕಟ್ಟು ಸುಪ್ರೀಂ ಕೋರ್ಟಗೆ ಏನು ಹೇಳುತ್ತದೆ ಅದೇ ರೀತಿಯಲ್ಲಿ ಮಾಡಬೇಕಾದಂಥ ಸಂದರ್ಭದಲ್ಲಿ ಸುಪ್ರೀಂ ಕೋರ್ಟ ಈ ಅನ್-ಕಂಡೀಷನಲ್ ಅಪಾಲಜಿಯನ್ನು ಒಪ್ಪಿಕೊಳ್ಳಲು ಬರುವುದಿಲ್ಲ. ಈ ವಿಷಯದ ಬಗ್ಗೆ ತಾವು ದಯಮಾಡಿ ಪರಾಂಭರಿಸಬೇಕು. ಹಲವಾರು ಇಂಥ ತೀರ್ಮಾನಗಳಿವೆ. ನಾನು ಬೇಕಾದರೆ ಈವತ್ತಿನವರೆಗೆ ಆಗಿರುವ ಎಲ್ಲಾ ಸುಪ್ರೀಂ ಕೋರ್ಟಿನ ಎಲ್ಲಾ ತ್ರೀರ್ಮಾನಗಳ ಬಗ್ಗೆ ಹೇಳಬಲ್ಲೆ. ಆದರೆ ಅದು ಈ ಸಮಯವಲ್ಲ. ಆ ಸಂದರ್ಭ ಬಂದಾಗ ಅದರ ಬಗ್ಗೆ ಹೇಳಲು ನಾನು ಸದಾ ಸಿದ್ದನಾಗಿದ್ದೇನೆ. ಆದರೆ ಅಪಾಲಜಿಯನ್ನು ಕೊಡದಿರುವ ಸಂದರ್ಭದಲ್ಲಿ ಸನ್ಮಾನ್ಯ ಸ್ವತಂತ್ರರಾವ್ ರವರು ಮತ್ತೊಮ್ಮೆ ಹೋದಾಗ ``tend to interfere in the course of justice" ಆಯಿತು. ಅದೂ ಮತ್ತೊಂದು ಕಂಟೆಮ್ಪ್ಟ ಆಫ್ ದಿ ಕೋರ್ಟ ಆಯಿತು. ಯಾರಾದರು ನ್ಯಾಯಾಧೀಶರ ಹತ್ತಿರ ಹೋಗಿ ಶಿಫಾರಸ್ಸನ್ನು ಮಾಡಲು ಹೋದರೆ ಅದು ಸಿವಿಲ್ ಡಿಸಒಬೀಡಿಯನ್ಸ ರೆನ್ಸ ಆಗುವುದಿಲ್ಲ, ಅದು ಕ್ರಿಮಿನಲ್ ಕನಮ್ಪ್ಟ ಕೋರ್ಟ ಆಗುತ್ತದೆ. ಕೋರ್ಟಿನ ಆಜ್ಞೆಯನ್ನು ಉದ್ದೇಶ ಪೂರ್ವಕವಾಗಿ ಪ್ರತಿರೋಧ ಮಾಡಿದಿರೆ, ಅದನ್ನು ಪಾಲಿಸದಿದ್ದರೆ ಅದು ಸಿವಿಲ್ ಕಂಟೆಮ್ಪ್ಟ ಆಫ್ ದಿ ಕೋರ್ಟ ಆಗುತ್ತದೆ ಆದರೆ ಕಂಟೆಫ್ಟ್ ಆಫ್ ದಿ ಕೋರ್ಟ್, ಕ್ರಿಮಿನಲ್ ಕಂಟೆಫ್ಟ್ ಆಫ್ ದಿ ಕೋರ್ಟ್,

ಕಂಟೆಮ್ಪ್ಟ್ ಆಫ್ ದಿ ಆಕ್ಟ್ ಪ್ರಕಾರ ಏನು ಹೇಳುತ್ತಾರೆಂದರೆ it tend to interfere in the course of justice, interfere with the administration of justice. Tend to interfere ಅದು ಕ್ರಿಮಿನಲ್ ಕಂಟೆಮ್ಪ್ಟ್ ಆಗುತ್ತದೆ. ಸ್ವತಂತ್ರರಾವರವರು ಕ್ರಿಮಿನಲ್ ಕಂಟೆಮ್ಪ್ಟ್ ಮಾಡಿದರು. ಇವತ್ತಿನ ದಿವಸ ಅದು ಕ್ರಿಮಿನಲ್ ಕಂಟೆಮ್ಪ್ಟ್ ಆಯಿತು. ನಾನು ತಮ್ಮ ಮೂಲಕ ಕೇಳುವುದೇನೆಂದರೆ, ಸ್ವತಂತ್ರರಾವ್‌ರವರು ತಿಳಿಯದೆ ಏನೋ ವಿಷಯದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮುಖ್ಯ ನ್ಯಾಯಾಧೀಶರನ್ನು ನೋಡಬೇಕಾಗಿತ್ತೇ? Is it not a criminal contempt of the court? Is it not interference in the course of the justice? ಇದನ್ನು ನಾವು ಈವತ್ತಿನ ದಿವಸ ಕೇಳಬೇಕಾಗಿದೆ. ಮುಖ್ಯಮಂತ್ರಿಯವರು ಏತಕ್ಕಾಗಿ ಹೋಗಿದ್ದರು? ಯಾವ ಕಾರಣಕ್ಕಾಗಿ ಹೋಗಿದ್ದರು? ಈ ಕೇಸಿನ ಬಗ್ಗೆ ವಿಚಾರಣೆ ಮಾಡಲು ಹೋಗಿದ್ದರಾ ಅಥವಾ ಬೇರೆ ಯಾವುದಕ್ಕಾದರೂ ಹೋಗಿದ್ದರೋ ಎಂಬ ಬಗ್ಗೆ ನಾವು ತಿಳಿದುಕೊಳ್ಳಬೇಕಾಗಿದೆ. ಅದು ನಮ್ಮ ಹಕ್ಕು, ನಾವು ಅದನ್ನು ತಿಳಿದುಕೊಳ್ಳಬೇಕು. ಒಂದು ವೇಳೆ ವಾಸುದೇವನರವರ ಕೇಸಿನ ಸಂಬಂಧದಲ್ಲಿ ನಾನು ಹೋಗಿದ್ದೆ ಎಂದು ಹೇಳುವುದಾದರೆ, ಅದಕ್ಕಿಂತ ಅಕ್ಷಮ್ಯ ಅಪರಾಧ ಮತ್ತೊಂದಿಲ್ಲ. That directly amounts to crimival contempt of the court and interference in the course of justice. ಆ ಕಾರಣ ಮುಖ್ಯಮಂತ್ರಿಗಳಾಗಿ ಈ ಸದನದಲ್ಲಿ, ಸರ್ಕಾರದಲ್ಲಿ ಉಳಿಯತಕ್ಕ ಹಕ್ಕು ಇಲ್ಲವೆನ್ನತಕ್ಕ ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದರ ಬಗ್ಗೆ ಇವತ್ತು ಯೋಚನೆ ಮಾಡಬೇಕಾಗಿದೆ. ಏಕೆಂದರೆ ಎಲ್ಲರಿಗೂ ಕಾನೂನು ಒಂದೇ. ಎಲ್ಲಾರು ಸಹ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ. ನಾನು ಸುಮ್ಮನೆ ಕುಳಿತುಕೊಂಡು ಕೇಳಿದ್ದೇನೆ. ನಾನು ನನಗೆ ಕಾನೂನಿನ ಬಗ್ಗೆ ತಿಳಿದಿರತಕ್ಕಂಥ ಸ್ವಲ್ಪವನ್ನು ಹೇಳುತ್ತಿದ್ದೇನೆ. ಕಾನೂನನ್ನು ತಿಳಿದುಕೊಳ್ಳದೆ ಹೇಳತಕ್ಕದ್ದಲ್ಲ. ಕಾನೂನಿನಲ್ಲಿ ಕಂಟೆಮ್ಪ್ಟ್ ಆಫ್ ದಿ ಕೋರ್ಟನ್ನು ವಿವರಿಸಿದ್ದಾರೆ. ಹಾಗೆಂದರೆ ಏನು ಎಂದು ವಿವರಿಸಿದ್ದಾರೆ. ಆ ಪ್ರಕಾರವಾಗಿ ನಾನು ಇಲ್ಲಿ ಹೇಳುತ್ತಿದ್ದೇನೆ.

MR. SPEAKER : It anybody tends to interfere in the course of delivering justice, it amounts to criminal contempt. Who is to initiate the action? That is, the person who is deciding the case,if he is approached directly? In this case I don't know. Is the crinimal contempt case is initiated against Swathanthra Rao?

SMT. PRAMILA NESARGI : It was not initiated. ನನ್ನ ಪ್ರಕಾರ ಇನಿಷಿಯೇಟ್ ಮಾಡಬೇಕಾಗಿತ್ತು. ನನ್ನ ಪ್ರಕಾರ ಅವರು ಕ್ರಿಮಿನಲ್ ಕಂಟೆಮ್ಪ್ಟ್ ಆಫ್ ದಿ ಕೋರ್ಟ ಇನಿಷಿಯೇಟ್ ಮಾಡಬೇಕಾಗಿತ್ತು.

(INTERRUPTIONS)

ಅಧ್ಯಕ್ಷರು : ಅಕೆಡೆಮಿಕ್ ಇಂಟರೆಸ್ಟ್‌ನಿಂದ ಹೇಳುತ್ತಿದ್ದೇನೆ. ನಾನು ಲಾಯರ್ ಆಗದೇ ಇರುವುದರಿಂದ ಇದನ್ನೆಲ್ಲಾ ತಿಳಿದುಕೊಳ್ಳಬೇಕೆಂಬ ಉತ್ಸಾಹ ಇದೆ. ಅವರ ಕೇಸನಲ್ಲಿ ಇನಿಷಿಯೇಟ್

ಮಾಡಬೇಕಾಗಿತ್ತು ಮಾಡಲಿಲ್ಲ. ಅದನ್ನು ಜಡ್ಜಸ್ ಮಾಡಬೇಕಾಗಿತ್ತು, ಮಾಡಲಿಲ್ಲ. ಅದನ್ನು ನಾವು ಕೊಶ್ಚನ್ ಮಾಡುವಂತಿಲ್ಲ, ಮಾಡುವುದೂ ಬೇಡ. ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ನ್ಯಾಯಾಧೀಶರಾದ ಅಹ್ಮದಿ ಅವರನ್ನು ಭೇಟಿ ಮಾಡಿದ್ದರೆಂಬ ವಿಚಾರ ಪೇಪರಗಳಲ್ಲಿ ಬಂದಿದೆ. The question is whether the Chief Minister has met him in connection with this matter or not ಎನ್ನತಕ್ಕದ್ದನ್ನು ನಮಗೆ ಯಾರು ಹೇಳಬೇಕು? ಇವರು ಹೇಳಬೇಕು, ಇಲ್ಲವೇ ಅವರು ಹೇಳಬೇಕು. ಅವರೂ ಹೇಳಲಿಲ್ಲ, ಇವರೂ ಹೇಳಲಿಲ್ಲ ಅಂದರೆ ಮೇಲೆ ನಾವು ಹೇಗೆ. How are we to know?

ಶ್ರೀಮತಿ ಎಸ್. ಪ್ರಮೀಳ : ಆದ್ದರಿಂದಲೇ ನಾನು ಹೇಳುತ್ತಿರುವುದು, ತಾವು ನಮ್ಮ ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಿ ಅನಂತರ ಎಲ್ಲಾ ವಿಚಾರ ಗೊತ್ತಾಗುತ್ತದೆ.

ಅಧ್ಯಕ್ಷರು : ಓಹೋ, ಈಗ ಗೊತ್ತಾಯಿತು ಬಿಡಿ. ಹಾಗೆ ಹೇಳಿ. ಇದು ಅಡ್ವೋಕೇಟ್ಸ್ ಬುದ್ಧಿವಂತಿಕೆ. ಇದು ನಮಗೆ ಗೊತ್ತಾಗುವುದಿಲ್ಲ. ಏಕೆಂದರೆ ನಾನು ಅಡ್ವೋಕೇಟ್ಸ್ ಅಲ್ಲ.

ಶ್ರೀಮತಿ ಎಸ್. ಪ್ರಮೀಳ ನೇಸರ್ಗಿ : ಆದ್ದರಿಂದಲೇ ಇದನ್ನು ಅಡ್ಮಿಟ್ ಮಾಡಿ ಎಂದು ನಾವು ಕೇಳುತ್ತಿರುವುದು. ಯಾರು ಇನಿಷಿಯೇಟ್ ಮಾಡಬೇಕಾಗಿತ್ತು ಎಂದು ತಾವು ಕೇಳಿದಿರಿ. ಕ್ರಿಮಿನಲ್ ಕಂಟೆಪ್ಟ್ ಆಫ್ ದಿ ಕೋರ್ಟ ಸೆಕ್ಷನ್ 15. How the cognisance can be taken. ಇದನ್ನು ಸೊವ್ಹೋಮೋಟೋ ಅಡ್ವೋಕೇಟ್ ಜನರಲರವರು ತೆಗೆದುಕೊಳ್ಳಬೇಕು ``Any other person with the consent in writing of the Advocate General" ಅಂದರೆ ಇದು ಸುಪ್ರೀಂ ಕೋರ್ಟ ಆದುದರಿಂದ ಅಟಾರ್ನಿ ಜನರಲ್‌ರವರಿಂದ ತೆಗೆದುಕೊಳ್ಳಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕ್ರಿಮಿನಲ್ ಕಂಟೆಮ್ಟ್, ಸೊವ್ಹೋಮೋಟೋ ಅವರು ತೆಗೆದುಕೊಳ್ಳಬಹುದಿತ್ತು, ಅಥವಾ ಹೋದಾಗ ಅವರು ಮಾಡಬೇಕಾಗಿತ್ತು. ಆದರೆ ಇಲ್ಲಿ ನಿಜ. ಕ್ರಿಮಿನಲ್ ಕಂಟೆಮ್ಟ್ ಎಂದರೆ ಏನು ಡೆಫಿನಿಷನ್? Anybody tends to interfere. Wording is very clear. ಕೇಸಿನ ಬಗ್ಗೆ ಮಾತನಾಡುವುದಾದರೆ it interfers in the course of justice ಅಂದರೆ ನಾವು ಈ ಕಾನೂನನ್ನು ಒಪ್ಪಿಕೊಂಡಿದ್ದೇವೆ. ಆರ್ಟಿಕಲ್ 19ರ ಪ್ರಕಾರ ಈ ಕಾನೂನು ಚಾಲನೆಯಲ್ಲಿದೆ. ಅಂದರೆ ಕಾನೂನಿಗೆ ವಿರುದ್ಧವಾಗಿ ನಡೆದರೆ, ಕಾನೂನನ್ನು ಪಾಲಿಸಬೇಕಾದವರು ಕಾನೂನಿಗೆ ವಿರುದ್ಧವಾಗಿ ನಡೆದಾಗ, ಅಂಥವರು ಆ ಅಧಿಕಾರದಲ್ಲಿರಲು ಅರ್ಹತೆ ಇದೆಯೆ ಎಂಬುದನ್ನು ನಾವು ಇವತ್ತು ತಿಳಿದುಕೊಳ್ಳಬೇಕಾಗಿದೆ. ಈ ಕಾರಣದಿಂದ ನಾನು ಈ ವಿಷಯವನ್ನು ತಮ್ಮ ಮುಂದಿಟ್ಟಿದ್ದೇನೆ.

ಮತ್ತೊಂದು ಆರ್ಟಿಕಲ್ 164, ಅಕೌಡಂಬಿಲಿಟಿ: ನಮ್ಮ ಕಾನಸ್ಟಿಟ್ಯೂಷನನ ಆರ್ಟಿಕಲ್ 164ರಲ್ಲಿ `` The Council of Ministers shall be collectively responsible to the Legislative Assembly of the State" ಅಂದರೆ ಇದರಲ್ಲಿ ಮುಖ್ಯವಾಗಿ ಇರತಕ್ಕ ವಿಷಯ ಎಂದರೆ ಇದಕ್ಕೆ ಯಾರು ರೆಸ್ಪಾನ್ಸಿಬಲ್?

ಅಧ್ಯಕ್ಷರು : ಸಬ್ಸಿಕ್ವೆಂಟ್ ಕ್ಲಾಸಸ್ ಕೂಡ ಬಹಳ ಇಂಟರೆಸ್ಟಿಂಗ್ ಆಗಿರಬಹುದೆನಿಸುತ್ತದೆ.

ಶ್ರೀಮತಿ ಎಸ್. ಪ್ರಮಿಳ ನೇಸರ್ಗಿ : ಹಾಗೇನೂ ಇಲ್ಲ. ಇದ್ದಿದ್ದರೆ ನಾನು ಅದನ್ನು ಓದುತ್ತಿದೆ.

Before a Minister enterss upon his office, the Governor shall administer the oath" ಸಂಬಂಧಪಟ್ಟಿದ್ದನ್ನು ಮಾತ್ರ ನಾನು ಓದುತ್ತೇನೆ. ಆರ್ಟಿಕಲ್ 164(2)ರಲ್ಲಿ ``The Council of Minister shall be collectively responsible to the Legislative assmebly of the State". ನಾನು ನಮ್ಮ ಅಸೆಂಬ್ಲಿ ರೂಲ್ಸನ್ನು ಫ್ರೇಮ್ ಮಾಡಿದ್ದೇವೆ. ಒಂದು ಸರ್ಕಾರವನ್ನು ಹೇಗೆ ನಡೆಸಬೇಕು? ಹೆಡ್ ಆಫ್ ದಿ ರೂಲ್ಸನ್ನು ಡಿಪಾರ್ಟಮೆಂಟನ್ನು ಹೇಗೆ ನಡೆಸಬೇಕು ಎನ್ನುವ ಬಗ್ಗೆ ಕೂಡ ನಾವು ರೂಲ್ಸನ್ನು ಫ್ರೇಂಮಾಡಿದ್ದೇವೆ. ಆ ರೂಲ್ಸ ಪ್ರಕಾರ ಇವತ್ತು ಹೇಳುವುದಾದರೆ ಯಾವು ಈ ಡಿಪಾರ್ಟಮೆಂಟಿನಲ್ಲ ಅಧಿಕಾರವನ್ನು ನಡೆಸುತ್ತಿದ್ದೀರಿ, ಇದರಲ್ಲಿ ಕೇವಲ ವಾಸುದೇವನ್ ಮಾತ್ರ ಗಿಲ್ಟಿಯೇ ಅಥವಾ ಅದಕ್ಕೆ ಸಂಬಂಧಪಟ್ಟ ಮಂತ್ರಿ ಕಾರಣಕರ್ತರೇ ಅಥವಾ ಇಡೀ ಮಿನಿಸ್ಟೀರಿಯಲ್ ಸಮೂಹವೇ ಕಲೆಕ್ಟೀವ್ ಆಗಿ ರೆಸ್ಪಾನ್ಸಿಬಲ್ಲೇ? ಈ ವಿಚಾರ ಇವತ್ತು ನಿರ್ಣಯವಾಗಬೇಕಾಗಿದೆ. ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಆಫದಿ ಮಿನಿಸ್ಟ ಎಂದು ಬಂದಾಗ, ಇಡೀ ಸರ್ಕಾರವೇ ತನ್ನ ರಾಜಿನಾಮೆಯನ್ನು ಕೊಡಬೇಕಾಗಿ ಬರುತ್ತದೆ. ಈ ವಿಚಾರವನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿಬಂದಿದೆ. ಕೊಡಬೇಕಾದ ಅವಶ್ಯಕತೆ ಇಲ್ಲ, ಈ ನಿಲುವಳಿ ಸೂಚನೆಯ ಅರ್ಥಕ್ಕೆ ಮಾತ್ರ ನಾವು ರೆಕಮೆಂಡ್ ಮಾಡುತ್ತೇವೆಂದು ಹೇಳಿದರು. 1621ರಲ್ಲಿ ಈ ವಿಷಯ ಮೊಟ್ಟಮೊದಲಬಾರಿಗೆ ಪಾರ್ಲಿಮೆಂಟರಿ ಕಮಿಟಮುಂದೆ ಬಂದಿತ್ತು. ಇದರ ಬಗ್ಗೆ ಎನಕ್ವೈರಿ ಆಗಬೇಕೇ ಬೇಡವೇ ಎಂಬ ಬಗ್ಗೆ ಅವರು ಏನು ಹೇಳಿದರು ಎಂದರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಯಾರೋ ಆದಿಮಾನವರು ತಮಗೆ ಬೇಕೆಂದು ಇದನ್ನು ಮಾಡಿಕೊಂಡಿದ್ದರು. 1621ರ ವಿಚಾರವನ್ನು ನಾವು ಇವತ್ತು ಶಾಸನವಾಗಿ ಪರಿವರ್ತನೆ ಮಾಡಿ ಕೊಳ್ಳುವುದಾದರೆ ನಾವು ಜೀವನ ಮಾಡುವುದು ಕಷ್ಟವಿದೆ. 1621ರ ಶಾಸನ ನಮಗೆ ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಪ್ರೀಂ ಕೋರ್ಟಿನ ಮುಂದೆ ಈ ಮನವಿಯನ್ನು ಸಲ್ಲಿಸಿದಾಗ ಸರ್ಕಾರದ ವಕೀಲರಾದ ಮಾನ್ಯ ಆಚಾರ್ಯರವರು ನಮ್ಮ ರಾಜ್ಯ ಸರ್ಕಾರದ ಪರವಾಗಿ ಅಪಿಯರ್ ಆಗಿದ್ದರು. ಅವರು ಈರೀತಿ ಒಂದು ಮಾತನ್ನು ಹೇಳಿದ್ದಾರೆ. ಈಗಾಗಲೇ ಈ ಅಧಿಕಾರಿಯೇ ಸಲ್ಲಿಸಿರುವ ಅರ್ಜಿಯನ್ನು ಕೋರ್ಟ ತಿರಸ್ಕರಿಸಿರುವುದರಿಂದ ರಾಜ್ಯಸರ್ಕಾರದ ಮನವಿ ಸ್ವೀಕಾರಾರ್ಹವೆ ಎಂದು ನ್ಯಾಯಮೂರ್ತಿಗಳು ಸರ್ಕಾರೀ ವಕೀಲ ಶ್ರೀ ಆಚಾರ್ಯರವರು ಹೇಳಿದ್ದಾರೆ, "ನ್ಯಾಯಾಲಯ ಆದೇಶ ಪಾಲನೆ ವಿಷಯದಲ್ಲಿ ಅರ್ಜಿಯನ್ನು ಅಧಿಕಾರಿಯ ಪರ ಅರ್ಜಿ ಎಂದು ಪರಿಗಮಿಸಬಹುದು. ಅಂದರೆ, ನ್ಯಾಯಾಧೀಶರ ಮುಂದೆ ನಮ್ಮ ವಕೀಲರು ಒಪ್ಪಿಕೊಳ್ಳುತ್ತಿದ್ದಾರೆ, ಇದು ಕೇವಲ ಒಬ್ಬ ಅಫಿಷಿಯಲನ ಇಂಡಿವಜುಯಲ್ ಪ್ರಶ್ನೆ ಅಲ್ಲ, ಸರ್ಕಾರದ ಪರವಾಗಿ ಅವರು ಅವತ್ತು ಅಪಿಯರ್ ಆಗಿದ್ದರು. ಆದ್ದರಿಂದ ನಾನು ಇವತ್ತು ಅರ್ಜಿಯನ್ನು ಹಾಕಿರತಕ್ಕದ್ದು ಆ ಅಧಿಕಾರಿಯ ಪರವಾಗಿ, ಸರ್ಕಾರವೇ ಒಂದು ಅರ್ಜಿಯನ್ನು ಹಾಕಿದೆ ಎಂದು ಹೇಳಿದ್ದಾರೆ. ಅಂದರೆ ಇವತ್ತು ಇದರಲ್ಲಿ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎಂಬುದನ್ನು ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಅಪಿಯರ್ ಆಗಿದ್ದಂಥ ನಮ್ಮ ವಕೀಲರೇ ಒಪ್ಪಿಕೊಂಡಿದ್ದಾರೆ. ಇದರಲ್ಲಿ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ, ಕೇವಲ ಯಾರೋ ಒಬ್ಬ

ಅಧಿಕಾರಿಯ ಪ್ರಶ್ನೆ ಅಲ್ಲ. ಈ ಸರ್ಕಾರದ ಹೊಣೆಯನ್ನು ಅವರು ಹೊರಬೇಕಾಗುತ್ತದೆಂದು ಅವರು ಏನು ಹೇಳಿದ್ದಾರೆ. ಅದನ್ನು ನ್ಯಾಯಾಲಯದಲ್ಲಿ ನಿಮ್ಮ ವಕೀಲರೇ ಒಪ್ಪಿಕೊಂಡಿದ್ದಾರೆ.

ಶ್ರೀಮತಿ ಎಸ್. ಪ್ರಮೀಳ ನೇಸರ್ಗಿ : ಅಧ್ಯಕ್ಷರೆ, ಈ ವಿಚಾರವನ್ನು ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಆಗ That enquiry should precede accusation a simple comonsense. ಎಂದು ಹೇಳಿ ಮತ್ತೊಂದು ಮಾತನ್ನೂ ಹೇಳಿದರು, would not a physician be a mad man? ಇದು ಅಲ್ಲಿ ಹೇಳಿದಂಥ ವಿಚಾರ. ಇದನ್ನು ನಾನು ಹೇಳಿದ್ದಲ್ಲ. Would not be a physician a mad man? ಅಂದರೆ ಡಾಕ್ಟರಗಳಿಗೆ ಏನಾದರೂ ಕಾನೂನು ಗೊತ್ತಿರುತ್ತದೆಯೇ? Would not be a physician a mad man, said a Member of the House of Commons in 1742 when it was considering an enquiry into the regime of the Fallen Robot Palpar. To prescribe to a patient without first examining into the state of his distemper the causes from which it arose, Coke acknowledged that the House of Commons have no powers to judge. But said, we may examine. We may have no powers to judge, but he said, we may examine. ಹೌಸ್ ಆಫ್ ಕಾಮನ್ಸ್‌ನಲ್ಲಿ ಕೋಕ್ ಎನ್ನತಕ್ಕ ಮಹಾನ್ ಮೇಧಾವಿ ಹೇಳಿದಂಥ ಮಾತು ಇದು. ಡಾಕ್ಟರಗಳಿಗೆ ಕಾನೂನು ಬರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಡಾಕ್ಟರುಗಳು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ನಾನು ಮಾತ್ರ ಈ ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕೋರ್ಟಿನಲ್ಲಿ ತೀರ್ಮಾನವಾಗಿರತಕ್ಕದ್ದು ಸರಿಯೋ, ತಪ್ಪೋ ಎಂಬುದು ಇಲ್ಲಿ ಪ್ರಶ್ನೆ ಅಲ್ಲ. ಈಗಿರತಕ್ಕ ಪ್ರಶ್ನೆ ಎಂದರೆ: Whether we have to examine, whether we must be permitted to examine the circumstances leading to the conviction. ಈ ವಿಷಯವನ್ನು ಪರಾಂಭರಿಸುವ ಸಂದರ್ಭದಲ್ಲಿ ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಮತ್ತು ಮಿನಿಸ್ಟೀರಿಯಲ್ ರೆಸ್ಪಾನ್ಸಿಬಿಲಿಟಿಗಳ ಬಗ್ಗೆ ವಿಚಾರ ಮಾಡತಕ್ಕ ಸಂದರ್ಭದಲ್ಲಿ 1945ನೇ ಇಸವಿಯಲ್ಲಿ 35ನೇ ಇಸವಿಯ ಗೌರ್ನಮೆಂಟ್ ಆಫ್ ಇಂಡಿಯ ಆಕ್ಟ ಇದ್ದಾಗೆ ಪ್ರೀವಿ ಕೌನ್ಸಿಲನಲ್ಲಿ ಈ ವಿಷಯ ಬಂದಿತ್ತು.

"In the first place their Lordhsip observed that the provision of Chapter 2 of Part 3 of Act 1950 as to the provincial executive and its executive authority use the term, executive in the broader sense as including both a decision as to action and the carrying out of such decision..." ಎನ್ನತಕ್ಕ ಮಾತನ್ನು 1945ನೇ ಇಸವಿಯಲ್ಲಿ ಪ್ರೀವಿ ಕೌನ್ಸಿನಲ್ಲಿ ಎಕ್ಸಿಕ್ಯುಟಿವ್ ಮತ್ತು ಎಕ್ಸಿಕ್ಯುಟಿವ್ ಅಥಾರಿಟಿ ಎಂದು ಬಂದಾಗ ಒಂದು ಜಡ್ಜಮೆಂಟನ್ನು ಕೊಟ್ಟರು. ಇದೇ ಪ್ರಿನ್ಸಿಪಲನ್ನೇ ನಮ್ಮ ಸುಪ್ರೀಂ ಕೋರ್ಟಿನಲ್ಲೂ ಕೂಡ ಆಧಾರವಾಗಿಟ್ಟುಕೊಂಡು ತೀರ್ಮಾನವನ್ನು ಕೊಟ್ಟಿದ್ದಾರೆ.

"... the principle of individual as well as collective ministerial responsibility can work most efficiently only when cases requiring proper

shifting and evaluation of evidence and discussion of question involved has taken place where it is required``.

This is a case which requires evidence which is the material before the Hon'ble Minister leading to this question. This has to be taken into consideration. ಆದ್ದರಿಂದಲೇ ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ನಾನು ತಮ್ಮನ್ನು ಕೇಳುತ್ತಿದ್ದೇನೆ. ಅದಾದನಂತರ 1960ನೇ ಇಸವಿಯಲ್ಲಿ ಸುಪ್ರೀಂ ಕೋರ್ಟಿನಲ್ಲಿ ಇದೇ ರೀತಿಯ ವಿಷಯಕ್ಕೆ ಸಂಬಂಧಪಟ್ಟಂತೆ ಬಂದಾಗ ಏನಾಯಿತು ಎಂಬುದನ್ನು ಹೇಳುತ್ತೇನೆ. ಇದೊಂದು ಜಡ್ಜಮೆಂಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇದನ್ನು ನಾವು ಕ್ಲೋಸ್ ಮಾಡಬೇಕಾಗಿದೆ. ಮಾನ್ಯ ಖರ್ಗೆಯವರು ತಮ್ಮ ಕಡೆ ಇನ್ನೂ 2-3 ಜನ ಮಾತನಾಡುವವರಿದ್ದಾರೆಂದು ಹೇಳಿದರು. But, the problem is since yesterday side to make their stand clear. I must also enable the Government side to make their stand clear. It should not become one side. It may not convey good message. Therefore, kindly help me. By 4.30 P.M. the Leader must begin his reply. I will be permitting the Deputy Leader of the Congress Party also to make submission. If you make it early I will be able to provide little time to Mr. Ayanur Manjunath.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಕೊಡತಕ್ಕಂತಹ ನಿರ್ಣಯ ಅನುಕೂಲವಾಗಬೇಕಾದರೆ, ಇದರ ಬಗ್ಗೆ ತೀರ್ಮಾನ ಯಾವಾಗಲಾದರೂ ಆಗಿದ್ದರೆ, ಏನು ಹೇಳಿದ್ದಾರೆ ಎನ್ನುವುದನ್ನು ಮಾತ್ರ ಗಮನಕ್ಕೆ ಹೇಳುತ್ತಿದ್ದೇನೆ. 1960ನೇ ಇಸವಿಯಲ್ಲಿ ಇದೇ ವಿಷಯ ಸುಪ್ರೀಂ ಕೋರ್ಟಿಗೆ ಬಂದಾಗ ಏನು ಹೇಳಿದ್ದಾರೆ ಎಂದರೆ, "There is a clear distinction between the position of a Secretary and the Department and the Chief Minister of a State. Under the Constitution, the Governor is directed to act on the advise fo the Ministers headed by the Chief Minister in exercise of the powers conferred by Clause 2 and 3 of Article 166 of the Constitution, the Governor.. make rules styled as Business Rules. ಅದನ್ನು ವ್ಯಾಖ್ಯಾನ ಮಾಡುತ್ತಾ ಸುಪ್ರೀಂ ಕೋರ್ಟ್ ಏನು ಹೇಳಿದೆ ಎಂದರೆ, It is therefore manifest that under the Constitution and the rules framed thereuder, a Minister incharge of a Department is primarily responsible for the disposal of the business pertaining to that department. ಸನ್ಮಾನ್ಯ ಸಭಾಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ತೀರ್ಪು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. Therefore it is manifest ರೂಲ್ಸ್ ಮತ್ತು

ಸಂವಿಧಾನವನ್ನು ವ್ಯಾಖ್ಯಾನ ಮಾಡುತ್ತಾ It is therefore manifest that under the Constitution and the rules framed thereunder, a Minister incharge of a Department is primarily responsible for the disposal of the business pertaining to that department but the ultimate responsibility for the advise is on the entire Ministry.

SRI H. SHIVAPPA : We are not here to be taught about parliamentary system and the joing responsibility and other things. It is not disputed. In a Parlimentary system of Government, joint responsibility need not be taught here.

MR. SPEAKER : Hon'ble Member Shivappa should understand that the Hon'ble Member is on her feet with the permission of the Chair and she is not trying to give tuition to anybody, she is only making her submission to the chair, You should have the patience please. You may be conversant with all these facts but not the Chair. Allow her to make her submission. Please have the patience. Be chivalrous to women.

SMT. PRAMILA NESARGI : Joint responsibility, collective responsibility individual ministerಗೆ ಆಗುತ್ತದೆಯೇ ಅಥವಾ ಎಲ್ಲಾ ಮಿನಿಸ್ಟರಗಳ ಮೇಲೆ ಅನ್ನತಕ್ಕಂತಹ ವಿಷಯವನ್ನು ಮಾತ್ರ ಹೇಳಿದೆ. ಇಲ್ಲಿ ಏನು ಹೇಳುತ್ತಾರೆ, ಸುಪ್ರೀಂ ಕೋರ್ಟಿನಲ್ಲಿ ಆ ಹೆಡ್ ಆಫ್ ದಿ ಡಿಪಾರ್ಟಮೆಂಟ್ ಸೆಕ್ರೆಟರಿಗೆ ಮಾತ್ರ ಅಲ್ಲ. ಅವರಿಗೆ ಸಂಬಂಧಿಸಿದ ಸಚಿವಾಲಯ ಮಾತ್ರವಲ್ಲ the entire Ministery is responsible ಅನ್ನತಕ್ಕಂತಹ ವಿಷಯವನ್ನು 1960ನೇ ಇಸವಿಯಲ್ಲಿ ಈ ರೀತಿ ತೀರ್ಮಾನಕ್ಕೆ ಬಂದಾಗ ಹೇಳಿದ್ದಾರೆ. ಆ ಕಾರಣದಿಂದ ಸಭಾಧ್ಯಕ್ಷರೇ ನಾನು ಇವತ್ತು ಹೇಳುತ್ತಿದ್ದೇನೆ. ಇದು ಕೇವಲ ವಾಸುದೇವನರವರು ಮಾಡಿದಂತಹ ವಿಷಯವಲ್ಲ, ಕೇವಲ ನ್ಯಾಯಾಲಯದ ನಿಂದನೆಯನ್ನು ಅವರು ಮಾಡಿದಲ್ಲ. It is the responsibility of the Minister concerned who is heading the department, not onlyy his responsiblity the entire responsibility lies on the entire collective responsibility of the Minister. ಇದು ಸುಪ್ರೀಂ ಕೋರ್ಟ ಹೇಳಿರತಕ್ಕಂತಹ ವಿಷಯ. ನಾನು ಹೇಳುತ್ತಿರುವುದು ಅಲ್ಲ. Article 166 interpret ಮಾಡಿ ಬಿಸಿನೆಸ್ ರೂಲ್ಸನ ಇಂಟರಪ್ರಿಟ್ ಮಾಡಿ ಹೇಗೆ ಇದನ್ನು ಅರ್ಥ ಮಾಡಬೇಕು ಅನ್ನತಕ್ಕಂತಹ ಸಂದರ್ಭದಲ್ಲಿ ಸುಪ್ರೀಂ ಕೋರ್ಟ ಈ ರೀತಿ ಹೇಳಿದೆ, ಆ ಕಾರಣಕ್ಕಾಗಿ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. responsibility, collective responsibility, morally, politically, legally, administratively ಎಲ್ಲದರ ಪರವಾಗಿ

ಇವತ್ತು ಮುಖ್ಯಮಂತ್ರಿಗಳು ಇದು ತಮ್ಮ ಜವಾಬ್ದಾರಿ ಎಂದು ತಿಳಿದುಕೊಂಡು ತಕ್ಷಣ ರಾಜಿನಾಮೆಯನ್ನು ಕೊಡಬೇಕು ಮತ್ತು ಮಂತ್ರಿ ಮಂಡಲವನ್ನು ವಿಸರ್ಜನೆ ಮಾಡಿ ಬೇರೆಯವರು ಬರುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎನ್ನತಕ್ಕಂತಹ ಸಂದರ್ಭದಲ್ಲಿ ಈ ವಿಷಯವನ್ನು ತಮ್ಮ ಮುಂದೆ ಇಡುತ್ತಾ ಇದ್ದೇನೆ. ಕಾನೂನಿನ ಪರವಾಗಿ ಇಡುತ್ತಿದ್ದೇನೆ. ನಾನು ಹೇಳುವುದು ಅಲ್ಲ. ಕಾನೂನು ಏನು ಹೇಳುತ್ತದೆ ಅದನ್ನು ಹೇಳುತ್ತಿದ್ದೇನೆ. Law may not be palatable to you. ಇದು ನಿಮಗೆ ಗೊತ್ತಾಗಲಿಲ್ಲವೆಂದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? For Ignorance of law, I cannot help it. There is no excuse. ಆ ಕಾರಣದಿಂದ ತಮ್ಮನ್ನು ನಾನು ಕೇಳುತ್ತೇನೆ...

SRI H. SHIVAPPA : We are not ignorant of law. She cannot claim, that you alone know. We are here.

MR. SPEAKER : You are a magnanimous person. YOu can put on with all these things.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನಗೆ ಅದು ಕಲ್ಲು ಬಂಡೆ ಇದ್ದ ಹಾಗೆ, ಇವರಿಗೆ ಎಷ್ಟೇ ಏನೇ ಹೇಳಿದರೂ ಇದು ನನಗೆ ಹೆದರಿಕೆಯಾಗುವುದಿಲ್ಲ.

ಅಧ್ಯಕ್ಷರು : ನೀವು ಬಂಡೆಯ ತರಹ ಆಗಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೇ, ಏಕೆಂದರೆ ಕೆಲವು ಸದಸ್ಯರು ಏನು ಹೇಳಿದರು ಎಂದರೆ ಮಾನವೀಯತೆ ಎನ್ನತಕ್ಕಂತಹ ಮಾತು. ಕಾನೂನಿನಲ್ಲಿ ಮಾನವೀಯತೆ ಪ್ರಶ್ನೆ ಬರುವುದಿಲ್ಲ. ಮಾನವಿಯತೆ ಯಾವಾಗ ಬರುತ್ತದೆ ಎಂದರೆ, Unqualified apology tender ಮಾಡಿದಾಗ ಅದು ಬರುತ್ತದೆ. ಆದರೆ ಆ tender of the apology ಹೇಗೆ ಇರಬೇಕು ಎನ್ನುವುದರ ಬಗ್ಗೆ ಕೂಡ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಮಾನ್ ಕೊಟ್ಟಿದೆ. ಅವರು ಕೊಡತಕ್ಕಂತಹ apology, there cannot be both a justification and an apology because the two things are incompatible.

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಹೇಳುತ್ತಾ ಇರುವ ಮಾತು ಜೀವರಾಜ ಆಳ್ವರನ್ನು ಕುರಿತು ಹೇಳುತ್ತಾ ಇರುವ ಹಾಗೆ ಇದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೇ, ಏನು ಹೇಳುತ್ತೇನೆಂದರೆ, ಸುಪ್ರೀಂ ಕೋರ್ಟ್ ಇದುವರೆಗೂ ಕೂಡ There cannot be both justification and an apology because the two things are incompatible. ಅಂದರೆ ಈ ಕೇಸನಲ್ಲಿನು ಮಾಡಿದ್ದಾರೆ ಎಂದರೆ, ಮೊದಲೇ ಎರಡು ತೀರ್ಮಾನಗಳು ಆಗಿತ್ತು, It was not justificable, ಆ ಕಾರಣಕ್ಕೆ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆದುದರಿಂದ ಸುಪ್ರೀಂ ಕೋರ್ಟ್‌ಗೆ ಅಪಾಲಜಿ ಅಕ್ಸೆಪ್ಟ ಮಾಡುವುದಕ್ಕೆ ಅಧಿಕಾರ ಇರಲಿಲ್ಲ ಕಾನೂನಿನ ಪ್ರಕಾರವಾಗಿ ಕ್ಷಮೆಯನ್ನು ಕೊಡಲಿಕ್ಕೆ ಅಧಿಕಾರ ಇರಲಿಲ್ಲ. ಕಾನೂನಿನ

ಚೌಕಟ್ಟಿನ ಒಳಗಡೆ ಕಂಟೆಮ್ಟ್ ಆಫ್ ದಿ ಕೋರ್ಟನ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಇವತ್ತು ಸುಪ್ರೀಂ ಕೋರ್ಟ ತೀರ್ಮಾನವನ್ನು ಕೊಟ್ಟಿದೆ. ಕ್ಷಮೆಯನ್ನು ಅಕ್ಸೆಪ್ಟ ಮಾಡಿಕೊಂಡಿಲ್ಲ. ಆ. ಕಾರಣ ಇವರು ಕ್ಷಮೆಯಾಚನೆ ಮಾಡಬೇಕಾಗಿತ್ತು ಎಂದು ಹೇಳತಕ್ಕಂಥದರಲ್ಲಿ ಅರ್ಥವಿಲ್ಲ, ಹುರುಳಿಲ್ಲ, ಅಥವಾ ನಾವು ಹೋಗಿ ಮಾಡಬಾರದು ಮಾಡಿ ಆಯಿತು, ಆಗಬಾರದು ಆಗಿಹೋಯಿತು ಕ್ಷಮಿಸಿಬಿಡಿ ಎಂದು ಹೇಳಿದರೆ ಕೋರ್ಟಗೆ ಅಧಿಕಾರವಿಲ್ಲದಿದ್ದರೆ, ಕೋರ್ಟ ಕೂಡ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ಅಧಿಕಾರವನ್ನು ಮೀರಿ ಕೆಲಸವನ್ನು ಮಾಡಿದ್ದಾರೆಂದು ಜನರು ಹೇಳುತ್ತಿದ್ದರು, ಎಲ್ಲರೂ ಹೇಳುತ್ತಿದ್ದರು ಆ ಕಾರಣದಿಂದ ಅವರು ಕ್ಷಮೆಯನ್ನು ಕೊಡಲಿಲ್ಲ, ಅವರು ಮಾಡಿರತಕ್ಕಂಥದ್ದು ಸರಿಯಾಗಿದೆ. ಆದರೆ ವಾಸುದೇವನ್ ಶಿಕ್ಷೆಯನ್ನು ಅನುಭವಿಸಬೇಕೋ ಅಥವಾ ಅದಕ್ಕೆ ಸಂಬಂಧಪಟ್ಟಂತಹ ಮಂತ್ರಿ ಶಿಕ್ಷೆಯನ್ನು ಅನುಭವಿಸಬೇಕೋ ಎನ್ನುವುದು ನಮ್ಮ ಮುಂದೆ ತಮ್ಮ ಇರತಕ್ಕಂತಹ ಪ್ರಶ್ನೆ. ವಾಸುದೇವನ್ ನೀವೆಲ್ಲರೂ ಹೇಳುವ ಹಾಗೆ ಒಳ್ಳೆಯ ವ್ಯಕ್ತಿ, ಪ್ರಾಮಾಣಿಕ ವ್ಯಕ್ತಿ, ದಕ್ಷ ಆಡಳಿತಗಾರ, ಅವರದೇನೂ ತಪ್ಪಿಲ್ಲ ಅಂದ ಮೇಲೆ ಅವರಿಗೆ ಶಿಕ್ಷೆ ಬರಬೇಕಾಗಿರಲಿಲ್ಲ, ಶಿಕ್ಷೆಯನ್ನು ಬೇರೆ ಒಬ್ಬರು ಅನುಭವಿಸಬೇಕಾಗಿತ್ತು ಹಾಗೂ ಸಂಬಂಧಪಟ್ಟಂತಹ ಮಂತ್ರಿಗಳವರು ಶಿಕ್ಷೆಯನ್ನು ಅನುಭಿವಿಸಬೇಕಾಗಿತ್ತು. ಅದಕ್ಕೆ ಸಂಬಂಧಪಟ್ಟಂತಹ ಮುಖ್ಯಮಂತ್ರಿಗಳು ಶಿಕ್ಷೆಯನ್ನು ಅನುಭಿವಿಸಬೇಕಾಗಿತ್ತು. ಅದೇ ವಿಷಯವನ್ನು ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರು ಕಲ್ಯಾಣಿ ಸಿಂಗರವರ ಒಂದು ಕ್ಷಮಯಾಚನೆಯ ವಿಷಯದಲ್ಲಿ ಹೇಳಿದ್ದಾರೆ. ಅದನ್ನೇ ಯು.ಪಿ.ಗೌರ್ನ್ಮೆಂಟನಲ್ಲಿ ಕಲ್ಯಾಣಿ ಸಿಂಗರವರು ಮಾಡಿದ್ದು, ಅದೇ ಒಂದು ಬಿಸಿನೆಸ್ ರೂಲ್ಸ ಪ್ರಕಾರ ಅವರು ತಪ್ಪನ್ನು ಒಪ್ಪಿಕೊಂಡು, ಅಪರಾಧಕ್ಕಾಗಿ ತಮ್ಮನ್ನು ತಾನು ಶಿಕ್ಷೆಗೆ, ಗುರಿಮಾಡಿಕೊಂಡರು. ನಾವು ಎಂದೂ ಹೇಳಿಲ್ಲ ನಮ್ಮ ಪಾರ್ಟಿಯಲ್ಲಿ. ನಾವು ತಪ್ಪನ್ನು ಎಂದೂ ಹೇಳಿಲ್ಲ. ಸುಪ್ರೀಂ ಕೋರ್ಟ ವಿರುದ್ಧ ಎಂದೂ ನಾವು ಹೇಳಿಲ್ಲ. ನ್ಯಾಯಾಂಗಕ್ಕೆ ತಲೆಬಾಗುತ್ತೇವೆ ಎನ್ನತಕ್ಕಂತಹ ಮಾತನ್ನು ಮಾತ್ರ ಹೇಳಿದ್ದೇವೆ.

ಶ್ರೀಕಾಗೋಡಿ ತಿಮ್ಮಪ್ಪ : ಸುಪ್ರೀಂ ಕೋರ್ಟಿನಲ್ಲಿ ಕಲ್ಯಾಣಿ ಸಿಂಗರವರೇ ಮುಖ್ಯಮಂತ್ರಿಯಾಗಿ ಪ್ರಮಾಣ ಪತ್ರಿಕೆಯನ್ನು ಹಾಕಿರುವ ಕಾರಣಕ್ಕಾಗಿ ತದನಂತರ ಅವರು ಅವರು ಒಪ್ಪಿಕೊಂಡ ಬಿಟ್ಟರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸುಪ್ರೀಂ ಕೋರ್ಟಿನಲ್ಲಿ ಅಧಿಕಾರಿಗಳಿಗೂ ಕೂಡ ನೋಟೀಸ್ ಕೊಟ್ಟರು, ದಯವಿಟ್ಟು ತಾವು ಪ್ರೋಸಿಡಿಂಗ್ಸ್ ಆದಾಗ ಓದಿಕೊಂಡು ಬರಬೇಕು ಕಲ್ಯಾಣಿಸಿಂಗ್‌ರವರಿಗೆ ಅಂಡರ್ ಟೇಕಿಂಗ್ ಕೊಟ್ಟರು ಮತ್ತು ಅಧಿಕಾರಿಗಳ ಮುಖಾಂತರ ಕೊಟ್ಟಾಗ, ಕಲ್ಯಾಣಿಸಿಂಗ್‌ರವರು ಹೋಗಿ ಅಧಿಕಾರಿಗಳನ್ನು ಜವಾಬ್ದಾರಿ ಮಾಡಬೇಡಿ ಏಕೆಂದರೆ ಅಧಿಕಾರಿಗಳು ನಾನು ಹೇಳಿದ ಹಾಗೆ ಮಾಡಿದ್ದಾನೆ, ನಾನು ತಪ್ಪನ್ನು ಒಪ್ಪಿಕೊಳ್ಳುತ್ತೇನೆ ಹೇಳಿ, ಧೈರ್ಯವಾಗಿ ಹೋಗಿ ತಪ್ಪು ಮಾಡಿದ್ದಕ್ಕೆ ಕ್ಷಮೆ ಹೇಳಿದರು ನ್ಯಾಯಾಂಗಕ್ಕೆ ಕೊಟ್ಟರು ಮತ್ತು ಶಿಕ್ಷೆಯನ್ನು ಕೂಡ ಅನುಭವಿಸಿದರು. ಎಂದೂ ಕೂಡ ಅಧಿಕಾರಿಗಳು ತಪ್ಪು ಎಂದು ಹೇಳಲಿಲ್ಲ, ನ್ಯಾಯಾಂಗಕ್ಕೆ ತಲೆಬಾಗಿದರು, ಶಿಕ್ಷೆಯನ್ನು ಅನುಭವಿಸಿದರು. ಅದು ಶ್ರೀಮಾನ್ ಕಲ್ಯಾಣಿ ಸಿಂಗರವರು ಕೆಲಸ ಮಾಡಿದ್ದು, ಅವರು ಮುಖ್ಯ ಮಂತ್ರಿಯಾಗಿ ಕಲ್ಯಾಣಿವಾದ ಕಾರ್ಯವನ್ನು ಮಾಡಿದರು. ಆದರೆ ಇಲ್ಲಿಯ ಮುಖ್ಯಮಂತ್ರಿಗಳು ಆ ಕೆಲಸವನ್ನು

ಮಾಡಲಿಲ್ಲ. ನಮ್ಮ ಮುಖ್ಯ ವಾಸುದೇವನ್ ಮುಖಾಂತರ ಅಫಿಡವಿಟ್ ಹಾಕಿಸಿದರು, ಶ್ರೀಮಾನ್ ವೀರಪ್ಪ ಮೊಯಿಲಿಯವರು ಅಫಿಡವಿಟ್ ಹಾಕಲಿಲ್ಲ, ಹಿಂದಿನ ಮುಖ್ಯ ಕಾರ್ಯದರ್ಶಿಯಾಗಿದ್ದ ಲಿಸ ಮುಖಾಂತರ ಅಫಿಡೆವಿಟ್ ಹಾಕಿಸಿದರು, ವಾಸುದೇವನ್ ಮುಖಾಂತರ ಅಫಿಡೆವಿಟ್ ಹಾಕಿಸಿದರು. ಶ್ರೀಮಾನ್ ದೇವೇಗೌಡರು ತಮ್ಮ ಅಫಿಡೆವಿಟ್ ಹಾಕಿ ನಮ್ಮದು ತಪ್ಪು ವಾಸುದೇವನ್‌ಗೆ ಶಿಕ್ಷೆಯನ್ನು ಕೊಡಬೇಡಿ, ಕೊಡುವುದಿದ್ದರೆ ನನಗೆ ಕೊಡಿ ಎಂದು ಹೇಳಲಿಲ್ಲ. ವಾಸುದೇವನ್ ಅವರನ್ನು ಸ್ಕೇಪ್ ನೋಟ್ ಮಾಡಿದರು. ಅದಕೋಸ್ಕರ ನಮ್ಮ ಅಳಲು, ಅದಕೋಸ್ಕರ ನಮ್ಮ ಏನು ಬೇಡಿಕೆ ಮುಂದುವರೆಯಬೇಕು, ತಾವು ಅವಕಾಶವನ್ನು ಕೊಡಬೇಕು, ಎಲ್ಲಾ ರೇಕಾರ್ಡನ್ನು ಪರಾಂಭರಿಸಿ, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆಯನ್ನು ಕೋಡೋಣ, ಒಂದು ವೇಳೆ ಮುಖ್ಯಮಂತ್ರಿಗಳು, ಮಾಡಿದ್ದರೆ ಅವರನ್ನು ಮನೆಗೆ ಕಳುಹಿಸೋಣ, ಒಂದು ವೇಳೆ ನಿಜವಾಗಿ ವಾಸುದೇವನ್ ಮಾಡಿದ್ದರೆ ಅವರ ಶಿಕ್ಷೆ ಸರಿ ಎಂದು ಹೇಳೋಣ. ಒಂದು ವೇಳೆ ಅವರಿಬ್ಬರೂ ಸಾಧ್ಯವಾದರೆ ಇಲ್ಲಿಯಾದರೂ ಮಾಡೋಣ, ನಾನು ಒಂದನ್ನು ಇಲ್ಲಿ ಕೇಳುತ್ತಿದ್ದೇನೆ, ಶ್ರೀಮಾನ್ ಮೊಯ್ಲಿಯವರು ಇದ್ದಾರೆ, ಶ್ರೀಮಾನ್ ಖರ್ಗೆಯವರು ಹೇಳಬಹುದಾಗಿತ್ತು ದೆಹಲಿಯಲ್ಲಿ ಗೃಹ ಸಚಿವರಿಗೆ, ನಿಜವಾಗಿ ವಾಸುದೇವನ್‌ರವರು ತಪ್ಪು ಮಾಡಿಲ್ಲದಿದ್ದರೆ ಹೋಗಿ ಪ್ರಧಾನ ಮಂತ್ರಿಯವರಿಗೆ ಹೋಗಿ ಹೇಳಬಹುದಾಗಿತ್ತು. ಶ್ರೀ ನರಸಿಂಹರಾವರವರೇ, ವಾಸುದೇವನ್‌ರವರು ಏನೂ ತಪ್ಪು ಮಾಡಿಲ್ಲ ನಾವು ಮಾಡಿದ್ದು ತಪ್ಪು ಪ್ರೆಸಿಂಡೆಂಟರಿಗೆ ಹೇಳಿ ಆರ್ಟಿಕಲ್ 72 ಪ್ರಕಾರವಾಗಿ ನೀವು ಗೃಹ ಸಚಿವರಿಗೆ ರೆಕಮೆಂಡ್ ಮಾಡಿ ಎಂದು ಹೇಳಬಹುದಾಗಿತ್ತು. ಮೊಯ್ಲಿಯವರೂ ಹೇಳಲಿಲ್ಲ. ಶ್ರೀಮಾನ್ ಖರ್ಗೆಯವರೂ ಹೇಳಲಿಲ್ಲ, ಅವರ ಪಾರ್ಟಿಯವರು ಹೇಳಲಿಲ್ಲ, ಆಗ ಏನು ಮಾಡುವುದು ? ಪಾರ್ಟಿ ವಿಪರ್ಯಾಸ, ಇದು ಇಲ್ಲಿ ಇರತಕ್ಕಂತಹ ಅಧಿಕಾರ ಇವತ್ತು ಆ ವಿಷಯವನ್ನು ಕೂಡ ಪರಾವಲಂಭನೆ ಮಾಡಬೇಕಾಗಿದೆ.

4.20 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಕಡೆ ಅವರು ಹೇಳುತ್ತಾರೆ, ಅಧ್ಯಕ್ಷರಿಗೆ ನೋಡಿದರೆ, ಚೀಫ್ ಜಸ್ಟೀಸಗೆ ನೋಡಿದರೆ interference in the justice ಎಂದು ಹೇಳಿದರು. ಇನ್ನೊಂದು ಕಡೆ ಹೇಳುತ್ತಾರೆ, ಮೊಯಿಲಿಯವರು ಹೋಗಬೇಕಾಗಿತ್ತು, ನೀವು ಹೋಗಬೇಕಾಗಿತ್ತು, ಏಕೆ ಹೋಗಲಿಲ್ಲವೆಂದು ಹೇಳುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ತಪ್ಪು ತಿಳಿದುಕೊಂಡಿದ್ದಾರೆ. ಆರ್ಟಿಕಲ್ 72 ರ ಪ್ರಕಾರ ರಾಷ್ಟ್ರಾಧ್ಯಕ್ಷರಿಗೆ ಕ್ಷಮೆಯಾಚನೆ ಮಾಡತಕ್ಕ ಅಧಿಕಾರ ಇದೆ. ನಾನು ನಿಮ್ಮನ್ನು ಚೀಫ್ ಜಸ್ಟೀಸ್ ನೋಡಿ ಎಂದು ಹೇಳಿಲಿಲ್ಲ, ಚೀಫ್ ಜಸ್ಟೀಸ್ ನೋಡಿದರೆ ನಿಮ್ಮ ಮೇಲೆ ನೀವು ತಪ್ಪು ಮಾಡಿದ್ದೀರೆಂದು ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ. ಆದರೆ ಅಧ್ಯಕ್ಷರು ಕ್ಷಮಾಯಾಚನೆ ನೀಡಬೇಕಾದರೆ ಹೋಂ ಸೆಕ್ರೆಟರಿಯಿಂದ ಒಪೀನಿಯನ್ ತರಿಸಿಕೊಳ್ಳುತ್ತಾರೆ. ತರಿಸಿಕೊಳ್ಳಬೇಕಾದರೆ, ತಾವು ಹೇಳಬಹುದಾಗಿತ್ತಲ್ಲಾ, ಹೋಂ ಸೆಕ್ರೆಟರಿಗೆ ಹೋಗಿ ಹೀಗೆ ಅನ್ಯಾಯವಾಗಿದೆ, ನಮ್ಮ ಸರ್ಕಾರದಲ್ಲಿ ಏನೋ ಆಗಿ ಹೋಯಿತು.

ದಯವಿಟ್ಟು ತಾವು ರೆಕಮೆಂಡ್ ಮಾಡಿ ಎಂದು ಹೇಳಬಹುದಾಗಿತ್ತು. ತಾವು ಆ ಕೆಲಸ ಮಾಡಲಿಲ್ಲ. ಮಾಡಿದ್ದರೆ ಕ್ಷಮಾಯಾಚನೆ ಆಗುತ್ತಿತ್ತು. ರಾಷ್ಟ್ರಾಧ್ಯಕ್ಷರು ಕ್ಷಮಾಯಾಚನೆ ಕೊಡುತ್ತಿದ್ದರು. ಆ ಕೆಲಸವನ್ನು ತಾವು ಮಾಡಲಿಲ್ಲ. ಅಂತಹ ಕೆಲಸವನ್ನು ತಾವು ಮಾಡಲಿಲ್ಲವೆಂದು ನಾನು ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಓದಿದ್ದೀರೋ ಇಲ್ಲವೋ, ಆರ್ಟಿಕಲ್ 72(ಬಿ) ಓದಿ. ಕಂಟೆಪ್ಟ ಕೇಸನಲ್ಲಿ it is the right of the Supreme Court. It is not violative of any law. 72(ಬಿ) ಪ್ರಕಾರ ಕ್ಷಮಾದಾನ ಮಾಡತಕ್ಕ ಹಕ್ಕು ಅಧ್ಯಕ್ಷರಿಗೆ ಇದೆಯೇ ಎಂಬುದನ್ನು ತಾವೇ ವಿಮರ್ಶೆ ಮಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆರ್ಟಿಕಲ್ 72- to grant pardon and to suspend, remit or commute the sentences. It is not exhaustive. ದಯವಿಟ್ಟು ಕಾನೂನು ಮಂತ್ರಿಗಳನ್ನು ಕೇಳಿ. It is not exhaustive definition. ಎಕ್ಸಾಸ್ಟೀವ್ ಡೆಫನಿಷನ್ ಕೊಟ್ಟಿಲ್ಲ. It is an elastic definition. ಎಲಾಸ್ಟಿಕ್ ಡೆಪನಿಷನ್ ಆದಾಗ, ಯಾವುದೇ ಕಾನೂನಿನಲ್ಲಿ ಯಾವುದೇ ತಪ್ಪು ಮಾಡಿದ್ದರೂ, ರಾಷ್ಟ್ರಾಧ್ಯಕ್ಷರಿಗೆ ಕ್ಷಮೆ ಮಾಡತಕ್ಕ ಅಧಿಕಾರ ಇದೆ.

MR. SPEAKER : ``May" includes ``may not" also.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು ಕೆಲವು ಸಂದರ್ಭಗಳಲ್ಲಿ. Under what context `may" becomes ``may not" and under what context, when it becomes shall.

ಆದರೆ ಈ ಕೇಸಿನಲ್ಲಿ ರಾಷ್ಟ್ರಾಧ್ಯಕ್ಷರು ಹೋಂ ಸೆಕ್ರೆಟರಿ ಒಪೀನಿಯನ್ ಕೇಳಿದರು. ಕೇಳಿದಾಗ ಕೊಟ್ಟುಬಿಟ್ಟಿದ್ದರೆ, ಕೊಡಿ ಎಂದು ಹೇಳಿದರೆ ಆಗುತ್ತಿತ್ತು. ಹೋಂ ಸೆಕ್ರೆಟರಿಯವರು ಕೊಡಬಹುದು. ಏನೋ ಅಚಾತುರ್ಯ ಆಗಿದೆ ಎಂದು ಇವತ್ತು ರಾಷ್ಟ್ರಾಧ್ಯಕ್ಷರು ಕ್ಷಮೆ ಕೊಡುತ್ತಿದ್ದರು. ಆ ಕೆಲಸ ಆಗಲಿಲ್ಲ. ಇನ್ನೂ ಮಾತನಾಡುವವರು ಇರುವುದರಿಂದ ನಾನು ಇಷ್ಟೇ ಹೇಳುವುದು. ಇದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಈ ನಿಲುವಳಿ ಸೂಚನೆಗೆ ಪರ್ಮಿಷನ್ ಕೊಟ್ಟು ಪ್ರತಿಯೊಂದು ರೆಕಾರ್ಡ್, ಯಾರು ಸಾಲಿಸಿಟರ್ ಜನರಲ್, ಅಡ್ವೊಕೇಟ್ ಏತಕ್ಕೆ ಸುಪ್ರೀಂ ಕೋರ್ಟಿಗೆ ಹೋಗಲಿಲ್ಲ, ಯಾರು ರೆಕಾರ್ಡ್ ಹಾಕಿದರು, ಏನು ಪ್ರಮಾಣ ಪತ್ರ ಹಾಕಿದರು ಎಲ್ಲವನ್ನೂ ತರಿಸಿನೋಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು, ನಿಲುವಳಿ ಸೂಚನೆಗೆ ಬೆಂಬಲಿಸಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಇದುವರೆಗೆ 7 ಗಂಟೆ 16 ನಿಮಿಷಗಳ ಕಾಲ ಚರ್ಚೆ ಮಾಡಿದ್ದೀರಿ. I will close the debate by 4.30 PM and the Government will reply. I should be considerate. I must ask the Leader of the House.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಬಹಳ ಪ್ರಾಮುಖ್ಯವಾದುದೆಂದರೆ ಇವತ್ತು ತಂದಿರತಕ್ಕ

ನಿಲುವಳಿ ಸೂಚನೆ ಸಾರ್ವಜನಿಕವಾಗಿ ಅತ್ಯಂತ ಮಹತ್ವವಾಗಿರತಕ್ಕ ನಿಲುವಳಿ ಸೂಚನೆಯನ್ನು ನಾವು ನಮ್ಮ ಪಕ್ಷದ ವತಿಯಿಂದ ತಂದಿದ್ದೇವೆ. ಅದಕ್ಕೆ ಪೂರಕವಾಗಿ ನಮ್ಮ ನಾಯಕರು ಮಾತನಾಡತಕ್ಕ ಸಂದರ್ಭದಲ್ಲಿ ಅದರ ಮಹತ್ವ ಏನು ಎಂಬುದರ ಬಗ್ಗೆ ಈ ಸಭೆಯ ಗಮನಕ್ಕೆ ತಂದಿದ್ದಾರೆ, ಮತ್ತು ಗಮನಕ್ಕೂ ತಂದಿದ್ದಾರೆ. ನಾನು ಈ ಸಂದರ್ಭದಲ್ಲಿ ಸಾರ್ವಜನಿಕವಾಗಿ ಏತಕ್ಕೆ ಇದು ಮಹತ್ವವಾಗಿರತಕ್ಕದ್ದು ಎಂಬುದಕ್ಕೆ ಒಂದೇ ಒಂದು ವಿಷಯ ಹೇಳಬೇಕಾದರೆ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವೇ ಸೃಷ್ಟಿ ಮಾಡಿಕೊಂಡಿರತಕ್ಕದ್ದು ರಾಜ್ಯ ಸರ್ಕಾರ, ವಿಧಾನಸಭೆ, ಸಂಸತ್ತು ಸುಪ್ರೀಂಕೋರ್ಟ್, ಹೈಕೋರ್ಟ ಇವೆಲ್ಲಾ. ಇವತ್ತು ಆ ವ್ಯವಸ್ಥೆಯಲ್ಲಿ ನಾವು ಇರಬೇಕಾದರೆ ನಮ್ಮ ಈ ಬಿಲ್ಟ್ ಇನ್ ಸ್ಟ್ರಕ್ಚರನಲ್ಲಿ ನಾವು ಕೆಲಸ ಮಾಡುವಂತ ಸಂದರ್ಭದಲ್ಲಿ ಇವತ್ತು ನಾವು ಅದಕ್ಕೆ ಗೌರವ ಕೊಡಬೇಕು. ಅದಕ್ಕೆ ಯಾವ ರೀತಿ ಸ್ಥಾನಮಾನ ಇದೆ, ಗೌರವ ಇದೆ ಎಂಬುದರ ಬಗ್ಗೆ ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇದರ ವ್ಯಾಪ್ತಿ ಮೀರಿ ನಾವು ಕೋರ್ಟಿಗೆ ಕೊಟ್ಟಿರತಕ್ಕ ಹಕ್ಕು ಜಾಸ್ತಿ ಆಯಿತೇ ಕಡಿಮೆ ಆಯಿತೇ ಎಂಬುದರ ಬಗ್ಗೆ ಚರ್ಚೆಯನ್ನು ವಿಶೇಷವಾಗಿ ಬೇರೆ ಸಂದರ್ಭದಲ್ಲಿ ಮಾಡಬಹುದು. ಆದರೆ ಕೋರ್ಟ ವಿಷಯದಲ್ಲಿ ಮಾತನಾಡುವ ಸಂದರ್ಭದಲ್ಲಿ ಇವತ್ತು ಸಾಕಷ್ಟು ಜನ ಅವರವರದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರಬಹುದು. ಆದರೆ ಬಹಳ ಮುಖ್ಯವಾಗಿ ಧನಂಜಯ ಎಂಬುವವರು 18 ವರ್ಷಗಳ ಕಾಲದಿಂದ ತನ್ನ ಹಕ್ಕಿಗೋಸ್ಕರ ಹೋರಾಟ ಮಾಡಿ ಇದೇ, ಸುಪ್ರೀಂ ಕೋರ್ಟ ನ್ಯಾಯ ದೊರಕಿಸಿರತಕ್ಕದ್ದು. ಇವತ್ತು ಒಬ್ಬ ಪ್ರಾಮಾಣಿಕ ಅಧಿಕಾರಿ ಯರದೋ ತಪ್ಪಿನಿಂದ ಜೈಲು ಶಿಕ್ಷೆ ಅನುಭವಿಸುವ ಪರಿಸ್ಥಿತಿ ಒದಗಿಸುವುದಕ್ಕೆ ಎಲ್ಲರೂ ಈ ಸಭೆಯಲ್ಲಿ ಪಕ್ಷತೀತವಾಗಿ ಅನುಕಂಪ ತೋರಿಸತಕ್ಕದ್ದು ಮತ್ತು ಇರತಕ್ಕ ವ್ಯವಸ್ಥೆಯಲ್ಲಿ ತಪ್ಪು ಎಂದು ಹೇಳುವಂಥ ಮಟ್ಟಕ್ಕೆ ಹೋಗಿದ್ದೇವೆ, ಇದು ಏಕೆ? ಇಲ್ಲಿ ಒಂದು ತಪ್ಪು ಕಲ್ಪನೆಯಾಗಿದೆ. ಈಗ ತಪ್ಪು ಮಾಡಿರತಕ್ಕವರು ಯಾರು? ಯಾರಿಂದ ತಪ್ಪಾಯಿತೆಂಬುದು ಬಹಳ ಪ್ರಾಮುಖ್ಯವಾಗಿರತಕ್ಕದ್ದು. ಇವತ್ತು ನಮಗೆ ಒಂದು ತಪ್ಪು ಕಲ್ಪನೆ ಏನಾಗಿದೆ ಎಂದರೆ, ಹೊರಗಡೆ ಹೋದಂಥ ಸಂದರ್ಭದಲ್ಲಿ ಸಾರ್ವಜನಿಕವಾದ ಅಭಿಪ್ರಾಯಗಳೇನೆಂಬುದನ್ನು ಯಾರ್ಯಾರು ಏನೇನು ಮಾತನಾಡಿದ್ದಾರೆಂದು ತಾವು ಕೇಳಿದರೆ ಗೊತ್ತಾಗುತ್ತದೆ. ಇವತ್ತು ಶಿಕ್ಷೆ ಕೊಟ್ಟಿರತಕ್ಕದ್ದು ಸರಿ ಎಂದು ವಾದ ಮಾಡುವವರೂ ಇದ್ದಾರೆ, ತಪ್ಪು ಎಂದು ವಾದ ಮಾಡುವವರು ಇದ್ದಾರೆ. ಯಾರದೋ ತಪ್ಪಿನಿಂದ ಆಗಿದೆ ಎಂಬುದರ ಬಗ್ಗೆ ಚರ್ಚೆ ಮಾಡತಕ್ಕದ್ದು ಇದೆ. ವಿಶಿಷ್ಟವಾಗಿ ಎಲ್ಲರೂ ವಿಧಾನಸಭೆಯ ಕಡೆಗೆ ನೋಡುವ ಸಂದರ್ಭ ಒದಗಿರುವುದರಿಂದ ಈಗ ತಪ್ಪು ಮಾಡಿರತಕ್ಕವರು ಯಾರು? ಯಾರಿಂದ ತಪ್ಪಾಗಿದೆ ಎಂಬುದನ್ನು ವಿಶ್ಲೇಷಣೆ ಮಾಡಿ ಈ ಸಭೆಯ ಮುಖಾಂತರ ಜನರಿಗೆ ಮನವರಿಕೆ ಮಾಡತಕ್ಕದ್ದು ಬಹಳ ಪ್ರಾಮುಖ್ಯವಾಗಿರತಕ್ಕದ್ದು. ಈಗ ಮುಖ್ಯವಾಗಿ ಬಂದಿರತಕ್ಕದ್ದು ಮುಖ್ಯ ಮಂತ್ರಿಗಳು ಮತ್ತು ಕಾರ್ಯದರ್ಶಿಗಳು ಯಾರು, ಯಾವ ರೀತಿ ಕೆಲಸ ಮಾಡಬೇಕು, ಯಾರ ತಪ್ಪು, ಯಾರಿಂತ ಇದು ಆಯಿತು ಎಂಬುದರ ಬಗ್ಗೆ ಚರ್ಚೆ ಯಾಗಬೇಕಾಗಿದೆ. ಇದರ ಬಗ್ಗೆ ನನಗನ್ನಿಸುತ್ತದೆ ಇವತ್ತು ಸರ್ಕಾರ ಅಂದರೆ ಯಾರು? ಕಾರ್ಯದರ್ಶಿಯಾಗಿರತಕ್ಕವರ ಸರ್ಕಾರ ಅಥವಾ ಮುಖ್ಯ ಮಂತ್ರಿಯಾಗಿರತಕ್ಕವರ ಸರ್ಕಾರ ಎಂಬುದು. ಮುಖ್ಯಮಂತ್ರಿಯಾಗಿರತಕ್ಕವರು ನನ್ನ ಅಭಿಪ್ರಾಯದಲ್ಲಿ he is an executive head of the State. ಇವತ್ತು ಅವರ ಪರವಾಗಿ

ಯಾವುದೇ ಒಂದು ಅಫಿಡವಿಟ್ ಫೈಲ್ ಮಾಡಬೇಕಾದರೂ ಕೂಡ ಕೋರ್ಟ ಮುಖಾಂತರ ಸರ್ಕಾರದ ಪ್ರತಿನಿಧಿಗಳಾಗಿರತಕ್ಕವರು ಅಫಿಡವಿಟ್ ಹಾಕತಕ್ಕದ್ದು. ಇಲ್ಲಿ ಮುಖ್ಯವಾಗಿ ಆಗಿರತಕ್ಕದ್ದು ಏನೆಂದರೆ ನಾವು ಕೋರ್ಟಮುಂದೆ ಕೋಟ್ಟಿರತಕ್ಕ ಅಫಿಡವಿಟ್ ಏನಿದೆ ಅದಕ್ಕೆ ಎರಡು ತಿಂಗಳ ಕಾಲ ಅದನ್ನು ಜಾರಿಗೊಳಿಸುವುದಕ್ಕೆ ಕಾಲಾವಕಾಶ ಇತ್ತು. ಅಫಿಡವಿಟ್ ಕೊಡತಕ್ಕ ಸಂದರ್ಭದಲ್ಲಿ ನಾವು ಒಪ್ಪಿಕೊಂಡಿದ್ದೆವು. ಸುಪ್ರೀಂಕೋರ್ಟಿಗೆ ವಚನವನ್ನು ಕೊಟ್ಟಿದ್ದೇವೆ. ಸುಪ್ರೀಂ ಕೋರ್ಟ ಅದು ಸರ್ವೋಚ್ಚ ನ್ಯಾಯಾಲಯ, ಆ ತೀರ್ಮಾನಕ್ಕೆ ಎಲ್ಲರೂ ಬದ್ಧ ಅನ್ನತಕ್ಕ ಸಂದರ್ಭದಲ್ಲಿ ಇವತ್ತು ಅವರು ತೀರ್ಪು ಕೊಟ್ಟು ಎರಡು ತಿಂಗಳು ಆದಮೇಲೆ ಕೊನೆಯ ಗಳಿಗೆಯಲ್ಲಿ ಕೋರ್ಟಿನವರು ಶಿಕ್ಷೆ ಖಾಯಂ ಮಾಡುವಂಥ ಸಂದರ್ಭದಲ್ಲಿ, ಶಿಕ್ಷೆ ಕೊಡುವ ಸಂದರ್ಭದಲ್ಲಿ ಕೂಡ ನಮ್ಮ ಅಡ್ವೋಕೇಟಗೆ ೪ ಗಂಟೆ ಕಾಲ ಅವಕಾಶ ಕೊಟ್ಟಿದ್ದರು. ಇದರ ಬಗ್ಗೆ ತೀರ್ಪು ಏನು ತೀರ್ಮಾನ ಏನು ಎಂದು ಎರಡನೇ ಸಾರಿ ಹಿಯರಿಂಗ್ ಇಟ್ಟುಕೊಂಡು ನಂತರ ಯಾವುದೇ ತರಹದ ಪ್ರತ್ಯುತ್ತರ ಬಾರದೆ ಇರತಕ್ಕ ಸಂದರ್ಭದಲ್ಲಿ ಇದನ್ನು ಕನಫಾರ್ಮ ಮಾಡತಕ್ಕ ಮಟ್ಟಕ್ಕೆ ಹೋದಾಗ ಇವತ್ತು ನನಗೆ ಇದರ ಲ್ಯಾಪ್ಸಸ್ ಎಲ್ಲಿ ಆಗಿದೆ ಯಾರಿಂದ ಆಗಿದೆ ಎಂಬುದು ಮುಖ್ಯ. ಇವತ್ತು ಆಡಳಿತ ಮಾಡತಕ್ಕವರ ತಪ್ಪಿನಿಂದ ಅಥವಾ ನಮ್ಮ ಪರವಾಗಿರತಕ್ಕ ವಕೀಲರ ತಪ್ಪಿನಿಂದ ಅಥವಾ ಅಧಿಕಾರಿಯ ತಪ್ಪಿನಿಂದ ಆಗಿದೆಯೇ ಸತ್ಯಾಂಶ ಏನು ಎಂಬುದು ಹೊರಗಡೆ ಬರಬೇಕಾಗಿರುವುದರಿಂದ, ದಯವಿಟ್ಟು ಇದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ನಿಲುವಳಿ ಸೂಚನೆಯನ್ನು ತಂದಿರತಕ್ಕದ್ದು ಸತ್ಯಾಂಶ ಏನಿದೆ ಎಂಬುದು ಹೊರಗೆ ಬರಬೇಕಾಗುತ್ತದೆ. ಅದನ್ನು ಚರ್ಚೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಈ ವಿಷಯ ಏನು ಎಂಬುದರ ಬಗ್ಗೆ ವ್ಯಾಪಕವಾಗಿ ಎಲ್ಲರಿಗೆ ಗೊತ್ತಾಗಬೇಕಾಗಿದೆ. ಇದಕ್ಕೆ ಪೂರಕವಾಗಿ ಆಡಳಿತದಲ್ಲಿರತಕ್ಕವರ ತಪ್ಪಿನಿಂದ ಆಗಿದೆ ಎಂದು ಹೇಳುವುದಕ್ಕೆ ಆಡಳಿತ ಪಕ್ಷದ ಅನೇಕ ಶಾಸಕರು ಇವತ್ತು ಸರ್ಕಾರದ ಮಂತ್ರಿಗಳು ಮುಖ್ಯಮಂತ್ರಿಗಳ ಗಮನಕ್ಕೆ ವಿಷಯವನ್ನು ಲಿಖಿತ ಮೂಲಕ ಕೊಟ್ಟುಕೊಂಡು ಈ ರೀತಿ ತಪ್ಪಾಗಿದೆ. ಕಾನೂ ಉಲ್ಲಂಘನೆಯಾಗುತ್ತಿದೆ, ಕಂಟೆಂಪ್ಟ ಆಗುತ್ತಿದೆ ಎಂಬ ವಿಷಯವನ್ನು ಗಮನಕ್ಕೆ ತಂದಿರುವ ಸಂದರ್ಭದಲ್ಲಿ, ಇವತ್ತು ತಪ್ಪು ಯಾರದ್ದು ಎಂಬುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಮಗೆ ತಿಳಿಸಬೇಕಾಗುತ್ತದೆ ಮತ್ತು ರೆಸ್ಪಾನ್ಸಿಬಿಲಿಟಿ ಯಾರು, ಮೂಲಭೂತವಾಗಿರತಕ್ಕವರು ಯಾರು? ಇವತ್ತು ಅಧಿಕಾರಿ ಜೈಲಿಗೆ ಹೋಗಿರಬಹುದು. ಆದರೆ ತಪ್ಪು ಯಾರಿಂದ ಆಗಿದೆ, ಯಾವ ತಪ್ಪಿನಿಂದ ಜೈಲಿಗೆ ಹೋಗಿದ್ದಾರೆಂಬುದು ಕೂಡ ಬಹಳ ಮುಖ್ಯವಾಗಿರುತ್ತದೆ. ಇನ್ನೊಂದು ಮುಖ್ಯವಾದೇನೆಂದರೆ ನಿನ್ನೆ ಸುಪ್ರೀಂ ಕೋರ್ಟಿನಲ್ಲಿ ಹಾಕಿರತಕ್ಕ ಸರ್ಕಾರದ ಮನವಿ ತಿರಸ್ಕೃತವಾಗಿದೆ. ಅಂದಾಕ್ಷಣಕ್ಕೆ ಯಾವುದೋ ಒಂದು ಟೆಕ್ನಿಕಲ್ ರೀಸನನಿಂದ ಮನವಿ ತಿರಸ್ಕೃತವಾಗಿರಬಹುದು. ಈಗಲೂ ಕೂಡ ರಾಷ್ಟ್ರಾಧ್ಯಕ್ಷರ ಮುಂದೆ ಹೋಗಿ ಅರ್ಜಿ ಹಾಕತಕ್ಕ ಅವಕಾಶ ನಮಗೆ ಇರತಕ್ಕದ್ದು ಇದೆ. ಅವರು ಪ್ರಾಮಾಣಿಕ ಅಧಿಕಾರಿ. ನನಗನ್ನಿಸುತ್ತದೆ, ಇಡೀ ಸದನ ಅಲ್ಲ, ಬಹಳ ಜನರು ಅದೇ ಭಾವನೆ ವ್ಯಕ್ತಪಡಿಸಿರತಕ್ಕದ್ದು, ಸಭೆಯ ಹೊರಗಡೆ ಕೂಡ ಎಲ್ಲಾ ಜನರಲ್ಲ ಅದೇ ಭಾವನೆ ಇರತಕ್ಕದ್ದು. ಇಂಥಹ ಪ್ರಾಮಾಣಿಕ ಅಧಿಕಾರಿಗೆ ತಪ್ಪಾಯಿತು, ಶಿಕ್ಷೆ ಅನುಭವಿಸುತ್ತಿದ್ದಾರೆಂಬ ಬಗ್ಗೆ ಎಲ್ಲರೂ ವಿಷಾದ ವ್ಯಕ್ತಪಡಿಸುತ್ತಿದ್ದಾರೆ. ಅಧಿಕಾರಿ ಪ್ರಾಮಾಣಿಕ ವ್ಯಕ್ತಿಯಾಗಿರುವುದರಿಂದ ಎಲ್ಲರೂ ಅನುಕಂಪ ವ್ಯಕ್ತಪಡಿಸುತ್ತಾರೆ. ಯಾರಿಂದ ತಪ್ಪಾಗಿದೆ ಎಂದು

ಹೇಳಬೇಕಾಗಿರತಕ್ಕವರು ಮುಖ್ಯ ಮಂತ್ರಿಗಳು. ಚರ್ಚೆಗೆ ಅಲೋ ಮಾಡಿದ ಸಂದರ್ಭದಲ್ಲಿ ಎಲ್ಲಾ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ನಾಯಕರಾದ ಶ್ರೀ ಮೊಯಿಲಿಯವರು ಹಂತಹಂತವಾಗಿ ವಿಷಯವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ತಪ್ಪು ನಮ್ಮಿಂದ ಆಗಿಲ್ಲ, ತಪ್ಪು ಸರ್ಕಾರದಿಂದ ಆಗಿದೆ ಅಂದರೆ ಅದು ಏನು? ಕೇವಲ 4-5 ತಿಂಗಳಲ್ಲಿ ಆಗಿರತಕ್ಕ ತಪ್ಪಿನಿಂದ ಇವತ್ತು ಶಿಕ್ಷೆ ಅನುಭವಿಸತಕ್ಕ ಸಂದರ್ಭ ಉಂಟಾಗಿದೆ.

ನಮ್ಮ ಮುಂದೆ ಇರತಕ್ಕದ್ದು ಇವತ್ತು ಸುಪ್ರೀಂ ಕೋರ್ಟ ಮುಂದೆ ವಚನವನ್ನು ಕೊಟ್ಟಿರತಕ್ಕವರು ಯಾರು? ವಚನಭ್ರಷ್ಟರಾಗಿರತಕ್ಕವರು ಯಾರು? ಅದರ ಪರಿಣಾಮಗಳೇನು? ಆಡಳಿತದ ಮೇಲೆ ತನ್ನದೇ ಆದ ಪರಿಣಾಮವಾಗಿದೆ. ಯಾವ ಅಧಿಕಾರಿಗಳೂ ಕೂಡ ಮಂತ್ರಿಗಳ ಹಾಗೂ ಕೋರ್ಟ ಆಜ್ಞೆಯನ್ನು ಗೌರವಿಸದೇ ಇರತಕ್ಕ ಮಟ್ಟಕ್ಕೆ ಬಂದುಹೋಗಿದೆ. ಆಡಳಿತದ ಮೇಲೆ ಅದು ತನ್ನದೇ ಆದಂಥ ಪರಿಣಾಮವನ್ನು ಬೀರಿರುವುದರಿಂದ ಸಾರ್ವಜನಿಕವಾಗಿ ಇದರ ಚರ್ಚೆಯಾಗಬೇಕಾಗುತ್ತದೆ. ನಾವು ನಿಲುವಳಿ ಸೂಚನೆಯನ್ನು ಒಪ್ಪಬೇಕಾಗುತ್ತದೆ. ಬಹಳ ಮುಖ್ಯವಾಗಿ ಇನ್ನೊಂದು ವಿಷಯ ಇವತ್ತು ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿದೆ ಸಭಾಧ್ಯಕ್ಷರೆ. ಇವತ್ತು ನಮ್ಮ ರಾಜ್ಯದ ಮಂತ್ರಿಗಳು ಕೂಡ ಕಾಂಗ್ರೆಸ್ಸಿನ ಮುಖಂಡರುಗಳೆಲ್ಲಾ ಸೇರಿ ಏನೋ ಒಂದು ರಾಜಕೀಯ ಚಿತಾವಣೆಯನ್ನು ಮಾಡಿ, ರಾಷ್ಟ್ರಪತಿಗಳ ಮುಂದೆ ಮರ್ಸಿ ಪಿಟಿಷನ್ ಕೂಡ ಬರುವುದಕ್ಕೆ ಪ್ರಯತ್ನ ಮಾಡಲಿಲ್ಲ ಎನ್ನತಕ್ಕಂಥ ಒಂದು ಆಕ್ಷೇಪವನ್ನೂ ಕೂಡ ಮಾಡಿದ್ದಾರೆ. ಇವತ್ತು ಅವರು ಆಕ್ಷೇಪವನ್ನು ಮಾಡಿದ್ದೇ ಆಗಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ, ಇವತ್ತು ಅವರಿಗೆ ಎಷ್ಟು ಕಾಳಜಿ ಇದೆ? ಇವತ್ತಿನ ಪ್ರಜಾವಾಣಿ ಪೇಪರನಲ್ಲಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಅದೂ ಕೂಡ ರೋಷನ್ ಬೇಗ್ ಅವರೇ ಆರೋಪಿಸಿದ್ದಾರೆ ಎಂದು ಹೇಳಿ ಇವತ್ತು ಸ್ಪಷ್ಟವಾಗಿ ಪ್ರಜಾವಾಣಿಯಲ್ಲೂ ಕೂಡ ಬಂದಿದೆ. ಅವರು ಏನು ಹೇಳಿದ್ದಾರೆಂದರೆ "ಹಿರಿಯ ಐ.ಎ.ಎಸ್. ಅಧಿಕಾರಿ ಜೆ. ವಾಸುದೇವನ್ ಅವರಿಗೆ ಕ್ಷಮೆ ನೀಡುವಂತೆ ರಾಜ್ಯ ಸರ್ಕಾರ ರಾಷ್ಟ್ರಪತಿಯವರಿಗೆ ಮಾಡಿದ್ದ ಮನವಿ ವಿಷಯದಲ್ಲಿ ರಾಜ್ಯದ ಕಾಂಗ್ರೆ ನಾಯಕರ ಭಾರಿ ಒತ್ತಡದಿಂದಾಗಿ ಕೇಂದ್ರ ಗೃಹ ಸಚಿವಾಲಯದಿಂದ ರಾಷ್ಟ್ರಪತಿಯವರಿಗೆ ಶಿಫಾರಸ್ಸು ಹೋಗಲಿಲ್ಲ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ರೋಷನ್ ಬೇಗ್ ಅವರು ಇಂದು ಇಲ್ಲಿ ಆರೋಪಿಸಿದರು. ವಾಸುದೇವನ್ ಅವರಿಗೆ ರಾಷ್ಟ್ರಪತಿ ಅವರಿಂದ ಕ್ಷಮಾದಾನ ಪಡೆಯುವುದಕ್ಕಾಗಿ ಮುಖ್ಯಮಂತ್ರಿರ ದೇವೇಗೌಡರ ಜೊತೆ ಕಳೆದ ಶುಕ್ರವಾರ ರಾತ್ರಿಯಿಂದ ಇಲ್ಲಿಯೇ ಬಿಡಾರ ಹೂಡಿದ್ದ ಬೇಗ್ ಇಂದು ಬೆಂಗಳೂರಿಗೆ ಹೊರಡುವ ಮುನ್ನ ವರದಿಗಾರರ ಜೊತೆ ಮಾತನಾಡುತ್ತಿದ್ದರು". ಈ ರೀತಿಯಾಗಿ ಮಾತನಾಡಿದ್ದರೆ ತಪ್ಪು.

ಅಧ್ಯಕ್ಷರು : ಈಗಲೇ ಅವರನ್ನು ಕೇಳೋಣ. ಅವರಿಲ್ಲೇ ಇದ್ದಾರೆ.

ಶ್ರೀ ಆರ್. ರೋಷನ್ ಬೇಗ್ : (ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ ಸಚಿವರು) : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಸದಸ್ಯರು ಏನು ಹೇಳುತ್ತಿದ್ದಾರೆ ಅಂಥದ್ದು ನಾನು ಯಾವುದೂ

ಹೇಳಿಲ್ಲ. ನಾನು ಆಕಸ್ಮಾತ್ ಹೇಳಬೇಕಾದರೆ ಪ್ರೆಸ್ ಕಾನಫರೆನ್ಸ ಮಾಡುತ್ತಿದ್ದೆ, ಎಲ್ಲಾ ಪೇಪರನಲ್ಲಿ ಬರುತ್ತಿತ್ತು. ಯಾವುದೋ ಒಂದು ಪೇಪರನಲ್ಲಿ ಬರುತ್ತಾ ಇದೆ. I disown this statement. I have not said it.

MR. SPEAKER : He has clarified it.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷರೆ, ನನ್ನ ಕೊನೆಯ ಸಲಹೆ. ಅಂತಿಮವಾಗಿ ಈ ನಿಲುವಳಿ ಸೂಚನೆಗೆ ತಾವು ಅಲೋ ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂಬುದು ಒಂದು, ಮತ್ತೊಂದು ಬಹಳ ಪ್ರಾಮುಖ್ಯವಾಗಿರತಕ್ಕ ಸಲಹೆ ಏನೆಂದರೆ ಈಗ ನಾನಾವತಿ ಎಂಬ ಕೇಸಿನಲ್ಲಿ ಮೂರನೇ ಒಂದು ಭಾಗ ಪನಿಷಮೆಂಟ್ ಆದಮೇಲೆ ಮರ್ಸಿ ಪಿಟಿಷನ್ ಅಲೋ ಮಾಡುವುದಕ್ಕೂ ಕೂಡ...

ಅಧ್ಯಕ್ಷರು : ಜನರಲ್ ನಾನಾವತಿ ಕೇಸ್ ?

ಶ್ರೀ ಟಿ.ಬಿ. ಜಯಚಂದ್ರ : ಹೌದು.

MR. SPEAKER : That was murder case. Why do you link it with this case?

ಶ್ರೀ ಟಿ.ಬಿ. ಜಯಚಂದ್ರ : ಅದನ್ನೂ ಕೂಡ ಎಗ್ಸಾಸ್ಟ್ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸನ್ಮಾನ್ಯ ಸಭಾನಾಯಕರು ತಮ್ಮ ವಾದವನ್ನು ಮಂಡಿಸಬೇಕು. (ಮಾನ್ಯ ಸದಸ್ಯರುಗಳು ಕೆಲವರು ತಮಗೆ ಅವಕಾಶ ಕೊಡಬೇಕೆಂದು ಎದ್ದು ನಿಂತರು)

MR. SPEAKER : I have provided you enough opportunity. None of you can have any grouse' you must also be considerate. ತಾವು ದಯಮಾಡಿ ಮಾತನಾಡಿ.

+ ಶ್ರೀ ಎಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ದಿನ ಅತ್ಯಂತ ಪ್ರಾಮುಖ್ಯವಾದ, ಸ್ವಾತಂತ್ರ್ಯ ಬಂದಮೇಲೆ 48 ವರ್ಷದ ಇತಿಹಾಸದಲ್ಲಿ ಈ ಸದನದಲ್ಲಿ ಮೊದಲನೇ ಬಾರಿಗೆ ಒಂದು ಐತಿಹಾಸಿಕವಾದಂಥ ಈ ಚರ್ಚೆ ನಡೆದಿದೆ. ನಾನು ನಿಜಕ್ಕೂ ಈ ಸಂದರ್ಭದಲ್ಲಿ ಈ ಚರ್ಚೆ ಬಗ್ಗೆ ಪಾತ್ರ ವಹಿಸಿದಂಥ ಅನೇಕ ಜನ ಹಿರಿಯ ಸದಸ್ಯರುಗಳು ಏನಿದ್ದಾರೆ ಅವರು ಅತ್ಯಂತ ಉತ್ತಮವಾದಂಥ ಬೆಳಕನ್ನು ಚೆಲ್ಲಿದ್ದಾರೆ. ವಿಷಯದ ಪ್ರಾಮುಖ್ಯತೆಯನ್ನು ಎತ್ತಿತೋರಿಸಿದ್ದಾರೆ. ನಾನು ಮೊದಲು, ಇದು ಯಾವ ಸ್ವರೂಪದಲ್ಲಾದರೂ ತೆಗೆದುಕೊಳ್ಳಲಿ, ಇದ ಸಭೆಯನ್ನು ಮುಂದೂಡತಕ್ಕ ಅಡ್ಜರ್ನಮೆಂಟ್ ಮೋಷನ್ ವ್ಯಾಪ್ತಿಯಲ್ಲಿ ನಿಮ್ಮನ್ನು ಕನವಿನ್ಸ್ ಮಾಡುವುದಕ್ಕೆ ಪೂರ್ವಭಾವಿಯಾಗಿ ನಡೆದ ಚರ್ಚೆ ಇರಬುಹುದ, ಯಾವುದೇ ಸ್ವರೂಪದಲ್ಲಿ ಚರ್ಚೆಯಾಗಿರಲಿ ನಾನು ಇವತ್ತು ಈ

ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ನಾನು ಮೊದಲು ಅಭಿನಂದಿಸುತ್ತೇನೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ವಿಧಾನಸಭೆಯಲ್ಲಿ ಇಂಥ ಗಹನವಾದ ವಿಷಯ ಚರ್ಚೆಗೆ ಬಂದಿರತಕ್ಕದ್ದು ಮೊದಲನೇ ಬಾರಿ ಎಂದು ನನ್ನ ಭಾವನೆ. ಸೋದರಿ ಶಾಸಕಿ ಪ್ರಮೀಳಾ ನೇಸರ್ಗಿಯವರು ಒಂದು ಮಾತನ್ನು ಹೇಳಿದರು. ಏನೆದರೆ ರೂಲ್ ಆಫ್ ಲಾಗ್ ನಾವೆಲ್ಲರೂ ತಲೆಬಾಗಿಬಾಗಬೇಕು ಎಂದು. ತುಂಬಾ ಸಂತೋಷ. ಇದರ ಬಗ್ಗೆ ಎರಡು ಮಾತನ್ನು ನಾನು ಎತ್ತಲಿಕ್ಕೆ ಸಿದ್ಧನಿಲ್ಲ. ಈ ರೂಲ್ ಆಫ್ ಲಾ ಯಾವುದರ ಅಡಿಯಲ್ಲಿ ಬರುತ್ತದೆ? ಈ ರಾಷ್ಟ್ರದ ರಾಜ್ಯಾಂಗದ ಅಡಿಯಲ್ಲಿ ಬಾಕಿ ಎಲ್ಲಾ ಬ್ರಾಂಚಗಳು ಹೋಗುತ್ತವೆ. ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಇವು ಮೂರು ಸಂಸ್ಥೆಗಳು ತಮ್ಮತಮ್ಮದೇ ಆದಂಥ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥದ್ದು ಅತ್ಯಂತ ಅವಶ್ಯಕ ಮತ್ತು ಅತ್ಯಂತ ಜವಾಬ್ದಾರಿಯಿಂದ ನಿರ್ವಹಣೆ ಮಾಡಬೇಕಾಗುತ್ತದೆ. ಈ ಸಂಸ್ಥೆಯ ವ್ಯಾಪ್ತಿಯಲ್ಲಿ ಯಾರೇ ಕೆಲಸ ಮಾಡಲಿ. ಇವೆಲ್ಲದಕ್ಕೂ ಒಂದು ಚೌಕಟ್ಟಿದೆ. ಈ ಎಲ್ಲದಕ್ಕೂ ಒಂದು ಎಲ್ಲೆಕಟ್ಟಿದೆ. ಈ ಎಲ್ಲೆಕಟ್ಟನ್ನು ಮೀರಿ ಯಾರು ಹೆಚ್ಚು ಯಾರು ಕಡಿಮೆ ಎಂದು ಈ ಅಹಿತಕರ ಪೈಪೋಟಿ ಪ್ರಾರಂಭವಾದರೆ ಇದು ಈ ರಾಷ್ಟ್ರದ ವ್ಯವಸ್ಥೆಗೆ ಮತ್ತು ಯಾವ ರಾಜ್ಯಾಂಗವನ್ನು ಇವತ್ತು ನಾವೆಲ್ಲರೂ ಒಪ್ಪಿದ್ದೇವೋ ಅದಕ್ಕೆ ಅಪಚಾರ ಮಾಡಿದಂತಾಗುತ್ತದೆ ಎಂಬುದನ್ನು ಈ ಮೂರೂ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕ ಪ್ರತಿಯೊಬ್ಬರ ಅರ್ಥ ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ಸೂಕ್ಷ್ಮವಾಗಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರೂಲ್ ಆಪ್ ಲಾ ಬರೀ ಲೆಜಿಸ್ಲೇಚರಗೇ ಅಲ್ಲ. ಬರಿ ಎಗ್ಸಿಕ್ಯುಟಿವಗೇ ಅಲ್ಲ. ಜ್ಯುಡಿಷಿಯರಿಗೂ ಸೇರಿದಂತೆ ಈ ಎಲ್ಲಾ ಸಂಸ್ಥೆಗಳಿಗೂ ಅನ್ವಯಾವಾಗುತ್ತದೆ. ಇಷ್ಟನ್ನು ಮಾತ್ರ ಪೂರ್ವಭಾವಿಯಾಗಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಸದನಕ್ಕೆ ಇವತ್ತು ಇಂಥಹ ಪ್ರಾಮುಖ್ಯ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ಅಧಿಕಾರ ಏನಿದೆ ಎಂದು ಒಬಿಬ್ಬರು ಸದಸ್ಯರು ಕೊನೆಯಲ್ಲಿ ಹೇಳುತ್ತಿದ್ದರು. ನಾನು ಒಂದು ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಾಂಗದ ತಿದ್ದುಪಡಿ ಪಾರ್ಲಿಮೆಂಟಿನಲ್ಲಿ ಆದರೂ ಈ ರಾಷ್ಟ್ರದ ಮೂರನೇ ಎರಡು ಭಾಗದಷ್ಟು ವಿಧಾನಸಭೆಗಳು ಇದಕ್ಕೆ ಒಪ್ಪಿಗೆ ಕೊಡಬೇಕಾಗುತ್ತದೆ ಅದು ಜಾರಿಗೆ ಬರಬೇಕಾದರೆ. ಸ್ವಾತಂತ್ರ್ಯ ಬಂದ ಮೇಲೆ ದೇಶದಲ್ಲಿ ರಾಜ್ಯಾಂಗಕ್ಕೆ ೭೪ ತಿದ್ದುಪಡಿಗಳು ಬಂದಿವೆ. ರಾಜ್ಯಾಂಗ ಅಥವಾ ನಮ್ಮ ಸಂವಿಧಾನವನ್ನು ಏನು ರೂಪಿಸಿಕೊಂಡಿದ್ದೇವೋ ಇದು ಸರ್ವಕಾಲಿಕ ಅಲ್ಲ. ಒಂದೊಂದು ಸನ್ನಿವೇಶದಲ್ಲಿ ಆಯಾ ಸಂದರ್ಭಕ್ಕೆ ಅನುಗುಣವಾಗಿ ಬರತಕ್ಕ ಸಮಸ್ಯೆಗಳಿಗೆ ಪೂರಕವಾಗಿ ಎಲ್ಲವೂ ತಿದ್ದುಪಡಿಗಳನ್ನು ತರತಕ್ಕದ್ದು ಜನತೆಯ ಪ್ರತಿನಿಧಿಗಳಾದಂಥ ಪಾರ್ಲಿಮೆಂಟ್ ಸದಸ್ಯರಿರಬಹುದು, ಶಾಸನಸಭಾ ಸದಸ್ಯರಿರಬಹುದು ಇದು ನಮ್ಮ ಜವಾಬ್ದಾರಿ ಎನ್ನತಕ್ಕದ್ದನ್ನು ನಾವು ಮರೆಯಬಾರದು ಎಂದು ಪೂರ್ವಪೀಠಿಕೆಯಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆ ಹೇಳತಕ್ಕ ಕಾಲದಲ್ಲಿ ನಾನು ನ್ಯಾಯಾಂಗಕ್ಕೆ ಯಾವುದೇ ರೀತಿಯಾಗಿ ಪ್ರತ್ಯಕ್ಷವಾಗಿ ಆಗಲೀ ಪರೋಕ್ಷವಾಗಿ ಧಕ್ಕೆ ತರತಕ್ಕ ಯಾವುದೇ ಒಂದು ಶಬ್ಧವನ್ನೂ ಕೂಡ ನಾನು ಪ್ರಯೋಗ ಮಾಡಲಿಕ್ಕೆ ಸಿದ್ಧನಿಲ್ಲ. ಇದನ್ನು ಪೂರ್ವಭಾವಿಯಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇದು ದು ದುರ್ದೈವದ ಸಂಗತಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಒಬ್ಬ ಅಧಿಕಾರಿಗೆ ಒಂದು ಬಡ್ತಿ ಕೊಡುವುದಕ್ಕೆ ಅವನ ಸೇವಾನಿಯಮದ ಹಿರಿತನವನ್ನು

ಕಾಪಾಡಿಕೊಳ್ಳುವುದಕ್ಕೆ ಅಥವಾ ಒಂದು ಸ್ಥಳೀಯ ಸಂಸ್ಥೆ ತನ್ನದೇ ಆದಂಥ ಸೇವಾ ನಿಯಮಗಳನ್ನು ಜಾರಿಗೆ ತರತಕ್ಕ ಪ್ರಯತ್ನ ಮಾಡಿದಂಥದ್ದರ ಬಗ್ಗೆ ನಡೆದಿರತಕ್ಕ ವಿದ್ಯಮಾನಗಳನ್ನು ನಾವು ಕೂಲಂಕಷವಾಗಿ ನೋಡುವುದಕ್ಕೆ ಮುಂಚೆ ನಾನು ನಿಮ್ಮ ಅನುಮತಿಯನ್ನು ಪಡೆದು ಒಂದು ಲಿಖಿತವಾದ ಹೇಳಿಕೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಆಮೇಲೆ ವಿಷಯಗಳ ಬಗ್ಗೆ ಮುಂದೆ ಹೋಗುತ್ತೇನೆ. ಕಾರಣ ಇಷ್ಟೆ. ನ್ಯಾಯಾಗಂದ ಬಗ್ಗೆ ಎಲ್ಲಿಯಾದರೂ ಅಪಸ್ವರ ಆಡಬಾರದು ಎಂದು ಇವತ್ತಿನ ದಿವಸ ಇದು ಐತಿಹಾಸಿಕ ಚರ್ಚೆ ಇದೆ. ಇದರ ಬಗ್ಗೆ ಲಿಖಿತ ಉತ್ತರ ಕೊಟ್ಟು ಆಮೇಲೆ ಕೆಲವು ಸಮಸ್ಯೆಗಳನ್ನು ಏನು ನಮ್ಮ ಸನ್ಮಾನ್ಯ ಸದನದ ಹಿರಿಯ ಮತ್ತು ಕಿರಿಯ ಗೌರವಾನ್ವಿತ ಸದಸ್ಯರು ಎತ್ತಿದ್ದಾರೆ ಆ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ನಾಳೆ ಬೆಳಿಗ್ಗೆಯೇ ಈ ಒಂದು ಲಿಖಿತ ಹೇಳಿಕೆಯನ್ನು ಕೊಡಬೇಕೆಂದು ಮನಸ್ಸು ಮಾಡಿದ್ದೆ. ಆದರೆ ಹಿರಿಯ ಮುಖಂಡರುಗಳಾದಂಥ ಶ್ರೀಮಾನ್ ಖರ್ಗೆಯವರು, ಹಾಗೂ ಶ್ರೀಮಾನ್ ವೀರಪ್ಪ ಮೊಯಿಲಿಯವರು ಇದು ಈ ಹಂತದಲ್ಲಿ ಅಲ್ಲ ಎನ್ನುವ ಮಾತನ್ನು ಹೇಳಿದ ಮೇಲೆ ನಾನು ಅದು ಬೇಡವೆಂದು ಹೇಳಿ ಅದರ ಬಗ್ಗೆ ಒಂದು ಚಕಾರ ಶಬ್ಧವನ್ನೂ ಎತ್ತಲಿಲ್ಲ. ತಾವು ತಮ್ಮ ಸೂಚನೆಯನ್ನು ತೋರಿಸಿದಿರಿ. ಸನ್ಮಾನ್ಯ ಅಧ್ಯಕ್ಷರೇ ಇದು ಒಂದು ದುರಂತ. ಒಬ್ಬ ಅಧಿಕಾರಿ ಒಂದು ಹುದ್ದೆಗೆ ಬಡ್ತಿಯನ್ನು ತೆಗೆದುಕೊಳ್ಳಲಿಕ್ಕೆ 26 ಅರ್ಜಿಗಳನ್ನು ಹೈಕೋರ್ಟಿನಲ್ಲಾಗಲೀ, ಸುಪ್ರೀಂ ಕೋರ್ಟಿನಲ್ಲಾಗಲಿ, ಸಲ್ಲಿಸಬೇಕಾಗಿತ್ತೇ ಎನ್ನುವ ಪ್ರಶ್ನೆ ಬರುತ್ತದೆ. ಮತ್ತು ಇದನ್ನು ಕೇಳಿದಾಗ ಕಾರ್ಯಾಂಗದ ವ್ಯವಸ್ಥೆಬಗ್ಗೆ ಎಷ್ಟರಮಟ್ಟಿಗೆ ವಿಶ್ವಾಸವನ್ನು ಅಧಿಕಾರಿ ಕಳೆದುಕೊಂಡಿದ್ದಾನೆ ಎನ್ನುವುದರ ಬಗ್ಗೆ ಆಮೇಲೆ ಬರುತ್ತೇನೆ. ಈ ವ್ಯವಸ್ಥೆ ಬಗ್ಗೆ ನಾನು ಲೋಪ ದೋಷ ಕೊಡಲಿಕ್ಕೆ ಹೋಗುವುದಿಲ್ಲ. ಈ ವ್ಯವಸ್ಥೆಯ ಬಗ್ಗೆ ನಾನು ಯಾವುದೇ ರೀತಿಯಾದಂಥ ಅವಹೇಳನ ಮಾಡುವುದಕ್ಕೆ ಸಿದ್ಧನಿಲ್ಲ. ಒಬ್ಬ ಅಧಿಕಾರಿ ತನಗೆ ಏನಾದರೂ ಅನ್ಯಾಯ ಆಗಿದ್ದರೆ, ಈ ಕಾರ್ಯಾಗಂದ ಬಗ್ಗೆ ಆತ ಒಂದು ಚಕಾರ ಶಬ್ಧ ಒಂದು ಸಂದರ್ಭದಲ್ಲಾದರೂ ಎತ್ತಿದ್ದಾನೇಯೇ ಎಂದು ನೋಡಿದರೆ, ನನಗೆ ತಿಳಿದಂಥ ಕೆಲವು ರೆಕಾರ್ಡುಗಳನ್ನು ನೋಡಿದ್ದೇನೆ. ಹಾಗಾದರೆ ನಮ್ಮ ಸರ್ಕಾರ ಕಳೆದ 8 ತಿಂಗಳಿಂದ ಇದೆ. ನಾವು ಒಂದು ಸಮಾಜದ ವಿರೋಧಿಗಳು ಎಂದು ಹೇಳಿ ಯಾರಾದರೂ ನನ್ನ ಮೇಲೆ ಆಪಾದನೆ ಮಾಡಿದರೂ ಚಿಂತೆ ಇಲ್ಲ. ಆದರೆ ಕಳೆದು ೨೦ ವರ್ಷಗಳಿಂದ ಅಧಿಕಾರದಲ್ಲಿ ಇದ್ದಂಥ ಸರ್ಕಾರಗಳು, ಅದು ದೇವರಾಜು ಅರಸು ಸರ್ಕಾರ ಇರಬಹುದು, ಶ್ರೀಮಾನ್ ಗುಂಡೂರಾಯರು ಇರಬಹುದು, ಶ್ರೀಮಾನ್ ವೀರೇಂದ್ರ ಪಾಟೀಲರು ಇರಬಹುದು, ಶ್ರೀಮಾನ್ ರಾಮಕೃಷ್ಣ ಹೆಗಡೆ ಇರಬಹುದು, ಶ್ರೀಮಾನ್ ಬೊಮ್ಮಾಯಿಯವರು ಇರಬಹುದು, ಶ್ರೀಮಾನ್ ಬಂಗಾರಪ್ಪನವರು ಇರಬಹುದು, ಶ್ರೀಮಾನ್ ಮೊಯಿಲಿಯವರು ಇರಬಹುದು, ಮತ್ತೆ ಶ್ರೀಮಾನ್ ವೀರೇಂದ್ರ ಪಾಟೀಲರು ಬಂದಿರಬಹುದು ಈ 18 ವರ್ಷದ ಇತಿಹಾಸದಲ್ಲಿ ಒಬ್ಬ ಅಧಿಕಾರಿ ತನ್ನ ಬಡ್ತಿ ಬಗ್ಗೆ ಆಗಲಿ, ತನ್ನ ಸೇವಾ ನಿಯಮದ ಬಗ್ಗೆ ಆಗಲಿ, ತನ್ನ ಸೇವಾ ಹಿರಿತನದ ಬಗ್ಗೆ ಆಗಲಿ, ಈ ಕಾರ್ಯಾಂಗದ ಮುಂದೆ, ಈ ಕಾರ್ಯಾಂಗದ ಮುಖ್ಯಸ್ಥರ ಮುಂದೆ ಬಂದು ಒಂದು ಅರ್ಜಿಯನ್ನು ಕೊಡತಕ್ಕಂಥ ವ್ಯವದಾನ ಅಥವಾ ಅರ್ಜಿಯಸ್ನು ಕೊಡತಕ್ಕಂಥ ಈ ಕಾರ್ಯಾಂಗದ ಬಗ್ಗೆ ಸ್ವಲ್ಪ ಮಟ್ಟಿಗಾದರೂ ವಿಶ್ವಾಸ ಇಲ್ಲದೇ ಇರಲಿಕ್ಕೆ ಕಾರಣ ಏನು ಎನ್ನುವುದು ನನಗೆ

ಇನ್ನೂ ಅರ್ಥ ಆಗುತ್ತಾ ಇಲ್ಲ. 26 ರಿಟ್ ಪಿಟಿಷನಗಳನ್ನು ಹಾಕತಕ್ಕಂಥ ಅವಶ್ಯಕತೆಯಾದರೂ ಏನು? ನನ್ನನ್ನು ಬಿಡಿ. ನಾನು ಏನೋ ಈ ಅಧಿಕಾರಿ ಬಗ್ಗೆ ಮಾತ್ಸರ್ಯ, ಅಥವಾ ನನ್ನ ಸಮಾಜದಪರ .. ಅದಕ್ಕೆ ಮುಂದೆ ಬರುತ್ತೇನೆ. ಈಗ ಹೇಳಲಿಕ್ಕೆ ನಾನು ಹೋಗುವುದಿಲ್ಲ. ಇದು ಇಷ್ಟು ಮಾತ್ರ ಪೂರ್ವದಲ್ಲಿ ಹೇಳಿ, ಹಿಂದೆ ಇದ್ದಂಥ ಎಲ್ಲಾ ಸರ್ಕಾರಗಳು ಹಾಗಿದ್ದರೆ ಆ ಅಧಿಕಾರಿ ಬಗ್ಗೆ ಮಾತ್ಸರ್ಯ ಇತ್ತೇ? ಆ ಅಧಿಕಾರಿ ಬಗ್ಗೆ ಏನಾದರೂ ಅವನ ಬಗ್ಗೆ ಯಾವುದೇ ವೈಯಕ್ತಿಕ ಸೇಡಿನ ಮನೋಭಾವನೆ ಇತ್ತೇ? ಇದು ನನಗಂತೂ ಅರ್ಥ ಆಗುತ್ತಿಲ್ಲ. ಏಕೆ 26 ರಿಟ್ ಪಿಟಿಷನಗಳು either in the form of contempt Petition . Seven contempt petitions accure have been filed. ಇದರ ಬಗ್ಗೆ ನನಗಂತೂ ಅರ್ಥ ಆಗುತ್ತಿಲ್ಲ ಮಾನ್ಯ ಸಭಾಧ್ಯಕ್ಷರೆ, ಯಾವ ನನ್ನ ಸಹೋದರಿ ಹೇಳಿದರೋ ನನಗಂತೂ ಈ ಕಾನ್ಸಿಟ್ಯೂಷನ್ ವ್ಯಾಪ್ತಿಯಲ್ಲೇ ನಾನು ಪ್ರತಿಜ್ಞಾ-ವಿಧಿ ಸ್ವೀಕಾರ ಮಾಡಿದ್ದೇನೆ. ಇದರಲ್ಲಿ ಧನಂಜಯ ಯಾರು? ಅವನು ಯಾವಾಗ ಬಂದಿದ್ದಾನೆ? ಅವನ ಪರಿಸ್ಥಿತಿ ಏನು? ಇದರ ಬಗ್ಗೆ ವಿಚಾರಿಸಲು ನನ್ನ ಮುಂದೆ ಯಾರೂ ಬಂದಿಲ್ಲ. ಈಗ ನನ್ನ ಲಿಖಿತ ಹೇಳಿಕೆಯನ್ನ್ ನೀಡಿ, ಆಮೇಲೆ ಇವೆಲ್ಲವುಗಳಿಗೂ ನಾನು ವಿವರಣೆ ಕೊಡುತ್ತೇನೆ. ಇದು ಒಂದು ಐತಿಹಾಸಿಕ ಚರ್ಚೆ. ಈ ಚರ್ಚೆಯಿಂದ ಉಗಮವಾಗತಕ್ಕಂಥದ್ದು ಈ ದೇಶದಲ್ಲಿ ಮುಂದೆ ಆಗತಕ್ಕಂಥ ಅನಾಹುತವನ್ನು ತಡೆಯತಕ್ಕಂಥದ್ದು ಕೇವಲ ಕರ್ನಾಟಕ ವಿಧಾನಸಭೆಗೆ ಮಾತ್ರ ಅಲ್ಲ, ಕೇವಲ ಲೋಕಸಭೆಗೆ ಮಾತ್ರ ಅಲ್ಲ, ಕೇವಲ ಕಾರ್ಯಾಂಗಕ್ಕೆ ಮಾತ್ರ ಅಲ್ಲ, ಕೇವಲ ಶಾಸಕಾಂಗಕ್ಕೆ ಮಾತ್ರ ಅಲ್ಲ, ನ್ಯಾಯಾಂಗದ ಜವಾಬ್ದಾರಿಯೂ ಕೂಡ ಇದೆ. ಅದು ಇಲ್ಲದೇ ಇದ್ದರೆ, ಯಾವ ರಾಜ್ಯಾಂಗವನ್ನು ನಾವು ಒಪ್ಪಿಕೊಂಡಿದ್ದೇವೆಯೋ ಆ ರಾಜ್ಯಾಂಗದ ಅಡಿಯಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಬಹುಶಃ ಈ ದೇಶದ ಮುಂದಿನ ಪರಿಸ್ಥಿತಿ ಎಲ್ಲಿಗೆ ಹೋಗಿ ತಲುಪಬಹುದು ಎನ್ನತಕ್ಕಂಥ ಶಂಕೆ ನನ್ನನ್ನು ಕಾಡುತ್ತಾ ಇದೆ. ಇಷ್ಟು ಮಾತ್ರ ಪೂರ್ವಭಾವಿಯಾಗಿ ಹೇಳಿ, ಇದರ ಬಗ್ಗೆ ಮೊದಲು ಒಂದು ಲಿಖಿತವಾದಂಥ ಒಂದು ಹೇಳಿಕೆಯನ್ನು ಕೊಟ್ಟು ಆಮೇಲೆ ಕೆಲವು ಏನು ನಡೆದಿರತಕ್ಕಂಥ ಸತ್ಯಾಂಶವನ್ನು ನಿಮ್ಮ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ತಮ್ಮ ಅನುಮತಿಯನ್ನು ಪಡೆದು ಆ ಹೇಳಿಕೆಗಳ ಪ್ರತಿಯನ್ನು ಪ್ರತಿಯೊಬ್ಬ ಶಾಸಕರ ಕೈಗೂ ಕೊಡಲಿಕ್ಕೆ ನಾನು ಸಿದ್ದನಿದ್ದೇನೆ. ತಾವು ಅನುಮತಿ ಕೊಟ್ಟರೆ, ಯಾಕೆಂದರ ನಾವು ಇದುವರೆಗೂ ಪ್ರಾರಂಭ ಮಾಡಿರಲಿಲ್ಲ. ಪ್ರತಿಯೊಬ್ಬರಿಗೂ ಈ ಹೇಳಿಕೆಯನ್ನು ತಲುಪಿಸಲಿಕ್ಕೆ ನಾನು ಸಿದ್ದನಿದ್ದೇನೆ.

4.50 ಪಿ.ಎಂ

ಮಾನ್ಯ ಅಧ್ಯಕ್ಷರೇ,

ಸರ್ವೋಚ್ಚ ನ್ಯಾಯಾಲಯದಲ್ಲಿ, ನ್ಯಾಯಾಲಯ ನಿಂದನೆಯ ಶಿಕ್ಷೆ ಮೂಲಕ ಅಂತ್ಯಗೊಂಡಿರುವ ಈ ವಿಷಯವು ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರಗಳ ಜೇಷ್ಠತೆಗೆ ಸಂಬಂಧಪಟ್ಟದ್ದಾಗಿದೆ. ಗೌರವಾನ್ವಿತ ಸದಸ್ಯರಿಗೆ ಈಗಾಗಲೇ ತಿಳಿದಿರುವಂತೆ ಈ ನ್ಯಾಯಾಲಯ ನಿಂದನೆ ಪ್ರಕರಣವು ರಾಜ್ಯದ ಒಬ್ಬ ನಿಷ್ಠಾವಂತ ಹಾಗೂ ಪ್ರಾಮಾಣಿಕ ಅಧಿಕಾರಿಯಾದ ನಗರಾಭಿವೃದ್ಧಿ ಮತ್ತು ವಸತಿ ಇಲಾಖಾ ಪ್ರಧಾನ ಕಾರ್ಯದರ್ಶಿ ಶ್ರೀ ಜೆ. ವಾಸುದೇವನ್ ಅವರಿಗೆ ಒಂದು ತಿಂಗಳ ಸಾದಾ ಸಜೆಯನ್ನು ವಿಧಿಸುವ ಮೂಲಕ ಅಂತ್ಯಗೊಂಡಿದೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಸ್ತವಾಂಶಗಳು ಈ ಕೆಳಕಂಡಂತಿವೆ :

ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಇಂಜಿನಿಯರಗಳನ್ನು ಎರಡು ವಿಧದಲ್ಲಿ ನೇಮಕ ಮಾಡಲಾಗುತ್ತದೆ. ಮಹಾನಗರಪಾಲಿಕೆಯಲ್ಲಿ ನೇರವಾಗಿ ನೇಮಕ ಮಾಡುವುದು ಒಂದು ವಿಧವಾದರೆ ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆಯ ಮೇರೆ ನೇಮಕ ಮಾಡುವುದು ಮತ್ತೊಂದು ಬಗೆ.

3. 1972ರಲ್ಲಿ ಬೆಂಗಳೂರು ಮಹಾನಗರಪಾಲಿಕೆಯು 7 ಮಂದಿ ಜೂನಿಯರ್ ಇಂಜಿನಿಯರರುಗಳನ್ನು ನೇಮಕ ಮಾಡಿಕೊಂಡಿದ್ದು ಅವರ ಜ್ಯೇಷ್ಠತೆಯ ಪಟ್ಟಿಯಲ್ಲಿರುವ ಹೆಸರುಗಳು ಕ್ರಮವಾಗಿ ಕೆಳಕಂಡಂತೆ ಇವೆ.

1) ಶ್ರೀ ಎಂ. ವೆಂಕಟೇಶ್
2) ಶ್ರೀ ಎಂ. ವೆಂಕಟಪ್ಪ
3) ಶ್ರೀ ಟಿ.ಆರ್. ಧನಂಜಯ
4) ಶ್ರೀ ರಾಮೇಗೌಡ
5) ಶ್ರೀ ಟಿ.ವಿ. ಶಿವಣ್ಣ
6) ಶ್ರೀ ಸುದರ್ಶನ್
7) ಶ್ರೀ ವೀರಪ್ಪ ರೆಡ್ಡಿ

ಈ ಮೇಲ್ಕಂಡ 7 ಮಂದಿ ನೇಮಕಗೊಳ್ಳುವ ಮುನ್ನರೇ ಶ್ರೀ ಎಸ್. ಭೋಜರಾಜ್ ಅವರು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದದು, ಈ 7 ಮಂದಿಗಿಂತ ಶ್ರೀ ಭೋಜರಾಜ್ ಅವರು ಜ್ಯೇಷ್ಠತೆಯಲ್ಲಿ ಹಿರಿಯರಾಗಿರುತ್ತಾರೆ. ನಿಯೋಜನೆ ಮೇಲೆ ಲೋಕೋಪಯೋಗಿ ಇಲಾಖೆಯಿಂದ ನೇಮಕಗೊಂಡಿದ್ದ ಇಂಜಿನಿಯರ್ ಶ್ರೀ ದಾಸೇಗೌಡ ಅವರ ಸೇವೆಯನ್ನು 26.4.1979 ರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಆಗಿ ಮಹಾನಗರ ಪಾಲಿಕೆಗೆ ವಿಲೀನಗೊಳಿಸಲಾಯಿತು.

4. ಈ ವಿಲೀನವನ್ನು ಪ್ರಶ್ನಿಸಿ ಇಂಜಿನಿಯರಗಳಾದ ಶ್ರೀ ಭೋಜರಾಜ್ ಮತ್ತು ಶ್ರೀ ಟಿ.ಆರ್. ಧನಂಜಯರವರು 1979ರಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರು. ರಿಟ್ ಅರ್ಜಿ ನಂಬರಗಳು ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರು. ರಿಟ್ ಅರ್ಜಿ ನಂಬರಗಳು 20147 ಮತ್ತು 20148ಗಳಾಗಿವೆ. ದಿನಂಕ 19.3.1981ರಲ್ಲಿ ಈ ಅರ್ಜಿಗಳು ಚರ್ಚೆಗೆ ಬಂದು ವಿಲೀನದ ಆದೇಶವನ್ನು ರದ್ದುಪಡಿಸಲಾಯಿತು. ಈ ರದ್ದು ಆದೇಶವನ್ನು ಪ್ರಶ್ನಿಸಿ ಶ್ರೀ ದಾಸೇಗೌಡ ಅವರು 1981ರಲ್ಲಿ ರಿಟ್ ಅರ್ಜಿಯನ್ನು (1016-1018) ಶ್ರೇಷ್ಠ ನ್ಯಾಯಾಲಯದಲ್ಲಿ ಸಲ್ಲಿಸಿದರು. ಶ್ರೇಷ್ಠ ನಾಯಾಲಯದಲ್ಲಿ ಅರ್ಜಿ ಸಲ್ಲಿಸಿ ವಿಫಲರಾದ ಶ್ರೀಯುತರು 1984ರಲ್ಲಿ

ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಶೇಷ ಅನುಮತಿ ಪ್ರಾರ್ಥನಾ ಅರ್ಜಿಯನ್ನು (ಸಿವಿಲ್ 7317-7314) ಸಲ್ಲಿಸಿದರು. ಈ ಅರ್ಜಿ ಸಹ ತಿರಸ್ಕೃತಗೊಂಡಿತು.

5. ಶ್ರೀ ದಾಸೇಗೌಡರವರ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ವಾಪಸ್ ಮಾಡಬೇಕೆಂದು ಸೂಚಿಸಿ ರಾಜ್ಯ ಶ್ರೇಷ್ಠ ನ್ಯಾಯಾಲಯವು ನೀಡಿದ್ದ ಆದೇಶವನ್ನು (ರಿಟ್ ಅರ್ಜಿ ನಂ 20147 ರಿಂದ 20148) ಪಾಲಿಸಿಲ್ಲ ಎಂದು ಆರೋಪಿಸಿ ಶ್ರೀ ಎಸ್. ಭೋಜರಾಜ ಮತ್ತು ಶ್ರೀ ಟಿ.ಆರ್. ಧನಂಜಯರವರು 1991ರಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ನ್ಯಾಯಾಲಯ ನಿಂದನೆ ಅರ್ಜಿ (ನಂ. 234-254 ಮತ್ತು 255)ಗಳನ್ನು ಸಲ್ಲಿಸಿದರು. ನ್ಯಾಯಾಲಯ ನಿಂದನೆ ಅರ್ಜಿಯು ನ್ಯಾಯಾಲಯದ ಮುಂದೆ ಇದ್ದ ಸಂದರ್ಭದಲ್ಲೇ ಶ್ರೀ ದಾಸೇಗೌಡ ಅವರ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ವಾಪಸ್ ಮಾಡಲಾಯ್ತು. ದಿನಾಂಕ 2.3.1991 ರಂದು ನ್ಯಾಯಾಲಯ ನಿಂದನೆ ರಿಟ್ ಅರ್ಜಿಯನ್ನು ಕೈಬಿಡಲಾಯಿತು.

6. ಶ್ರೀ ದಾಸೇಗೌಡ ಅವರು 1991ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮುಂದೆ ಅರ್ಜಿ ಸಲ್ಲಿಸಿ (ನಂಬರ್1443) ಲೋಕೋಪಯೋಗಿ ಇಲಾಖೆಗೆ ತಮ್ಮಸೇವೆಯನ್ನು ವಾಪಸ್ ಮಾಡಿದ ಆದೇಶವನ್ನು ಪ್ರಶ್ನಿಸಿದರು. ಈ ಅರ್ಜಿಯನ್ನು ಶ್ರೀ ಭೋಜರಾಜ ಹಾಗೂ ಶ್ರೀ ಟಿ.ಆರ್. ಧನಂಜಯ ಬೆಂಗಳೂರು ಮಹಾನಗರಪಾಲಿಕೆ ಮತ್ತು ಕರ್ನಾಟಕ ಸರ್ಕಾರವನ್ನು ಪ್ರತಿವಾದಿಗಳಾಗಿ ಮಾಡಲಾಗಿತ್ತು. ಈ ಅರ್ಜಿ ಕೂಡ ತಿರಸ್ಕತಗೊಂಡಿತು. ಕರ್ನಾಟಕ ಆಡಳಿತ ನ್ಯಾಯಮಂಡಳಿ ಈ ತಿರಸ್ಕೃತ ಅರ್ಜಿಯನ್ನು ಪ್ರಶ್ನಿಸಿ ಶ್ರೀ ದಾಸೇಗೌಡ ಅವರು 1993ರಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ (ನಂ 797) ಸಲ್ಲಿಸಿದರು. ಈ ಅರ್ಜಿ ನ್ಯಾಯಾಲಯದ ಮುಂದೆ ಇದ್ದ ಸಂದರ್ಭದಲ್ಲಿ ಈ ಹಿಂದೆ ಕೈಗೊಂಡ ಎಲ್ಲ ಕ್ರಮಗಳನ್ನು ಬದ್ಧಗೊಳಿಸುವಂತೆ ಕರ್ನಾಟಕ ನಗರಪಾಲಿಕೆ ಕಾಯಿದೆ ಹಾಗೂ ನಿಯಮಗಳನ್ನು ತಿದ್ದುಪಡಿ ಮಾಡಲಾಯಿತು. ಈ ಮೂಲಕ ಶ್ರೀ ದಾಸೇಗೌಡ ಸೇವಾ ವಿಲೀನವನ್ನು ಕ್ರಮಬದ್ಧಗೊಳಿಸಲಾಯ್ತು. ದಿನಾಂಕ 19.3.1993 ರಂದು ಈ ತಿದ್ದುಪಡಿ ಕಾಯಿದೆಯನ್ನು ಸರ್ವೋಚ್ಚ ನ್ಯಾಯಾಲಯ ಕ್ರಮಬದ್ಧವೆಂದು ಘೋಷಿಸಿತು. ಶ್ರೀ ದಾಸೇಗೌಡರನ್ನು ಲೋಕೋಪಯೋಗಿ ಇಲಾಖೆಗೆ ವಾಪಸ್ ಕಳುಹಸಿದ ಆದೇಶವನ್ನು ರದ್ದುಪಡಿಸಲಾಯಿತು. ಈ ವೇಳೆಗಾಗಲೇ ನಿವೃತ್ತಿ ಹೊಂದಿದ್ದ ಶ್ರೀ ದಾಸೇಗೌಡರು ನಿವೃತ್ತಿ ವೇತನವೂ ಸೇರಿದಂತೆ ಎಲ್ಲಾ ಸೌಲಭ್ಯಗಳಿಗೆ ಅರ್ಹರು ಎಂದು ಘೋಷಿಸಲಾಯಿತು.

7. 19.2.1993ರ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಶ್ರೀ ದಾಸೇಗೌಡರಿಗೆ ನೀಡಿದ ಈ ಸೌಲಭ್ಯಗಳ ಮೂಲಕ ತಮ್ಮ ಹಕ್ಕಿಗೆ ಧಕ್ಕೆ ಉಂಟಾಗಿಯೆಂದು ಶ್ರೀ ಟಿ.ಆರ್. ಧನಂಜಯರವರು ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ಪಷ್ಟನೆ ಕೋರಿದರು. 26.7.1993 ರಂದು ಈ ಅರ್ಜಿಯನ್ನು ತಿರಸ್ಕರಿಸಿದ ಸರ್ವೋಚ್ಚ ನ್ಯಾಯಾಲಯವು ಕೆಳಕಂಡ ಅಭಿಪ್ರಾಯ ವ್ಯಕ್ತಪಡಿಸಿತು.

"ಈ ಅಪೀಲಿನಲ್ಲಿ ಈ ಕೋರ್ಟ ಮಾಡಿರುವ ಆಜ್ಞೆಯಿಂದಾಗಿ ಈ ಕೋರ್ಟ ಖಾಯಂಗೊಳಿಸಿರುವ ಕರ್ನಾಟಕ ರಾಜ್ಯ ಹೈಕೋರ್ಟ ನೀಡಿರುವ ಆದೇಶಗಳ ಸಂಖ್ಯೆ ರೀತ್ಯ ಅರ್ಹವಾಗುವ ಹಕ್ಕುಗಳಿಗೆ

ಬಾಧ್ಯನಾಗಲಾರೆ ಎಂಬ ಬಯವನ್ನು ಅರ್ಜಿದಾರರಾದ ಶ್ರೀ ಧನಂದಜಯವವರು ವ್ಯಕ್ತಪಡಿಸಿದ್ದಾರೆ. ಮೇಲಿನ ಅಪೀಲಿನಲ್ಲಿ ಈ ಕೋರ್ಟ ಖಾಯಂಗೊಳಿಸಿದ ಪರಿಣಾಮವಾಗ್ಗಿ ಸಲ್ಲುವ ಹಕ್ಕುಗಳನ್ನು ತಪ್ಪಿಸುವ ಉದ್ದೇಶವಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಈ ಆಜ್ಞೆಗಳಿಂದ ಸಲ್ಲುವ ಎಲ್ಲ ಹಕ್ಕುಗಳಿಗೂ ಅವರು ಬಾಧ್ಯರು? ಅದರಿಂದಾಗಿ ಅರ್ಜಿದಾರ ಶ್ರೀ ಧನಂಜಯ ಅವರು ಅವರಿಗೆ ದಕ್ಕಿರುವ ಎಲ್ಲ ಹಕ್ಕುಗಳಿಗೂ ಬಾಧ್ಯರು. ಈ ಹಕ್ಕುಗಳು ಸಂದಾಯವಾಗಲು ಅಗತ್ಯ ಬಿದ್ದಲ್ಲಿ ಪ್ರಸ್ತಾಪದಲ್ಲಿರುವ ಅವಧಿಗೆ ಸೂಪರನ್ಯೂಮರರಿ ಹುದ್ದೆಯನ್ನು ಮಹಾನಗರಪಾಲಿಕೆ ನಿರ್ಮಿಸಬಹುದು ಹಾಗೂ ಕೋರ್ಟಿನ ವಿಭಾಗೀಯ ಪೀಠದ ತೀರ್ಪಿನಂತೆ ಅವರಿಗೆ ಹಕ್ಕುಗಳನ್ನು ನೀಡಬೇಕು. ಈ ಬಗ್ಗೆ ಅಗತ್ಯವಾದ ಆದೇಶಗಳನ್ನು ಹೊರಡಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಆದೇಶನೀಡಲಾಗಿದೆ.

8. ಈ ಸಂದರ್ಭದಲ್ಲಿ ಶ್ರೀ ಟಿ.ಆರ್. ಧನಂಜಯರವರಿಗಿಂತ ಜ್ಯೇಷ್ಠತೆಯಲ್ಲಿ ಹಿರಿಯರಾದ ಶ್ರೀ ಎಸ್. ಭೋಜರಾಜ್ ಅವರಿಗೆ 5.4.1991ರಲ್ಲಿ ಅಡಿಷನಲ್ ಚೀಫ್ ಇಂಜಿನಿಯರ್ ಹುದ್ದೆಗೆ ಬಡ್ತಿ ನೀಡಲಾಯ್ತು. ಅನಂತರ ಅವರು ದಿನಾಂಕ 3-1991 ರಂದು ಸೇವೆಯಿಂದ ನಿವೃತ್ತರಾದರು. ಶ್ರೀ ಎಸ್. ಬೋಜರಾಜರವರಿಗೆ ಬಡ್ತಿ ನೀಡಿದ ಸಂದರ್ಭದಲ್ಲಿ ಶ್ರೀ ಎಂ. ವೆಂಕಟೇಶ್ ಹಾಗೂ ಶ್ರೀ ಟಿ.ಆರ್. ಧನಂಜಯರವರ ಬೇಡಿಕೆಗಳನ್ನು ಇಲಾಖ ಬಡ್ತಿ ಸಮಿತಿಯು ಪರಿಗಣನೆಗೆ ತೆಗೆದುಕೊಂಡಿತ್ತು. ಶ್ರೀ ಎಸ್. ಭೋಜರಾಜರವರ ನಿವೃತ್ತಿಯ ನಂತರ ಬಡ್ತಿಗಾಗಿ ಶ್ರೀ ಎಂ. ವೆಂಕಟೇಶ್ ಹಾಗೂ ಶ್ರೀ ಟಿ.ಆರ್. ಧನಂಜಯ ಅವರ ಹೆಸರುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯ್ತು. ಶ್ರೀ ವೆಂಕಟೇಶ್ ಅವರಿಗೆ ಯಾವ ಅನರ್ಹತೆಯು ಇಲ್ಲ ಎಂಬ ಅಂಶವನ್ನು ಮನಗಂಡು, ಅವರು ಶ್ರೀ ಧನಂಜಯ ಅವರಿಗಿಂತ ಜ್ಯೇಷ್ಠತೆಯಲ್ಲಿ ಹಿರಿಯರಾಗಿದ್ದ ಕಾರಣ ದಿನಾಂಕ 1.8.1991ರಂದು ಅವರಿಗೆ, ಅಡಿಷನಲ್ ಚೀಫ್ ಇಂಜಿನಿಯರ್ ಆಗಿ ಬಡ್ತಿ ನೀಡಲಾಯ್ತು.

9. ಅನಂತರ ಶ್ರೀ ಟಿ.ಆರ್. ಧನಂಜಯ ಅವರು ಶ್ರೀ ಎಂ. ವೆಂಕಟೇಶ್ ಅವರ ಬಡ್ತಿ ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್ ಗಳ ಜ್ಯೇಷ್ಠತಾ ಪಟ್ಟಿ ಹಾಗೂ ಇಲಾಖಾ ಬಡ್ತಿ ಸಮಿತಿಯ ನಡವಳಿಕೆಗಳ ಕ್ರಮಬದ್ಧತೆಯನ್ನು 1991ರ 15458 ಸಂಖ್ಯೆಯ 1991ರ 16822 ಸಂಖ್ಯೆಯ 1991ರ 17909 ಸಂಖ್ಯೆಯ ರಿಟ್ ಅರ್ಜಿಗಳ ಮೂಲಕ ಪ್ರಶ್ನಿಸಿದರು. ಇದರ ಜೊತೆಗೆ ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ರಾಮೇಗೌಡ ಅವರು 1991ರ 17688ರ ಸಂಖ್ಯೆಯ ರಿಟ್ ಅರ್ಜಿಯ ಮೂಲಕ ಶ್ರೀ ಎಂ. ವೆಂಕಟೇಶ್ ಅವರಿಗೆ ನೀಡಿದ ಬಡ್ತಿಯ ಕ್ರಮ ಬದ್ಧತೆಯ ಪ್ರಶ್ನಿಸಿದರು. ಈ ನಾಲ್ಕು ರಿಟ್ ಅರ್ಜಿಗಳು ಒಟ್ಟಾಗಿ 31.3.1994 ರಂದು ಕರ್ನಾಟಕ ಹೈಕೋರ್ಟ ಮುಂದೆ ಅಂತಿಮ ವಿಚಾರಣೆಗೆ ಬಂದವು.

10. ಈ ರಿಟ್ ಅರ್ಜಿಗಳನ್ನು ಹಾಗೂ 1993ರ 797ನೇ ನಂಬರಿನ ಸಿವಿಲ್ ಅಪೀಲಿಗೆ ಸಂಬಂಧಿಸಿದ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸಿ ಶ್ರೇಷ್ಟ ನ್ಯಾಯಾಲಯವು (ಹೈಕೋರ್ಟ) ಸುಪ್ರೀಂ ಕೋರ್ಟಿನ ಆಜ್ಞೆಯಿಂದ ಯಾವ ಹಕ್ಕೂ ಶ್ರೀ ಧನಂಜಯ ಅವರಿಗೆ ಸಲ್ಲುವುದಿಲ್ಲವೆಂದು ತೀರ್ಮಾನಿಸಿತು. ಅದರಂತೆ ಎಲ್ಲ ನಾಲ್ಕು ರಿಟ್ ಅರ್ಜಿಗಳನ್ನು ವಜಾ ಮಾಡಲಾಯಿತು. ಈ ಅರ್ಜಿ ಸಂಬಂಧದಲ್ಲಿ ಶ್ರೀ ಧನಂಜಯ ಅವರು ಸುಪ್ರೀಂ ಕೋರ್ಟಿನಲ್ಲಿ 1995ರ

3439-3441 ನಂಬರಿನ ವಿಶೇಷ ಅನುಮತಿ ಕೋರಿ ಅರ್ಜಿಯನ್ನು ಸಲ್ಲಿಸಿದರು. ಸುಪ್ರೀಂ ಕೋರ್ಟು ಈ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳುವ ಮುನ್ನವೇ ಶ್ರೀ ಟಿ.ಆರ್. ಧನಂಜಯ ಅವರು 28.2.1995ರಂದು ಅರ್ಜಿಯನ್ನು ಹಿಂತೆಗೆದುಕೊಳ್ಳಲಾಯ್ತು ಎಂಬ ಪರಿಗಣನೆಯ ಮೇಲೆ ಅರ್ಜಿಯನ್ನು ವಜಾ ಮಾಡಿಸಿಕೊಂಡರು.

11. ಈ ಘಟ್ಟದಲ್ಲಿ, ಈ ಮುಂದುವರಿದುಕೊಂಡು ಬಂದಿರುವ ಪ್ರಕರಣಕ್ಕೆ ಸಂಬಂಧವಿರುವ ಇತರ ಕೆಲವು ಬೆಳವಣಿಗೆಗಳನ್ನು ಪ್ರಸ್ತಾಪಿಸುವುದು ಉಚಿತವಾಗಿದೆ. ವಿವಿಧ ಸಂದರ್ಭಗಳಲ್ಲಿ ರಾಜ್ಯ ಸರ್ಕಾರದ ನಾನಾ ಅಧಿಕಾರಿಗಳ ವಿರುದ್ಧ ಶ್ರೀ ಟಿ.ಆರ್. ಧನಂಜಯ ಅವರು ನ್ಯಾಯಾಲಯ ನಿಂದನೆ ಪ್ರಕರಣಗಳನ್ನು ದಾಖಲು ಮಾಡಿದ್ದಾರೆ. 1991ರಲ್ಲಿ ಆಗ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀ ಎನ್. ಕೆ. ಪ್ರಭಾಕರರಾವ್, ಆಗಿನ ವಸತಿ ಹಾಗೂ ಶ್ರೀ ಮಹೇಶನ್ ನಂತರ ಮಹಾನಗರಪಾಲಿಕೆಯ ಕಮೀಷನರ್ ಆಗಿನ ಬಂದ ಶ್ರೀ ಪಿ.ಡಿ. ಶೆಣೈ ಅವರುಗಳ ವಿರುದ್ಧ ನ್ಯಾಯಾಲಯ ನಿಂದನೆ ಪ್ರಕರಣಗಳನ್ನು ಆರಂಭಿಸಿದುದು ಕೆಲ ನಿದರ್ಶನಗಳು ಅನಂತರ 1994ರಲ್ಲಿ ಶ್ರೀ ಟಿ.ಆರ್. ಧನಂಜಯ ರಾಜ್ಯ ಸರ್ಕಾರದ ಹಿಂದಿನ ಮುಖ್ಯ ಕಾರ್ಯದರ್ಶಿ ಶ್ರೀ ಜೆ.ಸಿ. ಲಿನ್ ಅವರ ವಿರುದ್ಧ ನ್ಯಾಯಾಲಯ ನಿಂದನೆ ಮೊಕದ್ದಮೆ ಹೂಡಿದ್ದರು. ರಾಜ್ಯ ಹೈಕೋರ್ಟ್ ಮುಂದೆ ಖುದ್ದಾಗಿ ಹಾಜರಾಗಬೇಕೆಂದು ಶ್ರೀ ಜೆ.ಸಿ. ಲಿನ್ ಅವರಿಗೆ ಆದೇಶಿಸಲಾಯಿತು. 14294-95ನೇ ನಂಬರಿನ ವಿಶೇಷ ಅನುಮತಿ ಪ್ರಾರ್ಥನಾ ಅರ್ಜಿಯ ಮೂಲಕ ಸುಪ್ರೀಂ ಕೋರ್ಟಿನಲ್ಲಿ ಈ ಆಜ್ಞೆಯ ಕ್ರಮ ಬದ್ಧತೆಯನ್ನು ಪ್ರಶ್ನಿಸಲಾಯಿತು. ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಆದೇಶಗಳನ್ನು ವೈಯ್ಯಕ್ತಿಕವಾಗಿ ಪರಿಶೀಲಿಸಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಶ್ರೀ ಜೆ.ಸಿ ಲನ್ ಅವರಿಗೆ ಆದೇಶ ನೀಡಿತು. ಶ್ರೀ ಜೆ.ಸಿ. ಲಿನ್ ಅವರು ಎಲ್ಲಾ ಆಜ್ಞೆಗಳನ್ನು ಪರಿಶೀಲಿಸಿ 4.10.1994 ರಂದು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟಿನ ಆಜ್ಞೆಗಳನ್ನು ಎಂದೂ ಉಲ್ಲಂಘಿಸಿಲ್ಲವೆಂದು ಪ್ರಮಾಣಪತ್ರದ ಮೂಲಕ ಸುಪ್ರೀಂ ಕೋರ್ಟಿಗೆ ತಿಳಿಸಿದರು. ಅನಂತರ ಶ್ರೀ ಜೆ.ಸಿ.ತ ಲಿನ್ ವಿರುದ್ಧ ಹೂಡಲಾಗಿದ್ದ ನ್ಯಾಯಾಲಯ ನಿಂದನೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ಕೈಬಿಟ್ಟಿತು.

12. ಸುಪ್ರೀಂ ಕೋರ್ಟಿನಲ್ಲಿದ್ದ 1993ರ 797ನೇ ಸಂಖ್ಯೆಯ ಸಿವಿಲ್ ಅಪೀಲಿನ ಸಂಬಂಧದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಆದೇಶಗಳನ್ನನುಸರಿಸಿ ಅಷ್ಟು ಹೊತ್ತಿಗೆ ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ವಹಿಸಿಕೊಂಡಿದ್ದ ಶ್ರೀ ಜೆ. ವಾಸುದೇವನ್ ಅವರು 27.7.1993ರ ಸುಪ್ರೀಂ ಕೋರ್ಟ್ ಆಜ್ಞೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಆದೇಶಿಸಿ ಬೆಂಗಳೂರು ಮಹಾನಗರ ಪಾಲಿಕೆಗೆ ಪತ್ರ ಬರೆದರು. 29.4.1994ರಂದು ಬೆಂಗಳೂರು ಮಹಾನಗರ ಪಾಲಿಕೆ ಹೆಚ್ಚುವರಿ ಚೀಫ್ ಇಂಜಿನಿಯರ್ ಹುದ್ದೆಯನ್ನು ನಿರ್ಮಿಸಲು ಹಾಗೂ ಆ ಹುದ್ದೆಗೆ ಶ್ರೀ ಟಿ.ಆರ್. ಧನಂಜಯ ಅವರನ್ನು ನೇಮಿಸಲು ನಿರ್ಣಯವೊಂದನ್ನು ಅಂಗೀಕರಿಸಿತು. ಆದರೆ, ಮಹಾನಗರಪಾಲಿಕೆಯ ಕಮೀಷನರ್ ಅವರು ಸಂಬಂಧಪಟ್ಟ ಶಾಸನದ ಅಧಿಕಾರವ್ಯಾಪ್ತಿಯನ್ನು ಮೀರಿ ಹಾಗೂ 31.4.94ರ ಹೈಕೋರ್ಟಿನ ಆಜ್ಞೆಯ ವಿರುದ್ಧ ಮಾಡಲಾಗಿದೆ ಎಂಬ ಆಧಾರದ ಮೇಲೆ ಸದರಿ ನಿರ್ಣಯವನ್ನು ಏಕೆ ರದ್ದು ಮಾಡಬಾರದು ಎಂದು ಕೇಳಿ ಷೋಕಾಸ್ ನೋಟೀಸನ್ನು ಮಹಾನಗರಪಾಲಿಕೆಗೆ ನೀಡಿತು.

13. ಅನಂತರ ಸುಪ್ರೀಂ ಕೋರ್ಟಿನ 1993ರ ಸಿ.ಎ. 797ನೇ ಸಂಬಂಧಿಸಿದ ಆದೇಶಗಳನ್ನು ರಾಜ್ಯ ಸರ್ಕಾರ ಜಾರಿಗೆ ತಂದಿಲ್ಲವೆಂದು ಹೇಳಿ 1994ರ 234ನೇ ಸಂಖ್ಯೆಯ ನ್ಯಾಯಾಲಯ ನಿಂದನೆ ಅರ್ಜಿಯನ್ನು ಸುಪ್ರೀಂ ಕೋರ್ಟಿನ ಮುಂದೆ ಶ್ರೀ ಟಿ.ಆರ್. ಧನಂಜಯ ಸಲ್ಲಿಸಿದರು. ಇದಕ್ಕೆ ಉತ್ತರವಾಗಿ, ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಶ್ರೀ ಜೆ. ವಾಸುದೇವನ್ ಅವರು ಶ್ರೀ ಟಿ.ಆರ್. ಧನಂಜಯ ಅವರಿಗೆ ಯಾವ ಹೆಚ್ಚು ಹಕ್ಕು ದಕ್ಕುವುದಿಲ್ಲವೆಂದು ತಿಳಿಸಿ ಪ್ರಮಾಣಪತ್ರ ಸಲ್ಲಿಸಿದರು. ಈ ಪ್ರಮಾಣಪತ್ರದಲ್ಲಿ ವಿವರಿಸಲಾಗಿದ್ದ ಅಂಶಗಳು ಪ್ರಧಾನವಾಗಿ ಶ್ರೀ ಜೆ.ಸಿ. ಲಿನರವರು ಹಿಂದೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿದ್ದ ಅಂಶಗಳೇ ಆಗಿದ್ದವು. ಶ್ರೀ ಟಿ.ಆರ್. ಧನಂಜಯ ಅವರು ಸಲ್ಲಿಸಿದ್ದ 3439-3441 ಸಂಖ್ಯೆಯ ವಿಶೇಷ ಅನುಮತಿ ಪ್ರಾರ್ಥನಾ ಅರ್ಜಿಗಳನ್ನು ಅವರ ಕೋರಿಕೆಯಂತೆ, ವಜಾ ಮಾಡಿ, ಸುಪ್ರೀಂ ಕೋರ್ಟ 1994ರ 234 ಸಂಖ್ಯೆಯ ನ್ಯಾಯಾಲಯ ನಿಂದನಾ ಅರ್ಜಿಗೆ ಸಂಬಂಧಸಿದಂತೆ ನೋಟೀಸನ್ನು ಜಾರಿ ಮಾಡಲು ಆದೇಶ ನೀಡಿತು. 10.5.1995 ರಂದು ಈ ವಿಷಯ ವಿಚಾರಣೆಗೆ ಬಂದಾಗ, ಸುಪ್ರೀಂ ಕೋರ್ಟು ಕೆಳಕಂಡ ಆಜ್ಞೆಯನ್ನು ಮಾಡಿತು.

"ರಾಜ್ಯದ ಪರವಾಗಿ ಹಾಜರಾಗಿರುವ ಹಿರಿಯ ವಕೀಲರಾದ ಶ್ರೀ ಹೆಗಡೆ ಅವರು ಕೋರಿರುವಂತೆ ಆಜ್ಞೆಯನ್ನು ಕಾರ್ಯರೂಪಕ್ಕೆ ತರಲು ಬೇಸಿಗೆ ರಜಾ ಮುಗಿದ ನಂತರದ ಅವಧಿಯುವರೆಗೆ ಕಾಲಾವಧಿಯನ್ನು ನೀಡಲಾಗಿದೆ. ಬೇಸಿಗೆ ರಜಾ ಮುಗಿದ ನಂತರ ವಿಚಾರಣಾ ಪಟ್ಟಿಗೆ ಈ ವಿಷಯ ಸೇರಿಸಬೇಕು"

14. ಅನಂತರ ಶ್ರೀ ಜೆ.ವಾಸುದೇವನ್ ಅವರು ಈ ಪ್ರಕರಣದ ಪರ ಸರ್ಕಾರದ ಪರ ದೆಹಲಿಯಲ್ಲಿರುವ ವಕೀಲರೊಡನೆ ವಿವರವಾದ ಚರ್ಚೆ ನಡೆಸಿದರು. ಈ ರೀತಿ ಆಜ್ಞೆ ಮಾಡುವ ಮೂಲಕ ಸುಪ್ರೀಂ ಕೋರ್ಟೆ ಆದೇಶಗಳನ್ನು ಅಕ್ಷರಶಃ ಪಾಲಿಸಿದಂತಾಗುವುದೆಂಬ ಪ್ರಾಮಾಣಿಕ ನಂಬಿಕೆಯೊಡನೆ ಸರ್ಕಾರಿ ವಕೀಲರಿಂದ-ಪರಿಷ್ಕೃತವಾದ ಶ್ರೀ ಟಿ.ಆರ್. ಧನಂಜಯ ಅವರಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಪೂರ್ವಾನ್ವಯ ಬಡ್ತಿ ನೀಡುವ 10.7.1995 ರ ಆಜ್ಞೆಯನ್ನು ಹೊರಡಿಸಲಾಯಿತು.

15. 1995ರ ಆಗಸ್ಟ್ 25 ರಂದು ಈ ವಿಷಯವು ವಿಚಾರಣೆಗೆ ಬಂದಾಗ 1993ರ 797ರ ಸಂಖ್ಯೆಯ ಸಿವಿಲ್ ಅಪೀಲಿನಲ್ಲಿ ಕೋರ್ಟು ಮಾಡಿದ ಆಜ್ಞೆಯನ್ನು ನೇರಾನ್ವಯ ಮಾಡಿದ ಪ್ರಯತ್ನ ಮಾಡಲಾಗಿದೆ. ಹಾಗೂ ಶ್ರೀ ಟಿ.ಆರ್. ಧನಂಜಯ ಅವರಿಗೆ ಹಕ್ಕುಗಳನ್ನು ತಿರಸ್ಕರಿಸಲಾಗಿದೆ ಎಂದು ಸುಪ್ರೀಂ ಕೋರ್ಟು ಅಭಿಪ್ರಾಯ ಪಟ್ಟಿತು. "ಬೇಡಿಕೆಯ ಬಗ್ಗೆ ತೀರ್ಪು ನೀಡುವಾಗ ಹಾಗೂ ಅರ್ಜಿದಾರ ಶ್ರೀ ಟಿ.ಆರ್. ಧನಂಜಯ ಅವರ ಬೇಡಿಕೆ ಅಂತಿಮವಾದುದಾಗಿದೆ ಅದರಿಂದಾಗಿ ಆಜ್ಞೆಯ ಹಿಂಬದಿಗೆ ಹೋಗಿ ಆಜ್ಞೆಯ ಪರಿಣಾಮವನ್ನು ಮೋಟಕು ಮಾಡಲು ಸರ್ಕಾರಕ್ಕೆ ಅವಕಾಶವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿತು. ನ್ಯಾಯಾಲಯ ಮಾಡಿರುವ ಆಜ್ಞೆಗಳನ್ನು ತಿರಸ್ಕರಿಸುವ ಉದ್ದೇಶಪೂರ್ವಕ ಹಾಗೂ ಸಂಘಟಿತ ಪ್ರಯತ್ನ ನಡೆದಿದೆ ಹಾಗೂ ಪ್ರತಿವಾದಿ ವಾಸುದೇವನ್ ಅವರು ಕೋರ್ಟಿನ ಆಜ್ಞೆಗಳನ್ನು ವಿಫಲಗೊಳಿಸಲು ಉದ್ದೇಶಪೂರ್ವಕವಾಗಿ ಹಾಗೂ ಮನಃಪೂರ್ವಕವಾಗಿ ವರ್ತಿಸಿದ್ದಾರೆ ಎಂದು ಕೋರ್ಟು ತೀರ್ಪು ನೀಡಿದೆ. ಜೊತೆಗೆ ಅವರ ನ್ಯಾಯಾಲಯ ನಿಂದನೆ

ತಪ್ಪಿತಸ್ಥರು ಎಂದು ತೀರ್ಮಾನಿಸಿ ಒಂದು ತಿಂಗಳ ಸದಾ ಸಜೆಯ ಶಿಕ್ಷೆಯನ್ನು ವಿಧಿಸಿತು.

16. ತಕ್ಷಣವೇ ಅಂದರೆ 25.8.1995ರಂದು ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಚೀಫ್ ಇಂಜಿನಿಯರರವರ ಸೂಪರನ್ಯೂಮರರಿ ಹುದ್ದೆಯನ್ನು ನಿರ್ಮಾಣ ಮಾಡಿ ಸದರಿ ಹುದ್ದೆಗ ಶ್ರೀ ಟಿ.ಆರ್. ಧನಂಜಯ ಅವರನ್ನು ನೇಮಿಸಿ ಆಜ್ಞೆ ಮಾಡಲಾಯ್ತು. ಶ್ರೀ ಟಿ.ಆರ್. ಧನಂಜಯ ಅವರು 1995 ಆಗಸ್ಟ 26 ರಂದು ಹೊಸದಾಗಿ ಸೃಜಿಸಲಾದ ಹುದ್ದೆಯಲ್ಲಿ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.

17. ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಪ್ರಸ್ತುತದಲ್ಲಿ ಅಧಿಕಾರದಲ್ಲಿರುವ ಸರ್ಕಾರ 11.12.1994 ರಂದು ಅಧಿಕಾರಕ್ಕೆ ಬಂದಿತು. ಅಂದಿನಿಂದ 25.8.1995ರವರೆಗೆ ಶ್ರೀ ಟಿ.ಆರ್. ಧನಂಜಯ ಅವರ 1994ರ ಸಿ.ಪಿ. 234 ಸಂಖ್ಯೆಯ ನ್ಯಾಯಾಲಯ ನಿಂದನಾ ಅರ್ಜಿ ಅನಂತರ 28.2.95ರಂದು ಶ್ರೀ ಜೆ.ವಾಸುದೇವನ್ ಅವರಿಗೆ ಸುಪ್ರೀಂ ಕೋರ್ಟ ನೀಡಿದ ನೋಟೀಸ್, ಅವರು ಸುಪ್ರೀಂ ಕೋರ್ಟಿಗೆ ಸಲ್ಲಿಸಿದ ಪ್ರಮಾಣಪತ್ರ ಇವುಗಳಿಗೆ ಸಂಬಂಧಿಸಿದ ವಿಷಯಗಳು ಹಾಗೂ ಅನಂತರ ನಡೆದ ಎಲ್ಲಾ ಬೆಳವಣಿಗೆಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಮುಖ್ಯಕಾರ್ಯದರ್ಶಿ, ಅಥವಾ ನನ್ನ ಪ್ರಧಾನ ಕಾರ್ಯದರ್ಶಿ ಅಥವಾ ನನ್ನ ಸಚಿವಾಲಯದಲ್ಲಿ ಕೆಲಸ ಮಾಡುವ ಇತರ ಅಧಿಕಾರಿಳಿಗಳಿಗಾಗಲಿ ಅಥವಾ ನನ್ನ ಗಮನಕ್ಕಾಗಲಿ 25.8.1995ರ ತನಕ ತರಲಿಲ್ಲ. ಈ ದಿನಾಂಕದಂದು ಶ್ರೀ ಜೆ. ವಾಸುದೇವನ್ ಅವರಿಗೆ ಒಂದು ತಿಂಗಳ ಸಾದಾ ಸಜೆಯನ್ನು ವಿಧಿಸಿ ಸುಪ್ರೀಂ ಕೋರ್ಟು ಆಜ್ಞೆ ಮಾಡಿತು.

18. 26.8.1995 ರಂದು ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯ ಕಾರ್ಯದರ್ಶಿಯವರು ನನ್ನನ್ನು ನನ್ನ ಮನೆಯಲ್ಲಿ ಭೇಟಿ ಮಾಡಿದರು. ಶ್ರೀ ಜೆ. ವಾಸುದೇವನ್ ಪರವಾಗಿ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲು ತಮಗೆ ಸಾಧ್ಯವಿಲ್ಲವೆಂದು ಶ್ರೀ ಸಂತೋಷ ಹೆಗಡೆಯವರು ತಿಳಿಸಿದ್ದಾರೆಂದು ನನಗೆ ಹೇಳಿದರು. ನಾನು ಶ್ರೀ ನಾರಿಮನ್ ಅವರನ್ನು ಸಂಪರ್ಕಿಸಿ ಅವರ ಪರವಾಗಿ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸುವಂತೆ ಅವರನ್ನು ಮನಒಲಿಸಬೇಕೆಂದು ನನ್ನನ್ನು ಪ್ರಾರ್ಥಿಸಿದರು. ಅದರಂತೆ ನಾನು ಶ್ರೀ ನಾರಿಮನ್ ಅವರೊಡನೆ ಮಾತನಾಡಿದೆ. ಅಲ್ಲಿಯ ತನಕ ಈ ಪ್ರಕರಣದ ಬಗ್ಗೆ ನನಗೇನೂ ತಿಳಿದಿರಲಿಲ್ಲ.

19. ಇದಾದ ನಂತರ 30.8.1995 ರಂದು ಶ್ರೀ ಜೆ.ವಾಸದೇವನ್ ಅವರು ಬೇಷರತ್ ಕ್ಷಣೆಯನ್ನು ವ್ಯಕ್ತ ಮಾಡಿ ಸುಪ್ರೀಂ ಕೋರ್ಟಿನ ಆದೇಶಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಹೊರಡಿಸಿದ ಆಜ್ಞೆಗಳನ್ನು ಲಗತ್ತಿಸಿ ಸುಪ್ರೀಂ ಕೋರ್ಟಿನಲ್ಲಿ ಪುನರ್ ಪರಿಶೀಲಿನಾ ಅರ್ಜಿಯನ್ನು ಸಲ್ಲಿಸಿದರು. ಆದರೆ ಸುಪ್ರೀಂ ಕೋರ್ಟ ಪುನರ್ ಪರಿಶೀಲನಾ ಅರ್ಜಿಯನ್ನು ತಿರಸ್ಕರಿಸಿತು. 8.9.1995ರಂದು ಶ್ರೀ ವಾಸುದೇವನ್ ಅವರಿಗೆ ವಿಧಿಸಿದ್ದ ಜೈಲುಶಿಕ್ಷೆಯನ್ನು ಖಾಯಂಗೊಳಿಸಿತು.

20. 1995ರ ಸೆಪ್ಟೆಂಬರ್ 8 ರಂದು ನಡೆದ ಸಚಿವ ಸಂಪುಟ ಸಭೆಯ ಈ ಎಲ್ಲಾ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡಿತು. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ದೀರ್ಘವಾಗಿ ಪರಿಶೀಲಿಸಿದ ನಂತರ ಭಾರತದ ರಾಷ್ಟ್ರಪತಿಯವರು ಭಾರತದ ಸಂವಿಧಾನ 72ನೇ

ವಿಧಿಯ ರೀತ್ಯ ಇರುವ ಅಧಿಕಾರವನ್ನು ಚಲಾಯಿಸಲು ಯೋಗ್ಯವಾದ ಪ್ರಕರಣವೆಂದು ಸಚಿವ ಸಂಪುಟ ಅಭಿಪ್ರಾಯಪಟ್ಟಿತು. ಅದರಂತೆ ಸಂವಿಧಾನದ 72ನೇ ವಿಧಿಯ ರೀತ್ಯ ಅಧಿಕಾರ ಚಲಾಯಿಸಲು ಪ್ರಕರಣವನ್ನು ಸಹಾನುಭೂತಿಯಿಂದ ಪರಿಶೀಲಿಸಲು ಹಾಗೂ ಶ್ರೀ ಜೆ. ವಾಸುದೇವನ್ ಅವರಿಗೆ ಕ್ಷಮಾದಾನ ನೀಡಲು ಭಾರತದ ರಾಷ್ಟ್ರಪತಿಯವರನ್ನು ಪ್ರಾರ್ಥಿಸಲು ಸಚಿವ ಸಂಪುಟ ತೀರ್ಮಾನ ಕೈಗೊಂಡಿತು. ಈ ಕ್ಷಮಾ ಕೋರಿಕೆ ಅರ್ಜಿಯನ್ನು 1995ರ ಸೆಪ್ಟೆಂಬರ್ 9 ರಂದು ಭಾರತದ ರಾಷ್ಟ್ರಪತಿಯವರಿಗೆ ಸಲ್ಲಿಸಲಾಯಿತು. ಈ ಅರ್ಜಿ ಪ್ರಸ್ತುತ ಅವರ ಪರಿಶೀಲನೆಯಲ್ಲಿದೆ.

21. ಈ ಮಧ್ಯ ಶ್ರೀ ಜೆ. ವಾಸುದೇವನ್ ಅವರ ಪ್ರಕರಣವನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅವರ ಮೇಲೆ ವಿಧಿಸಿರುವ ಶಿಕ್ಷೆಯನ್ನು ಮನ್ನಾ ಮಾಡಬೇಕೆಂದು ಕೋರಿ ಸಂವಿಧಾನದ 142ರ ವಿಧಿಯ ರೀತ್ಯ ಸುಪ್ರೀಂ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಬಹುದೆಂದು ಸರ್ಕಾರಕ್ಕೆ ಕಾನೂನು ತಜ್ಞರು ಸಲಹೆ ಮಾಡಿದರು. 1995ರ ಸೆಪ್ಟೆಂಬರ್ 12 ರಂದು ಈ ಅರ್ಜಿಯನ್ನು ಸಲ್ಲಿಸಿದ್ದು ಅದು 14.9.1995 ರಂದು ವಿಚಾರಣೆಗೆ ಬಂದಿತು. ಸರ್ಕಾರವು ಮೂರನೇ ಪಕ್ಷವಾಗಿದ್ದು ಅದಕ್ಕೆ ಅರ್ಜಿಯನ್ನು ಸಲ್ಲಿಸುವ ಅಧಿಕಾರವಿಲ್ಲ. ಹಾಗೂ ಈಗಾಗಲೇ ಒಮ್ಮೆ ಪುನರ್ ಪರಿಶೀಲನೆ ಆಗಿರುವ ಕಾರಣ ಮತ್ತೆ ಅದೇ ವಿಷಯದ ಪುನರ್ ಪರಿಶೀಲನೆಗೆ ಅವಕಾಶವಿಲ್ಲ ಎಂಬ ಆಧಾರದ ಮೇಲೆ ಸುಪ್ರೀಂ ಕೋರ್ಟ ಈ ಅರ್ಜಿಯನ್ನು ತಿರಸ್ಕರಿಸಿತು.

22. ಶ್ರೀ ಜೆ. ವಾಸುದೇವನ್ ಅವರು ಸುಪ್ರೀಂ ಕೋರ್ಟ್ ಆಜ್ಞೆಗಳಿಗೆ ತಲೆಬಾಗಿ 1995 ಸೆಪ್ಟೆಂಬರ್ 13ರಂದು ಬೆಂಗಳೂರಿನ ಪೋಲಿಸ್ ಕಮೀಷನರ್ ಅವರ ಮುಂದೆ ಹಾಜರಾದರು. ಅವರನ್ನು ಬೆಂಗಳೂರಿನ ಕೇಂದ್ರೀಯ ಕಾರಾಗೃಹದಲ್ಲಿ ಇರಿಸಲಾಗಿದೆ.

ಇದು ನನ್ನ ಲಿಖಿತ ಹೇಳಿಕೆ. ಸನ್ಮಾನ್ಯ ಅಧ್ಯಕ್ಷರೆ, ಈ ಸಂಬಂಧದಲ್ಲಿ ಮಾನ್ಯ ಗೌರವಾನ್ವಿತ ಹಿರಿಯ ಸದಸ್ಯರುಗಳು ಹಲವಾರು ವಿಷಯಗಳನ್ನು ಸದನದ ಗಮನಕ್ಕೆ ತರಬೇಕು. ಈ ಪ್ರಕರಣ ಹೇಗೆ..

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳೇ, ಒಂದು ನಿಮಿಷ ತಾವು ಈಲ್ಡ ಆಗಬೇಕು.

SRI H.D. DEVEGOWDA : No problem.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಸಭಾನಾಯಕರು ಈಲ್ಡ ಆಗಿ ಕುಳಿತುಕೊಂಡಿದ್ದಾರೆ. ಹೀಗೆ ಎಲ್ಲರೂ ಒಟ್ಟಿಗೆ ನಿಂತ ಈ ತರಹ ಮಾಡಿದರೆ ನಮಗೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಇವೆಲ್ಲಾ ಇರುತ್ತವೆ, ಆಗಲಿ, ಏನೋ ಹೇಳುತ್ತಾರೆ ಏನು ಮಾಡುವುದು?

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಲಿಖಿತ ಹೇಳಿಕೆಯಲ್ಲಿ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ ಮುಗಿಯಿತಾ ಎಂಬುದು ನನಗೆ ಗೊತ್ತಾಗಲಿಲ್ಲ.

ಅಧ್ಯಕ್ಷರು : ಸಭಾನಾಯಕರು ಈಲ್ಡ್ ಆಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಬೇರೆ ಏನೂ ಮಾತನಾಡುವುದಿಲ್ಲ. ಅವರ ಹೇಳಿಕೆ ಪೂರ್ಣ ಮುಗಿದ ಮೇಲೆ ನಾನು ಮಾತನಾಡುತ್ತೇನೆ. ಅವರ ಹೇಳಿಕೆಯ ಪುಟ-8ರಲ್ಲಿ ತಾವು ಹೇಳಿದ್ದೀರಿ. ನನಗೆ ದಿನಾಂಕ 25.8.95ರ ತನಕ ಶ್ರೀ ವಾಸುದೇವನರವರ ಬಗ್ಗೆ ಏನೂ ತಿಳಿದಿರಲ್ಲವೆಂದು ತಾವು ಹೇಳಿದ್ದೀರಿ. ತಾವು ದಿನಾಂಕ 10.8.95ರಂದು ಯಾವ ಮೂರು ಜನ ಶಾಸಕರು ಕೃಷ್ಣಪ್ಪ, ರಾಜಣ್ಣ, ಹೇಮಾವತಿ. ಒಂದು ನಿಮಿಷ `To get the file' ಎಂದು ತಾವು ಬರೆದಿದ್ದೀರಿ. ನಿಮ್ಮ ಕಾರ್ಯದರ್ಶಿ ಪಾರ್ಥಸಾರಥಿಯವರು To get the file early' ಎಂದು 19.8.95ರಂದು ಬರೆದಿದ್ದಾರೆ. ಅಂದರೆ ಅದಕ್ಕೆ ಮುಂಚೆ ನಿಮಗೆ ಗೊತ್ತಿತ್ತು. ಅದು ಇದಕ್ಕೆ ಸಂಬಂಧಪಟ್ಟಿದ್ದೇ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ವಿರೋಧಪಕ್ಷದ ನಾಯಕರು ನಾನು ಹೇಳತಕ್ಕ ಎಲ್ಲಾ ವಿಷಯಗಳನ್ನು ತಾವು ಲಾಲಿಸಿ ತಮಗೆ ಬರತಕ್ಕ ಸಂಶಯಗಳ ಬಗ್ಗೆ ತಾವು ಗುರುತು ಹಾಕಿಕೊಂಡು ಕೇಳಿದರೆ ನಾನು ಎಲ್ಲಾ ವಿವರಣೆಗಳ ಬಗ್ಗೆ ಉತ್ತರ ಕೊಡಲಿಕ್ಕೆ ಸಿದ್ದನಿದ್ದೇನೆ. ದಯಮಾಡಿ ಅಷ್ಟಕ್ಕಾದರೂ ಅವಕಾಶ ಕೊಡಬೇಕೆಂದು ಸದನದ ಮುಖಾಂತರ ಪ್ರಾರ್ಥಿಸುತ್ತೇನೆ. ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಧನಂಜಯರವರು ಸಲ್ಲಿಸಿರತಕ್ಕ ರಿಟ್ ಪಿಟಿಷನಗಳು ಯಾವ ನಾಲ್ಕು ರಿಟ್ ಪಿಟಿಷನಗಳು. ಈ ರಿಟ್ ಪಿಟಿಷನ್ ಬಗ್ಗೆ ಏನು ಕೋರ್ಟ ಆದೇಶ ಮಾಡಿದೆ ಅದನ್ನು ಸದನದ ಗಮನಕ್ಕೆ ತರಬೇಕು, ಇಲ್ಲಿಂದಲೇ ಡೆವಲಪ್ ಆಗುವುದು ಏಕೆಂದರೆ ಇದು ಬಹಳ ಇಂಪಾರ್ಟೆಂಟ್ ಏಕೆಂದರೆ how things developed ಎನ್ನುವುದು ಗೊತ್ತಾಗುತ್ತದೆ.

``However, Sri. Subramanya Jois, Learned Counsel for the petitioner brought to our notice an order made on Interlecutory Application No.3 in Civil Appeal No. 797/1993 to which we have just now adverted. The Supreme Court made it clear that by the Division Bench, ruling of this Court will certainly flow to the petitioner. But, a persual of ther order of this court in Writ Petition No. 20147/1979 and the connected matters would disclose that the relevant rules are declared to be invalid, and absorption of Dase Gowda in the Corporation is held invalid. The invalidity having been removed by Validation Act and appointment od Dase Gowda having been regularised, the question of any vacancy accurring on the cadres of the Assisant Executive Engineers, Executive Engineers, Superintendent Engineers and to the post of Additional Chief Engineer and considering the case of the petitioner thereto may not arise".

ಯಾವ ನಾಲ್ಕು ಪಿಟಿಷನ್ ಡಿಸಮಿಸ್ ಮಾಡುತ್ತರೋ, ``Therefore no right as such would flow to the petitioner from the said order as contented for the petitoner ignoring the rights of Sri M. Venkatesh". ಈ ಆರ್ಡರ್ ಕರ್ನಾಟಕದ ಡಿವಿಷನಲ್ ಬೆಂಚ್ ಮುಂದೆ ಏನು ಇವರು ಅರ್ಜಿ ಹಾಕಿದ್ದರು, ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನ ಇಂಟರಲೊಕೇಟರಿ ಅರ್ಜಿಯ ಮೇಲೆ ಮಾಡಿದಂಥ, ಒಂದು ಸುಪ್ರೀಂ ಕೋರ್ಟಿನ ಅಭಿಪ್ರಾಯ ಏನಿದೆಯೋ, ಅದು ಈ ಮೂರು ಅರ್ಜಿಗಳ ಬಗ್ಗೆ ಅಂದರೆ ಅವರ ಜ್ಯೇಷ್ಠತಾ (ಸೀನಿಯಾರಿಟಿ) ಬಗ್ಗೆ ಮತ್ತು ಕಾರ್ಪೋರೇಷನನವರು ಮಾಡುವಂಥ ರೂಲ್ಸ ಬಗ್ಗೆ, ಹಾಗೂ ಪ್ರೊಮೋಷನ್ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಅದಷ್ಟನ್ನೂ ಕರ್ನಾಟಕದ•ವಿಭಾಗೀಯ ಪೀಠ ಡಿಸಮಿಸ್ ಮಾಡಿದರು. ಇಲ್ಲಿಂದ ಪ್ರಾರಂಭವಾಯಿತು. ಹೇಗೆ ಇದರ ಮೂಲ ಎಲ್ಲಿಂದ ಪ್ರಾರಂಭ ಆಯಿತು ಎನ್ನುವುದನ್ನು ನಾವು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದದೆ. ಸನ್ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ ಮುಂದೆ ದಾಸೇಗೌಡರ ಅರ್ಜಿ ಅಪ್ ಹೋಲ್ಡ ಆಗುತ್ತದೆ. ಕರ್ನಾಟಕ ಅಪಲೇಟ್ ಟ್ರಿಬ್ಯುನಲನಲ್ಲಿ ಅವರ ವಾಪಸ್ಸಿಗೆ ರೀಪ್ಯಾಟ್ರಿಯೇಟ್ ಮಾಡಿದ ಮೇಲೆ, ಅವರು ಏನು ಅರ್ಜಿ ಹಾಕುತ್ತಾರೆ ಅದು ಡಿಸಮಿಸ್ ಆಗುತ್ತದೆ. ಅದರ ಮೇಲೆ ಅವರು ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ.

"In the circumstances whatever orders may have been passed in regard to the deputation of Sri Dase Gowda earlier, it is clear that the reliefs sought for as in the Writ Petition cannot be granted now since Dase Gowda's appointment has been held to be valid..."

`held to be valid.'

".... by the Supreme Court subsequent to the Validation Act passed by the State."

"However, Sri Subramanya Jois, Learned Counsel for the petitioner brought to our notice an order made in Interlocutory Application No. 3 of Civil Appeal No. 797/1993 to which we have just now averted. The Supreme Court made it clear that any benefits that may arise out of the orders passed by the Division Bench ruling of this court will certainly flow to the petitioner. But, a perusal of the order of this Court in Writ petition No. 20147/1979 and connected matters would disclose that the relevant rules are declared to be invalid and absorption of Dasegowda in the Corporation is held invalid. The invalidity having been removed..."

`The invalidity having been removed'

"......by Validation Act and the appointment of DaseGowda having been regularised, the question of any vacancy occuring in the cadres of Assistant Executive Engineers, Executive Engineers, Superintending Engineers and to the post of Additional Chief Engineer and considering the case of the petitioner thereto may not arise. "It is on the Interlocutory Application filed by Sri. Dhananjaya. ಸುಪ್ರೀಮ್ ಕೋರ್ಟ್ ಆರ್ಡರ್ ಮಾಡಿದರು. ಸನ್ಮಾನ್ಯ ಅಧ್ಯಕ್ಷರೇ, ಅದರ ಮೇಲೆ ಇವರು ಒಂದು ಸ್ಪೆಷಲ್ ಲೀವ್ ಪಿಟಿಷನ್ ಹಾಕುತ್ತಾರೆ. `the irony' ಏಕೆ ಎಂದು ಹೇಳಿದರೆ, ನಾನು ಯಾರ ಬಗ್ಗೆಯೂ ಚಕಾರ ಶಬ್ದ ಎತ್ತುವುದಿಲ್ಲ. ಅದರ ಅವಶ್ಯಕತೆ ಇಲ್ಲ. How things go, the events run? ದಯಮಾಡಿ ರಾಗಾದ್ವೇಷದಿಂದ ನಾವು ಯಾರೂ ಈ ವಿಷಯದ ಬಗ್ಗೆ ಚರ್ಚೆ ಮಾಡುವುದು ಬೇಡ. ಸ್ಪೆಷಲ್ ಲೀವ್ ಪಿಟಿಷನ್ ಇದರ ಮೇಲೆ ಧನಂಜಯ ಅವರು ಹಾಕುತ್ತಾರೆ.

`The Special Leave Petition was dismissed as withdrawn.' ಅದಕ್ಕೆ ಮುಂಚೆ ಶ್ರೀಮಾನ್ ಮೊಯ್ಲಿಯವರು ಜೆ.ಸಿ. ಲಿನ್ ಅವರ ಅಫಿಡವಿಟ್ಟನ್ನು ತಾವು ಉದಾಹರಿಸಿದ್ದರು. ನಾನು ಪುನಃ ಅದನ್ನು ಉದಾಹರಿಸಬೇಕಾದ ಅವಶ್ಯಕತೆ ಇಲ್ಲ. ಏನು ಜೆ.ಸಿ. ಲಿನ್ ಅವರು ಹೇಳುತ್ತಾರೆ : " The first respondent was considered for the selection of the Additional Chief Engineer against supernumerary post to be created, and he alone should be appointed to the said post. I, therefore, respect to submit that the order of the High Court has affirmed by this Hon. Court have been given effect to and that the first respondent is not entitled to any other benefit following from the said order." In the contempt petition in this Karnataka Division Bench, Supreme Court - Supreme Court after knowing the full facts by the affidavit of the former Chief Secretary then came to this conclusion.

ಸನ್ಮಾನ್ಯ ಅಧ್ಯಕ್ಷರೇ, ಈ ಸ್ಪೆಷಲ್ ಲೀವ್ ಪೆಟಿಷನ್ ಏನಿತ್ತು, ಅದರ ಜೊತೆಗೆ, ನಾನು ಮೊದಲೇ ಹೇಳಿದ್ದೇನೆ, ಈ ಕಂಟೆಂಪ್ಟ್ ಪಿಟಿಷನ್ ಅರ್ಜಿ ಹಾಕಿದ್ದರು. `The Special Leave Petition was dismissed as withdrawn.' Why? If the Special Leave Petition filed by Sri Dhananjaya, if there is a merit, if there is any substance in his Special Leave Petition filed before the Supreme Court, where is the need for Mr. Dhananjaya to withdraw and then to get it dismissed by the Court? I just

only request all the senior leaders in this House, let us form a fair opinion. This is the issue. This is the moot point. On the same day, the Supreme Court allows him to withdraw and dismiss the Special Leave Petition. If he has got the merit, if there is any substance in that petition i.e., Special Leave Petition, there is no need for him to get it withdrawn and get it dismissed. This is the moot point on the same day. ಮೊನ್ನೆ ತಾವು ರೈಸ್ ಮಾಡಿದಿರಿ, ಅಲ್ಲಿ ಅವರು ಅಫಿಡವಿಟ್ಟನ್ನು ಕೊಟ್ಟಮೇಲೆ, ಯಾರು, ಶ್ರೀ ಜೆ.ಸಿ. ಲಿನ್ ಅವರು.

Then CP No. 234/94, on the same order, the same order `Issue notice on the contempt petition.' `Issue notice on the contempt petition.' ಹೇಳಲಿಕ್ಕೆ ಹೋಗುವುದಿಲ್ಲ ನಾನು. ಇದು ಶ್ರೀ ಸುಬ್ರಮಣ್ಯ ಜೋಯಿಸ್, ಲರ್ನ್‌ಡ್ ಕೌನ್ಸೆಲ್ ಇವರಿಂದ ಸಬ್‌ಮಿಟ್ ಆಗಿರತಕ್ಕಂಥಾದ್ದು. ಹೇಗೆ ಬಂತು, ಅದರ ಬಗ್ಗೆ ಹೇಗೆ ವಿತ್‌ಡ್ರಾ ಮಾಡಿಕೊಂಡರು, ಅದರ ಡೀಟೇಲ್ಸ್ ಅನ್ನು ಬೇಕಾದರೆ ನಾನು ಸದನದ ಮುಂದೆ ಎಲ್ಲಾ ಇಡುತ್ತೇನೆ, ಯಾವ ಪೇಪರ್ಸ್ ಇಡಲಿಕ್ಕೂ ನಾನು ತಯಾರು ಇದ್ದೇನೆ. ಇದರೊಳಗೆ ನಾನು ಯಾವುದೇ ಮುಚ್ಚುಮರೆ ಮಾಡಬೇಕಾದ ಅವಶ್ಯಕತೆ ಇಲ್ಲ. This is a very important issue. All clarifications, I am prepared to give. One thing I would like to make myself clear. This is a very important matter. ನಾನು ಮೊದಲೇ ಹೇಳಿದ್ದೇನೆ. ಈ ೪೮ ವರ್ಷಗಳ ಇತಿಹಾಸದಲ್ಲಿ ಇಂಥ ಒಂದು ಪ್ರಾಮುಖ್ಯವಾದ ವಿಷಯವಾಗಿ ಚರ್ಚೆ ಈ ಸದನದಲ್ಲಿ ನನಗೇ ಮೊದಲನೇ ಬಾರಿ ಅನುಭವ. I am prepared to place all the documents in your chambers. Not a single thing, I am prepared to hide.

5.20 ಪಿ.ಎಂ

ಯಾರು ಬೇಕಾದರೂ ಇದನ್ನು ನೋಡಿಕೊಳ್ಳಬಹುದು. ಇದರಲ್ಲಿ ಯಾವ ಕಂಡೀಷನ್ನೂ ಇಲ್ಲ, ನಾನು ಯಾವ ಷರತ್ತನ್ನೂ ಹೇಳುವುದಿಲ್ಲ. ಏಕೆಂದು ಹೇಳಿದರೆ - I don't want to hide anything. ಯಾವಾಗ ಲಿನ್ ಅವರನ್ನು ಡ್ರಾಪ್ ಮಾಡಿದರಲ್ಲಾ, another Contempt Petition was filed making J. Vasudevan by name exclusively, ಮೊದಲು ಏಳು ಕಂಟೆಂಫ್ಟ್ ಪಿಟಿಷನ್ಸ್ ಇವೆ. ಪಾಟ್ನಾಯಕ್, ಚೀಫ್ ಸೆಕ್ರೆಟರಿ ಹಿಂದಿನವರು, ಮಹೇಶನ್, ಪ್ರಭಾಕರರಾವ್... series of Contempt Petitions, ಲಿನ್ ಯಾವಾಗ entire facts of the story - ಹೇಳಿದರೋ, ಅದಾದಮೇಲೆ he thought that it is of no use to fight the Special Leave Petition and withdrawn and got dismissed. ಇದಾದ ಮೇಲೆ ಬಹಳ ಪ್ರಾಮುಖ್ಯವಾದದ್ದು. ಜೆ. ವಾಸುದೇವನ್‌ಬಗ್ಗೆ ನೇರವಾಗಿ.. by name a Contempt petition was filed. So on that, a notice was issued, ಆ ನೋಟೀಸ್ ಇಷ್ಯೂ ಮಾಡಿದಂಥ

ಕಾಲದಲ್ಲಿ ಜೆ. ವಾಸುದೇವನ್ ಅವರು at this stage ಸರ್ಕಾರದಗಮನಕ್ಕೆ ತಂದರು, ಇದು 28.2.1995ರಲ್ಲಿ. ಅವತ್ತು ನೋಟೀಸನ್ನು ಇಷ್ಯೂ ಮಾಡುತ್ತಾರೆ. ಜೆ. ವಾಸುದೇವನ್ ಅವರಿಗೆ he is behind the bar, now I don't want to go into the details, ನನ್ನ ಮುಂದೆಯಾಗಲೀ, ಚೀಫ್ ಸೆಕ್ರೆಟರಿಯವರ ಮುಂದೆಯಾಗಲೀ, ಅಥವಾ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳ ಮುಂದೆಯಾಗಲೀ, ಈ ವಿಷಯವನ್ನು ಯಾರ ಗಮನಕ್ಕೂ ತಂದಿಲ್ಲ. ಅವರು ಏನು ಮಾಡಿದ್ದಾರೆ? ಹಿಂದಿನ ಲಾ ಸೆಕ್ರೆಟರಿಯವರು ಶ್ರೀ ಈಶ್ವರಭಟ್ ಅವರ ಹತ್ತಿರ ಕನ್ಸಲ್ಟ ಮಾಡಿದ್ದಾರೆ. ಆಗಿನ ಫಾರ್ಮರ್ ಅಡ್ವೋಕೇಟ್ ಜನರಲ್ ಶ್ರೀ ಸಂತೋಷ ಹೆಗಡೆ ಅವ ಜತೆ ಕನ್ಸಲ್ಟ ಮಾಡಿದ್ದಾರೆ. ಗವರ್ನಮೆಂಟ್ ಅಡ್ವೋಕೇಟ್ ವೀರಪ್ಪ ಎಂದು ಹೇಳಿ ಡೆಲ್ಲಿಯಲ್ಲಿ ಇದ್ದಾರಂತೆ. ಅವರನ್ನೂ ಹೋಗಿ ಕನ್ಸಲ್ಡ ಮಾಡಿದ್ದಾರೆ. ಇವರೆಲ್ಲರ ಸಲಹೆ ಮೇಲೆ ಏನು ಈ ಕಂಟೆಂಪ್ಟ ನೋಟೀಸಗೆ ಉತ್ತರ ಕೊಟ್ಟಿದ್ದಾರೆ. It is not brought to the notice of the Government at all. I am honestly telling this because not even a iota of information, ನೇರವಾಗಿ ಅವರೇ ಡೆಲ್ಲಿಗೆ ಹೋಗಿದ್ದಾರೆ, ಹೋಗಿ ವೀರಪ್ಪರವರ ಜೊತೆಗೆ ಕನ್ಸಲ್ಟ ಮಾಡಿದ್ದಾರೆ. ಈಶ್ವರ್ ಭಟ್ ಅವರ ಮನೆಗೆ ಹೋಗಿ ಕನ್ಸಲ್ಟ್ ಮಾಡಿದ್ದಾರೆ. ಸಂತೋಷ ಹೆಗಡೆ ಅವರನ್ನು ಕನ್ಸಲ್ಟ ಮಾಡಿದ್ದಾರೆ. ಇವರು ಕೊಟ್ಟಂಥ ಸಲಹೆ ಮೇರೆಗೆ - he filed an affidavit and reply to this Contempt Notice. ಅದರ ಮೇಲೆ ಸುಪ್ರೀಂ ಕೋರ್ಟನವರು has passed order on 10.7.1995. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸುಪ್ರೀಂ ಕೋರ್ಟನವರು ಅವರು ತೆಗೆದುಕೊಂಡಂಥ ಏನು ನಿಲುವು ಇದೆ, ಅದನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿದ್ದಾರೆ. ತಿರಸ್ಕಾರ ಮಾಡಿ, ಅವರು ಏನು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ, ಸುಪ್ರೀಂ ಕೋರ್ಟಿನ ಭಾವನೆಗಳ ಮೇಲೆ ನಾನು ಈಗ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಕ್ಕೆ ಹೋಗುವುದಿಲ್ಲ. I don't want to make any comments on that. ಅವರು ಏನು ಹೇಳಿದ್ದಾರೆ? ನಮ್ಮ ಸೂಚನೆಯನ್ನು ನೀವು ಪಾಲಿಸಲಿಲ್ಲ. That is the sum and substance. ಅದರ ಮೇಲೆ ನೀನ ಡಿಸ್ಒಬೆ ಮಾಡಿದ್ದೀಯಾ ಎಂದು ಅಂತ ಕಂಟೆಂಪ್ಟ ಮಾಡಿ ಒಂದು ತಿಂಗಳು ಶಿಕ್ಷೆಯನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೇ, ಸಂತೋಷ ಹೆಗಡೆಯವರು ಏನು ಹೇಳಿದ್ದಾರೆ ಎನ್ನುವುದನ್ನು ನಾನು ಹೇಳಿಬಿಡುತ್ತೇನೆ. Sri Snathosh Hegde, the Learned Senior Counsel for the Respondent contended that the order of the Division Bench of the High Court and the order passed by this Court cannot be construed to mean that any other persons who are legitimately entitled to the post of Chief Engineer are to be denied - that is M. Venkatesh. The right as such would amounts to contravening. He argued that the Government has considered the claims of the persons in accordance with the rules and found that the petitioner was not eligible even for the post of Chief Enginer, that he was eligible for the consequential benefit only for 24 days as

Superintending Engineer and one Venkatesh to be promoted as Chief Engineer, Accordingly he was given promotion as Chief Engineer.

This is the stand taken by Sri Santhosh Hegde who was appearing on behalf of J. Vasudevan. ಸನ್ಮಾನ್ಯ ಅಧ್ಯಕ್ಷರೇ, ಇದಾದಮೇಲೆ, ಏಕೆಂದರೆ ಇದು ಡಿಸಮಿಸ್ ಆದಮೇಲೆ ಇದು 25.8.95ರಂದು. 26ರ ಬೆಳಿಗ್ಗೆ ನಮ್ಮಲಾ ಸೆಕ್ರೆಟರಿಯವರು ನನ್ನ ಹತ್ತಿರ ಬಂದರು. ಈಗ ನನ್ನ ಪ್ರಯತ್ನ ಎಲ್ಲಾ ವಿಫಲವಾಗಿದೆ, ನಾನು ಮತ್ತೆ ಪುನಃ ಅವರ ಮುಂದೆ ಮರ್ಸಿ ಪಿಟಿಶನಗೆ ಹೋಗುವುದಿಲ್ಲ ಎಂದು ಹೇಳಿದ್ದಾರೆ. ದಯಮಾಡಿ ನೀವು ನಾರಿಮನ್ ಅವರನ್ನು ರಿಕ್ವೆಸ್ಟ್ ಮಾಡಬೇಕು. ಈ ಕಾವೇರಿ ವಿಷಯ ಆವತ್ತೇ ಬಂತು. Then I contacted him and I requested him to agree. ಅಲ್ಲಿಯವರೆಗೆ ಚಕಾರ ಶಬ್ಧ ಇಲ್ಲ. ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ಸ್ ಎಲ್ಲಾ ಇದೆ, ಅದನ್ನು ಇಡುತ್ತೇನೆ, ಚಕಾರ ಶಬ್ಧ ಕೂಡ ಗೊತ್ತಿಲ್ಲ ನನಗೆ. ಅವರು ಸಂತೋಷ ಹೆಗಡೆಯವರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದನ್ನು ಸದನದ ಗಮನಕ್ಕೆ ತರುತ್ತೇನೆ...

`In view of the fact that I am leaving for London tonight, I will not be in a position to assist you in the Contempt Petition of Mr. Vasudevan and hence this note.

On 10.5. 1995 when the matter came up before the Supreme Court, it was adjourned after vacation. I have informed the concerned to what transpired outside the Court Hall. At any rate I cannot dispute the categorical statement made in order of the court dated 10.5.95 which facts I have also informed the officers when the order of the Supreme Court was brought to my notice. it is a fact that sometime in May 95 I was contacted by the officers to discuss the stand of the Government. Having studied the statement dated 27.4.95 and the Annexures I agreed with the stand taken by and in their statement dated 27.4.95 even though I was not a party to it. I also studied the consequential draft order that was issued by the government and vacate the same. My opinion was formed on the following facts :-

In the previous High Court Orders, there was no specific direction given to give any particular benefit to Sri Dhananjaya.

2. The Order of the Supreme Court, in my view, directing the conferment of benefits to Sri Dhananjaya if he was entilted to.

3. The Cadre and Recruitment rules require to the post of Superintending Engineer and Addl. Chief Engineer to be filled up by selection.

4. The Division Bench of the High Court considered order of the Supreme Court including the order on I.A. III and held that Sri Dhananjaya does not acquire any right by orders of the Supreme Court to the detriment of others who are not parties to the proceedings.

e) The order of the High Court which is subsequent to the order of the Supreme Court attained finality because Dhananjaya filed a SLP and withdrew the same.

f) The resolution of the Corporation was referred to the Government under the provisions of the Corporation Act by the Commissioner of Corportation on the ground of illegality.

In this background, I arrive at an opinion that the stand taken by the Government in the Contempt Petition was justifiable. I have no further comments.

This letter I would like to place here. 25.8.95 ರಲ್ಲಿ ಅಪಿಯರ್ ಆಗಬೇಕೆಂದು ಕೇಳಿಕೊಂಡಾಗ, ನಾನು ಆಗುವುದಿಲ್ಲವೆಂದು ಹೇಳಿ, ಈ ಕಾಗದವನ್ನು ಅವರು, ಯಾವ ನಮ್ಮ ಲಾಯರ್ ನಾರಿಮನರವರು ಅಪಿಯರ್ ಆದರೋ ಅವರಿಗೆ ಈ ಕಾಗದ ಬರೆದಿದ್ದಾರೆ. ಈ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾದ ವಿಷಯ. I don't want to find fault with the court also. I don't want to make any comments. ಈ ಕಂಟೆಂಪ್ಟ ಪಿಟಿಷನ್ ಹಾಕುವಾಗ, ಕರ್ನಾಟಕ ಡಿವಿಜನಲ್ ಬೆಂಚಗೆ ನಾಲ್ಕು ಇದನ್ನು ರದ್ದು ಮಾಡಿದಮೇಲೆ, ಸುಪ್ರೀಂ ಕೋರ್ಟಿನಲ್ಲಿ ದಾಸೇಗೌಡರದ್ದು ವ್ಯಾಲಿಡೇಷನ್ ಮೇಲೆ ಕನಫರ್ಮ ಮಾಡಿದಮೇಲೆ, ಏನು ಕಂಟೆಂಪ್ಟ ಪಿಟಿಷನ್ ಹಾಕುತ್ತಾರೆ. ಅದರಲ್ಲಿ ಹೇಗೆ, Some of the people raised by Sri Dhananjaya without giving the facts to the Supreme Court in the Contmept Petition is the moot point. ಏಕೆಂದರೆ, 26 ಅರ್ಜಿಗಳು, ಏನು ಸೀರೀಸ್ ಆಫ್ ಪಿಟಿಷನ್ಸ ಬಂದಿವೆ. ಒಂದರಲ್ಲಿ ಒಂದು ಇಂಟರ್ ಲಿಂಕ್ ಇದೆ. ಆ 26 ಅರ್ಜಿಗಳನ್ನು ತರಿಸಿ ನೋಡಿ, ಮಾಡತಕ್ಕಂಥಾದ್ದರ ಬಗ್ಗೆ ಕಷ್ಟವೆಂದು ನನ್ನ ಭಾವನೆ. ಏಕೆಂದರೆ, ನಾನೇನೂ ಅಡ್ವೋಕೇಟ್ ಅಲ್ಲ. ಅಥವಾ ಸುಪ್ರೀಂ ಕೋರ್ಟಿನಲ್ಲಿ, ಹೈಕೋರ್ಟಿನಲ್ಲಿ ವಿಚಾರಗಳು ಹೇಗೆ ನಡೆಯುತ್ತವೆಂಬುದೂ ಪೂರ್ಣವಾಗಿ ಗೊತ್ತಿಲ್ಲ. ಒಟ್ಟಿನಲ್ಲಿ 26

ಕಂಟಿನ್ಯೂಯಸ್ ಪಿಟಿಷನ್ಸ ಇವೆ. ವಿವರಣೆ ಕೊಡುವುದು ಕಷ್ಟ, ನಾನು ಅಡ್ವೊಕೇಟ್ ಆಗಿದ್ದರೆ ಕೊಡುತ್ತಿದ್ದೆ. I will read out how things has happened with your kind permission.

Sir, the Supreme Court passed an order on the Inerlocutory application filed by Sri Dhananjaya in I.A. No.3 on 26.7.93 following its earlier order dated 19.2.93 up holding the Validation Act of 1981 and clarified that whatever rights flow to Sri Dhananjaya by the order of the Single Judge of the Karnataka High Court dated 19.3.1981 and was confirmed by the Supreme Court subsequently will continue to flow to Sri Dhananjaya and further observed as follows. Under these circumstances, whatever rights that would accrue to the applicant Sri Dhananjaya he is entitled to all the benefits and to effecuate the said rights if it is necessary. It may be open to the Corporation to create a supernumerary post for the period in question and give the benefits to the applicant which he is entitled to as per the judgment of the Division Bench of the Karnataka High Court. It is this direction which the complainant Sri Dhananjaya continues to compaign that it has not been complied with till the final order of the Supreme Court dated 25.8.95. He was harping only on this.

Following the direction of the Supreme Court Order dated 26.7.93, the Government on 2.9.93 gave a directive to the Corporation to implement the order of the Supreme Court. (i.e., your Government. I have to tell the facts) Not being satisfied with the directive of the Government Order dated 2.9.93 Sri Dhananjaya - the Complainant, as part of his earlier Writ Petition pending before the Single Judge of the High Court of Karnataka in Writ Petition No. 15458, and 16822 and 17909/91 made an application before the Single Judge of the Karnataka High Court seeking direction to the Government and the Corporation for the creation of the post of Additional Chief Engineer and to promote him against the said post, although in the original Writ Petition filed by him in before the High Court of Karnataka, there was no such prayer made in that petition. The Single Judge based on this prayer passed an order directing the Corporation to create the post and

promote Sri Dhananjaya against the said post within ten days from the date of this order to 3.3.93. Aggrieved by the said order, the Corporation and the State Government filed Writ Appeals before the Division Bench of the High Court of Karnataka which initially stayed the operation of the direction of the Single Judge of the High Court of Karnataka on 23rd September 1993. Thereafter, the Contention as urged by the Comlainant Sri Dhanajaya in Writ Petition No. 15458, 16822 and 17909 in which sequentially he has challenged the seniority list of Superintending Engineers dated 8.7.91 praying for a direction to the Corporation to cadre of Executive Engineer, Superintending Engineer, Addl.Chief Engineer with effect from the date on which the said vacancies were occupied by Sri Dase gowda and questioned the selection of Sri Venkatesh to the post of Addl.Chief Engineer. This is the limited issue.

The High Court of Karnataka after considering the case on merits and also looking into its earlier orders passed by the High Court and Supreme Court order dated 26.7.93 came to the conclusion that the complainant, Sri Dhananajaya, was not entitled to any further benefits flowing from the earlier orders of the High Court and the Supreme Court order dated 26.7.93. Sir, these points were urged by Sri J.C. Lynn, the then Chief Secretary to the Government as part of Special Leave Petition along with an affidavit filed him to the above effect in connection with the directions issued by the High Court of Karnataka for his personal appearance before it. This SLP was dismissed as infructuous by the Supreme Court on 17.10.94. Following the Government directive dated 2.9.93, the Corporation passed a resolution on 29.4.94 for the creation of the apost of Addl. Chief Engineer and to promote Sri Dhananjaya against that post. The Corporation also passed a resolution for the creation of the post of Engineer in Chief considering the increase in work load. Whilepassing the resolution by the BCC, the then Corporation Commission, based on the advice tendered to him by Sri Ashok Haranally which was based on the order of High Court, He went through the entire thing. On 31.3.94 and also based on the advice tendered

by the legal Adivsor of the BCC, there was no need to pass such resolution, however, ignoring the said advice of the Commission however, ignoring the said advice of the Commissioner, the BCC passed the said resolution on 24.9.94 provoked by this the then Corporation Commissioner Sir. P.D. Shenoy, wrote a letter to the Government on 30th May 94 for the cancellation of the resolution of the Corporation dated 24.9.94, on the groundsmentioned above. Following the letter of the Commisssioner of the corporation, the Government issued a show cause notice to the Corporation on 19.8.94 as to why the said resolution should not be cancelled. In the mean time, taking advantage of the Chief Secretary, J.C. Lynn, the affidavit which was filed as part of the his SLP, Sri Dhananjaya, the complainant as part of his complaint-rejoinder affidavit in Contempt Petition No. 234- where J.Vasudeven comes. Taking advantage of the Chief Secretary J.c. Lynn's affidavit which was filed aspart of his SLP Sri Dhananjaya, the Complainant of his rejoinder affidavit in Contempt Petition No. 234/94 has deliberately attempted to mislead the Supreme Court by stating that Sri J.C. Lynn's stand, later order of the Hon'ble High Court 31.3.94 in which he had challenged the order dated 26.7.93 this Hon'ble Court was not accepted as seen from Annexure``A" ie. 7.10.94 dismissal of SLP of Sri Lynn as infructuous. He declined to interfere with order of the Hon'ble High Court and dismissed the special leave petition. He has further deliberately mislead the Supreme Court of India by stating while it is true that the Government did pass an order on 2.9.93 implementing the directions of the Hon'ble Court *i.e.,* issuing notice, it has failed to pursue the matter further even inspite of the undertakings furnished in the High Court on 21st September 93.

ಸಿಂಗಲ್ ಜಡ್ಜ್‌ಮುಂದೆ ಹೋದಂಥಾದ್ದು ಅದನ್ನು ಮತ್ತೆ ವಜಾ ಮಾಡಿದರು, ಅದನ್ನು ತೆಗೆದುಕೊಳ್ಳಲಿಲ್ಲ. No.1340 and 1341 of 92 - the resolution dated 31st September 1993 the standing Committee for the taxation on and finance of the Corporation of the city of Bangalore, the resolution dated 21.4.94 of the Corporation Council, the rejection of the S.L.P. filed by Sri J.C.Lyn, the

complaint of Sri Dhananjaya has also mislead the Supreme court of India when he failed a memorandum of contempt of court petition under Article 142 of the Consitution of India, arising out of the order dated 26th July 1993 made in IA No. 3-CA 797/of 93 in which through out the petition he deliberately fails to make a mention of the order of the High Court of Karnataka dated 31-3-1994 which has already passed by then and which was known to him since he was the petitioner in those writ petitions``. ಇದನ್ನು ಬಹಳ ಪ್ರಾಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. how the whole matter was mislead facts totally. ಏಕೆಂದರೆ ಯಾವುದೋ ದೋಷ ಯಾರಿಗೋ ಕೊಡಲಿಕ್ಕೆ ಹೋದರೆ ಹೇಗೆ ಇಶ್ಯೂಸ್ ಫ್ಲೋ ಆಗಿದೆ ಎನ್ನುವ ಬಗ್ಗೆ ಹೇಳುತ್ತಿದ್ದೇನೆ.

"The complainant Sri Dhananjaya further mislead the Supreme court at the time of filing the SLP against the order of the High Court of karnataka in writ petition No. 15448/16822/17909 in as much as he got the SLP dismissed as withdrawn and at the same time failed to inform the Supreme Court that the contempt petition No. 234/94 arising out of CA No 797/93 as alaredy been adjudicated by the High Court of Karnataka in its order dated 31st March 1994 and his prayer of the dismissal of the SLP was withdrawn would amount not to derive any further benefits flowing from the earlier orders``. ಸುಪ್ರೀಂ ಕೋರ್ಟ ಬೆಂಚನ್ನು ಕಾಮೆಂಟ್ ಮಾಡುವುದಿಲ್ಲ. ಹೇಗೆ ಹೋಲ್ ಇಶ್ಯೂಸ್ ಇವತ್ತು ಸುಪ್ರೀಂ ಕೋರ್ಟ ಮುಂದೆ ಒಂದಕ್ಕೆ ಒಂದು ಸತ್ಯಾಂಶವನ್ನು ಮರೆಮಾಚುವುದರಲ್ಲಿ ಪ್ರಯತ್ನ ನಡೆದಿದೆ ಎನ್ನತಕ್ಕಂಥಾದ್ದನ್ನು ಮಾತ್ರ ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ಈ ಸದನದಲ್ಲಿ ಸುಪ್ರೀಂ ಕೋರ್ಟ ಬಗ್ಗೆ ಯಾವುದೇ ಕಾಮೆಂಟ್ಸ್ ಮಾಡುವುದಕ್ಕೆ ಸಿದ್ದನಿಲ್ಲ. ನಾನು ಆ ಬಗ್ಗೆ ಕಾರಣ ಕೊಡಲಿಕ್ಕೆ ಹೋಗುವುದಿಲ್ಲ. "If the complainant was fair and had submitted to this court the above submissions, the Supreme Court would have been in a position to appreciate the facts in a proper perspective and would have dropped the contempt proceedings against Mr. J. Vasudevan``. ಇಲ್ಲಿಯೇ ಬರತಕ್ಕಂಥಾದ್ದು ಹೇಗೆ ಯಾವ ಯಾವ ಸಂದರ್ಭದಲ್ಲಿ ಮಿಸಲೀಡ ಆಗಿದೆ ಎನ್ನತಕ್ಕಂಥಾದ್ದನ್ನು ಸೂಕ್ಷ್ಮವಾಗಿ ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ರಿಟನ್ ಸ್ಪೀಚ್ ಮಾಡುತ್ತಿರುವುದು ನನ್ನ ಜೀವನದಲ್ಲಿ ಇದೇ ಮೊದಲು ಅನುಭವ. ನಾನು ಲೀಗಲ್ ಪ್ರಾಕ್ಟೀಸ್ ಮಾಡಿದ್ದಿದ್ದರೆ, ಇನ್ನೂ ತುಂಬಾ ಚೆನ್ನಾಗಿ ಹೇಳಬಹುದಿತ್ತೋ ಏನೋ ಗೊತ್ತಿಲ್ಲ. I have tried to place the facts.

ಕನವಿನ್ಸ್ ಮಾಡುವ ದೃಷ್ಟಿಯಿಂದ ಹೇಳಿದ್ದು ಆಯಿತು. ಮಾನ್ಯ ಅಧ್ಯಕ್ಷರೇ, ಹೌದು ನಾನು ಕಳೆದ 4 ದಿವಸಗಳಿಂದ ಡೆಲ್ಲಿಯಲ್ಲಿದ್ದೆ. ಇದು ಒಂದೇ ವಿಷಯಕ್ಕೆ ಅಲ್ಲ ಬೇರೆ ಬೇರೆ ವಿಷಯಕ್ಕೆ ಇದ್ದೇ. ನಾನು ಏನೇನು ಮಾಡಿದ್ದೇನೆ ಎನ್ನುವ ಬಗ್ಗೆ ವಿವರಣೆ ಕೊಡುತ್ತೇನೆ ಆ ವಿಷಯ ಬೇರೆ, ಅದು ಒಂದುಕಡೆಗೆ ಇರಲಿ. ಇಲ್ಲಿ ಪ್ರಾಮುಖ್ಯವಾಗಿ ಎರಡು ಮೂರು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಜೆ. ವಾಸುದೇವನ್ ಎನ್ನುವವರಿಗೆ, ಫೆಬ್ರವರಿ 1995ರಲ್ಲಿ, ಕಂಟೆಂಪ್ಟ್ ಪಿಟಿಶನ್ ನೋಟೀಸ್ ಇಶ್ಯೂ ಆಯಿತು, ಫ್ಯಾಕ್ಟ್ ಅನ್ನು ಯಾವ ರೀತಿ ಮಿಸಲೀಡ್ ಮಾಡಿದ್ದಾರೆ ಎನ್ನುವ ಬಗ್ಗೆ ಈಗ ವ್ಯಾಖ್ಯಾನ ಮಾಡುವುದು ಅಪ್ರಕೃತ ನನಗೆ. ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಅವರ ನೋಟೀಸನಲ್ಲಿ ಹೇಳಿದ್ದಾರೆ ಇವರಿಗೆ 24 ದಿನದ ಸೂಪರಿಂಟೆಂಡೆಂಟ್ ಇಂಜಿನಿಯರ್ ಪೋಸ್ಟದ್ದು ಸಂಬಳ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ, ಸಂತೋಷ ಹೆಗಡೆಯವರು ಕೊಟ್ಟಿದ್ದನ್ನು ನಾನು ಓದಿದೆ. ಅವರು ಏನು ಮಾಡಿದರು ದಿನಾಂಕ 10.7.95ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಏನು ಒಂದು ಆರ್ಡರ್ ಆಗುತ್ತದೆ ಅದಕ್ಕೆ ಮುಂಚೆ he himself issued an order because ಕ್ರಿಯೇಶನ್ ಆಫ್ ಪೋಸ್ಟ ಏನೂ ಬರುವುದಿಲ್ಲ. ಅವನಿಗೆ 20-21 ದಿನದ ಸ್ಕಾಲರಿ ಡಿಫೆರೆನ್ಸ ಏನು ಇದೆ ಅದನ್ನು ಕೊಟ್ಟು 12 ಸಾವಿರ ಅಥವಾ 15 ಸಾವಿರ ರೂಪಾಯಿಗಳದ್ದು ಒಂದು ಚೆಕ್ ಕೊಟ್ಟರು, ಇದನ್ನು ಯಾರ ಗಮನಕ್ಕೂ ತರಲಿಲ್ಲ. He has not brough to the notice of anybody. ಏಕೆಂದರೆ ಇದರಲ್ಲಿ ಯಾವ ಮುಚ್ಚುಮರೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಇದಾದ ಮೇಲೆ ಅವರು ಕೋರ್ಟ ಮುಂದೆ ಏನು ಅಫಿಡವಿಟ್ ಹಾಕಿದ್ದಾರೆ, ಅದರ ಬಗ್ಗೆ ನಾನು ಹೇಳಿದ್ದೇನೆ. ಯಾರ್ಯಾರು ಅಡ್ವೈಸ್ ಕೊಟ್ಟಿದ್ದಾರೆ ಅದನ್ನು ತಿಳಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಅದರ ಮೇಲೆ ಕೋರ್ಟಿನಲ್ಲಿ ಒಂದು ಅರ್ಡರ್ ಪಾಸ್ ಆಗುತ್ತದೆ. ಕೋರ್ಟಿನ ಅಭಿಪ್ರಾಯದಲ್ಲಿ ಫ್ಯಾಕಟ್ಸ ಅನ್ನು ಧನಂಜಯ ಅವರು ಯಾವ ಯಾವ ರೀತಿ ಹೇಗೆ ತಮಗೆ ಅನುಕೂಲಕ್ಕೆ ತಕ್ಕಂಥ ಈ 26 ಪಿಟಿಷನ್‌ನಲ್ಲಿ ಯಾವಾಗ ಒಂದೊಂದು ಪಿಟಿಷನನಲ್ಲಿ ಒಂದೊಂದು ಭಾಗ ತೆಗೆದುಕೊಂಡು ಮಾಡಿದರೋ ಆ ಒಂದು ಹಿನ್ನೆಲೆಯಲ್ಲಿ ಕೋರ್ಟ ತನ್ನ ಅಭಿಪ್ರಾಯಕ್ಕೆ ಬಂದಿದೆ. ಇದರಲ್ಲಿ ನಾವು ಕೋರ್ಟ ಬಗ್ಗೆ ಚಕಾ ಶಬ್ಧ ಎತ್ತಕ್ಕಂಥ ಅವಶ್ಯಕತೆ ಇಲ್ಲ. ಇವತ್ತು ನಾನು ಪ್ರಾಮಾಣಿಕವಾಗಿ ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಒಂದು ಒಂದು ನನ್ನ ಮನಸ್ಸಿಗೆ ಇರತಕ್ಕಂಥ ನೋವು. ಇವತ್ತು ಈ ವ್ಯಾಲಿಟೇಷನ್ ಆಕ್ಟ್ 1981 ತಾವೇ ಆ ಬಿಲ್ ಮೂವ್ ಮಾಡಿದಿರಿ. ಧರ್ಮಸಿಂಗ್ ಅವರು. ಈ ಸದನದಲ್ಲಿಯೇ ಆ ಬಿಲ್ ಪಾಸಾಗಿದೆ. ಅದರ ಮೇಲೆಯೇ ಇದೆಲ್ಲಾ ಪ್ರಾರಂಭವಾಗಿರುವುದು. ನಾನು ತಪ್ಪು ಮಾಡಿದಿರಿ ಎಂದು ಹೇಳಲಿಲ್ಲ, ನನ್ನ ಕರ್ಮ ಏನಿದೆ ಅಂದರೆ ನಾನು ತಮ್ಮ ಬಗ್ಗೆ ಏನೂ ಹೇಳಲಿಲ್ಲ. ನನ್ನ ದುರಾದೃಷ್ಟ ಏನಾಗಿದೆ ಅಂದರೆ ನೀವೇನೂ ಹೇಳಲಿಲ್ಲ. ಧರ್ಮಸಿಂಗ್ ಅವರು ಹೇಳಿದರು. ವೀರಪ್ಪಮೊಯ್ಲಿಯವರು ಹೇಳಿದರು ಮತ್ತೆ ಇನ್ನು ಯಾರೋ ಹೇಳಿದರು ಎಂದು ಅಲ್ಲ. ನನ್ನ ಮುಂದೆ ಬಂದಿರುವ ನೋವು ಏನಿದೆ. ಅಂದರೆ ದಾಸೇಗೌಡನನ್ನು ಕಾರ್ಪೊರೇಷನಗೆ ವರ್ಗ ಮಾಡಿದವರು ದೇವೇಗೌಡರ ಅಲ್ಲ. ಅವನೂ ಗೌಡ, ದುರಾದೃಷ್ಟ ನಾನೂ ಗೌಡ. ನನ್ನ ಕರ್ಮ ಎಲ್ಲಿಗೆ ಬಂದಿದೆ ಅಂದರೆ, let this Hon'ble House come to a fair judgment. Through this House I appeal to the people of

Karnataka, Sir, what the sin I have made, how the media has projected, I failed to say this; Sir, what is the sin? Did I make any commitment? the blunder I have committed in these 8 months?

(At this stage the Hon'ble Chief Minister broke down emotionally with tears in his eyes)

ಹೌದು ಒಬ್ಬ ರೈತನ ಮಗಬಂದು ಈ ಸ್ಥಾನದಲ್ಲಿ ಕುಳಿತುಕೊಂಡರೆ, ಇವತ್ತು ನೀವು ನನಗೆ ಬಣ್ಣ ಹಚ್ಚಬೇಕು. ಏನು ಇದು? You have brought the Validation Act and you have posed Mr. Dasegowda and confirmed by that Government and the Supreme Court validated it. They tried to attribute motives and the meida tried to paint that I have committed a mistake. The mistake I have committed is, is only having come to this office with the blessings of the people. That is all.

ಶ್ರೀ ಜೆ.ಬಿ. ಶಿವಕುಮಾರ್ : ರೈತನ ಮಗ ಗಂಡಾಗಿರಬೇಕು.

ಶ್ರೀ ಹೆಚ್. ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ ಇವತ್ತು ನನಗೆ ನೋವಾಗಿದೆ. ನನ್ನ ಮನಸ್ಸಿನಲ್ಲಿ ನೋವಿದೆ. ಯಾವ ದಾಸೇಗೌಡನಿಗೆ ಯಾವ ಕಾಲದಲ್ಲಿ ಪ್ರಮೋಷನ್ ಆಯಿತು, I have been pained very much.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿ ವಾಸುದೇವನ್ ಹೆಂಡತಿ ಮಕ್ಕಳು ಕಣ್ಣೀರು ಹಾಕುತ್ತಿದ್ದಾರೆ, ಅದಕ್ಕೆ ಪರಿಹಾರ ಹೇಳಿ.

ಶ್ರೀ ಹೆಚ್.ಡಿ.ದೇವೇಗೌಡ : ಅದಕ್ಕೆ ಪರಿಹಾರ ನಾವು ನೀವು ಹುಡುಕಬೇಕು. ಈ ದೇಶದಲ್ಲಿ ಏನಾಗಿದೆ ಎಂದು ಹೇಳಿ. Not to paint Devegowda as a caste Leader and Devegowda wants to help ABCD; that is not the issue. Today this House and if the rule of law has to prevail, the people who are in the helm of affairs, in accordance with the Constitutional powers, they should act. It is not Devegowda nor not Mr. Veerappa Moily those people who have assumed the office in the name of the Constitution of India, they should act. It is not me.

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಪ್ರೀಂ ಕೋರ್ಟಿನ ಆದೇಶದಂತೆ ಅಧಿಕಾರಿಗಳು ಕೆಲಸ ಮಾಡುವಂತೆ ನೋಡಿಕೊಳ್ಳಬೇಕಾದಂತಹ ಜವಾಬ್ದಾರಿ ರಾಜ್ಯದ ಮುಖ್ಯಮಂತ್ರಿಗಳಾಗಿ ತಮ್ಮ ಮೇಲೆ ಇದೆ. ಅದನ್ನು ಮರೆತು ಇವತ್ತು ಶ್ರೀ ವಾಸುದೇವನ್ ಅವರನ್ನು ಜೈಲಿಗೆ ಕಳುಹಿಸುವಂತಹ ಕೆಲಸ

ಮಾಡಿದ್ದೀರಿ. ತಾವು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದ ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಸುಪ್ರೀಂ ಕೋರ್ಟಿನ ಆದೇಶವನ್ನು ಪಾಲನೆ ಮಾಡುವಂತಹ ತಮ್ಮದು ಅದು ಬಿಟ್ಟು ಬೇರೆ ಏನೋಮಾತನಾಡುತ್ತಿದ್ದೀರಿ. ಸುಪ್ರೀಂ ಕೋರ್ಟಿನ ಆದೇಶ ಆದ ಮೇಲೆ 24 ಗಂಟೆಗಳಲ್ಲಿ ಮಾಡುವುದಕ್ಕೆ ಸಾಧ್ಯವಾದ ಕೆಲಸವನ್ನು ಅದಕ್ಕಿಂತ ಮುಂಚಿತವಾಗಿ ಏಕೆ ಮಾಡಲಿಲ್ಲ ಇದು ನಮ್ಮ ಪ್ರಶ್ನೆ.

5.50 ಪಿ.ಎಂ

(ಗೊಂದಲ)

ಶ್ರೀ ಹೆಚ್.ಡಿ. ದೇವೇಗೌಡ : ವ್ಯಾಲಿಡೇಷನ್ ಮಾಡಬಹುದು, ಅವತ್ತು ನಮ್ಮ ಸರ್ಕಾರ ಇರಲಿಲ್ಲ. ನಮಗೆ ಏನೂ ಗೊತ್ತಿರಲಿಲ್ಲ. ದಾಸೇಗೌಡನನ್ನು ಅಲ್ಲಿಗೆ ಪೋಸ್ಟ್ ಮಾಡಿರಬಹುದು. ಅವನಿಗೆ ರೆಗ್ಯೂಲರೈಸ್ ಮಾಡಿರಬಹುದು, ಅವನಿಗೆ ಜಾತಿ ಆಧಾರದ ಮೇಲೆ ಮಾಡಿರಬಹುದು. ಆವತ್ತಿನ ಡಿ.ಪಿ.ಸಿ. ಕಮಿಟಿಯಲ್ಲಿ ಯಾರು ಇದ್ದರು? I am accountable to this House. ಡಿ.ಪಿ.ಸಿ. ಕಮಿಟಿ ಮಾಡಿದವರು Was there any Mayor who belongs to a particular community? Just I would like to know. Was there any Commissioner belong to this community? I want to know because I want to make every point very clear and place the records straight. 25.7.79 ರಿಂದ 16.8.83 ರವೆರೆಗೆ ಅಂದರೆ, ನಮ್ಮ ಸರ್ಕಾರ ಬರುವವರೆಗೆ Corporation was run by Administrators. ಈ ವ್ಯಾಲಿಡೇಷನ್ ಮಾಡಿದಾಗ, ಈ ಪ್ರಪೋಸಲ್ ಬಂದಾಗ ಅಲ್ಲಿ ಇದ್ದ ಮೇಯರ್ ಏನಾದರೂ ನಮ್ಮ ಜಾತಿಯವರು ಇದ್ದು ಇನಫ್ಲೂಯೆನ್ಸ್ ಮಾಡಿದ್ದಾರೆಯೇ ಎಂದು ನಾನು ನೋಡಿದೆ. ಆದರೆ ಆ ತರಹ ಯಾರೂ ಇರಲಿಲ್ಲ. ಆ ಕಮಿಟಿಯಲ್ಲಿ ಇದ್ದವರು ಯಾರೆಂದರೆ, ಜಿ. ನಾರಾಯಣರಾವ್, ಸಂಪತಕುಮಾರನ್, ಜಾಫರ್ ಕೈಫುಲ್ಲಾ, ಟಿ.ಎಸ್. ನಾರಾಯಣರಾವ್, ಬಾಲಗೋಪಾಲನ್, ವೆಂಕಟೇಶ್ ಮತ್ತು ಡಿ ಬಾಲಕೃಷ್ಣ ಇವರು ಇದ್ದರು. ವಾಲಿಡೇಟ್ ಮಾಡತಕ್ಕಂಥ ಕಾಲದಲ್ಲಿ ಆ ಸ್ಥಾನದಲ್ಲಿ ಧರ್ಮಸಿಂಗರವರು ಇದ್ದಾರೆ, ಅಲ್ಲಿ ಅಡ್ಮಿನಿಸ್ಟ್ರೇಟರ್ ಇದ್ದಾರೆ, ಆಗ ಒಂದು ರೀಸನಬಲ್ ಸ್ಟ್ಯಾಂಡ್ ತೆಗೆದುಕೊಂಡಿರಬಹುದು, ವೆಂಕಟೇಶದು ಸೀನಿಯಾರಿಟಿ ಲಿಸ್ಟ ಯನ್ನು ಫಿಕ್ಸ ಮಾಡಿದ್ದು ಯಾರು? Have I don it? Have I given promotion to Venkatesh? Venkatesh may be a Vokkalige man Yes. ವೆಂಕಟೇಶ್ ಒಕ್ಕಲಿಗನೆ Who have given the promotion?

ಡಿಪಾರ್ಟ್‌ಮೆಂಟಲ್ ಪ್ರಮೋಷನ್ ಕಮಿಟಿಯಲ್ಲಿ ಯಾರು ಇದ್ದರು? ಅದರಲ್ಲಿ ನಾನು ಅನ್ಯಾಯ ಮಾಡಿದ್ದೇನೆಯೇ? ವೆಂಕಟೇಶಗೆ ಪ್ರಮೋಷನ್ ಕೊಟ್ಟವರು ಯಾರು? ಇವತ್ತು ಸುಪ್ರೀಂ ಕೋರ್ಟ ಏಕೆ ಈ ನಿರ್ಣಯವನ್ನು ಕೊಟ್ಟರು? ಕೊಟ್ಟಿದ್ದಾರೆ. ಹೇಗೆ ಫ್ಯಾಕಟ್ಸ ಮಿಸ್ ಲೀಡ್ ಆಗಿದೆ ಎಂದು ಕೊಟ್ಟಿದ್ದೇನೆ. ಮಾನ್ಯ ವೀರಪ್ಪಮೊಯಿಲಿಯವರಿಗೆ ಸಾಕಷ್ಟು ಲೀಗಲ್ ನಾಲೆಡ್ಜ ಇದೆ. 26 ರಿಟ್ ಪಿಟೀಷನಅನ್ನು ನೀವು ಮುಂದೆ ಇಟ್ಟುಕೊಂಡು ಕುಳಿತುಕೊಂಡರೆ, ಪ್ರಾಮಾಣಿಕವಾಗಿ ಈ ಸಭೆಗೆ ಹೇಳಿ,

Can you come to a conclusion? ಎಷ್ಟು ಕನಫ್ಯೂಷನ್ ಆಗುತ್ತದೆ? ಇಲ್ಲಿ ಯಾರಾದರೂ ಪ್ರ್ಯಾಕ್ಟೀಸ್ ಮಾಡತಕ್ಕಂಥ ಪುಣಾತ್ಮರಿದ್ದರೆ, 26 litigations for 18 years. In stead of spending so much of money. ಬಂಗಾರಪ್ಪನವರು ಮುಂದೆಯೋ, ಮೊಯಿಲಿಯವರು ಮುಂದೆಯೋ ಖರ್ಗೆಯವರ ಮುಂದೆಯೋ ಬಂದು ನನಗೆ ಇಂಥಹ ಅನ್ಯಾಯಾವಾಗಿದೆ ಎಂದು ಅರ್ಜಿ ಕೊಡಬಹುದಾಗಿತ್ತಲ್ಲ? Why he tried to choose the path of going to the court for 19 years with 26 writ petitions? ಖರ್ಗೆಯವರು ಇಗನೋರ್ ಮಾಡುತ್ತಿದ್ದರೋ, ಧರ್ಮಸಿಂಗರವವು ಇಗನೋರ್ ಮಾಡುತ್ತಿದ್ದರೋ? ಮೊಯಿಲಿಯವರು ಇಗನೋರ್ ಮಾಡುತ್ತಿದ್ದರೋ, ಬಂಗಾರಪ್ಪನವರು ಇಗನೋರ್ ಮಾಡುತ್ತಿದ್ದರಾ? ದೇವರಾಜ ಅರಸರು ಇಗನೋರ್ ಮಾಡುತ್ತಿದ್ದರೋ? ನಾನು ಮಾಡಿದ್ದೇನೆ, ಆಯಿತು. ನನ್ನಿಂದ ದ್ರೋಹ ಆಗಿದೆ ರಾಜ್ಯಕ್ಕೆ Sir, what made you, why you had no confidence in the Executive, the Head of the Executive or the Cabinet colleagues in that executive? Why? Sir, I will leave it to this House and I will leave it to the people of this State to come to the conclusion as to who is right and who is wrong? That's all.

ಸನ್ಮಾನ್ಯ ಅಧ್ಯಕ್ಷರೆ, ರಿಟಪಿಟೀಷನ್ ಮತ್ತು ಕಂಟೆಪ್ಟ್ ಪಿಟೀಷನ್ ಬಗ್ಗೆ ಸಂತೋಷ ಹೆಗಡೆಯವರು ರಾಂಗ್ ಅಡ್ವೈಸ್ ಕೊಟ್ಟರೋ, ವೀರಪ್ಪ ಎನ್ನುವವರು ರಾಂಗ್ ಅಡ್ವೈಸ್ ಕೊಟ್ಟರೋ ಮತ್ತು ಫಾರ್ಮರ್ ಲಾ ಸೆಕ್ರೆಟರಿ ಈಶ್ವರ ಭಟ್ಟರಾಂಗೆ ಅಡ್ವೈಸ್ ಕೊಟ್ಟಿರೋ ಪಾಪ ಇದರಿಂದ ಮಾನ್ಯ ಜೆ.ವಾಸುದೇವನರವಿಗೆ ಹೆಸರಿನಲ್ಲಿ ಇಂಡಿವೀಜುಯಲ್ ಅವರ ಹೆಸರಿನ ಮೇಲೆ ಅರ್ಜಿ ಹಾಕಿದರೋ, ಕಂಟೆಪ್ಟ ಇಷ್ಯೂ ಆಯಿತು. He took their advice O.K. ಅವರು ಒಂದು ಆರ್ಡರ್ ಇಷ್ಯೂ ಮಾಡಿದರು. 20 ದಿನದ ಬೆನಿಫಿಟ್ ಅವನಿಗೆ ಫ್ಲೋ ಆಗುತ್ತದೆಂದು. That was the advise given. The supreme Court did not took it in a right spirit. OK. ಇದು ನನ್ನದಲ್ಲ ಎನ್ನುವುದು ಅವರ ಭಾವನೆ ಇರಬಹುದು based on the facts as I already told you. Misleading facts, based on this, they have come to the conclusion. ಸನ್ಮಾನ್ಯ ಅಧ್ಯಕ್ಷರೆ, ಪ್ರೆಸೆಂಟ್ ಚೀಫ್ ಜಸ್ಟೀಸ್ ಆಫ್ ಇಂಡಿಯಾ, ತಾವೂ ಅಡ್ವೋಕೇಟ್ ಇದನ್ನು ನಾನು ಓದುತ್ತೇನೆ, ಸಿವಿಲ್ ಕಂಟೆಪ್ಟ್‌ಪಿಟೀಷನ್ ಮೇಲೆ ಯಾವ ರೀತಿ ತೀರ್ಮಾನವಾಗಿದೆ ಎಂಬುದರ ಮೇಲೆ I am just giving the facts. ಯಾರು ಯಾರು ಇದ್ದಾರೆ ಆ ಬೆಂಚನಲ್ಲಿ? ಜಸ್ಟೀಸ್ ಅಹ್ಮದಿಯವರು, ಜಸ್ಟೀಸ್ ಬರೂಚಾರವರು ಮತ್ತು ಜಸ್ಟೀಸ್ ಪರಿಪೂರ್ಣಾನಂದನ್ ಎನ್ನುವ ಮೂರು ಜನ ಇದ್ದಾರೆ. ಸುಪ್ರೀಂ ಕೋರ್ಟನಲ್ಲಿ ಇದೇ ಕಂಟೆಮ್ಟ ಮೇಲೆ ಒಂದು ಜಜಮೆಂಟ ಕೊಡುತ್ತಾರೆ. Even if it was a case where two views were possible.. You are also an Advocate. Let's not mix-up. "Even if it is a case where two views were possible, we do not think that the Officer acted in a wilful disobedience of the Court Order to be hauled up for contempt". ದೇವೇಗೌಡನನ್ನು ಅರೆಸ್ಟ ಮಾಡಲಿ, ನನಗೆ ಚಿಂತೆ ಇಲ್ಲ. I am prepared

to go to Jail if I have made a mistatek. This was the judgment given by the same Supreme Court. In such a situation, the Court should have accepted his apology and put an end to the matter rather than not only punish him but also see to it that he goes staraight to jail from the Court. This is the Order in a contempt petition by 3 Learned judges who is now the present Chief justice of the Supreme Court. ಹೇಗೆ ಎರಡು ಅಭಿಪ್ರಾಯ ಬರುತ್ತದೆ? ಒಬ್ಬ ಆಫೀಸರ್ ಒಂದು ನಿರ್ಣಯಕ್ಕೆ ಬರಬೇಕಾದರೆ ಒಂದೇ ಒಂದು ಅಭಿಪ್ರಾಯಕ್ಕೆ ಬರಬೇಕು. You can haul him. It is the Court Judgment passed by the Bench headed by Sri Ahmadi.

ಇನ್ನೊಂದು ಆರ್ಟಿಕಲ್ 129 ಮೇಲೆ A Court should never forget, I will come to the point. I am not attributing motive, sister. ನನ್ನ ಮೇಲೆ ಯಾರು ಬೇಕಾದರೂ ಮೋಟಿವ್ ಅಟ್ರಿಬ್ಯೂಟ್ ಮಾಡಲಿ, I am not attributing. Taking note of the feelings of the House, to save that Officer, not to take any revenge on Sri Dhananjaya ನನ್ನ ಜೀವನದಲ್ಲಿ ಧನಂಜಯನನ್ನು ಇವತ್ತಿನವರೆಗೂ ನೋಡಿಲ್ಲ. ನನ್ನ ಗಮನಕ್ಕೆ ಬಂದಿದ್ದೇ 26.8.95ರಲ್ಲಿ ಸನ್ಮಾನ್ಯ ಅಧ್ಯಕ್ಷರೆ, ಆರ್ಟಿಕಲ್ 139(4)ರ ಪ್ರಕಾರ, Section 129(4): A Court should never forget that the power to punish for contempt laws as it is must always be exercised cautiously, wisely and with circumspection.

``Frequent or indiscriminate use of this power, in anger or irritation, would not help to sustain the dignity or status of the Court but may sometimes affact it adversely".

SRI H. N. NANGEGOWDA : On a wrong advise.

SRI H. D. DEVEGOWDA : Yes, on a wrong advise. Alright. By wrong advise. Agree for a moment. We are giving Rs.12000 towards the benefit for only 21 days. After knowing the mind of the Supreme Court, he issues an order, whether right or wrong as chief Engineer, he went to Delhi and request his additional Secretary or somebody. I will just take out that. It is by a Fax. It reads thus:

``Transmission Report- Fax No. so and so-

Complainant urged the Hon'ble Supreme Court of India passed in IA No.3 Civil Appeal No. 797/93 dt. 29/7/93 and orders of the Hon'ble Supreme Court dt. 25/8/95, the contempt petition No. 234/94".

On the same day without bringing to the knowledge of anybody, to save that officer, the Deputy Secretary or somebody. Vasudevan was in Delhi. He complies with the order according to the interpretation made by the Supreme Court.f Article 129(4). It is not my interpretation. He gives an unconditional apology after implementing the order. Sir, we will leave it to the good sense of the people of the country. They are our masters. They are above all these institutions. We are all accountable to the people of this nation. what is it Article 129 says? What is it that the present Supreme Court Bench headed by chief Justice says? Yes, he goes behind the bars. Doesn't matter. We have to bow our head. We will bow. I went to the President of Indi. On 25/8/1995 when I was not here, sharpt reactions were expressed by the hon. Members in this House. Then my chief Secretary has immediately run to the former Chief Justice of India who was in Bangalore. He has taken the written opinion. That is also here with me. Sri E.S. Venkataramaiah the former chief Justice of India advised, ``Now the only course left to you is to go before the President of India under Article 72. Pass a Cabinet Resolution" Sir, what advise I should take? What is the mistake my Cabinet has deone? We passed a Resolution. On behalf the Cabinet, I went to Delhi to file a Pardon Petition before the President of India who is the Constitutional Head. I did meet the Home Minister. I did meet the Prime Minister. I did meet the law Minister. What for? An officer who has no blood down in his career. An officer who is sincere and honest in life who served the Government of India as Joint Secretry for 5 years under the very same Prime Minister. What for this Consitution? What for this Article 72? Is this country governed under the Constitution? Where are we leading? Do we want this country to go to choose? Three IPS officers goes to join on one side and an IAS officers known for his honesty and integrity goes to Jail who even after made his submission, unconditional apology and yesterddy a neighbouring High Court passed the punishment fining Rs. 1500/- to three IAS Officers on a contempt petition. Sir, can we run the democracy like this? Who is to implement the orders of the chief

Minister who is answerable to 5 crore peoples if the honest officers are not going to be protected and if the rule of law is not going to be honoured? If the Constitution is not going to be honoured-what for this Constitution? Where are we going? Whether I may be here to-day or I may go out from here. Nobody is permanent. In an extraneous circumstances like this and even after passing an order according to the thinking of the Suprme Court which has been implemented by an officer without my knowledge (I am not going to find fault with him), Yes, the situation warranted. He issued a Fax Message from Delhi to the Secretary-II, HUD to do this without notice of anybody. Pass the orders. Order was passed. The fax Message is also there. He goes before the Supreme Court with folded hands `Pardon me'. What he says? What is the sin he has committed? Those people who are respnsible to¥day to occupy the highest post including Mr. Devegowda, whether as Chief Minister, Prime Minister or the President of India under the Constititonal powers vested on us and if we are not prepared to discharge under these extraneous circumstances, then god only must save this country. What is the future of the country. Afterall Devegowda is not the only right thinking person. All the right thinking persons in this country should apply their mind. Sir, in my 35 years of public life, I have not come across with such an agony. I have fought many battles in my life but to-day I am one of the sadest man. I am Head of the Executive on the one side and Leader of this August House on the other side. I am answerable to this House. But as an Exective Head, if I cannot protect the honest officers should I work to function in accordance with the Constitution of the country? can I say with all courage what the pledge I have taken under the Constitution. Am I discharging my duty properly, I don't know. It is only the people to come to the judgment. ಮಾನ್ಯ ಅಧ್ಯಕ್ಷರೇ, ನನ್ನ ಜೀವನದಲ್ಲಿ ನಾನು ದೊಡ್ಡ ಸಮಾಜ ಸುಧಾರಕ ಎಂದು ಹೇಳಿಕೊಳ್ಳುವುದಕ್ಕೆ ತಯಾರಾಗಿಲ್ಲ. ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವರು ಹೇಳಿದ ಮೂರು ಅರ್ಜಿಗಳ ಬಗ್ಗೆಯೂ ಹೇಳುತ್ತೇನೆ. ನನ್ನ ಹತ್ತಿರ ಸಂಬಂಧಪಟ್ಟ ಎಲ್ಲಾ ವಿವರಗಳು ಇಟ್ಟುಕೊಂಡಿದ್ದೇನೆ. ಅವರುಗಳು ಏನು ಅರ್ಜಿಗಳನ್ನು ಕೊಟ್ಟಿದ್ದಾರೆ ಅದನ್ನು ಕೊಟ್ಟಿರುವುದು ಯಾವೊತ್ತು? 18.8.1995 ರಂದು ಒಂದು ಅರ್ಜಿ. "ಬೆಂಗಳೂರು

ಮಹಾನಗರ ಪಾಲಿಕೆಯಲ್ಲಿ ಮುಖ್ಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪಾರ್ಥಸಾರಥಿಯವರನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಅಭಿಯಂತರರಾಗಿ ನೇಮಕ ಮಾಡುವ ಬಗ್ಗೆ. ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಶ್ರೀ ಪಾರ್ಥಸಾರಥಿ, ಮುಖ್ಯ ಅಭಿಯಂತರರು, ಬೆಂಗಳೂರು ಮಹಾನಗರ ಪಾಲಿಕೆ - ಇವರು ನಿವೃತ್ತಿ ಹೊಂದುವ ಮುನ್ನ ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಅಭಿಯಂತರರನ್ನಾಗಿ ನೇಮಕ ಮಾಡಿ, ಅಲ್ಲಿ ನಿವೃತ್ತಿ ಹೊಂದಲು, ಸಂಬಂಧಪಟ್ಟವರಾದ ತಾವೇ ಆದೇಶ ನೀಡಬೇಕೆಂದು ತಮ್ಮನ್ನು ಕೋರುತ್ತೇನೆ. ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಖ್ಯ ಅಭಿಯಂತರರನ್ನು ಸರಕಾರದಲ್ಲಿ ಮುಖ್ಯ ಅಭಿಯಂತರರನ್ನಾಗಿ ನೇಮಿಸಲು ಪರಿಗಣಿಸಬೇಕೆಂದು ಆಗಿರುವ ತೀರ್ಮಾನವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ." ಸ್ವಾಮಿ ನಾನು ಇದರ ಮೇಲೆ ಏನು ಹೇಳಿದ್ದೇನೆ? This is on 18th . The judgment given by the Supreme Court is on 10.7.1995. There must be some basis even for coming to an opinion. ಇದರ ಮೇಲೆ ನಾನು ಧನಂಜಯರದ್ದು, ಇದರೊಳಗೆ ಏನಾದರೂ ಲವರೇಷವಾದರು ಇನಫಾರ್ಮೆಶನ್ ಹೊರಗಡೆ ಬರುವುದಕ್ಕೆ ಸಾಧ್ಯವಿಲ್ಲ. ನಾನು ಇದರಲ್ಲಿ ಏನು ಬರೆದಿದ್ದೇನೆ? "Principal Secretry, HUD, ` please get the reports from the Commissioner' ಇಷ್ಟೇ. ಓರಿಜನಲ್ ಪ್ರತಿ ಇದು. ಇದರಲ್ಲಿ ಧನಂಜಯನ್ ಹೆಸರು, ಅವನ ಬಗ್ಗೆ ಅವನ ಗುಣ, ಅವನ ಹಿಂದಿನ ಕಥೆ, ಚರಿತ್ರೆ, ಮುಂತಾಗಿ ಇದರೊಳಗೆ ಏನಾದರೂ ಲವಲೇಷವಾದರೂ ಬರುತ್ತದೆ ಎಂದು ಯಾರಾದರೂ ಕನಸ್ಸೊ ಮಾಡುವುದಕ್ಕೆ ಸಾಧ್ಯವೇ? ಪ್ರಾಮಾಣಿಕವಾಗಿ ಈ ಸಭೆ ತೀರ್ಮಾನಕ್ಕೆ ಬರೋಣ ಮುಂದಿನ ಪಿಟಿಶನ್. "ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಖ್ಯ ಅಭಿಯಂತರರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. This is on 18.8.95. ನೀವು ಹೇಳಿ ಹಾಗೆ. "ಬೆಂಗಳೂರು ಮಹಾನಗರವು ದಿನೇ ದಿನೇ ಅತಿವೇಗದಲ್ಲಿ ಬೆಳೆಯುತ್ತಿರುವುದು ತಮಗೆ ತಿಳಿದ ವಿಷಯವೆ. ಈ ಪರಿಣಾಮವಾಗಿ ಸಾರ್ವಜನಿಕರ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಿವೆ. ಸಾರ್ವಜನಿಕರ ಭವಣೆಗಳನ್ನು ಬಗೆಹರಿಸುವಲ್ಲಿ ವಿಳಂಬವಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಮಹಾನಗರಪಾಲಿಕೆ ಎಲ್ಲವನ್ನೂ ವಿಸ್ತರಿಸ ಬೇಕಾಗಿರುವುದರಿಂದ ಈಗ ಇರುವ ಬೆಂಗಳೂರು ಮಹಾನಗರ ಪ್ರದೇಶ ಶೇಕಡ 50 ರಷ್ಟು ಹೆಚ್ಚು ಪ್ರದೇಶವು ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವುದು ಎಂದು ತಿಳಿದು ಬಂದಿದೆ. ಇದರ ಜೊತೆಗೆ ಮೆಗಾಸಿಟಿ ಯೋಜನೆಯಡಿಯಲ್ಲಿ ಬಹಳಷ್ಟು ಬೃಹತ್ ಕೆಲಸಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯು ವಹಿಸಬೇಕಾಗುತ್ತದೆ. ಇನ್ನೂ ಮುಂದುವರಿದು ಮಹಾನಗರಪಾಲಿಕೆ ರೆವಿನ್ಯೂ ಬಡಾವಣೆಗಳನ್ನು ಸಕ್ರಮಗೊಳಿಸಿ, ಈ ಬಡಾವಣೆಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ಬೆಂಗಳೂರು ಮಹಾನಗರಪಾಲಿಕೆಯು ನಿರ್ವಹಿಸ-ಬೇಕಾಗುತ್ತದೆ. ಬೆಂಗಳೂರು ಮಹಾನಗರಪಾಲಿಕೆಯ ವಿಸ್ತೀರ್ಣ ಜಾಸ್ತಿಯಾದಾಗಲೆಲ್ಲಾ ಕಟ್ಟಡಗಳ ನಕ್ಷೆಗಳು ಇತ್ಯಾದಿ ಮಂಜೂರಾತಿಯ ಕೆಲಸಗಳನ್ನು ಸಹ ಜಾಸ್ತಿಯಾಗುತ್ತವೆ. ಮೇಲ್ಕಂಡ ಎಲ್ಲಾ ವಿಷಯಗಳನ್ನು ಗಮನಿಸಿದರೆ, ಈಗ ಹಾಲಿ ಇರುವ ಇಬ್ಬರು ಮುಖ್ಯ ಅಭಿಯಂತರುಗಳು ಎಲ್ಲಾ ಕೆಲಸಗಳನ್ನು ನಿರ್ವಹಿಸುವುದು ಕಷ್ಟ ಸಾಧ್ಯವಾಗಿ, ಸಾರ್ವಜನಿಕರ

ಕುಂದುಕೊರತೆಗಳು ಜಾಸ್ತಿಯಾಗಿ ಸಾರ್ವಜನಿಕರು ಕಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಇವೆಲ್ಲವನ್ನು ತಾವು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮಹಾನಗರ ಪಾಲಿಕೆಯ ವಿಷಯದಲ್ಲಿ ಸಂಖ್ಯೆ: 562, ದಿನಾಂಕ : 24.1.94ರಂದು ನಿರ್ಣಯವನ್ನು ತೆಗೆದುಕೊಂಡು ರೂಪಾಯಿ 5600 ಅಥವಾ 6300 ವೇತನ ಶ್ರೇಣಿಯಲ್ಲಿ ಒಂದು ಇಂಜಿನಿಯರಿಂಗ್ ಚೀಫ್ ಹುದ್ದೆಯನ್ನು ನಿರ್ಮಿಸಿ, ಆ ಹುದ್ದೆಯನ್ನು ಸರಕಾರದ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ತುಂಬುವ ಹಾಗೂ ಹಾಲಿ ಇರುವ ಹುದ್ದೆಯನ್ನು ನಗರಪಾಲಿಕೆಯ ಅಭಿಯಂತರುಗಳಿಂದ ಭರ್ತಿ ಮಾಡುವುದು ಹಾಗೂ ಇನ್ನೊಂದು ಮುಖ್ಯ ಅಭಿಯಂತರರ ಹುದ್ದೆಯನ್ನು ಸೃಷ್ಟಿಸಿ ಅದನ್ನು ಸಹ ಬೆಂಗಳೂರು ನಗರಪಾಲಿಕೆಯ ಅಧಿಕಾರಿಗಳಿಂದ ಭರ್ತಿ ಮಾಡಲು ತೀರ್ಮಾನಿಸಿದೆ. Resolution on 29.4.94 ಆದ್ದರಿಂದ ತಾವು ಬೆಂಗಳೂರಿನ ನಾಗರೀಕರ ಹಿತದೃಷ್ಟಿಯಿಂದ ತ್ವರಿತವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸಲು ಈಗ ಹಾಲಿ ಇರುವ ಮುಖ್ಯ ಅಭಿಯಂತರರ ಹುದ್ದೆಯನ್ನು ಲೋಕೋಪಯೋಗಿ ಇಲಾಖೆಯ ಮುಖ್ಯ ಅಭಿಯಂತರಿಂದ ತುಂಬುವ ಬದಲು ನಗರ ಸಭೆಯ ಮುಖ್ಯ ಅಭಿಯಂತರುಗಳಿಂದ ಭರ್ತಿ ಮಾಡಲು ಹಾಗೂ ಇನ್ನೊಂದು ಮುಖ್ಯ ಅಭಿಯಂತರ ಹುದ್ದೆಯನ್ನು ಸೃಷ್ಟಿಸಿ ಈ ಹುದ್ದೆಯನ್ನು ಸಹ ಬೆಂಗಳೂರು ಮಹಾನಗರಪಾಲಿಕೆಯ ಅಭಿಯಂತರುಗಳಿಂದಲೇ ಇದರಲ್ಲಿ ಏನಾದರೂ ಧನಂಜಯನ ಸಮಸ್ಯೆ ಇದೆಯೇ? ಈ ನಿರ್ಣಯವನ್ನು ಯಾರೂ ನನ್ನ ಮುಂದಿಟ್ಟಿಲ್ಲ. ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ನಾನು ಅದರಲ್ಲಿ ಏನು ಬರೆದಿದ್ದೇನೆ? ತಾವುಗಳು ಸ್ವಲ್ಪ ತಾಳಿ. ನಾನು ಕಾರ್ಪೊರೇಷನನ ನಿರ್ಣಯಗಳನ್ನು ಹುಡುಕಿಕೊಂಡು ಹೋಗುವುದಿಲ್ಲ. ನನಗೊಂದು ಮಿಷನರಿ ಇದೆ. ``Secretary to Chief Minister, to get the file early". ನಾನು ಏನು ಬರೆದಿದ್ದೇನೆ? ``to get the file early" ಇಷ್ಟೇ ನಾನು ಬರೆದಿರುವುದು. ಅದರ ಮೇಲೆ ನಮ್ಮ ಸೆಕ್ರೆಟರಿ ಏನು ಬರೆದಿದ್ದಾರೆ? "ಈ ಟಿಪ್ಪಣಿಯ ಜೊತೆ ಶಾಸಕರುಗಳಾದ ಶ್ರೀ ಸೋಮಣ್ಣ, ಶ್ರೀ ರಾಜಣ್ಣ, ಶ್ರೀ ಆರ್. ಕೃಷ್ಣಪ್ಪ, ಶ್ರೀಮತಿ ಬಿ. ಹೇಮಾವತಿ - ಇವರುಗಳು ಮಾನ್ಯ ಮುಖ್ಯಮಂತ್ರಿಯವರಿಗೆ ನೀಡಿರುವ ಪತ್ರಗಳನ್ನು ಲಗತ್ತಿಸಲಾಗಿದೆ. ಪತ್ರದಲ್ಲಿ ಇರುವ ಅಂಶಗಳು ಸುವೇದ್ಯವಾಗಿವೆ. ಸನ್ಮಾನ್ಯ ಮುಖ್ಯಮಂತ್ರಿಯವರು to get the File early ಎಂದು ಬರೆದಿದ್ದಾರೆ. ಅದ್ದರಿಂದ ಇದನ್ನು ಜರೂರಾಗಿ ಪರಿಗಣಿಸಿ ಕಡತದಲ್ಲಿ ತಮ್ಮ ಅಭಿಪ್ರಾಯದೊಂದಿದೆ ಮಂಡಿಸಬೇಕೆಂದು ಕೋರಲಾಗಿದೆ. ಸರಕಾರದ ಪ್ರಧಾನ ಕಾರ್ಯದರ್ಶಿ" ಅದನ್ನು ಇಮೀಡಿಯಟ್ ಆಗಿ ತರಿಸಿ ನನ್ನ ಮುಂದೆ ಇಡಿ ಎಂದು ಹೇಳಿದ್ದೇನೆ. ಇದರೊಳಗೆ ಅಮೊತ್ತು ರೆಸಲ್ಯೂಷನ್ ಆಫ್ ಡಿ ಕಾರ್ಪೊರೇಷನ್, ಅದನ್ನು ಶೆಣೈ ಏನು ಮಾಡಿದರು, ಅದರ ಬಗ್ಗೆ... ಮೊದಲೇ ಇದೆಲ್ಲಾ ಗಮನಕ್ಕೆ ಬಂದಿರುವುದು ಇವುಗಳೆಲ್ಲಾವನ್ನು ತರಿಸಿ ನೋಡಿದ ಮೇಲೆ. ಅದು ಒಂದು ಕಡೆಗೆ ಇರಲಿ. ಇದರಲ್ಲಿ ಧನಂಜಯ, ಅವನ ಪ್ರಮೋಷನ್, ಮುಂತಾದ ವಿಷಯಗಳನ್ನು ಈಗ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಈ ಅರ್ಜಿಯನ್ನು ನಾನು ಬರೆದಿದುರಿಂದ ಕಡತ ಎಲ್ಲಿ ನಿಂತು ಹೋಯಿತು ಎಂಬ ಅಭಿಪ್ರಾಯ ತಮಗೇನು ಬಂತು ಅದಕ್ಕೆ ಹೇಳಿದೆ. ತಾವು ಆಡಳಿತ ನಡೆಸಿದವರು 7 ದಿನದಲ್ಲಿ ಆ ಕಡತ ನನ್ನ ಮುಂದೆ ಬರುವ ಪ್ರಶ್ನೇನು ಬಂದಿಲ್ಲ. ಇದರ ಬಗ್ಗೆ ಯಾವರೀತಿ ವಿಚಾರಣೆ ಬೇಕಾದರೂ ಮಾಡಬಹುದು. ಇದು 18.8.95ರ ಈ ಪತ್ರದಲ್ಲಿ "ಬೆಂಗಳೂರು ಮಹಾನಗರ

ಪಾಲಿಕೆಯಲ್ಲಿ ಮುಖ್ಯ ಅಭಿಯಂತರರಾಗಿ ಸಾರ್ಥಸಾರಥಿಯವರು ನಿವೃತ್ತಿ ಹೊಂದುವ ಸ್ಥಾನಕ್ಕೆ ಅಭಿಯಂತರರಾದ ರಾಮೇಗೌಡರನ್ನು ಮುಖ್ಯ ಅಭಿಯಂತರರನ್ನಾಗಿ ನೇಮಕ ಮಾಡುವ ಬಗ್ಗೆ. I must place all the facts before the House.

6.20 ಪಿ.ಎಂ

I don't know this Dhananjaya. Even on that day "ತಾವು ದಯಮಾಡಿ ಮಹಾ ನಗರ ಪಾಲಿಕೆ ಸಂಬಂಧಪಟ್ಟವರ ಜೊತೆ ಚರ್ಚಿಸಿ, ರಾಮೇಗೌಡರಿಗೆ ಅಧೀಕ್ಷಕ ಅಭಿಯಂತರರು, ಬೆಂಗಳೂರು ಮಹಾ ನಗರ ಪಾಲಿಕೆ ಇವರನ್ನು ಮುಖ್ಯ ಅಭಯಂತರರನ್ನಾಗಿ ನೇಮಕ ಮಾಡಬೇಕೆಂದು ಕೋರುತ್ತೇನೆ." ಹಿಂದೆ ರೆಸಲ್ಯೂಷನ್ ಮಾಡಿ ನಿರ್ಣಯಿಸಿದೆ, ಅದರ ಪ್ರಕಾರ ಮಾಡಿ ಎಂದು ಹೇಳಿದ್ದಾರೆ. Unless the concerned papers are processed through the proper channel ನ್ನನ ಮುಂದೆ ಬರದೆ ನಾನು ಮಾಡಲಿಕ್ಕೆ ಸಾಧ್ಯ ಇಲ್ಲ. ಇನ್ ಚಾರ್ಜ ಅರೇಂಜಮೆಂಟನಲ್ಲಿ till a final decision is takken ಡಿಸಿಷನ್ ಎಂದು ಹೇಳಿದ್ದೇನೆ. ಅದನ್ನೂ ಸಭೆಯ ಮುಂದಿಡುತ್ತೇನೆ. ಇದರೊಳಗೆ ಯಾವುದೂ ಸಭೆಯಿಂದ ಹೊರಗೆ ಇಡಬೇಕಾದದದ್ದು ಇಲ್ಲ. 9 ತಿಂಗಳು ಈ ಸರಕಾರ ಅಧಿಕಾರ ನಡೆಸಿದೆ. 6 ವರ್ಷಗಳಕಾಲ ನಾನು ತಮಗೆ ಕೊಡುತ್ತೇನೆ. ಮೊಟಿವೇಷನ್ ಏನು ಇದೆ ಅದರ ಬಗ್ಗೆ ಮಾತ್ರ ಕ್ಲಾರಿಫೈ ಮಾಡುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀ ಜಿ. ವೆಂಕಟೇಶ್ ಸೂಪರಿಂಟೆಂಡೆಂಟ್ ಇಂಜಿನಿಯರ್ :- ``In April 1993 the Officer was warned for an irregularity on the construction of a deviation of the road under Hemavathy project. It is also understood taht Sri Venkatesh is one of the persons who have been prosecuted for the alleged irregularities comitted by the Bangalore Development Authority." This Officer was a Superintending Engineer, I have posted him to Hemavathy as Superintending Engineer and asked him to hold the charge of the Chief Engineer. Yes. That order is here.

ಏಕೆ? ಅದನ್ನು ನಾನು ಇವತ್ತು ವಿಶ್ಲೇಷಣೆ ಮಾಡುವುದು ಬೇಡ. ಕಾರಣ ಏನು ಎಂದು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, because even among the weaker sections, there are various types of problems. They represented to me at that time, that this particular section has been totally denied. I posted him to Hemavathy as Superintending Engineer and asked him to hold the charge of Chief Enginner till this matter is going to be cleared by the D.P.C. After one and half months the D.P.C. was able to remove these hurdles and promote him as regular Chief Engineer and placed in full charge of Hemavathy Project.

ರಾಮಕೃಷ್ಣರವರೇ, ಪಾರ್ಟಿ ಯಾವುದಾದರೂ ಆಗಲೀ, God sees the truth but waits. ಇದರಿಂದ ಇಲ್ಲಿ ಪಾಲಿಟಿಕ್ಸ ಮಾಡಿ, ನಾವು ಅಧಿಕಾರ ಹಿಡಿಯಬೇಕಾಗಿಲ್ಲ. ಹಿಡಿದುಕೊಂಡರೆ ಯಾವುದೂ ಶಾಶ್ವತವಾಗಿ ಇರುವುದಕ್ಕೂ ಸಾಧ್ಯವಿಲ್ಲ. God sees the truth but waits. P. Nanjundaswamy, the last day, he must hand over the charge at 4.30 or 5.00 O'clock. Just I read out what I have written on that day.

``Since the matter relating to enhance the retiring age to 58 for all super-time scale officers is under consideration of the Government and the decision is going to be taken shortly, he may be continued in service for the time being, after 31st of this month, till the final decision is taken in this regard." That last of handling over the charge i.e., on 31.7.1984. Sri Ramakrishna Hegde.``

"C.S. may please see. He may issue orders.``

ಶ್ರೀ ಧನಂಜಯ ಯಾವುದೋ ಪರ್ಟಿಕ್ಯುಲರ್ ವರ್ಗದ ಅಧಿಕಾರಿ, ಯಾರಿಗೋ ನಾನು ಉಪಕಾರ ಮಾಡಲಿಕ್ಕೋಸ್ಕರ ಏನು ಮಾಡಿದ್ದೇನೆ, ಎನ್ನುವ ಒಂದು ಇಂಪ್ರೆಷನ್ ಅನ್ನು ಹೊರಗಡೆ ಕೊಡತಕ್ಕಂತಹ ವಾತಾವರಣ ನಿರ್ಮಾಣ ಮಾಡಿದ್ದಾರೆ, ಅದಕ್ಕೆ ಈ ಎರಡು ಕಡತಗಳನ್ನು ತರಿಸಿದೆ ಅಷ್ಟೆ. ಇಲ್ಲದಿದ್ದರೆ ಇಷ್ಟು ನಾನು ಹೇಳಬೇಕಾಗಿರಲಿಲ್ಲ. 58 ವರ್ಷ ಮುಂದೆ ಯಾವತ್ತೋ ತೀರ್ಮಾನವಾಗುತ್ತದೆ. The officer who has to hand over the charge within 3 hours, I personally took the file to the then Chief Minister and got his approval. ಬಿಡಿ, ತಾವು ರಾಜಕೀಯ ಮಾಡಲೇ ಬೇಕು. ನಾನು ಬೇಡವೆಂದು ಹೇಳುವುದಿಲ್ಲ. ರಾಜಕೀಯ ಮಾಡುವುದು ನಿಮ್ಮ ಧರ್ಮ. ಆದರೆ, ವಸ್ತು ಸ್ಥಿತಿಯನ್ನು ಜನರ ಮುಂದೆ ಇಡತಕ್ಕಂತಹ ಕಾಲದಲ್ಲಿ, ಸತ್ಯ ಶೋಧನೆಯಾಗಬೇಕು. Any enquiry. Do you want an enquiry by a Supreme Court judge, Yes. I will agree. Do you want an enquiry by CBI? Yes, I am prepared to agree. What this House wants? What this House wants, I am prepared to accept it. I don't want to keep anything behind the back. Anything what this House wants, I am not at all going to hesitate. Let this matter be thrown open to the public. I don't want to stand on any formality. I have done my best to save that Officer.

SRI M. MALLIKARJUN KHARGE : We welcome your deciosn. Judicial probe by Supreme Court Judge, we welcome.

SRI. H.D. DEVEGOWDA : There is nothing for me to hide.

SRI M. MALLIKARJUN KHARGE : No more discussion is needed now. The remaining facts may be placed before the Judge.

SRI H.D. DEVEGOWDA : Anything, I am prepared to agree for anything. Even if it is CBI enquiry, I am myself agreeable.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಭಯ ಏನು ಅಂದರೆ ನಮ್ಮ ಕಾಂಗ್ರೆಸ್ ಸ್ನೇಹಿತರು ಇವರು ಸೇರಿಕೊಂಡು ಯಾವುದೋ ವಿಚಾರಣೆ ಮಾಡಿ ಒಪ್ಪಿಕೊಳ್ಳೋಣ ಎಂದು ಮಾತನಾಡಿಕೊಂಡು ಬಂದಿರುವ ಹಾಗೆ ಇದೆ. ಕ್ಲಾರಿಫಿಕೇಷನ್ ಕೇಳಿ ನಂತರ ನಿರ್ಧಾರಕ್ಕೆ ಬರೋಣ.

SRI H.D. DEVEGOWDA : I am agreeable for anything. ಇದರೊಳಗೆ ನನ್ನ ಯಾವ ರಿಸರ್ವೇಷನ್ನೂ ಇಲ್ಲ ಇಲ್ಲಿ. ಯಾವ ರಿಸರ್ವೇಷನ್ನೂ ನನ್ನ ಮುಂದೆ ಇಲ್ಲ ಇಲ್ಲಿ. ಈ ದೇಶದ ಜನತೆ ತೀರ್ಮಾನಕ್ಕೆ ಬರಬೇಕು. CBI is in the hands of the Central Government. I am agreeable. Lastly, I met Chief Justice of India. I have met the Prime Minister. I have met the Home Minister. I met the Law Minister. I have met the Environment Minister. I met the Finance Minister. I met the President. 5 ¬À'ಸದಲ್ಲಿ ನಾನು ಸುಮ್ಮನೆ ಕುಳಿತಿರಲಿಲ್ಲ. ನನ್ನ ಪ್ರೋಗ್ರಾಂ ಎಲ್ಲಾ ಈ ಸಭೆಗೆ ಕೊಡಬೇಕೆಂದು ಅಂದರೆ ಕೊಡುತ್ತೇನೆ. ಯಾವ್ಯಾವ ದಿನ ಏನೇನು ಮಾಡಿದ್ದೇನೆ, ಅದನ್ನೆಲ್ಲಾ ಸಭೆಗೆ ಕೊಡೋಣ. ಯಾರ್‍ಯಾರನ್ನು ಭೇಟಿ ಮಾಡಿದೆ ಅದರ ಬಗ್ಗೆ ಕೊಡೋಣ. ಅದೇನೂ ದೊಡ್ಡದಲ್ಲ. On Sunday I met the Chief Justice of India. It is just a courtesy call. Here I met the Chief Justice and on that day there is no petition pending before the Supremen Court belonging to Sri Dhananjaya. On that day, there is no petition pending before the Supreme Court, connecting to Dhananjaya. It is only a courtesy call. ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮೂರು ನಾಲ್ಕು ಕ್ಲಾರಿಫಿಕೇಷನ್ ಮಾತ್ರ ನಾನು ಕೇಳುತ್ತೇನೆ.

SRI K.N. NAGEGOWDA : I am helping you. When the Government is agreeable for any type of enquiry, what is the point in asking clarifications?

(ಗೊಂದಲ)

MR. SPEAKER : Why do you extend unsolicited help? I want your help, please help me. Please keep quiet

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಮುಖ್ಯಮಂತ್ರಿಗಳು ಇಷ್ಟೊತ್ತು ಕೊಟ್ಟಂಥ ಉತ್ತರ ನೋಡಿದರೆ, ಈ ಕಡೆ ಕುಳುತಿರುವವರು ನಾವೇ ವಾಸುದೇವನ್ ಅವರು ಜೈಲಿಗೆ ಹೋಗುವುದಕ್ಕೆ ಕಾರಣರಾದೆವು ಎನ್ನುವ ಉತ್ತರ ಆ ರೀತಿ ಇತ್ತು ಎಂದು ನಾನು ಅಂದುಕೊಂಡಿದ್ದೇನೆ. ಆರೇಳು ಗಂಟೆಗಳ ಕಾಲ ನಾವು ಕಂಠಶೋಷಣೆ ಮಾಡಿಕೊಂಡು ಅನೇಕ ಕ್ಲಾರಿಫಿಕೇಷನ್ ಕೇಳಿದ್ದವು. ಅನೇಕ ಪ್ರಶ್ನೆಗಳನ್ನು ನಾವು ಎತ್ತಿದ್ದವು. ಸನ್ಮಾನ್ಯ ಉಪಮುಖ್ಯಮಂತ್ರಿಗಳ ಹೇಳಿದ್ದರು, ಮುಖ್ಯಮಂತ್ರಿಗಳು ಇದ್ದರೆ ಒಳ್ಳೆಯದು, ಅದಕ್ಕೆಲ್ಲಾ ಉತ್ತರ ಕೊಡುತ್ತಾರೆ ಎಂದು ಹೇಳಿದ್ದರು. ನಾನು ನೂರು ಉದಾಹರಣೆಯನ್ನು ಕೊಡುತ್ತೇನೆ, ನಾವು ಕೇಳಿದಂಥ ಯಾವುದೇ ಪ್ರಶ್ನೆಗೆ ಒಂದು ಸಹಾ ಉತ್ತರ ಅವರಿಂದ ಬರಲಿಲ್ಲ. ಇವರ ಹೇಳಿಕೆ ಹೇಗಿದೆ ಎಂದರೆ, 'ರೋಗಿ ಸತ್ತ ಮೇಲೆ ಪೋಸ್ಟ ಮಾರ್ಟಮ್ ಏನಿದೆ,' ಆ ರೀತಿಯಾಗಿದೆ. ನಿಮ್ಮಲ್ಲಿ ಎರಡು ಪ್ಯಾರಾ 20 ರಲ್ಲಿ "9.9.95 ರಂದು ಸಲ್ಲಿಸಿರುವ ಸಂವಿಧಾನದ 72ನೇ ವಿಧಿಯ ಅರ್ಜಿ ರಾಷ್ಟ್ರಪತಿಯವರಿಗೆ" ಏನು ಸಲ್ಲಿಸಿದ್ದೀರಿ, ಈ ಅರ್ಜಿ ಪ್ರಸ್ತುತ ಅವರ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ. ಅದರ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಹೇಳಲಿಲ್ಲವೇ? ಅಥವಾ ಇನ್ನೇನಾದರೂ ಕ್ಷಮಾದಾನ ಮಾಡಹುದು ಎಂದು ನಿಮಗೇನಾದರೂ ಅನಿಸುತ್ತಾ ಎನ್ನುವುದು ಮೊದಲನೆಯ ಪ್ರಶ್ನೆ.

ಅಧ್ಯಕ್ಷರು : ಅವರು ಏನು ಮಾಡುತ್ತಾರೆ ಎಂದು ಇವರು ಹೇಗೆ ಹೇಳುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಪೆಂಡಿಂಗ್ ಇದೆಯೋ ಡಿಸಪೋಸ್ ಆಗಿದೆಯೋ ಎಂದು ನಾನು ಕೇಳುವುದು. ಪೆಂಡಿಂಗ್ ಇದೆಯೋ ಡಿಸ್‌ಪೋಸ್ ಆಗಿದೆಯೋ, ಉತ್ತರ ಬಂದಿದೆಯೋ ಇಲ್ಲವೋ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯಮಾಡಿ ತಿಳಿದುಕೊಳ್ಳಿ. ತಾವು you are the Hon'ble Leader of the Opposition.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ತಾವು ಏನು ರಿಮಾರ್ಕ್ಸ್ ಮಾಡುವುದಕ್ಕೆ ಮುಂಚೆ...

MR. SPEAKER : I am not passing any remarks. I am not out to pass any remarks.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ಣ ಮಾತನಾಡುತ್ತೇನೆ. ದಯಮಾಡಿ ಕ್ಷಮಿಸಿ. ನನ್ನದು ಏನೆಂದರೆ ರಾಷ್ಟ್ರಪತಿಯವರ ಹತ್ತಿರ ತಾವೇನು ಒಂದು ಕ್ಷಮಾದಾನಕ್ಕೆ ಅರ್ಜಿಯನ್ನು ಸಲ್ಲಿಸಿದ್ದೀರಿ, ಅವರು ತೀರ್ಮಾನವನ್ನು ಕೊಟ್ಟಿದ್ದಾರೋ ಇಲ್ಲವೋ ಎಂದು ನಾನು ಕೇಳಿದೆ. ಕೊಟ್ಟಿದ್ದರೆ ಕೊಟ್ಟಿದ್ದಾರೆ ಎಂದು ಹೇಳಲಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಲಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು) : ಮಾನ್ಯ ಅಧ್ಯಕ್ಷರೇ, ಪೆಂಡಿಂಗ್ ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎರಡನೆಯದು, ವಾಸುದೇವನ್ ಪರ ಸರ್ಕಾರ ಏನು ಮರ್ಸಿ ಪೆಟಿಷನ್ ತಾವೇನು ಸುಪ್ರೀಂ ಕೋರ್ಟ ಮುಂದೆ ಅರ್ಜಿ ಹಾಕಿದ್ದೀರಿ, ಈ ಅಫಿಡವಿಟನಲ್ಲಿ ಸರ್ಕಾರದ ಕಡೆಯಿಂದ ತಪ್ಪಾಗಿದೆ ಎಂದು ಹೇಳಿ ಅಲ್ಲಿ ಅರ್ಜಿ ಹಾಕಿದ್ದೀರೋ? ವಾಸುದೇವನ್ ಕಡೆಯಿಂದ ತಪ್ಪಾಗಿದೆ ಎಂದು ಹೇಳಿದ್ದೀರೋ? ಅದರ ಕಾಪಿಯನ್ನು ಇಲ್ಲಿ ಟೇಬಲ್ ಮಾಡಿದರೆ, ಬಹುಶಃ ನಮಗೆ ಕೊಟ್ಟಿರುವ ಲಿಖಿತ ಉತ್ತರದಲ್ಲಿ ಸೇರಿಸಿದರೆ, ನೀವೇನು ಹೇಳಿದಿರಿ, ಏನು ಇಲ್ಲ ಎನ್ನುವಂಥದ್ದು ಅರ್ಥವಾಗುತ್ತಿತ್ತು. ತಾವು ಮುಖ್ಯಮಂತ್ರಿಗಳಾಗಿ ಒಂಭತ್ತು ತಿಂಗಳು ಕಳೆಯಿತು. 25.8.95ರಂದು ಸುಪ್ರೀಂ ಕೋರ್ಟ ಶ್ರೀ ವಾಸುದೇವನ್ ಅವರನ್ನು ಒಂದು ತಿಂಗಳು ಜೈಲಿಗೆ ಕಳುಹಿಸಿದನಂತರ ಅದೇ ದಿವಸ ತರಾತುರಿಯಲ್ಲಿ ಮೂರು ಆರ್ಡರಗಳನ್ನು ಮಾಡಿ ಧನಂಜಯ್ ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಮೂರು ಆರ್ಡರಗಳು ಆಗಿವೆ. ಸುಪ್ರೀಂ ಕೋರ್ಟ ಒಂದು ತಿಂಗಳಿಗೆ ಶಿಕ್ಷೆ ಕೊಡುವುದಕ್ಕಿಂತ ಮುಂಚೆ ಈ ತರಾತುರಿಯಲ್ಲಿ ತಾವು ಒಂದೇ ದಿವಸ ಈ ಅದೇಶವನ್ನು ಹೊರಡಿಸಿದಿರಿ, ಅದನ್ನು ಮುಂಚೆ ಏನಾದರೂ ಮಾಡದಿದ್ದರೆ, ಇವತ್ತು ಅವರು ಜೈಲಿಗೆ ಹೋಗುವುದನ್ನು ತಡೆಯಬಹುದಾಗಿತ್ತು ಅಲ್ಲವೇ?

ಈ ಕೆಲಸ ಮಾಡುವಂಥ ಶಕ್ತಿ ನಿಮಗೆ ಇರಲಿಲ್ಲವೇ? ತಾವು ಹೇಳಿದಿರಿ, ವಾಸುದೇವನ್ ಬಗ್ಗೆ, ಧನಂಜಯ ಅವರ ಬಗ್ಗೆ 25.8.95ರವರೆಗೆ ನನಗೇನು ಗೊತ್ತಿರಲಿಲ್ಲ ಎಂದು ಹೇಳಿದಿರಿ. ನಿಮ್ಮ ಮೂರು ಜನ ಶಾಸಕರು ಏನು ತಮಗೆ 10.8.95ರಂದು ಅರ್ಜಿಯನ್ನು ಕೊಟ್ಟಿದ್ದಾರೆ, ಅದರಲ್ಲಿ ಪೇಜ್ 2ರಲ್ಲಿ ಆರನೆಯ ಒಂದು ಸಾಲಿನಲ್ಲಿ ಬೆಂಗಳೂರು ಮಹಾನಗರಪಾಲಿಕೆ ವಿಷಯದ ಸಂಖ್ಯೆ 5(162) ದಿನಾಂಕ : 29.4.94ರ ನಿರ್ಣಯದ ಬಗ್ಗೆ ಏನು ಹೇಳಿದ್ದಾರೆ, ಅದೇ ನಿರ್ಣಯ ಕಾರ್ಪೊರೇಷನನವರು ಒಂದು ಧನಂಜಯ್ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ಹೇಳಿ ತೀರ್ಮಾನ ಮಾಡಿದಂಥ ನಿರ್ಣಯ. ನನಗೇನೂ ಗೊತ್ತಿರಲಿಲ್ಲ ಎಂದು ಹೇಳಿ ತಾವು ಹೇಳುವುದಾದರೆ 10.8.95 ರಂದು ಅವರು ಅರ್ಜಿ ಕೊಟ್ಟಿದ್ದಕ್ಕೆ ಫೈಲನ್ನು ತರಿಸಿ ಎಂದು ನಿಮ್ಮ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು `Parthasarathy to get the file early' ಎಂದು ಹೇಳಿ ಆದೇಶ ಏನು ಕೊಟ್ಟಿದ್ದರು. ಅದು ಇದಕ್ಕೆ ಸಂಬಂಧಪಟ್ಟಂಥದ್ದು. ನನಗೇನೂ ಗೊತ್ತಿಲ್ಲ ಎಂದು ಹೇಳುವಂಥದ್ದು ಅರ್ಥವಿಲ್ಲದೇ ಇರುವಂಥದ್ದು. ನಮ್ಮ ಮಳವಳ್ಳಿ ಕ್ಷೇತ್ರದ ಶಾಸಕರಾದ ಸೋಮಶೇಖರರವರು ದಿನಾಂಕ : 20.7.95ರಂದು ಶ್ರೀ ವಾಸುದೇವನರವರಿಗೆ ಪರಿಶಿಷ್ಟ ಜಾತಿ ಅಧಿಕಾರಿಯಾದ ಶ್ರೀ ಧನಂಜಯ್ ಇವರಿಗೆ ಸಲ್ಲಬೇಕಾದ ಸೌಲಭ್ಯಗಳು ಮತ್ತು ಭಡ್ತಿಯನ್ನು ಕೂಡಲೇ ನೀಡುವಂತೆ ಪತ್ರವನ್ನು ಬರೆದಿರಲಿಲ್ಲವೇ? ಅದು ನಿಮ್ಮ ಗಮನಕ್ಕೆ ಬರಲಿಲ್ಲವೇ? ತಾವು ಸರ್ಕಾರ ಮಾಡಿದಂಥ ತಪ್ಪನ್ನು ಅಧಿಕಾರಿಗಳು ನನ್ನ ಗಮನಕ್ಕೆ ತರಲಿಲ್ಲ ಎಂದು ಹೇಳುತ್ತೀರಲ್ಲಾ, ಒಬ್ಬ ಮುಖ್ಯಮಂತ್ರಿಗಳಾಗಿ, ಒಬ್ಬ ಅಧಿಕಾರಿ ಜೈಲಿಗೆ ಹೋಗುವ ಒಂದು ಸಂದರ್ಭ ಬಂದಾಗ ಸುಪ್ರೀಂ ಕೋರ್ಟಿನ ಆದೇಶವನ್ನು ಕಾರ್ಯರೂಪಕ್ಕೆ ತರುವಂಥ ಒಂದು ಪ್ರಯತ್ನವನ್ನು ಮಾಡಿದ್ದಿದ್ದರೆ ನೀವು ಇವತ್ತಿನ ಈ ಪರಿಸ್ಥಿತಿ ಬರುತ್ತಿತ್ತೇ? ಸಿಬಿಐ, ಸಿಓಡಿ, ಯಾವುದೇ ತನಿಖೆಯನ್ನು ಮಾಡುವುದರಿಂದ

ಇವತ್ತು ಶ್ರೀ ವಾಸುದೇವನ್ ಅವರು ಏನು ಜೈಲಿಗೆ ಹೋಗುವುದಕ್ಕೆ ಪ್ರಮುಖ ಕಾರಣ ನಿಮ್ಮ ಶಾಸಕರೇನು ಪತ್ರವನ್ನು ಬರೆದರು, ನಿಮಗೆ ಬೇಕಾದಂಥ ಒಬ್ಬ ವ್ಯಕ್ತಿ ರಾಮೇಗೌಡರಿಗೆ ಏನು ಭಡ್ತಿಯನ್ನು ನೀಡಬೇಕು ಎನ್ನುವಂಥ ಒಂದೇ ಒಂದು ಕಾರಣಕ್ಕೋಸ್ಕರ ಧನಂಜಯ್ ಅವರಿಗೆಸಿಗುವ ಭಡ್ತಿಯನ್ನು ಸಿಗದಂತೆ ಮಾಡಿದಿರಿ. ವಾಸುದೇವನ್ ಅವರು ಜೈಲಿಗೆ ಹೋಗುವುದಕ್ಕೆ ನೀವು ಕಾರಣಕರ್ತರಾದಿರಿ. ತನಿಖೆಯಾಗುವುದು ಯಾವಾಗ? ನೀವು ಈ ಒಂದು ಜವಾಬ್ದಾರಿಯನ್ನು ಹೊತ್ತು, ನೈತಿಕ ಹೊಣೆಯನ್ನು ಹೊತ್ತು ನೀವು ರಾಜೀನಾಮೆ ಕೊಟ್ಟಾಗ ಮಾತ್ರ ಇದಕ್ಕೊಂದು ಪರಿಹಾರ. ಮತ್ತೆ ನೀವು ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಭೇಟಿ ಮಾಡಿದಂಥದ್ದು, ಈ ರಾಜ್ಯದ ಜನರು ತಲೆತಗ್ಗಿಸುವಂಥ ಘಟನೆಯಲ್ಲವೇ? ತಾವು ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನು ಭೇಟಿ ಮಾಡಿದ್ದರೋ ಇಲ್ಲವೋ ಎನ್ನವುದನ್ನು ಸ್ಪಷ್ಟಮಾಡಬೇಕು. ಈ ಪ್ರಶ್ನೆಗಳಿಗೆ ನನಗೆ ಉತ್ತರ ಕೊಟ್ಟರೆ ನಾನು ಉಳಿದ ವಿಷಯಕ್ಕೆ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸಿಐಡಿ, ಸಿಓಡಿ, ತನಿಖೆ ಬೇಕಾದರೆ ಮಾಡಿಸಿ ಎಂದು ಹೇಳಿದ್ದಾರಲ್ಲಾ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಈಗ ಏನಾಯಿತು ಎಂದರೆ ರಾತ್ರಿಯೆಲ್ಲಾ ರಾಮಾಯಣ ನೋಡಿ ಬೆಳಿಗ್ಗೆ ಎದ್ದು ರಾಮನಿಗೂ ಸೀತೆಗೂ ಏನು ಆಗಬೇಕು ಎಂದು ಕೇಳಿದಂತೆ ಆಗುತ್ತದೆ ಸನ್ಮಾನ್ಯ ಯಡಿಯೂರಪ್ಪನವರು.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಯಾವುದೇ ತನಿಖೆಗೂ ಸಿದ್ಧ ಇದ್ದೇವೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ರೈತರು ಯಾರು ಎಂದು ಗೊತ್ತಿಲ್ಲ. ರೈತರ ಬಗ್ಗೆ ಮಾತನಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ದೀರ್ಘವಾಗಿ ತಮ್ಮ ಉತ್ತರವನ್ನು ಕೊಟ್ಟರು. ಆಮೇಲೆ ಅವರು ಬಹಳ ಎಮೋಷನಗೆ ಬಂದು ಕೂಡ ಕೆಲವು ಮಾತುಗಳನ್ನು ಹೇಳಿದರು. ವಿಶೇಷವಾಗಿ ಇಷ್ಟು ಎಮೋಷನ್ ಆಗಿ ಬಂದು ಅವರು ಉತ್ತರವನ್ನು ಹೇಳುತ್ತಾರೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಏಕೆಂದರೆ ನಾನು ತಿಳಿದುಕೊಂಡಿದ್ದು ಏನೆಂದರೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ಇರಿ. ನಾವು ಹೇಳುವುದನ್ನು ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏನು ಸ್ವಲ್ಪ ಇರಿ ಎಂದು ಇವರು ಹೇಳುವುದು? ನಾನು ಇವರಿಗೆ ಕೇಳಿದನೇ? ನಾನು ಛೇರಗೆ ಅಡ್ರಸ್ ಮಾಡಿದ್ದುದು.

(ಗೊಂದಲ)

SRI P.G.R. SINDYA : What are you doing? You must also know it. ಏನು ಸ್ವಲ್ಪ ಇರಿ ಎಂದರೆ ಹೇಗೆ? ನಾನೂ ಸಹ ಎಲೆಕ್ಟಾಗಿ ಬಂದಿದ್ದೇನೆ ಎಂಎಲ್ ಎ ಆಗಿ. ನೀವು ಕೇಳಿದರೆ ನಾನು ಕೇಳುತ್ತೇನೆ. Who is he to say like this? ಇವರು ನನಗೆ ಹೇಳುವುದಕ್ಕೆ ಆಗುವುದಿಲ್ಲ. ನಾನು ಇವರಿಗೆ ಹೇಳಲಿಲ್ಲ. ನಾನು ಎಲೆಕ್ಟಾಗಿ ಬಂದಿದ್ದೇನೆ ಅಸೆಂಬ್ಲಿಗೆ. I have got every right to speak. ಏನು ಸ್ವಾಮಿ ಅನ್ನುವುದು?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಭಾಧ್ಯಕ್ಷರೇ, ಅನುಮತಿ ಕೊಟ್ಟರೆ ಹೇಳುತ್ತೇನೆ. ಇವರು ಹೇಳಿದರೆ ನಾನು ಕೂಡುವುದಿಲ್ಲ. ನಾನು ಏಕೆ ಕುಳಿತುಕೊಳ್ಳಬೇಕು. ನನಗೂ ಹಕ್ಕು ಇದೆ. ನಾನು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನಗೂ ಸಹ ಮಿನಿಸ್ಟರ್ ಆದ ಮೇಲೆ ಮಾತನಾಡಬಾರದು ಎಂದೇನಿಲ್ಲ. ನನಗೂ ಹಕ್ಕು ಇದೆ. ನನಗೂ ಜನ ಓಟು ಕೊಟ್ಟಿದ್ದಾರೆ. ನಾನೂ ಈ ಸದನದ ಸದಸ್ಯನಾಗಿದ್ದೇನೆ. ಇವರು ಹೇಳಿದ್ದೆಲ್ಲಾ ಕೇಳಿಕೊಂಡು ಬರುವುದಿಲ್ಲ. ಆದ್ದರಿಂದ ತಾವು ಹೇಳಿ ನಾನು ಕುಳಿತುಕೊಳ್ಳುತ್ತೇನೆ. ಇವರು ಕುಳಿತುಕೊಳ್ಳಿ ಎಂದು ಅರ್ಥ ಏನು? ಕೂರಿ ಎಂದರೆ ಅರ್ಥ ಏನು? ಏನು ನನಗೆ ಬೆದರಿಸುತ್ತೀರಾ? ನೀವು ಹೇಳಿದ ಹಾಗೆ ನಾನು ಕೇಳಬೇಕಾ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ...

(ಗೊಂದಲ)

ಅಧ್ಯಕ್ಷರು : ನಾನು ಎದ್ದು ನಿಂತಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಜನ ಓಟು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವರು ಜವಾಬ್ದಾರಿ ಇರುವಂತಹ ಮಂತ್ರಿಗಳು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. I am on my legs.

ಶ್ರೀ ಪಿ.ಜಿ.ಆರ್. ಸಿಂಧ್ಯ : ಜವಾಬ್ದಾರಿ ಮಂತ್ರಿ ಎಂದರೆ ನನಗೆ ಮಾನ ಮರ್ಯಾದೆ ಇದೆ. ಇವರು ದೇಶದ ಹಾಗೆ ಕೇಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಎದ್ದು ನಿಂತಿದ್ದೇನೆ, ದಯಮಾಡಿ ಕುಳಿತುಕೊಳ್ಳಿ

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯದ ಗೃಹಮಂತ್ರಿ ಆಗಿರತಕ್ಕವರು, ಜವಾಬ್ದಾ ಇರತಕ್ಕವರು ಗರಡಿ ಮನೆ ತರಹ ಮಾಡಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಏನು ದೇವರು ಬಂದಿದೆಯಾ?

(ಗೊಂದಲ)

ಅಧ್ಯಕ್ಷರು : ಮಾನ್ಯ ಖರ್ಗೆಯವರು ...

(INTERRUPTIONS)

ಶ್ರೀ ಕೆ.ಎನ್. ನಾಗೇಗೌಡ : ರೂಲಿಂಗ್ ಪಾರ್ಟಿಯವರಾದರೆ ಏನೂ ಮಾತನಾಡಬಾರದೆ? We have got every right to ask.

SRI M.M. KHARGE : If you don't allow, we will have to walk out What is this?

(ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸಭಾಧ್ಯಕ್ಷರ ಪೀಠದ ಮುಂದೆ ಬಂದು ಧರಣಿಕೂಗುತ್ತಾ ವೆಲನಿಂದ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನಾವು 9 ಗಂಟೆಯಿಂದ ವಿರೋಧ ಪಕ್ಷದವರ ಮಾತು ಕೇಳುತ್ತಿದ್ದೇವೆ ಒಂದು ಮಾತು ಅವರು ಕೇಳುವುದಿಲ್ಲ ಎಂದರೆ ಹೇಗೆ?

(ವಿರೋಧ ಪಕ್ಷದ ನಾಯಕರು ವೆಲನಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು : ನೀವು ಅಲ್ಲಿಂದ ಮಾತನಾಡಿದ್ದುದು ಕೇಳುವುದಿಲ್ಲ.

ಶ್ರೀ ಬಿ.ಎನ್. ಯಡಿಯೂರಪ್ಪ : ಈ ಸರ್ಕಾರದಿಂದ ಅನ್ಯಾಯ ಆಗಿದೆ. ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಇವರು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಶ್ರೀ ವಾಸುದೇವನ್ ಜೈಲಿಗೆ ಹೋಗಲು ಜವಾಬ್ದಾರಿ ಆಗಿದ್ದಾರೆ ರಾಜೀನಾಮೆ ಕೊಟ್ಟು ಹೋಗಬೇಕು.

(ಗೊಂದಲ)

ಶ್ರೀ ಬಿ.ಎನ್. ಯಡಿಯೂರಪ್ಪ : ವಾಸುದೇವನ್ ಪ್ರಕರಣದಲ್ಲಿ ಅನ್ಯಾಯ ಆಗಿದೆ. ಇದು ಅಕ್ಷಮ್ಯ ಅಪರಾಧ, ಈ ರಾಜ್ಯದ ಮುಖ್ಯಮಂತ್ರಿಗಳು ಮಾಡಿದ್ದಾರೆ. ಇವರು ರಾಜೀನಾಮೆ ಕೊಟ್ಟು ಹೋಗಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿಬಿಐ ತನಿಖೆ ಮಾಡಿ ನೀವು ಹೇಳಿ ನಾವು ಒಪ್ಪಿಕೊಂಡು ಮನೆಗೆ ಹೋಗತ್ತೇವೆ.

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀವು ಸ್ಪಷ್ಟೀಕರಣ ಕೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ಪಷ್ಟೀಕರಣ ಕೇಳಲು ಬಿಟ್ಟರೆ ತಾನೇ?

ಶ್ರೀ ಕೆ.ಎಸ್. ಈಶ್ವರಪ್ಪ (ಬಾಯಿಂದ) : ಮಾತನಾಡುತ್ತಿದ್ದರು.

ಅಧ್ಯಕ್ಷರು : ನಾನು ನಿಮಗೆ ಕೇಳುತ್ತಿಲ್ಲ. You cannot talk from there. You cannot talk ಕುಳಿತುಕೊಳ್ಳಿ. What is this? Is that the way you seek clarification?

(ಇದೇ ಹಂತದಲ್ಲಿ ಪಕ್ಷೇತರರ ಸದಸ್ಯರೀದ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(INTERRUPTIONS)

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ಬಾವಿ ಕಡೆಗೆ ಬಂದರು)

(ಗೊಂದಲ)

MR. SPEAKER : I adjourn the House.

(The House was adjourned at 6.45 p.m.)

(ಸಭೆಯ ಪುನಃ 7.18 ನಿಮಿಷಕ್ಕೆ ಸಮಾವೇಶಗೊಂಡಿತು).

(ಶ್ರೀ ರಮೇಶ್ ಕುಮಾರ್ : ಅಧ್ಯಕ್ಷರು, ಅಧ್ಯಕ್ಷ ಪೀಠವನ್ನಲಂಕರಿಸಿದರು)

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಕ್ಷಮಿಸಬೇಕು ತಮ್ಮ ಮನಸ್ಸಿಗೂ ಕೂಡ ನೋವಾಗಿರತಕ್ಕದ್ದು ಸದನದಲ್ಲಿ ನಮಗೆಲ್ಲರಿಗೂ ಕೂಡ ಆಗಿದೆ. ವಾಸುದೇವನ್‌ರವರ ಬಗ್ಗೆ ಅನುಕಂಪದ ಬಗ್ಗೆ ಅಲೆ ಈ ಸದನದ ಎಲ್ಲಾ ಮೂಲೆಯಲ್ಲಿ ಕೂಡ ಇರತಕ್ಕದ್ದು ಮೆಚ್ಚತಕ್ಕ ಬೆಳವಣಿಗೆಯೂ ಕೂಡ ಹೌದು. ಏನೇ ಇದ್ದರೂ ಕೂಡ ನ್ಯಾಯಾಲಯದ ಒಂದು ಆದೇಶಕ್ಕೆ ಗೌರವನ್ನು ಕೊಡತಕ್ಕ ಉದ್ದೇಶ ರಾಜ್ಯಸರ್ಕಾರಕ್ಕೆ ಇರತಕ್ಕದ್ದು ಮತ್ತು ಅಧಿಕಾರಿಯ ವರ್ತನೆಯನ್ನು ಕೂಡ ನಾವು ಮೆಚ್ಚತಕ್ಕ ವಿಚಾರ. ನಾನು ಅಷ್ಟಕ್ಕೆ ಆ ವಿಚಾರವನ್ನು ನಿಲ್ಲಿಸುತ್ತೇನೆ. ವಿಷಯ ಪ್ರಸ್ತಾಪ ಇವತ್ತು ಏನಾಗಿದೆ, ಯಾರೇ ಮಾಡಿರಬಹುದು ನಿಲುವಳಿ ಸೂಚನೆ ಇತ್ಯಾದಿ ವಗೈರೆ, ವಗೈರೆ, ಈಗಾಗಲೇ ಉತ್ತರಗಳು ಕೇಳಿದ ಮೇಲೆ ರಿಟರ್ನಸ್ಟೇಟಮೆಂಟ್ ಕೂಡ ನೋಡಿದ್ದೇವೆ. ಸರ್ಕಾರ ನಡೆಸಿರತಕ್ಕವರು ಅಲ್ಲಿಯೂ ಇದ್ದಾರೆ

ಇಲ್ಲಿಯೂ ಕೂಡ ಇರತಕ್ಕ ಸಂದರ್ಭ, ಮಾತನ್ನು ಹೆಚ್ಚಿಗೆ ಬೆಳಸದೆ, ತಮಗೆ ಮನವಿಯನ್ನು ಮಾಡುತ್ತಿದ್ದೇನೆ.ವಿವರಗಳನ್ನು ಇಷ್ಟೊಂದು ಇಡೀ ಸದನ ಪಡೆದ ಮೇಲೆ ಆ ಪಕ್ಷ ಈ ಪಕ್ಷ ಪ್ರಶ್ನೆಯಲ್ಲ. ಯಾರು ಮಾನ್ಯ ಸದಸ್ಯರು ಕೆಲವು ಪಕ್ಷಕ್ಕೆ ಸೇರಿದವರು ಹೊರಗಡೆ ಹೋಗಿದ್ದಾರೆ ಅವರೂ ಕೂಡ ಒಳಗೊಂಡಿದ್ದಾರೆ ಅವರ ಆತ್ಮವನ್ನು ಮುಟ್ಟಿ ನೋಡಿಕೊಂಡರೆ, ಸತ್ಯ ಇಲ್ಲಿ ಎಲ್ಲಿದೆ ಎನ್ನತಕ್ಕದ್ದು ಸ್ಪಷ್ಟವಾಗಿ ಈ ಸದನಕ್ಕೆ ಈಗಾಗಲೇ ವೇದ್ಯವಾಗಿದೆ ಎಂದು ನಾನು ಭಾವಿಸಿದ್ದೇನೆ. ಅದಕ್ಕಿಂತ ವಿವರವಾಗಿರತಕ್ಕ ಉತ್ತರ ನಿಜ ಹೇಳಬೇಕಾದರೆ ನಾನಂತೂ ನಿರೀಕ್ಷೆ ಮಾಡಿರಲಿಲ್ಲ. ಇದ ಹೊಗಳಿಕೆಯ ಪ್ರಶ್ನೆಯಲ್ಲ. ಬೇಸ್ಡ ಆನ್ ಡಾಕ್ಯುಮೆಂಟರಿ ಎವಿಡೆನ್ಸ ಹೈಕೋರ್ಟ ಸುಪ್ರೀಂ ಕೋರ್ಟ ಇತ್ಯಾದಿ ಇತ್ಯಾದಿ ವಿಚಾರಗಳು. ಇದು ಯಾವ ಮಟ್ಟಕ್ಕೂ ಹೋಗಿದೆ ಅಂದರೆ, ರಿಟನ್ ಸ್ಟೇಟಮೆಂಟ್ ಓದಿದ ಮೇಲೂ ಕೂಡ ಪ್ರೆಸಿಡೆಂಟ್ ಆಫಫ್ ಇಂಡಿಯಾ ಮುಂದಿರತಕ್ಕ ಮರ್ಸಿ ಪೆಟಿಷನ್ ಏನಾಯಿತು ಆ ವಿಚಾರ ನೀವು ಹೇಳಲಿಲ್ಲವೆಂದು ಕೇಳುವ ಮಟ್ಟಕ್ಕೆ ಈ ಕಡೆ ಕುಳಿತುಕೊಂಡು ಕೇಳುತ್ತಾ ಕುಳಿತುಕೊಂಡು ಬಿಟ್ಟರೆ ಇದಕ್ಕೆ ಅರ್ಥವೇನಾಗುತ್ತದೆ? ಬರೆದಿದ್ದಾರೆ ಅದು ಇನ್ನೂ ಕೂಡ ಇತ್ಯರ್ಥವಾಗಿಲ್ಲವೆನ್ನತಕ್ಕದ್ದು, ರಿಟನ್ ಸ್ಟೇಟಮೆಂಟನಲ್ಲಿರತಕ್ಕದ್ದನ್ನು ಕೂಡ ನಾವು ಇಲ್ಲಿ ನೋಡುತ್ತಿದ್ದೇವೆ.

7.20 ಪಿ.ಎಂ

ಈ ಹೇಳಿಕೆಯಲ್ಲಿ ಕೂಡ ಇದೆ. ಪ್ರಸ್ತುತ ಅರ್ಜಿ ಪರಿಶೀಲನೆಯಲ್ಲಿದೆ ಎಂದು 20ನೇ ಪ್ಯಾರಾದಲ್ಲಿ ಫೇಜ್ 9ರಲ್ಲಿದೆ. ರಾಷ್ಟ್ರಪತಿಯವರ ಮುಂದೆ ಇನ್ನೂ ಕೂಡ ಇದೆ. ನಾನು ನಿನ್ನೆ ಮಾತನಾಡಬೇಕಾದರೆ ಮುಖ್ಯಮಂತ್ರಿಗಳು ಇರಲಿಲ್ಲ. ಇದು ಏನಾಗಿದೆ ಎಂಬ ವಿಚಾರ ಗೊತ್ತಿರಲಿಲ್ಲ. ಸುಪ್ರೀಂ ಕೋರ್ಟದಿಂದ ವಜಾ ಆಯಿತು ಎಂದು ಮಾತ್ರ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರು. But, what happened to the mercy petition filed before the President of India. ಎನ್ನತಕ್ಕಂಥ ವಿಚಾರ ನಮಗೆ ಗೊತ್ತಾಗಲೇ ಇಲ್ಲ ಎಂದು ಹೇಳಿದೆ, ಅದಕ್ಕೆ ಉತ್ತರ ನಮಗೆ ಸಿಕ್ಕಿತು. It is still pending there, ಎನ್ನತಕ್ಕಂಥದ್ದು ಕೂಡ. ಈ ನಮೂನೆ ನಾವು ಕೇಳುತ್ತಾ ಹೋದರೆ There is no end for all these things. ಇಮೊತ್ತು ಈ ವಿಚಾರ ಗೌಣವಾದಂಥ ಬಹಳ ವಿಚಾರ ಎಂದು ಹೇಳತಕ್ಕಂಥ ದೃಷ್ಟಿಯಿಂದ ನಾವು ಮಾತನಾಡುತ್ತಿಲ್ಲ. ರಾಜ್ಯದಲ್ಲಿ ಬಹಳ ದೊಡ್ಡ ದೊಡ್ಡ ಸಮಸ್ಯೆಗಳು ಇವೆ. ಒಂದು ಕಡೆ ಬರಗಾಲ ಇದೆ, ಇನ್ನೊಂದು ಕಡೆ ಅನೇಕ ಸಮಸ್ಯೆಗಳು ತೊಂದರೆಗಳು ಮತ್ತು ಡಿಮಾಂಡ್ಸ್ ಡಿಸ್ಕಶನ್ಸ್ ಇವೆಲ್ಲಾ ಇರತಕ್ಕಂಥ ಕಾಲ I am not holding anybody responsible. I am representing an independent party i.e., The Karnataka Congress Party. ಇಮೊತ್ತು ನನಗೂ ಕೂಡ ಹಕ್ಕು ಇರತಕ್ಕಂಥ ವಿಚಾರ. ದೊಡ್ಡ ದೊಡ್ಡ ವಿಚಾರಗಳನ್ನು ನಾವು ತೆಗೆದುಕೊಳ್ಳತಕ್ಕಂಥ ಸಂದರ್ಭ ಕೂಡ ಇದೆ. ಆ ಕಾರಣ ನಾನು ನಿಮ್ಮಲ್ಲಿ ಮನವಿ ಮಾಡುತ್ತೇನೆ ಮಾನ್ಯ ಸಭಾಧ್ಯಕ್ಷರೆ ಇಷ್ಟೊಂದು ವ್ಯಯವನ್ನು ಅಥವಾ ಕಾಲವನ್ನು ಕೊಟ್ಟಿರತಕ್ಕಂಥ ಅಧ್ಯಕ್ಷರೆ ನಿಮ್ಮ ಗುಣವನ್ನು ನಾವು ಮೆಚ್ಚಬೇಕು. ನನ್ನ ಅನುಭವದಲ್ಲಿ ನಾನು 1967ರಿಂದಲೂ ನೋಡಿಲ್ಲ, ತಾವು ಸದನವನ್ನು ಮುಂದೂಡಿ ಹೊರಟುಹೋಗಿರತಕ್ಕಂಥ ಸಂದರ್ಭದಲ್ಲಿ ನಾನು ಹೇಳುತ್ತಿದ್ದೆ. ಸುಮಾರು 30 ವರ್ಷದಿಂದ

ಈ ಶಾಸನ ಸಭೆಯಲ್ಲಿ ನಾನು ಇದ್ದೇನೆ. ಇಷ್ಟೊಂದು ಕಾಲವನ್ನು ಕೊಟ್ಟರೂ ಕೂಡ ನೀವು ಬೇರೆ ಬೇರೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದನ್ನು ಬಿಟ್ಟು, ಯಾವ ಯಾವ ಕಾರ್ಯಕ್ರಮಗಳು ಎಂದು ನಾನು ಹೇಳುವುದಕ್ಕೆ ಹೋಗಲ್ಲ, ಅದು ಆಯಾ ಪಕ್ಷಕ್ಕೆ ಬಿಟ್ಟ ವಿಚಾರ.

I have no comments to offer. But, the point remains based on all the facts narrated by the Chief Minister it has been made crystal clear as to where exactly we stand. ಅದರ ಮೇಲೆ ಯಾರು ಮಾಡುವುದಕ್ಕೆ ಸಾಧ್ಯವಿಲ್ಲ. ನಾನೂ ಕೂಡ ಅದೇ ಸ್ಥಾನದಲ್ಲಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮತ್ತೊಬ್ಬರೂ ಕೂಡ ಮಾಡಿದ್ದಾರೆ. ನಾನು ಫೇರ್ ಆಗಿ ಅಡ್ಮಿಟ್ ಮಾಡುತ್ತಿದ್ದೇನೆ. ಏನೆಂದರೆ ವಿಚಾರವನ್ನು ತಾವು ಹೇಳಿದ್ದೀರಿ, ಸಭಾಧ್ಯಕ್ಷರು ಸಾಕಷ್ಟು ಕಾಲವನ್ನು ತಾವು ಕೊಟ್ಟಿದ್ದೀರಿ, ರಾಜ್ಯದಲ್ಲಿ ಅನೇಕ ದೊಡ್ಡ ದೊಡ್ಡ ಸಮಸ್ಯೆಗಳಿವೆ, ಅವುಗಳನ್ನು ನಾವು ಚರ್ಚೆ ಮಾಡುತಕ್ಕಂಥ ದೃಷ್ಟಿಯಿಂದ ಈ ವಿಚಾರವನ್ನು ನಾವು ಇಲ್ಲಿಗೆ ಮುಕ್ತಾಯ ಮಾಡೋಣ. ಇನ್ನು ಯಾವುದೇ ತಪ್ಪನ್ನು ದುಡುಕತಕ್ಕಂಥ ಪ್ರಶ್ನೆಯಲ್ಲ ಎನ್ನತಕ್ಕಂಥ ಮಾತನ್ನು ನಾವು ಆಡಬಹುದು. ನಿಜವಾಗಿಯೂ ಹೇಳಬೇಕೆಂದರೆ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಒಂದು ಮಾತನ್ನು ಆಡಿದ್ದೀರಿ. ಯಾವುದೇ ಎನಕ್ವಾಯರಿಗೆ ಕೂಡ ನಾನು ಸಿದ್ಧ ಎನ್ನತಕ್ಕಂಥ ಮಾತನ್ನು ಆಡಿದ್ದೀರಿ. ನೀವು ಆ ಮಾತನ್ನು ಏತಕ್ಕೆ ಹೇಳಿದಿರೋ ನನಗೆ ಗೊತ್ತಿಲ್ಲ. ಆದರೆ ಒಂದು ಮಾತನ್ನು ವಿರೋಧ ಪಕ್ಷದ ನಾಯಕರು ಹೇಳಿದರು ಏನೆಂದರೆ ಇದರಲ್ಲಿ ಏನು ಎನಕ್ವಾಯರಿ ಮಾಡೋದು ಇದೆ ಎಂದು. ನಾನು ಪ್ರತಿಯೊಂದು ಶಬ್ಧವನ್ನು ಕೇಳುತ್ತಿದ್ದೇನೆ. ಏನು ಇದೆ ಇದರಲ್ಲಿ ಎನಕ್ವಾಯರಿ, ರಾಜೀನಾಮೆ ಕೊಡಬೇಕು ಎನ್ನತಕ್ಕಂಥದ್ದನ್ನು ಹೇಳಿದರು. ಇವರು ವಿಷಯ ಕೇಳುವುದಕ್ಕಿಂತ ಮುಂಚೆ ರಾಜೀನಾಮೆ ಕೇಳಿದರೆ ಹೇಗೆ? ನಾನು ಅದಕ್ಕಾಗಿ ಮೊನ್ನೆ ಭಾಷಣ ಮಾಡುವಾಗ ಹೇಳಿದೆ ಸರ್ಕಾರದ ಪರವಾಗಿ ದಾಖಲೆಗಳು ನಿಮ್ಮ ಹತ್ತಿರ ಇವೆ, ಫೈಲ್ಸ್ ನಿಮ್ಮ ಹತ್ತಿರ ಇವೆ, ಕೋರ್ಟ ವ್ಯವಹಾರ ಆಗಿದೆ, ಇಲ್ಲಿ ಕೂತ್ಕೊಂಡು ಅಂದಾಜಿನ ಮೇಲೆ ಭಾಷಣ ಮಾಡುವುದು ನನ್ನಿಂದ ಸಾಧ್ಯವಾಗುವುದಿಲ್ಲ. ನಿಮ್ಮ ಹೇಳಿಕೆ ಕೇಳಿದ ಮೇಲೆ ಹೇಳುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೆ. ನಿಮ್ಮ ಹೇಳಿಕೆಯನ್ನು ಪೂರ್ತಿ ಕೇಳಿದ್ದೇನೆ. Oral reply has also been given to the Debate. Now that has gone on, seeking your permission for the admissibility of otherwise of the adjournment motion. ಇದರ ಬಗ್ಗೆ ಏನು ನಡೆದಿದೆ ಎಂಬುದನ್ನು ಕೇಳಿದ ಮೇಲೆ ನನಗೆ ಗೊತ್ತಾಗಿದೆ. ಇದರಲ್ಲಿ ಏನೇನೂ ಕೂಡ ಉಳಿದಿಲ್ಲ. ನಾನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದು ಅಡ್ಜರ್ನಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮತ್ತು ಅದನ್ನು ತಿರಸ್ಕಾರ ಮಾಡುವುದನ್ನು ಬಿಟ್ಟರೆ ನಿಮಗೆ ಬೇರೆ ದಾರಿಯೇ ಉಳಿದಿಲ್ಲ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ರೂಲಿಂಗನ್ನು ಕೊಟ್ಟಿಲ್ಲ ಎಂದು ನನ್ನ ಭಾವನೆ. ಏಕೆಂದರೆ ಆ ಗಲಾಟೆಯಲ್ಲಿ ನನಗೆ ಕೇಳಿಸಲಿಲ್ಲ. ತಾವು ಈಗ ಕೊಡುತ್ತೀರಿ ಎಂದು ನನ್ನ ಭಾವನೆ. ಅದನ್ನು ಮುಕ್ತಾಯ ಮಾಡಿ ಬೇರೆ ವಿಷಯಗಳಿಗೆ ಹೋಗಬೇಕು ಈ ವಿಷಯಕ್ಕೆ ಸಂಪೂರ್ಣವಾಗಿ ವಿದಾಯ ಹೇಳಬೇಕು ಮತ್ತು ಇದನ್ನು ಮುಕ್ತಾಯ ಮಾಡಬೇಕು ಎಂದು ನನ್ನ ವಿನಂತಿ. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನನ್ನಿಂದ ಆಗುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನಾವು ಸ್ಥಳ ಬಿಟ್ಟು ಇಲ್ಲಿ ಮುಂದೆ ಬಂದಿದ್ದಕ್ಕಾಗಿ ಒಂದೇ ಒಂದು ನಿಮಿಷ ಮಾತನಾಡುತ್ತೇನೆ. ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಅವರು ಮಾನ್ಯ ಗೃಹಸಚಿವರ ಮೇಲೆ ಆಡಿದ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರು ಅದನ್ನು ತೆಗೆದುಕೊಂಡು ತೀವ್ರವಾಗಿ ಕಾಲು ಕೆದರಿ ಜಗಳ ತೆಗೆಯತಕ್ಕಂಥ ಸಂದರ್ಭದಲ್ಲಿ we are also human beings, we are not machines ಒಂದು ದೃಷ್ಟಿಯಿಂದ ನೋವನ್ನು ತಡೆದುಕೊಳ್ಳಲಾರದೆ ನಾನು ಮುಂದೆ ಹೋದೆ ವಿನ: ನಿಮಗೆ ಅವಮಾನ ಮಾಡಬೇಕು ಎಂದಾಗಲಿ ನಾವು ಧರಣಿ ಮಾಡಬೇಕು ಎಂದಾಗಲಿ ಮಾಡಲಿಲ್ಲ. ದಯವಿಟ್ಟು ತಮ್ಮಮನಸ್ಸಿಗೆ ನೋವಾಗಿದ್ದರೆ ನಮ್ಮೆಲ್ಲಾ ಸದಸ್ಯರ ಪರವಾಗಿ ಈ ಸ್ಥಳ ಬಿಟ್ಟು ಮುಂದಕ್ಕೆ ಬಂದಿದ್ದಕ್ಕಾಗಿ ಕ್ಷಮಾಪಣೆ ಕೇಳುತ್ತೇನೆ. ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಈ ಸದನಕ್ಕೆ ಹೊಸದಾಗಿ ಬಂದಿರತಕ್ಕಂಥ ಸದಸ್ಯರು. ನಮಗೆ ಇದರ ಬಗ್ಗೆ ಭಾರಿ ಭ್ರಮೆ ಮತ್ತು ಭಾರಿ ಗೌರವಯುತ ಅಭಿಪ್ರಾಯವಾಗುತ್ತದೆ. ರಾಜ್ಯದ ಜನತೆಯ ಬಹಳ ಪ್ರಮುಖ ಸಮಸ್ಯೆಗಳನ್ನು ಚರ್ಚೆ ಮಾಡಲಿಕ್ಕೆ ಅವಕಾಶವಾಗುತ್ತದೆ, ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಸಾಧ್ಯತೆ ಇದೆ ಎನ್ನುವ ದೃಷ್ಟಿಇತ್ತು. ಆದರೆ ಮೂರನೇ ಸಲ ಸದನ ನಡೆಯತಕ್ಕಂಥ ಸಂದರ್ಭ ನೋಡಿದರೆ ಬಹುಶಃ ನಮಗೆ ಭಾರಿ ನೋವಾಗುತ್ತಿದೆ. ಸರ್ಕಾರ ನಡೆಯತಕ್ಕಂಥವರು ಮತ್ತು ವಿರೋಧಪಕ್ಷದವರು ಇಬ್ಬರಿಗೂ ಕೂಡ ಜವಾಬ್ದಾರಿ ಇರಬೇಕಾಗುತ್ತದೆ. ಬೇಜವಾಬ್ದಾರಿತನದಿಂದ ವರ್ತಿಸುವುದೊಂದೇ ಆದರೆ, ಅದಕ್ಕೆ ಇಲ್ಲಿಗೆ ಬರಬೇಕಾದಂಥ ಅವಶ್ಯಕತೆ ಇಲ್ಲ. ಇವೊತ್ತು ಈ ಘಟನೆಯ ಬಗ್ಗೆ ಸಾಕಷ್ಟು ವಿವರಗಳನ್ನು ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಮಾಹಿತಿಯನ್ನು ಕೊಡಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ ಬಹುಶಃ ಇಷ್ಟಾದ ಮೇಲೂ ಕೂಡ ಈ ಸದನವನ್ನು ನಡೆಯದ ಹಾಗೆ ತಡೆಹಿಡಿಯುವುದಕ್ಕೆ ನಾವು ಈ ಸದನಕ್ಕೆ ಮಾಡತಕ್ಕಂಥ ಅಪಚಾರ ಎಂದು ನನ್ನ ಭಾವನೆ. ಇದು ಮುಂದುವರಿಯುತ್ತಾ ಹೋದರೆ ನಾವು ಮಿಕ್ಕಂಥ ಸಮಸ್ಯೆಗಳನ್ನು ಚರ್ಚೆ ಮಾಡಲು ಅವಕಾಶ ಇಲ್ಲದೇ ಇರುವಂಥ ಪರಿಸ್ಥಿತಿ ಬರುತ್ತದೆ. ನಮ್ಮನ್ನು ಜನ ಆಚೆ ನೋಡುತ್ತಿದ್ದಾರೆ. ಇವರು ಇಷ್ಟು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಪ್ರತಿ ದಿವಸ ಸದನದಲ್ಲಿ ಏನು ಮಾಡುತ್ತಿದ್ದಾರೆಂದು ನೋಡುತ್ತಿದ್ದಾರೆ. ನಾವು ನಾಳೆ ಅವರಿಗೆ ಉತ್ತರ ಹೇಳಬೇಕಾಗುತ್ತದೆ. ನಾನು ಪ್ರಾರಂಭದಲ್ಲಿ ಮಾತನಾಡುವಾಗ ಹೇಳಿದೆ ಏನು ನಡೆದಿದೆ ಎಂದು ತಿಳಿದುಕೊಳ್ಳತಕ್ಕಂಥದ್ದು ಸದನದ ಹಕ್ಕು ಆದರೆ ಅದನ್ನು ಕೊಡತಕ್ಕಂಥದ್ದು ಸರ್ಕಾರದ ಜವಾಬ್ದಾರಿ. ಇಷ್ಟೆಲ್ಲಾ ವಿವರಗಳನ್ನು ತಿಳಿದಮೇಲೂ ಕೂಡ ಈ ರೀತಿಯಾದ ಘಟನೆಗಳು ಸದನದಲ್ಲಿ ನಡೆಯತಕ್ಕಂಥದ್ದು ಖಂಡಿತವಾಗಿಯೂ ನಮಗೆ ಯಾರಿಗೂ ಕೂಡ ಶೋಭೆಯನ್ನು ತರತಕ್ಕಂಥದ್ದಲ್ಲ. ಆದಕಾರಣ ತಾವು ಅಧ್ಯಕ್ಷರು ಇದಕ್ಕೆ ಏನಾದರೂ ಪರಿಹಾರವನ್ನು ಕಂಡು ಹಿಡಿಯುವುದು ಮತ್ತು ಎಲ್ಲಾ ಸದಸ್ಯರು ಜವಾಬ್ದಾರಿಯಿಂದ ನಡೆದುಕೊಳ್ಳತಕ್ಕಂಥ ರೀತಿಯಲ್ಲಿ ಈ ಸದನದಲ್ಲಿ ವ್ಯವಸ್ಥೆ ಆಗಬೇಕು, ಮತ್ತು ಇರುವ ಪ್ರಮುಖ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡಬೇಕು ಮತ್ತು ಆ ಸಮಸ್ಯೆಗಳ ಬಗ್ಗೆ, ಡಿಮಾಂಡ್ಸಗಳ ಮೇಲೆ ಚರ್ಚೆಗೆ ತಾವು ಮಾಡಿಕೊಡುತ್ತಿರೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ. ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಏನು ನಿಲುವಳಿ ಸೂಚನೆಯನ್ನು ತಂದು ಅದಕ್ಕೆ ಅನುಮತಿಯನ್ನು ಕೊಡಬೇಕೆಂದು ಹೇಳಿ ಪ್ರಸ್ತಾಪ ಆಗುತ್ತಿತ್ತು. ಮತ್ತು ನಿನ್ನೆಯ ದಿವಸ ನಾನೊಂದು ಸಂಶಯವನ್ನು ವ್ಯಕ್ತಪಡಿಸಿದ್ದೆ. ಈ ಸದನದಲ್ಲಿ ಉಪ ಮುಖ್ಯಮಂತ್ರಿಗಳು ಇದ್ದರು ಮತ್ತು ಗೃಹಸಚಿವರು ಇದ್ದರು ನಾವು ವಾಸುದೇವನರವರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರ್ಯಾರು ಉತ್ತರ ಕೊಡುತ್ತೀರೆಂದು ಕೇಳಿದಾಗ ಯಾರೂ ಉತ್ತರ ಕೊಡುವುದಕ್ಕೆ ತಯಾರಾಗಲಿಲ್ಲ. ಮುಖ್ಯಮಂತ್ರಿಗಳು ಬರಬೇಕೆಂದು ಹೇಳಿದಂಥ ಸಂದರ್ಭದಲ್ಲಿ ನಾವು ಬರೀ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಿದ್ದೆ. ಇವೊತ್ತು ಮುಖ್ಯಮಂತ್ರಿಗಳು ಬಂದಮೇಲೆ ಸುಮಾರು ಹತ್ತು ಪುಟಗಳ ಉತ್ತರವನ್ನು ಸದನ ಮುಂದಿಟ್ಟಿದ್ದಾರೆ. ನಿನ್ನೆ ದಿವಸ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಮಾತನಾಡುವಾಗ, ಸಾಕಷ್ಟು ನ್ಯಾಯಾಂಗದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಬಹಳ ಸಂತೋಷವಾಯಿತು. ನಮಗೆ ಗೊತ್ತಿಲ್ಲದ ಎಷ್ಟೋ ಒಳ್ಳೆಯ ವಿಚಾರಗಳನ್ನು ಮತ್ತು ನಗರಪಾಲಿಕೆಯ ಸಮಸ್ಯೆಗಳ ಬಗ್ಗೆ ಹಾಗೂ ವಾಸುದೇವನ್ ಪ್ರಕರಣದ ಬಗ್ಗೆ ಅವರು ಗಮನ ಸೆಳೆದರು. ಇವೊತ್ತು ಮುಖ್ಯಮಂತ್ರಿಗಳು ಬಂದ ನಂತರ ಈ ಹತ್ತು ಪುಟಗಳ ಉತ್ತರದಲ್ಲಿ ಏನೆಲ್ಲಾ ಸಮಸ್ಯೆಗಳಿತ್ತು ನಮ್ಮ ಮಾಜಿ ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಇದೆ. ನನಗೂ ಕೂಡ ಇಷ್ಟೊಂದು ವಿವರವಾದ ಉತ್ತರ ಬರುತ್ತದೆ ಎಂದು ಗೊತ್ತಿರಲಿಲ್ಲ. ನಮ್ಮ ವಿರೋಧ ಪಕ್ಷದ ಸದಸ್ಯರು ಒಂದೇ ಒಂದು ಹಠದಲ್ಲಿ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕು, ಸರ್ಕಾರ ಹೋಗಬೇಕು, ಪಕ್ಷಪಾತ ಮಾಡಿದ್ದಾರೆ, ಜಾತಿವಾದ ತೋರಿಸಿದ್ದಾರೆ ಎಂದು ಹೇಳಿದ್ದರು ನಮಗೂ ಆ ತರಹ ಇರಬೇಕೇನೋ ಎಂದು ನೋಡಿದಾಗ, ಈ ವಿವರಗಳು ಏನೇನಾಗಿವೆ ಯಾರು ಯಾರು ಯಾವಾಗ ಬಂದರು, ಎಂದು ಎಲ್ಲಾ ವಿವರಗಳನ್ನು ನೋಡಿದಾಗ, ಈ ಸರ್ಕಾರದ ಯಾವುದೇ ವಿಧವಾದ ಪಾತ್ರ ಇಲ್ಲ ಎಂದು ಗೊತ್ತಾದ ಮೇಲೆ ಇವೊತ್ತು ನಾವು ನಮ್ಮ ಮಿತ್ರರಾದ ಶ್ರೀ ರೆಡ್ಡಿಯವರು ಹೇಳಿದ ರೀತಿಯಲ್ಲಿ ಸಾಕಷ್ಟು ಸಮಸ್ಯೆಗಳು ರಾಜ್ಯದ ಉದ್ದಗಲಕ್ಕೂ ಇವೆ, ರಾಜ್ಯದಲ್ಲಿ ಬರಗಾಲ ಇದೆ, ಕಳೆದ ತಿಂಗಳು ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರ ಸಭೆ ಕರೆದಂಥ ಸಂದರ್ಭದಲ್ಲಿ ನಾಯಕರ ಸಭೆ ಕರೆದಂಥ ಸಂದರ್ಭದಲ್ಲಿ ಒಂದು ವಾರಕ್ಕೊಂದಾದರೂ ಸಭೆಯನ್ನು ಕರೆದು ಬರಗಾಲದ ಚರ್ಚೆ ಮಾಡುತ್ತೇನೆಂದು, ಒಂದನೇ ತಾರೀಖು ಕರೆಯುತ್ತೇನೆಂದು ಹೇಳಿ ಏಳನೇ ತಾರೀಖು ಕರೆದರು. ನಾವೆಲ್ಲಾ ಸೇರಿ ಬರಗಾಲದ ಚರ್ಚೆ ಮಾಡಬೇಕೆಂದು ಬಯಸಿದಂತಹ ಸಮಯದಲ್ಲಿ ಬರಗಾಲದ ಬಗ್ಗೆ ಬಂದಿಲ್ಲ ಅದು ಏಳು ತಿಂಗಳ ಹಿಂದೆ ಬಂದಂಥ ಈ ಸರ್ಕಾರದ ಅವಿಶ್ವಾಸ ನಿರ್ಣಯ ಬಂತು, ಆದಾದ ಮೇಲೆ ಹಕ್ಕುಚ್ಯುತಿ ಬಂತು, ಆ ಮೇಲೆ ಗ್ರಾನೈಟ್ ಬಂತು, ಆಮೇಲೆ ಕಾವೇರಿ ಬಂತು. ಕಾವೇರಿಯಾದ ಮೇಲೆ ಇದು ಬಂತು ಎಂದು ಹೇಳಿದರೆ ನಮ್ಮನ್ನು ಆಯ್ಕೆ ಮಾಡಿದಂಥ ಜನ ಏನು ಹೇಳುತ್ತಾರೆ. ನಮ್ಮ ಮಿತ್ರರಾದಂಥ ರೆಡ್ಡಿಯವರು ಹೇಳಿದ ರೀತಿಯಲ್ಲಿ ಹೊರಗಡೆ ಪ್ರತಿವರ್ಷ ಪದವಿ ಪಡೆದು ವಿಶ್ವವಿದ್ಯಾಲಯದಿಂದ ಲಕ್ಷಾಂತರ ಜನ ಹೊರಗಡೆ ಬರುತ್ತಿದ್ದಾರೆ. ಅವರುಗಳಿಗೆ ನಾವು ಕೆಲಸ ಕೊಡುವುದಕ್ಕೆ ಆಗುತ್ತಿಲ್ಲ. ಅವರ ಕೈಗಳಿಗೆ ನಾವು ಇನ್ನೂ ಕೆಲಸ ಕೊಡುವುದಕ್ಕಾಗಿಲ್ಲ. ದಿನ ಬೆಳಗಾದರೆ ಯುವಕರುಗಳು ತಪ್ಪು ದಾರಿಯಲ್ಲಿ ಹೋಗುವಂಥ ಪರಿಸ್ಥಿತಿ,

ಒಂದು ಕಡೆ ಬಡತನ. ಇಂತಹ ಸಮಸ್ಯೆಗಳಿರುವ ಸಂದರ್ಭದಲ್ಲೂ ಮುಖ್ಯಮಂತ್ರಿಗಳು ಕೊಟ್ಟು ತಯಾರ್ಾಗಿದೆಯೆಂದು ಅವರು ಹೇಳಿರುವುದನ್ನು ಸ್ವಾಗತಿಸುತ್ತಾ ತಂದಿರುವ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ, ವಿಷಯ ಸಮಿತಿಗಳ ವರದಿಗಳೇನಿದೆ ಮತ್ತು ನಮ್ಮ ಮುಂದಿರತಕ್ಕ ರಾಜ್ಯದ ಸಮಸ್ಯೆಗಳೇನಿವೆ, ಅವುಗಳ ಬಗ್ಗೆ ಚರ್ಚಿಸಿ ಬಗೆಹರಿಸುವ ದಿಸೆಯಲ್ಲಿ ಸಾಗಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಬಹಳ ತಾಳ್ಮೆಯಿಂದ ಈ ಸದನದ ಕಾರ್ಯಕಲಾಪ ನಡೆಸುತ್ತಿದ್ದೀರಿ ಹಾಗೂ ಹೊಸ, ಹಳೆಯ ಸದಸ್ಯರುಗಳೆಲ್ಲರಿಗೂ ಅವಕಾಶ ಕೊಡುತ್ತಿದ್ದೀರಿ. ಆದರೂ ಸಹ ಇವೊತ್ತು ಎಲ್ಲರ ತಾಳ್ಮೆಯ ಕಟ್ಟೆ ಒಡೆದುಹೋಗಿದೆ, ಅಂತಹ ಅವರ ಕೈಗಳಿಗೆ ಇನ್ನೂ ಕೆಲಸ ಕೊಡುವುದಕ್ಕಾಗಿಲ್ಲ. ದಿನ ಬೆಳಗಾದರೆ ಯುವಕರುಗಳು ತಪ್ಪು ದಾರಿಯಲ್ಲಿ ಹೋಗುವಂಥ ಪರಿಸ್ಥಿತಿ, ಒಂದು ಕಡೆ ಬಡತನ. ಇಂತಹ ಸಮಸ್ಯೆಗಳಿರುವ ಸಂದರ್ಭದಲ್ಲೂ ಮುಖ್ಯಮಂತ್ರಿಗಳು ಕೊಟ್ಟ ಉತ್ತರದಿಂದ ನನ್ನಂಥವರಿಗೆ ತೃಪ್ತಿಯಾಗಿ ಯಾವುದೇ ವಿಚಾರಣೆಗೂ ಕೂಡ ಸರ್ಕಾರ ತಯಾರಾಗಿದೆಯೆಂದು ಅವರು ಹೇಳಿರುವುದನ್ನು ಸ್ವಾಗತಿಸುತ್ತಾ ತಂದಿರುವ ನಿಲುವಳಿ ಸೂಚನೆಯನ್ನೂ ತಿರಸ್ಕರಿಸಿ, ವಿಷಯ ಸಮಿತಿಗಳ ವರದಿಗಳೇನಿವೆ ಮತ್ತು ನಮ್ಮ ಮುಂದಿರತಕ್ಕ ರಾಜ್ಯದ ಸಮಸ್ಯಗಳೇನಿವೆ, ಅವುಗಳ ಬಗ್ಗೆ ಚರ್ಚಿಸಿ ಬಗೆಹರಿಸುವ ದಿಸೆಯಲ್ಲಿ ಸಾಗಬೇಕೆಂಬ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಬಹಳ ತಾಳ್ಮೆಯಿಂದ ಈ ಸದನದ ಕಾರ್ಯಕಲಾಪ ನಡೆಸುತ್ತಿದ್ದೀರಿ ಹಾಗೂ ಹೊಸ, ಹಳೆಯ ಸದಸ್ಯರುಗಳೆಲ್ಲರಿಗೂ ಅವಕಾಶ ಕೊಡುತ್ತಿದ್ದೀರಿ. ಆದರೂ ಸಹ ಇವೊತ್ತು ಎಲ್ಲರ ತಾಳ್ಮೆಯು ಕಟ್ಟೆ ಒಡೆದುಹೋಗಿದೆ, ಅಂತಹ ಪರಸ್ಥಿತಿ ಈ ಸದನಕ್ಕೆ ಬರಬಾರದು. ನಾನು ಶಾಸಕನಾಗುವುದಕ್ಕಿಂತಲೂ ಮುಂಚೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಶಾಂತವೇರಿ ಗೋಪಾಲಗೌಡರು, ಶಿವಪ್ಪ ಮತ್ತು ಮುಕ್ಕಣ್ಣಪ್ಪನವರಂಥ ದೊಡ್ಡ ವ್ಯಕ್ತಿಗಳ ಭಾಷಣಗಳನ್ನು ಕೇಳಿದ್ದೇನೆ. ಜನರು ನಮಗೆ ಮತ ಕೊಟ್ಟು, ನಮ್ಮನ್ನು ಇಲ್ಲಿಗೆ ಕಳುಹಿಸುತ್ತಾರೆ. ಆದರೆ, ಸದನದಲ್ಲಿ ನಾವು ಈ ರೀತಿ ವರ್ತಿಸುತ್ತಿರುವುದನ್ನು ಅವರು ನೋಡಿದರೆ ನಿಜವಾಗಿಯೂ ಅವರು ನಮಗೆ ಮತ್ತೆ ಮತ ಕೊಡುವುದಕ್ಕೆ ಮನಸ್ಸು ಬರುವುದಿಲ್ಲ. ನಾನು ಹಿಂದೆ ಮಹಾನಗರಪಾಲಿಕೆ ಸದಸ್ಯನಾಗಿದ್ದಾಗ 'ಈ ಮಹಾನಗರಪಾಲಿಕೆ ಸಭೆಗಳು ಹುಚ್ಚಾಸ್ಪತ್ರೆಗಳಂತಿವೆ' ಎಂದು ಹೇಳಿದ್ದೆ. ಆದರೆ, ಇವೊತ್ತು ಸದನದಲ್ಲಿ ನಡೆದಂಥ ಘಟನೆ ನೋಡಿದರೆ ಇದಕ್ಕಿಂತಲೂ ಅದೇ ಸಾವಿರ ಪಾಲು ಪರವಾಗಿಲ್ಲವೆಂದು ನನಗನ್ನಿಸುತ್ತಿದೆ. ನಮ್ಮ ಜವಾಬ್ದಾರಿಗಳನ್ನು ಮರೆತು ಕೊಲಸ ಮಾಡುತ್ತಿರುವ ಪರಿಸ್ಥಿತಿ ಬದಲಾಗಬೇಕು. ಆದುದುರಿಂದ. ಇವೊತ್ತು ತಂದಿರತಕ್ಕ ನಿಲುವಳಿ ಸೂಚನೆಯನ್ನು ತಾವು ತಿರಸ್ಕರಿಸುತ್ತಾ, ನಮ್ಮ ಮುಂದೆ ಏನೇನು ಸಮಸ್ಯೆಗಳಿವೆ, ವಿಷಯ ಸಮಿತಿಗಳ ವರದಿಗಳೇನಿವೆ, ಅದರ ಬಗ್ಗೆ ಚರ್ಚಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟೀಕರಣ ಕೊಡುವುದಕ್ಕಾಗಲಿಲ್ಲ through that was my responsibility. ತಾವು ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಮಾತನಾಡಲು ಕರೆಯುವುದರೊಳಗಾಗಿ ಈ ಘಟನೆ ಜರುಗಿತು. ತಮಗೆ ಸಹಕಾರ ಸದನದ ಒಂದೇ ಕಡೆಯಿಂದಲ್ಲದೆ ಎಲ್ಲಾ ಕಡೆಯಿಂದಲೂ ಬೇಕಾಗುತ್ತದೆ. ನಾನು ಸಭಾ ನಾಯಕನಾಗಿ ಒಂದು ಮಾತನ್ನು ಹೇಳುವುದಾದರೆ ಮಾನ್ಯ ಸದಸ್ಯರಾದ ಹಾಗೂ ನಮ್ಮ ಪಕ್ಷದ

ಹಿರಿಯ ಮುಖಂಡರಾದ ಕೆ.ಎನ್. ನಾಗೇಗೌಡರು ಏನು ಒಂದು ಮಾತು ಹೇಳಿದ್ದಾರೆ, ಅದನ್ನು ಪುಷ್ಟೀಕರಿಸುತ್ತಾ, ಈ ಸದನದಲ್ಲಿ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕಾಗಿದ್ದರೆ ನಾವು ತಮಗೆ ಸಂಪೂರ್ಣವಾದ ಸಹಕಾರ ಕೊಡಲು ಸಿದ್ಧರಿದ್ದೇವೆ. ಜೊತೆಗೆ ವಿರೋಧ ಪಕ್ಷದ ಎಲ್ಲಾ ಮುಖಂಡರುಗಳಿಗೂ ನಾನು ಮತ್ತೊಮ್ಮೆ ಕರೆ ಕೊಡುತ್ತೇನೆ. ಇಂತಹ ಸೂಕ್ಷ್ಮ ವಿಷಯದಲ್ಲಿ ಯಾವುದೋ ಕಾರಣದಿಂದ ನಾವು ಪರಿಸ್ಥಿತಿಯನ್ನು ಮತ್ತೆ ವಿಕೋಪಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಬದಲಾಗಿ ಎಲ್ಲರೂ ಸಮಾಧಾನದಿಂದ ಕುಳಿತು ಸುಗಮವಾಗಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನಾವು ಪ್ರಯತ್ನಿಸಬೇಕೇ ಹೊರತು ಇವೊತ್ತಿನ ಸದನದ ಕಾರ್ಯಕಲಾಪದ ಪಟ್ಟಿಯಲ್ಲಿ ಬಹಳ ವಿಷಯಗಳಿವೆ. ಮಾನ್ಯ ಬಂಗಾರಪ್ಪ, ಶ್ರೀರಾಮರೆಡ್ಡಿ ಹಾಗೂ ಮುನಿಯಪ್ಪನವರು ಈ ಸಂದರ್ಭದಲ್ಲಿ ಏನು ಹೇಳಿದ್ದಾರೆ, ಅವರುಗಳಿಗೆ ನಾನು ಅಭಾರಿಯಾಗಿದ್ದೇನೆ. ಇದು ಬಹಳ ಗಹನವಾದ ವಿಷಯವಾಗಿದ್ದು, ಎಲ್ಲಾ ವಿರೋಧ ಪಕ್ಷದ ಮುಖಂಡರುಗಳಲ್ಲಿ ನಾನು ಪ್ರಾರ್ಥಿಸುತ್ತೇನೆ, Forget what all happened. We will proced further to tackle the problems of the people of this State. ಇಷ್ಟೇ ಹೇಳುತ್ತೇನೆ, ನಿಮ್ಮ ಮನಸ್ಸಿಗೆ ಏನಾದರೂ ನೋವಾಗಿದ್ದರೆ as a Leader of the Party I will also express my regrets. This is number one. ಎರಡನೆಯದಾಗಿ ಆರ್ಟಿಕಲ್ 72ರ ಪ್ರಕಾರ ನಾವು ರಾಜ್ಯ ಸರ್ಕಾರದಿಂದ ಅರ್ಜಿ ಸಲ್ಲಿಸಿದ್ದು, ಅದಿನ್ನೂ ತಿರಸ್ಕಾರವಾಗಿಲ್ಲ. ಆದುದರಿಂದ, ಈ ಹಂತದಲ್ಲಿ ನಾನು ಏನನ್ನೂ ಹೇಳವುದಕ್ಕೆ ಸಾಧ್ಯವಾಗಿಲ್ಲ. ಮೂರನೆಯದಾಗಿ, ನಾವು ರಾಜ್ಯ ಸರ್ಕಾರದ ವತಿಯಿಂದ ಏತಕ್ಕೆ ಅರ್ಜಿ ಸಲ್ಲಿಸಿದ್ದೇವೆಂದರೆ, ಇವೊತ್ತು ಯಾವ ಒಬ್ಬ ಅಧಿಕಾರಿಗೆ ಒಂದು ತಿಂಗಳ ಕಾಲ ಸಾಧಾರಣ ಜೈಲು ಶಿಕ್ಷೆ ನೀಡಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ, ಈ ಹಿನ್ನೆಲೆಯಲ್ಲಿ ನಾವು ಈ ರೀತಿ ಮುಂದುವರಿದರೆ ಸ್ವಲ್ಪ ಅನುಕೂಲವಾಗಬಹುದೆನ್ನುವ ಭಾವನೆಯನ್ನು ಕಾನೂನು ತಜ್ಞರು ವ್ಯಕ್ತಪಡಿಸಿದಾಗ, ಆ ಅಧಿಕಾರಿ ಬಂದು ನಮಗೆ ತಿಳಿಸಿದಂಥ ಕಾಲದಲ್ಲಿ ನಾನು ಅಡ್ಡಿ ಬರಲಿಲ್ಲ. ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ನಾವು ಕೈಗೊಳ್ಳುವ ಈ ಕೋರ್ಸನಿಂದ ಒಳ್ಳೆಯದಾಗುವುದಾದರೆ ಆಗಲೆಂದು I have requested my Chief Secretary to file an affidavit under Article 145. That is the position. ನಾವು ಅಪರಾಧ ಮಾಡಿದ್ದೇವೆ ಎಂದಲ್ಲ. To bail out that Officer who served the State ಆದುದರಿಂದ, ಈ ಕುರಿತು ನಾನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆಯೇ ಹೊರತು ನಾನೇನೂ ಕರ್ತವ್ಯಲೋಪ ಏನೂ ಮಾಡಿಲ್ಲವೆಂದು ಹೇಳುತ್ತಾ, ಇವೊತ್ತು ಕಣ್ಣೀರು ಹಾಕಿ ಇದರೊಳಗೆ ಏನೋ ಜಾಲ ಅಥವಾ ವಂಚನೆ ಮಾಡಬೇಕೆಂದಲ್ಲ. ನಾನು ಈ ಸದನದಲ್ಲಿ ಸುಮಾರು 31 ವರ್ಷಗಳ ಕಾಲ ಕಾರ್ಯಕರ್ತರಾಗಿದ್ದ ಭಾಸ್ಕರ ಸಂಹಿತರವರ ಕೊಲೆ ಪ್ರಕರಣ ನಡೆದಂಥ ಸಮಯದಲ್ಲಿ ಅವೊತ್ತು ನಾನು ನಿಲುವಳಿ ಸೂಚನೆಯನ್ನು ಮಂಡಿಸಿದೆ. ಈ ರಾಜ್ಯದ ವಿಧಾನಸಭೆಯ ಇತಿಹಾಸದಲ್ಲಿ ಎರಡು ಬಾರಿ ಮಾತ್ರ ಸಭಾಧ್ಯಕ್ಷರು ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಿದ್ದಾರೆ. ಮೊದಲನೆಯದಾಗಿ, ಆಗ ಗೃಹಮಂತ್ರಿಗಳಾಗಿದ್ದ ಶ್ರೀ ಎಂ.ವಿ. ರಾಮರಾವರವರ ಕಾಲದಲ್ಲಿ ಮುನಿಯಮ್ಮನವರ ಮುಧುಗಿರಿ ಪ್ರಕರಣದಲ್ಲಿ ತಂದಿದ್ದಂಥ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಸಭಾಧ್ಯಕ್ಷರು ತಮ್ಮ ಸ್ಥಾನದಿಂದ

ಅನುಮತಿ ಕೊಟ್ಟರು. ಎರಡನೆಯದಾಗಿ, ನನ್ನ ಪಕ್ಷದ ಕಾರ್ಯಕರ್ತರಾಗಿದ್ದ ಭಾಸ್ಕರ ಸಂಹಿತರವರ ಕೊಲೆಯಾದಾಗ, ಆಗ ನಾವು 24 ಜನರು ಮಾತ್ರ ಈ ಸದನದಲ್ಲಿ ಕುಳಿತಿದ್ದೆವು. ನಾನು ಅವೊತ್ತು ವಿರೋಧ ಪಕ್ಷದ ನಾಯಕನಾಗಿದ್ದಂಥ ಸಂದರ್ಭ ಆ ವಿಷಯ ನನ್ನ ಮುಂದೆ ಬಂದಂಥ ಕಾಲದಲ್ಲಿ ನನ್ನ ಪಕ್ಷದ ಒಬ್ಬ ಕಾರ್ಯಕರ್ತವನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲ. ಎನ್ನುವ ಸಂಕಟದಿಂದ ಅಂದು ನಾನು ಕಣ್ಣೀರು ಹಾಕಿದ್ದುದು ನಿಜ. ಆದರೆ ಇವೊತ್ತು ಈ ರಾಜ್ಯದ ಆಡಳಿತ ಸೂತ್ರ ಹಿಡಿದಿರುವ ನಾನು ಒಬ್ಬ ನಿಷ್ಠಾವಂತ ಅಧಿಕಾರಿಯನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲವೆನ್ನುವ ಮನೊವ್ಯಥೆ ನನ್ನನ್ನು ಕಾಡಿಸುತ್ತಿದೆ. ನನ್ನ ಅಧಿಕಾರಕ್ಕಾಗಿ ನಾನು ಇವೊತ್ತು ಯೋಚಿಸುತ್ತಿಲ್ಲ. Even if they have dismissed my Government, I would not have bothered. But I only worry is my adminsitrative machinery has been collapsed for punishing an Officer who is not guilty. This is where I have been hurt. ಆದುದುರಿಂದ, ಇವೊತ್ತು ಈ ಸಂದರ್ಭದಲ್ಲಿ ನನ್ನ ಅಧಿಕಾರಿ ಮಿತ್ರರುಗಳಿಗೆ ಹೇಳುತ್ತೇನೆ. ಏನೇ ಆಗಲಿ ಯಾವುದೇ ಸಂದರ್ಭದಲ್ಲಾಗಲಿ ಈ ಸರ್ಕಾರ ತನಗಿರುವ ಎಲ್ಲಾ ಶಕ್ತಿಯನ್ನು ಬಳಸಿ ನನ್ನ ಅಧಿಕಾರಿ ಮಿತ್ರರುಗಳನ್ನು ಬಿಟ್ಟುಕೊಡುವುದಕ್ಕೆ ನಾನು ಸಿದ್ಧನಿಲ್ಲ. Those who are sincere and honest Officers, it is my rightful duty to protect them. ಯಾವಾಗ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಜೆ. ವಾಸುದೇವನರವರಿಗೆ ಸುಪ್ರೀಂ ಕೋರ್ಟಿನಿಂದ ಈ ತರಹದ ಆದೇಶ ಬಂದಿತೋ, ಅವೊತ್ತು ಅವರ ಮನೆಯಲ್ಲಿ ತಮ್ಮ ಮೊಮ್ಮಗನ ನಾಮಕರಣವಿತ್ತು. I cannot remember that. I cannot speak on that. ನಾಮಕರಣದ ದಿವಸವೇ ಅವರನ್ನು ಆ ಸ್ಥಿತಿಗೆ ತಂದಂಥ ಹಿನ್ನೆಲೆಯಲ್ಲಿ ನನ್ನ ಮನಸ್ಸಿಗೆ ನೋವಾಯಿತು. ಅದು ಇಲ್ಲದಿದ್ದರೆ the country, the State knows that DeveGowda is a fighter. I am not afraid of these things. But only things is, it hurts me. ನನಗೆ ನಿದ್ರೆ ಬರದೇ ಇರಲು ಕಾರಣಇಷ್ಟೆ. ಒಬ್ಬ ಹಿರಿಯ ನಿಷ್ಠಾವಂತ ಅಧಿಕಾರಿಯನ್ನು ನನ್ನ ಕೈಯಿಂದ ಉಳಿಸಿಕೊಳ್ಳುವುದಕ್ಕಾಗಲಿಲ್ಲವೆಂದು ನಾನು ತಪ್ಪು ಮಾಡಲಿಲ್ಲ, ನನ್ನ ಅಧಿಕಾರಿ ತಪ್ಪು ಮಾಡಲಿಲ್ಲ. ಎಲ್ಲಾ ದುರಾದೃಷ್ಟ. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ, ಯಾರು ಏನೇ ಬೇಕಾದರೂ ಮಾಡಿಕೊಳ್ಳಲಿ, ಆದರೆ ದೇವರಲ್ಲಿ ಅಂತಿಮವಾಗಿ ನನಗೆ ನಂಬಿಕೆ ಇದೆ. ನಾನು ಹಿಂದಿನ ಸಂದರ್ಭದಲ್ಲೂ ಹೇಳಿದೆ. God will punish all of us, who are guilty. ಅದೊಂದರಲ್ಲೇ ನನಗೆ ಆತ್ಮವಿಶ್ವಾಸವಿದೆ. ಸುಪ್ರೀಂ ಕೋರ್ಟಿನ ಯಾವ ನ್ಯಾಯಾಧೀಶರು ತೀರ್ಮಾನ ಕೊಟ್ಟಿದ್ದಾರೋ, ಇಲ್ಲಿಯೂ ಸಹ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಂದಲೇ ವಿಚಾರಣೆ ನೆಡೆಸಬೇಕೆಂದು ಅವರು ಒತ್ತಾಯ ಮಾಡಿದ ನಂತರವೂ ಹೇಳಿದೆ. ಏನೂ ದೋಷವಿಲ್ಲವೆಂದು. The same Supreme Court Judges have given this judgment. And one more Supreme Court Judge has to sit over that. ನಾನು ನಿನ್ನೆ ಸದನದಲ್ಲಿಲ್ಲದಿದ್ದಾಗ ಯರೋ ಕೇಳಿದರು. ಆ ಹಿನ್ನೆಲೆಯಲ್ಲಿ ನಾನು ಇದನ್ನು ಹೇಳಿದೆ ಅಷ್ಟೇ ಹೊರತು ಮತ್ತೇನೂ ಇಲ್ಲ. ಸಿ.ಬಿ.ಐ. ತನಿಖೆ ಪಿ.ವಿ. ನರಸಿಂಹರಾವರವರ ಕೈಕೆಳಗಿದೆ. ಇವೊತ್ತು ನನ್ನ ತಲೆಯೊಳಗೆ ಈ ನಿಷ್ಕಲ್ಮಷವಾದ

ನಿರ್ಣಯವನ್ನು ಈ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಾಮಾಣಿಕ ಅಧಿಕಾರಿಗಳನ್ನು ಉಳಿಸುವುದಕ್ಕೆ ಮಾಡಿದ್ದೇನೆಯೇ ವಿನಾ ಮತ್ತೇನೂ ಇಲ್ಲ. I was not prepared to satisfy anybody.

ಶ್ರೀ ಬಂಗಾರಪ್ಪ : ಮೆಷಿನರಿ ಕೊಲ್ಯಾಪ್ಸ್ ಆಯಿತೆಂದು ಹೇಳಿದಿರಿ, ಅದು ನನಗೆ ಅರ್ಥವಾಗಲಿಲ್ಲ. I could not hear it.

ಶ್ರೀ ಹೆಚ್.ಡಿ. ದೇವೇಗೌಡ : ಆಡಳಿತದ ವಿಷಯದಲ್ಲಿ ಇಮೊತ್ತು ಯಾರು ನಿರ್ಣಯ ಮಾಡುತ್ತಾರೆ? ಇಮೊತ್ತು ಅಧಿಕಾರಿಗಳನ್ನು ಜೈಲಿಗೆ ಹಾಕುತ್ತಾ ಹೋದರೆ, ಹರಿಯಾಣದಲ್ಲಿ ಮೂರು ಜನ ಅಧಿಕಾರಿಗಳನ್ನು ಜೈಲಿಗೆ ಹಾಕಿದರು. ಕರ್ನಾಟಕದಲ್ಲೂ ಒಬ್ಬ ಅಧಿಕಾರಿಯನ್ನು ಜೈಲಿಗೆ ಹಾಕಿದರು. ಅಲ್ಲದೆ, ತಮಿಳುನಾಡಿನಲ್ಲೂ ನಾಲ್ಕು ಜನ ಅಧಿಕಾರಿಗಳಿಗೆ 1500 ರೂಪಯಿಗಳಿಂತೆ ಇಮೊತ್ತು ದಂಡ ವಿಧಿಸಿದ್ದಾರೆ. How to run the adminsistration? ನನ್ನ ಮನಸ್ಸಿಗೆ ವೇದನೆಯುಂಟಾಗಿ ನಾನು ಭಾವೋದ್ರೇಕನಾಗಿದ್ದೇನೆಯೇ ಹೊರತು ಇಲ್ಲಿ ಯಾರನ್ನೂ ಕೂಡ ಮೆಚ್ಚಿಸಬೇಕೆಂದಲ್ಲ. ಇಷ್ಟು ವಿಷಯಗಳನ್ನು ಸ್ಪಷ್ಟೀಕರಿಸಿ ಈ ಸಂದರ್ಭದಲ್ಲಿ ವಿರೋಧಪಕ್ಷದ ಎಲ್ಲಾ ಮುಖಂಡರುಗಳಲ್ಲಿ ವಿನಂತಿಸಿಕೊಳ್ಳುತ್ತೇನ. Even now let's all collectively work together and give full co-operation to you. I will request through you Sir, all the Opposition leaders, if they have been hurt, I am sorry. Let's go together, let's see that the function of the House should deliberate in a proper way giving all respect to the chair. That's all what I want to express my feelings.

ಅಧ್ಯಕ್ಷರು : ಸನ್ಮಾನ್ಯ ಹಿರಿಯ ಸದಸ್ಯರಾದ ಎಸ್. ಬಂಗಾರಪ್ಪನವರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ನಾನು ಋಣಿಯಾಗಿದ್ದೇವೆ. ಪ್ರತಿ ಸಂದರ್ಭ ಬಂದಾಗೆಲ್ಲಾ ನಾನು ಇಲ್ಲಿ ಹೇಳುತ್ತಾ ಬಂದಿರುವುದು ಒಂದೇ. ನಾವು ವಿವೇಚನೆಯಿಂದ ಕೆಲಸ ಮಾಡಬೇಕು. ಸಿಟ್ಟು ಇರಬಹುದು, ಸೈದ್ಧಾಂತಿಕವಾದ ಭಿನ್ನಾಭಿಪ್ರಾಯಗಳಿರಬಹುದು, ಪ್ರಚೋದನೆಯುಂಟಾಗಿ ಸ್ವಲ್ಪ ನಿಗ್ರಹದಿಂದ ವರ್ತಿಸಬೇಕಾಗುತ್ತದೆ. ಇಲ್ಲಿ ಯಾರೇ ಆಗಲಿ, ವಿಶೇಷವಾಗ ಅಧಿಕಾರದ ಸೂತ್ರ ಹಿಡಿದಿರುವವರಿಗೆ ಹೆಚ್ಚು ತಾಳ್ಮೆ ಇರಬೇಕಾಗುತ್ತದೆ. I feel it is absolutely necesary to run this House with certain amount of decency. ಎಲ್ಲಾ ಆಯಿತು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸ್ಪಷ್ಟೀಕರಣ ಕೇಳಿ ಎಂದಾಗ ಸದನದ ಬಾವಿಯೊಳಗೆ ಬರತಕ್ಕಂಥಾದ್ದು. It is the right of the Members if they want to protest. ನಾನು ಬೇಡವೆಂದು ಯಾರಿಗೂ ಹೇಳುವುದಿಲ್ಲ, ನಾಳೆ ನೀವು ಬರಬಹುದು, ಅವರು ಬರಬಹುದು, I don't come to their way. ಸದನದ ಬಾವಿಯೊಳಗೆ ನಿಂತು ಅವರು ಸ್ಪಷ್ಟೀಕರಣ ಕೇಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲವೆಂದು ನನ್ನ ಅವರ ಮಧ್ಯೆ ಯಾರಾದರೂ ವರ್ತಿಸಿದಾಗ ನಾನು ಪೀಠದಲ್ಲಿ ಕುಳಿತು ಕೊಳ್ಳುವುದು ಯೋಗ್ಯವಲ್ಲವೆಂದು ಭಾವಿಸಿ ಸದನವನ್ನು ಮುಂದೂಡಿ ಅನಿವಾರ್ಯವಾಗಿ ಒಳಗೆ ಹೋಗಬೇಕಾಯಿತು. ಇದು ವೈಯಕ್ತಿಕವಾಗಿ ಯಾರಿಗೂ ನೋವುಂಟು ಮಾಡುವುದಾಗಲಿ ಮತ್ತು ಕ್ಷಮಾಪಣೆ ಕೇಳುವುದೇನೂ ದೊಡ್ಡ ವಿಷಯವಲ್ಲ.

7.50 ಪಿ.ಎಂ

ಜನಪ್ರತಿನಿಧಿಗಳಾಗಿ ನಾವಿಲ್ಲಿ ಬಂದಾಗ ನಾವು ಇಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತೇವೆ, ನಮ್ಮ ನಡವಳಿಕೆ ಇಲ್ಲಿ ಯಾವ ರೀತಿ ಇದೆಯೆಂಬುದನ್ನು ಹೊರಗೆ ಜನರು ಗಮನಿಸುತ್ತಿರುತ್ತಾರೆ. ವಿವೇಚನೆಯ ಬಗ್ಗೆ ಪ್ರತಿಯೊಂದು ಸಲವೂ ಹೇಳುತ್ತೇನೆ. I would insist on this and say that man is a rational being and he is bound to be social being. With all your differences, you shall never bring disreputation to this title that is conferred on me. Man is a creation of the evolution. That is the difference between the animal and the man. If our conduct ultimately reflects amounting to an inference that we are less of a rational, I do not think, we become good representatives of the people.

Lastly, I do not wish to say anything further. I would only expect all the hon. Members of this August House to bear this in mind. ಮಾನ್ಯ ಸದಸ್ಯರುಗಳಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ, ವಾಟಾಳ ನಾಗರಾಜ್, ಬಿ.ಎಸ್. ಯಡಿಯೂರಪ್ಪ ಹಾಗೂ ಇನ್ನಿತರ ಸದಸ್ಯರುಗಳು ಭಾರತದ ಶ್ರೇಷ್ಠ ನ್ಯಾಯಾಲಯ, ನ್ಯಾಯಾಲಯದ ನಿಂದನೆಯ ಪ್ರಕರಣದಲ್ಲಿ ರಾಜ್ಯದ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರಿಗೆ ಕಾರಾಗೃಹವಾಸವನ್ನು ವಿಧಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಆಡಳಿತ ಕ್ಷೇತ್ರದಲ್ಲಿ ಉಂಟಾಗಿರುವ ಆತಂಕ ಮತ್ತು ಭಯಾನಕ ಪರಿಸ್ಥಿತಿಯ ಬಗ್ಗೆ ನಿಲುವಳಿ ಸೂಚನೆಯನ್ನು ನೀಡಿದ್ದು, ಆ ಬಗ್ಗೆ ಅವರುಗಳ ಪ್ರಾಸ್ತಾವಿಕ ವಿವರಣೆ ಮತ್ತು ಮಾನ್ಯ ಮುಖ್ಯಮಂತ್ರಿಯವರು ನೀಡಿರುವ ವಿವರವಾದ ಉತ್ತರವನ್ನು ನಾನು ಕೇಳಿದ್ದೇನೆ. ನಾನು ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು: 1995-96ನೇ ಸಾಲಿನ ಈ ಕೆಳಕಂಡ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತಕ್ಕೆ ಹಾಕುವುದು. ಮೊದಲು ಬೇಡಿಕೆಯನ್ನು ಮಂಡಿಸುವುದು.

ಅನುದಾನ ಬೇಡಿಕೆಗಳು 1995-96

ಬೇಡಿಕೆಯ ಸಂಖ್ಯೆ: 30-ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಅರ್ಥಿಕ ವರ್ಷದಲ್ಲಿ, "ಗೃಹ ನಿರ್ಮಾಣ" (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 51,49,26,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು